ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 13

ಸಂಚಿಕೆ 2

ಏಪ್ರಿಲ್-ಜೂನ್-1984

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 13. No. 2, April-June 1984

Chief Editor: **Dr. G. S. Sivarudrappa**

ಪ್ರಧಾನ ಸಂಪಾದಕರು :
ಡಾ॥ ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :
ಟಿ. ಬಿ. ಚಂದ್ರಶೇಖರಯ್ಯ
ಕಿ. ರಂ. ನಾಗರಾಜ
ಬರಗೂರು ರಾಮಚಂದ್ರಪ್ಪ

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಕೆ. ಸಿ. ಶಿವಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಮಂಥನ

ಗೆಳಯುನಿಗಾಗಿ ನೆತ್ತರ ಕಥೆ

ತಿಮ್ಮನಹಳ್ಳಿ ವೇಣುಗೋಪಾಲ್, ಆರ್.

ಕಥೆಯು ಹುಚ್ಚಿನಿಂದ ನನ್ನೆದೆಗಾತ ಗೆಳೆಯ
ಕೇಳು ನನ್ನ ಜಾಳು ಜಾಳಾದ ವ್ಯಥೆಯು
ಸೂರ್ಯ ಚಂದ್ರರು ಸದ್ದಿಲ್ಲದೆ ಗುಮ್ಮನೆ
ಮಲಗಿರುವಾಗ
ಮಿಂಚುಹುಳುಗಳು ಈ ಕಗ್ಗತ್ತಲ ನೆಲದಲ್ಲಿ
ಸವಿ ಮಾತಾಡಲೂ ಹೆದರಿ ರಾಶಿಯಾಗಿ
ಸತ್ತಿರುವ ಕಥೆಯು.
ಅರ್ಥವಾಗದ ಈ ನನ್ನ ಕಥೆಯು
ಮೂಕ ಮಾತುಗಳು ಬಿರಿದ ನೆಲದಲ್ಲಿ
ಬೆಚ್ಚಗಿನ ನಿಟ್ಟುಸಿರುಗಳೊಯ್ಯುತ್ತವೆ,
ಅಸಹ್ಯ ಕಫಕ್ಕೆ ಅಂಟಿ ಬರುವ
ಕಹಿಯು ಮಾತು ಉಸಿರು ಎಲ್ಲಾ ತುಂಬಿರುವ
ಇದು ಕಾಡೋ ? ನಾಡೋ ?
ತೊಡಕು ಗೆಳೆಯ ತೊಡಕು,
ಬಿಕ್ಕಳಿಕೆಯ ತೆಕ್ಕೆಯಲ್ಲಿ ನಲುಗುವ ನಲುಮೆಗಳಿಗೆ
ಇರುಕಿನಲ್ಲಿ ಮುರುಟಿ ಹೋಗುವ ಕನಸುಗಳಿಗೆ
ಇತಿಹಾಸವಿಲ್ಲ ಗೆಳೆಯ
ಇತಿಹಾಸವಿಲ್ಲ,
ನಗೆ ಚೆಲ್ಲಲಾರದ ಮಲ್ಲಿಗೆಗಳು ಇಲ್ಲಿನ
ಕಾದ ಬಾಂಡಲಿಗೆ ಮುತ್ತಿಟ್ಟು ಮಂಡಕ್ಕಿಯಾಗುತ್ತವೆ,
ಬತ್ತಿದ ಕಣ್ಣುಗಳಿಗೆ ಕಳ್ಳಿಹಾಲಸುರಿವ
ನೂರು ಕರಿನಾಗರಗಳು ಹೆಜ್ಜೆ ಹೆಜ್ಜೆಗೂ ಹುಟ್ಟುತ್ತವೆ,
ಒಗ್ಗಲಾರದ ಬದುಕಿಗೆ ಪಾಮೀಲಾಗಿ
ಅಲ್ಲಿ ಒಸರುವ ಬೆವರಿನ ಹನಿಗಳ
ರವಷ್ಟು ಇಲ್ಲದಂತೆ ನೆಕ್ಕುವ ಧೀಮಂತಿಕೆಯ
ತೋರುವ ಈ ನನ್ನ ಕಥೆಯು ಜನ

ಯಾರು ಗೊತ್ತೇ ಗೆಳೆಯ
ಬಾಯಿ ಬಿರಿದರೆ ಕೊರಳ ನವಿರಾಗಿ ಬಿಗಿದು
ಮಾನವೀಯತೆಯ ಹಾಡು ಹಾಡುತ್ತಾರೆ
ಅದಕ್ಕಾಗಿಯೇ ಗೆಳೆಯ
ನೀನಿನ್ನೂ ಬೆಳೆದು
ಇಲ್ಲಿನ ಮಹಿಮೆಯ
ಪದರುಗಳು ಬೆತ್ತಲೆಯಾಗುವುದ
ನೋಡಬೇಕಾಗಿದೆ.
ಕೇಳುಗೆಳೆಯ,
ಇಲ್ಲಿನ ನೆತ್ತರ ಕಥೆಯ
ಕೆಚ್ಚಲಿಗೆ ಅಂಟಿಕೊಂಡ ಉಣ್ಣೆಗಳು ಹೇಳುವುದಿಲ್ಲ
ಸ್ಮಶಾನದ ನೆಲದಲ್ಲಿ ವಸಂತಗಳು
ಚಿಸಿಲೊಡೆಯಲಾಗದ ವ್ಯಥೆಯ ಹೇಳುತ್ತವೆ
ಇದೇ ಗೆಳೆಯ ನನ್ನ ಕಥೆ ವ್ಯಥೆ.

ಕಾರಂತರ ಮುನ್ನುಡಿಗಳು

ಜಯಶ್ರೀ ಚಾಟಿ

ಪುಸ್ತಕದ ಮೊದಲ ಪುಟದಲ್ಲಿ ಮೊದಲ ಮಾತಾಗಿ, ಮುನ್ನುಡಿ, ಅರಿಕೆ, ಪ್ರಸ್ತಾವನೆಯಾಗಿ ನಾಲ್ಕುಮಾತುಗಳು ಸಾಮಾನ್ಯವಾಗಿ ಗೋಚರಿಸುತ್ತವೆ. ಒಂದು ಗ್ರಂಥದಲ್ಲಿ ಪ್ರಸ್ತುತಗೊಂಡ ವಿಷಯವನ್ನು ಕುರಿತು, ಉದ್ದೇಶವನ್ನು ಕುರಿತು, ಪರಿಚಯಿಸಲು, ಸ್ಪಷ್ಟೀಕರಿಸಲು, ಲೇಖಕನು ಹೇಳುವ ನಾಲ್ಕು ಮಾತುಗಳನ್ನು 'ಮುನ್ನುಡಿ' ಎಂದು ಹೇಳಬಹುದು. ಮುನ್ನುಡಿ ಇಲ್ಲದೆಯೂ ಒಂದು ಕೃತಿ ಅರ್ಥವಾಗಲಾರದೆ ? ಅರ್ಥವಾಗಬಾರದೆ ? –ಎನ್ನುವುದೂ ಪ್ರಶ್ನೆಯೇ. ಆಗಲಾರದು, ಆಗಬಾರದು–ಎಂದಲ್ಲ. ಲೇಖಕನ ಮನಸ್ಸಿನಲ್ಲಿರುವ ವಸ್ತು ಓದುಗನಿಗೆ ಅರ್ಥವಾದರೇನೇ ಬರವಣಿಗೆಯ ಸಾರ್ಥಕತೆ. ಎಷ್ಟೋ ಬಾರಿ ತಾನು ಹೇಳುವ ವಿಷಯ ವಾಚಕನಿಗೆ ಅರ್ಥವಾದೀತೇ ಎನ್ನುವ ಸಂಶಯ, ಎದೆಗುದಿ ಲೇಖಕನಲ್ಲಿಯೇ ಮೊಳೆಯುತ್ತದೆ. ವಿಷಯ ಸಂಕೀರ್ಣವಾದಾಗ, ಗಾಢವಾದಾಗ ಖಂಡಿತಕ್ಕೂ ಈ ಪ್ರಶ್ನೆ ಎದ್ದೇ ಏಳುತ್ತದೆ. ಆದ್ದರಿಂದಲೇ ಸಾಮಾನ್ಯ ಓದುಗನಿಗೂ ಎಟುಕಬೇಕೆನ್ನುವ ದೃಷ್ಟಿ ಇರುವ ಗ್ರಂಥಕರ್ತೃವಿಗೆ ಮುನ್ನುಡಿ ಅನಿವಾರ್ಯವೆನಿಸುತ್ತದೆ. ಇನ್ನು ಸಾಮಾನ್ಯವಾಗಿ ಎಲ್ಲ ಲೇಖಕರೂ ತಮಗಿಂತ ಹಿರಿಯ ಹೆಸರಾಂತ ಸಾಹಿತಿಗಳಿಂದಲೇ ಮುನ್ನುಡಿ ಬರೆಸುವುದು ವಾಡಿಕೆ. ಅಂತಹ ವಿಚಾರವಂತರ ವಿಮರ್ಶೆಯ ಬಗೆಗೆ ನಿರೀಕ್ಷೆ ಒಂದು ; ಇದಕ್ಕಿಂತ ಹೆಚ್ಚಾಗಿ ಇಂತಹವರ ಮುನ್ನುಡಿ ಎನ್ನುವ ಸಿಫಾರಸು ಪುಸ್ತಕಕ್ಕೆ ಹೆಚ್ಚಿನ ಬೇಡಿಕೆ ತಂದೀತೆಂಬ ವ್ಯವಹಾರಿಕ ದೃಷ್ಟಿಯೂ ಮುಖ್ಯವಾಗಿ, ಮುನ್ನುಡಿಯ ಉದ್ದೇಶವಾಗುತ್ತದೆ. ಅಂತೂ ವಿಷಯಕ್ಕೂ–ವಾಚಕರಿಗೂ ಕೊಂಡಿಯಾಗಿ ಮುನ್ನುಡಿ ಪುಸ್ತಕಕ್ಕೆ ಕೆಲವೊಮ್ಮೆ ಅವಶ್ಯವೆನಿಸಿದರೂ, ಅನಿವಾರ್ಯವೇನಲ್ಲ.

ಕಾರಂತರ ಮುನ್ನುಡಿಗಳು ಅವರ ಕಾದಂಬರಿಗಳಷ್ಟೇ ವೈವಿಧ್ಯಮಯವಾದುವು ; ವೈಶಿಷ್ಟ್ಯಮಯವಾದುವು. ಅವರ ಕಾದಂಬರಿಗಳ ಮುನ್ನುಡಿಗಳಿಗಷ್ಟೇ ನಾನು ಈ ಲೇಖನವನ್ನು ಸೀಮಿತಗೊಳಿಸಿದ್ದೇನೆ. ನಮ್ಮ ಕಾಲದ ಕಾದಂಬರಿಕಾರರಲ್ಲಿ ಶ್ರೇಷ್ಠರಾದ ಕಾರಂತರು ತಮ್ಮ ಯಾವ ಕಾದಂಬರಿಗೂ ಮತ್ತೊಬ್ಬರಿಂದ ಮುನ್ನುಡಿ ಬರೆಯಿಸಿಲ್ಲ ಎಂಬುದರೊಂದಿಗೆಯೇ ಅವರ ಮುನ್ನುಡಿಗಳ ವಿಶೇಷತೆ

ಗೋಚರಿಸುತ್ತದೆ. ಓದುಗನ ವೈಚಾರಿಕತೆಯನ್ನು ಅರಳಿಸುವವೆಂದೇ ಅವರ ಮುನ್ನುಡಿಗಳು ವಿಶೇಷವಾಗಿ ಮೆಚ್ಚುಗೆ ಪಡೆಯುತ್ತವೆ.

ಅವರ 'ಹೆತ್ತಳಾತಾಯಿ' 'ಕನ್ಯಾ ಬಲಿ' ಕಾದಂಬರಿಗಳಿಗೆ ಮುನ್ನುಡಿಯೇ ಇಲ್ಲ. ಕಾದಂಬರಿಯ ವಸ್ತು ನೇರವಾಗಿ ವಾಚಕನಿಗೆ ತಟ್ಟಬೇಕೆಂಬುದು ಅವರ ಪ್ರಾಮಾಣಿಕ ನಿರೀಕ್ಷೆ, ಹಂಬಲ. 'ಅಳಿದಮೇಲೆ' ಕಾದಂಬರಿಯ ಮುನ್ನುಡಿಯ ಆರಂಭದಲ್ಲಿಯೇ "ಕಾದಂಬರಿಯನ್ನೇನೋ ಬರೆಯುತ್ತಿದ್ದೇನೆ. ಆದರೆ ಬರೆದ ಕಾದಂಬರಿಗೆ ಮುನ್ನುಡಿ ಬರೆಯುವುದೆಂದರೆ ಉದಾಸೀನ. ಒಂದು ಕಾದಂಬರಿ ತಿಳಿಸಲಾರದ್ದನ್ನು ಮುನ್ನುಡಿ ತಿಳಿಸಬೇಕೆ ? ತಿಳಿಸೀತೆ ? ಬರೆದ ಕಾದಂಬರಿಯೇ ಬರೆದ ಉದ್ದೇಶವನ್ನು ಸ್ಪಷ್ಟಪಡಿಸಲಾರದೆ ಹೋದರೆ ಬರೆದೇನು ಫಲ ? ಮುನ್ನುಡಿ ಬರೆಯುದಿರುವುದಕ್ಕೆ ಇಷ್ಟೆಲ್ಲ ಕಾರಣಗಳಿವೆ" ಎನ್ನುತ್ತಾರೆ. ಮುಂದುವರಿದು "ಆದರೂ ಕೆಲವೊಮ್ಮೆ ಒಂದೆರಡು ಮಾತುಗಳನ್ನು ಬರೆಯೋಣ ಎನಿಸುತ್ತದೆ ; ಬರೆಯುತ್ತೇನೆ" ಎಂದೂ ಹೇಳುತ್ತಾರೆ. ಹೀಗೆ ಹೇಳುವಲ್ಲಿಯೇ ಅವರಿಗೂ ಅದು ಅವಶ್ಯಕವೆಂದೇ ಗೋಚರಿಸಿದೆ. ತಮ್ಮ ನಿರೀಕ್ಷೆಯ ಮಟ್ಟದಲ್ಲಿ ಕಾದಂಬರಿಗಳ ಒಳ ಆಶಯವನ್ನು ಓದುಗ ಅರಿತುಕೊಂಡಾನೇ ಎಂಬ ಪ್ರಶ್ನೆಯೂ ಕಾರಂತರಿಗೆ ಕಾಡಿದಂತೆ ತೋರುತ್ತದೆ. ಈ ದಿಶೆಯಲ್ಲಿ ದಿಕ್ಸೂಚಿಯಾಗಲೆಂಬ ದೃಷ್ಟಿಯಿಂದಲೇ ಕಾರಂತರಿಗೆ ಮುನ್ನುಡಿ ಅವಶ್ಯವೆನಿಸಿರಬಹುದು.

ಕಾದಂಬರಿಯ ವಸ್ತುವಿನ ನಿಷ್ಕೃಷ್ಟತೆಯನ್ನು ಪರಿಚಯಿಸುವುದಂತೂ ಸರಿ, ಜೊತೆಗೆ ಅಂತಹ ವಸ್ತುವಿಗೆ ಪೂರಕವಾಗಿ ಪ್ರೇರಣೆ ನೀಡಿದ ಘಟನೆಗಳ ಪ್ರಸ್ತಾಪ, ಹಿಂದಿನ ಕಾದಂಬರಿಗಳನ್ನು ಕುರಿತ ಪ್ರತಿಕ್ರಿಯೆಗಳ ಪ್ರಸ್ತಾಪ, ಪ್ರಕಟಣೆಯ ವಿಷಯದಲ್ಲಿ ಲೇಖಕನ ಕಷ್ಟಗಳು, ಓದುಗರೇನೇ ಅನ್ನಲಿ ತನ್ನ ನಿಲುವು ತನಗೆನ್ನುವ ಧೋರಣೆ–ಹೀಗೆ ಹಲವು ವಿಷಯಗಳನ್ನೊಳಗೊಂಡ ಕಾರಂತರ ಮುನ್ನುಡಿಗಳು ಓದುಗನಿಗೆ ವಿಶೇಷ ಅನುಭವವನ್ನೊದಗಿಸುತ್ತವೆ. ಪ್ರಮುಖವಾಗಿ, ಬದುಕನ್ನು ಕುರಿತು ಗಂಭೀರವಾಗಿ ಯೋಚಿಸುವ ಕಾದಂಬರಿಗಳನ್ನು ಅರ್ಥೈಸಿಕೊಳ್ಳುವಲ್ಲಿ ಅವರ ಮುನ್ನುಡಿಗಳು ಖಂಡಿತಕ್ಕೂ ನೆರವಾಗುತ್ತವೆ.

ಕಾದಂಬರಿಯ ವಸ್ತುವನ್ನು ಕುರಿತು ಓದುಗನಿಗೆ ಸಾಮಾನ್ಯ ಕಲ್ಪನೆಯನ್ನು ಕೊಡುವುದೇ ಕಾರಂತರ ಮುನ್ನುಡಿಗಳ ಸ್ಥೂಲ ಉದ್ದೇಶವೆನ್ನಬಹುದು. ಅವರ ಹಲವು ಕಾದಂಬರಿಗಳ ಮುನ್ನುಡಿಗಳು ಇದಕ್ಕಿಂತ ಹೆಚ್ಚಿನದೇನನ್ನೂ ಹೇಳುವುದಿಲ್ಲ. 'ನಂಬಿಕೆಗೂ ಬದುಕಿಗೂ ಇರುವ ನಿಕಟ ಬಾಂಧವ್ಯವನ್ನು' ಬಿಂಬಿಸುವ "ನಂಬಿದವರ ನಾಕ ನರಕ'', 'ಕೋಟಿ ಪರಿಸರದ ಬಡತನದ ಬಾಳ್ವೆಯೇ ಕತೆಯವಸ್ತು'ವಾದ "ಮರಳಿಮಣ್ಣಿಗೆ'', 'ಒಬ್ಬಾತ ತನಗೆ ತಾನೇ ಒಂದು ಸಮಸ್ಯೆಯಾಗಿ ತನ್ನವರಿಗೆ

ಮತ್ತೆಷ್ಟು ದೊಡ್ಡ ಸಮಸ್ಯೆಯಾಗಿ ಹೇಗೆ ಪರಿಣಮಿಸಬಹುದೆಂಬ ವ್ಯಕ್ತಿ ಚಿತ್ರಣವನ್ನುಳ್ಳ "ಕನ್ನಡಿಯಲ್ಲಿ ಕಂಡಾತ"–ಮುಂತಾದವು ಇಂಥ ಕಾದಂಬರಿಗಳು. ಆದರೆ ಕಾದಂಬರಿಗೆ ಆಯ್ಕೆಗೊಂಡ ವಸ್ತು ಸಮಕಾಲೀನ–ಸರ್ವಕಾಲೀನ–ವೂ–ಆದಂಥ, ಮನುಷ್ಯನ ಮೂಲ ಪ್ರವೃತ್ತಿಗೆ ಸಂಬಂಧಿಸಿದಂಥ ಸಮಸ್ಯೆಗಳತ್ತ ಮುಖಮಾಡುವಲ್ಲಿ (ಹೊರಳುವಲ್ಲಿ), ಓದುಗನನ್ನು ವೈಚಾರಿಕ ಪ್ರಗಾಢತೆಯತ್ತ ಚಿಂತನಶೀಲಗೊಳಿಸುವಲ್ಲಿ ಕಾರಂತರ ಮುನ್ನುಡಿಗಳು ಹೆಚ್ಚಿನ ವಿವರಗಳನ್ನು ಹೊಂದುತ್ತವೆ. 'ಮೂಕಜ್ಜಿಯ ಕನಸುಗಳು', 'ದ್ವೈಮನಗಳ ಸುಳಿಯಲ್ಲಿ', 'ಕೇವಲ ಮನುಷ್ಯರು'ಗಳಲ್ಲಿ ಸಿಗುವುದು ಈ ಬಗೆಯ ವಿಷಯ. 'ಮೂಕಜ್ಜಿಯ ಕನಸುಗಳು'ಗೆ ಮುನ್ನುಡಿ ಬರೆಯುತ್ತ ಕಾರಂತರು "ಈ ಕಾದಂಬರಿಗೆ ಕಥಾನಾಯಕನಿಲ್ಲ, ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿನ ನಾಯಕಿಯಲ್ಲ. ಸಾಂಪ್ರದಾಯಿಕತೆಯಿಂದ ಹೆರಗಟ್ಟಿದ ಮನಸ್ಸುಗಳನ್ನು ತುಸುತುಸುವಾಗಿ ಕಾಯಿಸಿ, ಕರಗಿಸುವ ಕೆಲಸ ಅವಳದ್ದು. ಅಂಥ ಅಜ್ಜಿಯೊಬ್ಬಳು ಇದ್ದಾಳೆಯೇ–ಎಂಬ ಸಂಶಯ ಬಂದರೆ, ನಮ್ಮ ಸಂಸ್ಕೃತಿಯ ನಂಬಿಕೆಗಳನೇಕವನ್ನು ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು. ಆದರೂ ಅವಳು ನಮ್ಮಲ್ಲನೇಕರಲ್ಲಿ ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹದ ರೂಪದಲ್ಲಿ ಬದುಕಿಕೊಂಡೇ ಇದ್ದಾಳೆ. ಅವಳ ಮೊಮ್ಮಗನಾದ ಸುಬ್ಬರಾಯನಂತಿರುವವರು ಹಲವರಿದ್ದಾರೆ."

ಆ ಅಜ್ಜಿ, ಮೊಮ್ಮಗ ಇಬ್ಬರೂ ಸೇರಿ ನಾಲ್ಕೈದು ಸಾವಿರ ವರ್ಷಗಳಿಂದ ಹರಿದು ಬಂದ 'ಸೃಷ್ಟಿ ಸಮಸ್ಯೆ'ಯೊಂದನ್ನು ಮಥಿಸಲು ಯತ್ನಿಸುತ್ತಾರೆ. ಅವಾಸ್ತವಿಕವೆನಿಸುವ ಅಜ್ಜಿ, ಅನೇಕ ವಾಸ್ತವಿಕ ಇತಿಹಾಸಾಂಶಗಳನ್ನು ತನ್ನ ಒಳದಿಟ್ಟಿಯಿಂದ ನಮ್ಮ ಮುಂದಕ್ಕೆ ಇರಿಸುತ್ತಾಳೆ–ಎಂದು ಕಾದಂಬರಿಯ ವಿಷಯವನ್ನು ಕುರಿತು ವಿವರ ನೀಡುತ್ತಾರೆ. ಕಾದಂಬರಿಯ ಅರ್ಥಗ್ರಹಿಕೆಯನ್ನು ಓದುಗನಿಗೆ ಮುನ್ನುಡಿಯ ವಿವರ ಮಾರ್ಗದರ್ಶಕವಾಗಿ ನಿಲ್ಲುವುದು ಇಲ್ಲಿ ಗಮನಾರ್ಹ ವಿಷಯ. ಕಾಲಾನುಕ್ರಮದಲ್ಲಿ ಕಾಮದೊಂದಿಗೆ ಮನುಷ್ಯನ ಭಾವನೆಗಳು ಬದಲಾವಣೆ ಹೊಂದುತ್ತ ಬಂದದ್ದು ಅಥವಾ ಮಾನವ ಚರಿತ್ರೆಯಲ್ಲಿ ಲೈಂಗಿಕ ಪ್ರಜ್ಞೆಯ ಬೆಳವಣಿಗೆಯನ್ನೇ ವಸ್ತುವನ್ನಾಗಿವುಳ್ಳ ಈ ಕಾದಂಬರಿಯ ವಿಷಯದಲ್ಲಿ ಹೆಚ್ಚು ಚಿಂತನಶೀಲರಾಗುವಲ್ಲಿ ಮುನ್ನುಡಿಯ ಉಪಯುಕ್ತತೆಯನ್ನು ಖಂಡಿತಕ್ಕೂ ನಾವು ಅಲ್ಲಗಳೆಯಲಾರೆವು. ಇಂಥ ಕಾದಂಬರಿಗೆ ಕಾರಂತರು ಮುನ್ನುಡಿ ಬರೆಯದೇ ಹೋಗಿದ್ದರೆ, ಲೇಖಕನ ಉದ್ದೇಶವನ್ನು ಹೊರತುಪಡಿಸಿ ಒಂದು ಅರ್ಥಪರಂಪರೆಯೇ ಈ ಕಾದಂಬರಿಯ ವಿಷಯದಲ್ಲಿ ಹೊರಡಬಹುದಿತ್ತೇನೋ!

"ಈ ಕಾದಂಬರಿಗೊಂದು ಪ್ರಸ್ತಾವನೆ ಅವಶ್ಯವೇ ಎಂದು ಕೇಳಿದರೆ ಇದೇ ಬಾಳಿನ ನಿಗೂಢವಾದ ಸಮಸ್ಯೆಗೆ ಪ್ರಸ್ತಾವನೆ ಬರೆಯುವ ಪ್ರಯತ್ನ–ಅನ್ನಬೇಕಾಗಿದೆ"

–'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ಮುನ್ನುಡಿಯ ಆರಂಭದಲ್ಲಿಯೇ ಬರುವ ಈ ಮಾತುಗಳು ವಸ್ತುವಿನ ಪ್ರಾಮುಖ್ಯತೆಯತ್ತ ತೋರು ಬೆರಳಾಗುತ್ತವೆ. "ಗಂಡು-ಹೆಣ್ಣುಗಳ ಮೈಮನಗಳ ಸಂಬಂಧದ ಚೆಲುವು, ಅಸಹ್ಯಗಳನ್ನು ಇಲ್ಲಿ ಮಂಜುಳೆಯೆಂಬ ಒಬ್ಬಳು 'ಗರತಿ'ಯಲ್ಲದವಳ ಬಾಳಿನ ಮುಖದಿಂದ ಚಿತ್ರಿಸಲು ಪ್ರಯತ್ನಿಸಿದ್ದೇನೆ. ವಿಷಯ ದೇಹ ಚರ್ಯೆಗೆ ಸಂಬಂಧಿಸಿದಾಗ ಓದುಗರ ಕುತೂಹಲ ಸ್ವಾಭಾವಿಕವಾಗಿಯೇ ಕೆರಳುತ್ತದೆ. ನಿಸರ್ಗದತ್ತ ಪ್ರೇರಣೆಯನ್ನು ಸಾಸಿರದಲ್ಲಿ ಒಬ್ಬ ಕಳಚಿಕೊಂಡು ಸುಖಿಯಾಗಿರಬಲ್ಲನೋ ಏನೋ! ಆತ ಸುಖಿಯಾದಾನು–ಎಂದೂ ನನಗೆ ಇಂದು ಅನಿಸುತ್ತಲಿಲ್ಲ. ಆ ಮಟ್ಟಿಗೆ ಮನುಷ್ಯನೂ ಒಬ್ಬ ಪ್ರಾಣಿಯೇ. ಅವನಲ್ಲಿರುವ ಹೆಣ್ಣು-ಗಂಡು ಪ್ರವೃತ್ತಿಗಳು ಅವನಿಗಾಗಿಲ್ಲ. ಕುಲ ಪರಂಪರೆಯನ್ನು ಮುಂದುವರೆಸುವ ನಿಸರ್ಗದ ಇಚ್ಛೆಯನ್ನು ಅದು ಸೇರಿದ್ದು ಅದರ ಒತ್ತಡವನ್ನು ಅಲ್ಲಗಳೆಯುವುದು ಕಠಿಣ ; ಅದನ್ನು ಹೀಯಾಳಿಸುವವರಿಗೂ ನಿಲುಕದ ಶಕ್ತಿ ಅದರದ್ದು"[1] ಎಂದು ಕಾದಂಬರಿಯ ವಸ್ತುವಿನ ವಿಷಯದಲ್ಲಿ ಕಾರಂತರು ತಮ್ಮ ನಿಲುವನ್ನು ಸೂಚಿಸುತ್ತಾರೆ. ಒಂದು ಕಾಲಕ್ಕೆ ಕಾಮದ ವಿಷಯದಲ್ಲಿ ಹೆಚ್ಚಿನ ಮಡಿವಂತಿಕೆ ತಳೆದ ಕಾರಂತರು ಸೂಳೆಯರನ್ನು, ಅವರಲ್ಲಿ ಬರುವ ವಿಟರನ್ನು ಕುರಿತು ತಾತ್ಸಾರ ಭಾವವನ್ನು ಹೊಂದಿದ್ದರು. ಆದರೆ ಜನ ನಿಂದೆಗೆ ಗುರಿಯಾದ ಅಂತಹ ಒಂದು ಕುಟುಂಬದ ನಿಕಟ ಪರಿಚಯ, ಅವರ ಬುದ್ಧಿಗೆ ಹಿಡಿಯದ ಗ್ರಹಣ ಬಿಡಿಸಿತು. ಮುನ್ನುಡಿಯಲ್ಲಿ ಇದನ್ನೂ ಅವರು ಪ್ರಸ್ತಾಪಿಸುತ್ತಾರೆ.

"ಅನುಭವ ಹೆಚ್ಚಿ ಸಾಮಾಜಿಕ ನೆರೆ ಕರೆಯನ್ನು ಕಂಡು ಬೆಳೆದಷ್ಟು–ಗಂಡು ಹೆಣ್ಣಿನ ಪ್ರಶ್ನೆಯನ್ನು ಒಂದೇ ಅಳತೆಗೋಲಿಂದ ಅಳೆಯಲು ಬರಲಾರದು–ಎನಿಸಿತು. ನನ್ನ ವಿಸ್ತಾರ ಓದು, ದೇಶದೇಶಗಳ, ಕಾಲಕಾಲಗಳ, ಸಮಾಜ, ಸಮೂಹಗಳನ್ನು ಕುರಿತು ಓದಿ ಅಳಿದ ಇತಿಹಾಸವೂ ಅದನ್ನೇ ಒತ್ತಿ ಹೇಳಿತು.

ಕನ್ನಡಕವನ್ನು ಹಣೆಯ ಮೇಲಿರಿಸಿ, ಮೂಗಿನ ಕೆಳಗಿರುವ ತನ್ನನ್ನು ಮರೆತು, ಈ ಪ್ರಶ್ನೆಯನ್ನು ನೋಡುವವನಿಗೆ ಅದರ ತಳ ಕಾಣಸಿಗದು ಅನಿಸಿತು!

ಅಂಥ ನೋಟದ, ನನ್ನ ಪಾಲಿನ ಸಾಕಷ್ಟು ನಿರೀಕ್ಷಣೆಯ ಒಂದು ಫಲವೇ ಈ ಕಾದಂಬರಿ."[2]

ಮುನ್ನುಡಿಯ ಕೊನೆಯ ಮಾತುಗಳು ಕಾರಂತರ ಪ್ರಾಮಾಣಿಕ ಅಭಿಪ್ರಾಯವನ್ನು, ಜೊತೆಗೆ ಓದುಗನೂ ಕನ್ನಡಕವನ್ನು ಹಣೆಯ ಮೇಲೇರಿಸದೇ ವಿಷಯವನ್ನು

---

1. ಮೈಮನಗಳ ಸುಳಿಯಲ್ಲಿ, ಪುಟ 3
2. ಮೈಮನಗಳ ಸುಳಿಯಲ್ಲಿ, ಪುಟ 4

ವಿವೇಚಿಸಿಕೊಳ್ಳಬೇಕೆಂಬ ಬಯಕೆಯನ್ನೂ ಸೂಚಿಸುತ್ತವೆ. ಇಂಥಲ್ಲಿ ಮುನ್ನುಡಿ ಗ್ರಂಥಕ್ಕೆ ಮತ್ತು ಓದುಗನಿಗೆ ಒಂದು ಕೊಂಡಿಯಾಗಿ ಮಾತ್ರ ನಿಲ್ಲುವುದಿಲ್ಲ. ಇರುವ ವಿಷಯ ಮಂಥನಗೊಂಡು ಒಂದೊಂದು ಲೇಖದ ಸ್ವರೂಪ ಪಡೆಯುತ್ತವೆ. ಇಂಥಲ್ಲಿ ಮುನ್ನುಡಿ ಗ್ರಂಥಕ್ಕೆ ಮತ್ತು ಓದುಗನಿಗೆ ಒಂದು ಕೊಂಡಿಯಾಗಿ ಮಾತ್ರ ನಿಲ್ಲುವುದಿಲ್ಲ. ಇರುವ ವಿಷಯ ಮಂಥನಗೊಂಡು ಒಂದೊಂದು ಲೇಖದ ಸ್ವರೂಪ ಪಡೆಯುತ್ತವೆ.

ದೇವರು, ಧರ್ಮ, ಮತ, ನಂಬಿಕೆ–ಮುಂತಾಗಿ ಮೌಲ್ಯಗಳೆಂದು ಸ್ವೀಕರಿಸಿರುವ ವಿಷಯಗಳನ್ನು ಕುರಿತು ವೈಚಾರಿಕವಾಗಿ ಪ್ರಶ್ನಿಸುವ, ತಮ್ಮದೇ ಆದ ನಿಲುವನ್ನು ಸೂಚಿಸುವ ಕಾರಂತರು ಮನುಷ್ಯನ ಮೂಲಭೂತ ಪ್ರವೃತ್ತಿಗೆ ಸಂಬಂಧಿಸಿದ ಕಾಮವನ್ನು ಕುರಿತೂ ಮುಖ್ಯವಾಗಿ ಚಿಂತಿಸುತ್ತಾರೆ. ಅವರ ಅನೇಕ ಕಾದಂಬರಿಗಳಲ್ಲಿ ಲೈಂಗಿಕತೆ, ಚಿಂತನೆಯ ವಿಷಯವಾಗುವ ಹಿನ್ನೆಲೆಯಲ್ಲಿ ಅವರ ಮುನ್ನುಡಿಗಳಲ್ಲೂ ಪ್ರಮುಖವಾಗಿ ಪ್ರಸ್ತಾವನೆಗೊಳ್ಳುತ್ತದೆ. ದಾಂಪತ್ಯದ ಚೌಕಟ್ಟನ್ನು ಮೀರಿ ನಿಂತ ಗಂಡು-ಹೆಣ್ಣುಗಳ ಸಂಬಂಧಗಳ ಬಗ್ಗೆ ಸಹಾನುಭೂತಿಯಿಂದ ಯೋಚಿಸುವಾಗ, ಓದುಗರ ಮನಸ್ಸು ಎಷ್ಟರ ಮಟ್ಟಿಗೆ ಇಂತಹ ವಿಷಯಗಳನ್ನು ಸ್ವೀಕರಿಸುವಲ್ಲಿ ವಿಶಾಲವಾದೀತು ಎಂಬ ಸಂಶಯ ಕಾರಂತರಿಗೆ ಕಾಡಿದಂತೆ ತೋರುತ್ತದೆ. ಓದುಗರ ಪ್ರತಿಕ್ರಿಯೆಗಳು, ಆಕ್ಷೇಪಣೆಗಳು ಅಂತಹ ಅನುಭವವನ್ನೂ ಅವರಿಗೆ ಕೊಟ್ಟಿವೆ. ಆದರೆ ನಮ್ಮ ನೈತಿಕ ಕಲ್ಪನೆಯನ್ನು ಮೀರಿ, ಓದುಗರ ಮನಸ್ಸು ಈ ವಿಷಯದಲ್ಲಿ ವಿಚಾರಗ್ರಸ್ತವಾಗಬೇಕೆಂಬುದು ಅವರ ಪ್ರಾಮಾಣಿಕ ತಹತಹಿಕೆ. ಆದ್ದರಿಂದಲೇ ಒತ್ತುಕೊಟ್ಟು ಮುನ್ನುಡಿಗಳಲ್ಲೂ ಮತ್ತೂ ಪ್ರಸ್ತಾಪಿಸುತ್ತಾರೆ. 'ಮುಗಿದ ಯುದ್ಧ'ಕ್ಕೆ ಮುನ್ನುಡಿ ಬರೆಯುತ್ತ ಅವರು ಹೇಳುವ ಮಾತುಗಳು ಗಮನಾರ್ಹವಾಗಿವೆ—

"ಲೈಂಗಿಕ ಪ್ರಶ್ನೆ ಕಾದಂಬರಿಯಲ್ಲಿ ಬರಬಾರದೆ? ಜೀವನವನ್ನು ಕಾಡುವ ಎಲ್ಲ ಪ್ರಶ್ನೆಗಳೂ ಬರಬೇಕು. ಯಾವುವು ತೀರ ಸೂಕ್ಷ್ಮವಾದ ವಿಷಯವೋ ಅವನ್ನು ಅಲ್ಲಗಳೆಯುವುದರಿಂದಲೂ ಹಿತವಿಲ್ಲ; ಬೇತಾಳವಾಗಿ ತೋರಿಸಿದರೂ ಹಿತವಿಲ್ಲ. ಲೈಂಗಿಕ ಪ್ರಶ್ನೆ ಆ ತೆರನದು. ಒಂದೆಡೆ ಅದು ಅಧುನಿಕ, ಸ್ವಯಂಕೃತ 'ಮನು'ಗಳ ದಂಡವೆದುರು ನಿಂತಿದೆ. ಇನ್ನೊಂದೆಡೆ ನಿರಂಕುಶ ವಿಲಾಸ ಪ್ರಿಯ ಆರಾಧನೆಗೆ ಒಳಗಾಗಿದೆ. ಇವೆರಡೂ 'ಅನೀತಿ'ಗಳೇನೇ. ಶೀಲ, ಅಶ್ಲೀಲದ ಪ್ರಶ್ನೆ ಹುಟ್ಟುವುದು ವಾಸ್ತವ ಸ್ಥಿತಿಯ ತುಚ್ಛೀಕಾರ ಇಲ್ಲವೆ ಪೂಜನೆಗಳಿಂದ.

ನನ್ನ ಕೆಲಸ– ಆ ಪ್ರಶ್ನೆಯ ಹಿಂದು ಮುಂದನ್ನು ತಿಳಿಯುವುದು. ಒಂದು ಮನೋಧರ್ಮದ ವ್ಯಕ್ತಿ, ತನ್ನ ಮುಂದಿನ ಆವರಣದಲ್ಲಿ ಆ ಪ್ರಶ್ನೆಯನ್ನು ಹೇಗೆ

ಎದುರಿಸಲಿರುವನೆಂದು ಪರಿಶೀಲಿಸುವುದು. ನಾನು ನನ್ನ ಬರಹದಲ್ಲಿ ಲೈಂಗಿಕ ಸಮಸ್ಯೆಯನ್ನು ತುಚ್ಛೀಕರಿಸಲಾರೆ. ಅದನ್ನು ಪೂಜಿಸಲೂ ಆರೆ. ಅದರ ಇತಿಮಿತಿಗಳನ್ನು ತಿಳಿದು ಚಿತ್ರಿಸುವುದು, ಒಂದು ಮುಖ್ಯ ಕೆಲಸವೆ."

–ಒಬ್ಬ ಲೇಖಕನ ಕರ್ತವ್ಯವಾಗಿಯೂ ಸರಿ, ಓದುಗರ ಪ್ರತಿಕ್ರಿಯೆಗಳಿಗೆ ಉತ್ತರವಾಗಿಯೂ ಸರಿ ಕಾರಂತರ ಗಟ್ಟಿ ಧೋರಣೆ ಇಲ್ಲಿ ಸ್ಪಷ್ಟಗೊಳ್ಳುತ್ತದೆ.

ಅನುಭವಗಳ ಹಿನ್ನೆಲೆಯಿಲ್ಲದೆ ಕಾರಂತರು ಏನನ್ನೂ ಸೃಜಿಸುವುದಿಲ್ಲವೆಂಬುದು ಅವರ ಬರವಣಿಗೆಯ ವಿಶೇಷತೆ. ನಿಜಜೀವನದ ಸಹಜವಾದ ತಿಳಿಯಾದ ವಾಸ್ತವ ಚಿತ್ರಣವಾಗಿರುವುದರಿಂದಲೇ ಅವರ ಬರವಣಿಗೆ ಓದುಗನಿಗೆ ಬದುಕಿನ ತೀರ ಸನಿಹದ ಅನುಭವವಾಗುತ್ತದೆ. ಹೀಗಿರುವಾಗ ವ್ಯಕ್ತಿಶೀಲಗಳ ಬಗೆಗೆ ಸೂಕ್ಷ್ಮದೃಷ್ಟಿ ಬೆಳೆಸಿಕೊಂಡ ಕಾರಂತರು ತಮ್ಮ ಸಂಪರ್ಕಕ್ಕೆ ಬಂದ ಅಥವಾ ತಾವು ಕಂಡುಂಡ ವ್ಯಕ್ತಿಗಳನ್ನೋ ಘಟನೆಗಳನ್ನೋ ತಮ್ಮ ಕಾದಂಬರಿಗಳಿಗೆ ಹಿನ್ನೆಲೆಯಾಗಿ ಬಳಸುವುದು ಸಹಜವೇ. ಆದರೆ ಇಲ್ಲೆಲ್ಲಾ ಅವರಿಗೆ ಮಾನವ ಸಹಜ ಸ್ವಭಾವ–ಶೀಲ ಮುಖ್ಯವೇ ಹೊರತು ವ್ಯಕ್ತಿಯಲ್ಲ. ಸಾಮಾನ್ಯವಾಗಿ ಅವರು ತಮ್ಮ ಕಾದಂಬರಿಗಳಲ್ಲಿ ತಮ್ಮ ಜಿಲ್ಲೆಯ ಪರಿಸರ ವಿಶೇಷವಾಗಿ ಊರುಗಳನ್ನು ತೆಗೆದುಕೊಳ್ಳುತ್ತಾರೆ. ಕಾದಂಬರಿಯ (ಪ್ರಧಾನ ರಂಗಸ್ಥಳ ಈ ಊರಾದರೂ ಇಲ್ಲಿಯ ಯಾವುದೇ ವ್ಯಕ್ತಿಯನ್ನು ಕುರಿತು ಉದ್ದೇಶಿಸಿ ಬರೆದುದಲ್ಲ– ಎಂಬಂತಹ ಸ್ಪಷ್ಟೀಕರಣದ ಮಾತುಗಳು ಅವರ ಹಲವು ಕಾದಂಬರಿಗಳಲ್ಲಿ ಬರುತ್ತವೆ. "ನನ್ನ ಟೀಕೆ ಟಿಪ್ಪಣಿಗಳಿಂದ ಜೀವಂತ ವ್ಯಕ್ತಿಗಳನ್ನು ತೋರಿಸಿ ಕೆಣಕುವುದಂತು ನನ್ನ ಗುರಿಯಲ್ಲೇ ಇಲ್ಲ. ಭಿನ್ನ ಭಿನ್ನ ವ್ಯಕ್ತಿಗಳಲ್ಲಿ ಕಾಣಿಸುವ ಗುಣದೋಷಗಳಿಗೆ ಏನು ಕಾರಣ–ಎಂದು ತಿಳಿಯುವ ಹಂಬಲ ನನ್ನದು. ಆ ಮಟ್ಟಿಗೆ ನನ್ನ ಪಾಲಿಗೆ ಅವರು ಹೆಸರಿಲ್ಲದ X,Y,Z ಆಸಾಮಿಗಳು. ಇಂದಿನ ವ್ಯಕ್ತಿಗಳೆಲ್ಲರೂ ಅಳಿದ ಮೇಲೆಯೂ, ನಾನು ಇಲ್ಲಿಂದ ಅಸ್ತಂಗತವಾದ ಮೇಲೆಯೂ ಸಮಾಜದಲ್ಲಿ ಅವೇ ಸಮಸ್ಯೆಗಳು, ಅವೇ ಶೀಲಗಳು, ಅವೇ ನ್ಯೂನತೆಗಳು, ಸುಗುಣಗಳು ಬರುತ್ತವೆ. ಆದುದರಿಂದ ನನಗೆ ಅವು ಮುಖ್ಯವೇ ಹೊರತು ಅಂಥ ಗುಣದೋಷಗಳನ್ನು ಹೊತ್ತು ನಲಿಯುವ ಇಂದಿನ ನಿರ್ದಿಷ್ಟ ವ್ಯಕ್ತಿಗಳ ಹೊಗಳಿಕೆ ತೆಗಳಿಕೆಗಳೆರಡೂ ಅಮುಖ್ಯ ಸಂಗತಿಗಳು".

–'ಇಳೆಯೆಂಬ'ದ ಮುನ್ನುಡಿಯ ಮಾತುಗಳಿವು. ಇಷ್ಟಾದರೂ ಒಂದು ಕಾದಂಬರಿಯ ಬಂಧ ರೂಪಗೊಳ್ಳುವಲ್ಲಿ ಪ್ರಮುಖ ಕೊಂಡಿಯಾಗಿ ನಿಂತ ಘಟನೆಗಳು ತಾವು ತೀರ ಹತ್ತಿರದಲ್ಲಿ ಕಂಡವುಗಳೇ ಆದಲ್ಲಿ, ಅವುಗಳನ್ನು ತಮ್ಮ ಉದ್ದೇಶಕ್ಕೆ ನೆರವಾಗುವಂತೆ ಬಳಸಿಕೊಂಡ ವಿಷಯವನ್ನು ಮುನ್ನುಡಿಯಲ್ಲಿ ಪ್ರಸ್ತಾಪಿಸುವುದು ಅವರ ಪ್ರಾಮಾಣಿಕತೆಯನ್ನು ಸೂಚಿಸುತ್ತದೆ. 'ಕರುಳಿನ ಕರೆ' ಕಾದಂಬರಿ

ಯನ್ನು ಕೆರಳಿಸಿದ್ದು "ಬಡತನದಲ್ಲಿ ತಾಯಿ ತಂದೆಯರ ಋಣ ಪಡೆದು ಹುಟ್ಟಿ, ಬೆಳೆದು, ತಾರುಣ್ಯ ಬರುತ್ತಲೇ ದೊರೆಯುವ ಸ್ವಾತಂತ್ರ್ಯದಿಂದ ಹಿಗ್ಗಿ, ನೌಕರಿ ದೊರಕಿಸಿ, ಹಿರಿಯರಿಂದ ದೂರವಾಗಿ, ಹಿಂದಿನ ಸಂಬಂಧವನ್ನೆಲ್ಲ ಮರೆತ ಒಬ್ಬೊಬ್ಬರು ತರುಣ ಮಿತ್ರರ ನಡವಳಿಕೆ". ಅಲ್ಲದೆ ಇದೇ ಕಾದಂಬರಿಯಲ್ಲಿ ಬರುವ ಕಾಶೀ ಸಮಾರಾಧನೆ ಪ್ರಸಂಗ, ಚಿಕ್ಕ ಪ್ರಮಾದಕ್ಕೆ ಸಿಟ್ಟಿಗೆದ್ದು ಬಂಧುವನ್ನು ಕೊಲೆ ಮಾಡಿ, ಬೆದರಿ ತಲೆ ತಪ್ಪಿಸಿಕೊಂಡ ಘಟನೆ ನಡೆದ ವಿಷಯಗಳೇ. ಇದೆ ರೀತಿ 'ಶನೀಶ್ವರನ ನೆರಳಿನಲ್ಲಿ' ಕಾದಂಬರಿಯ ವ್ಯಕ್ತಿಗಳು ಅದೆ ಹೆಸರಿನವರಾಗಿರದಿದ್ದರೂ ನಿಜ ಜೀವನದಲ್ಲಿ ಸಂಧಿಸಿದವರೇ ಎಂಬುದನ್ನೂ ಕಾರಂತರು ಹೇಳುತ್ತಾರೆ.

ಇನ್ನು ಜನಾಭಿಪ್ರಾಯದ ವಿಶ್ಲೇಷಣೆಗೂ ಕಾರಂತರಿಗೆ ಮುನ್ನುಡಿ ಎಡೆಗೊಟ್ಟುದನ್ನು ನಾವು ಕಾಣುತ್ತೇವೆ. ತಮ್ಮ ಹಿಂದಿನ ಕಾದಂಬರಿಗಳ ಕುರಿತಾದ ಪ್ರತಿಕ್ರಿಯೆಗಳ ಪ್ರಸ್ತಾವವನ್ನು ಅವರು ಮುನ್ನುಡಿಯಲ್ಲಿ ಮಾಡುತ್ತಾರೆ—

"ಇನ್ನೊಂದು ಮಾತು—ಇಲ್ಲಿನ ಕಥಾನಾಯಕನ ದೌರ್ಬಲ್ಯದ ವಿಚಾರದಲ್ಲಿ. "ಹಾದರದ ಪ್ರಕರಣದಲ್ಲಿ." ಈ ಬರೆಹ ಬರೆದಾದ ಬಳಿಕ ಬರೆದು ಅಚ್ಚಾದುದು "ಹೆತ್ತಳಾ ತಾಯಿ." ಅದಕ್ಕೆ ನಾನು ಮುನ್ನುಡಿ ಬರೆದಿಲ್ಲ. ಅಲ್ಲಿಯೂ 'ಹಾದರ'ದ ಗಾಳಿ ಬೀಸುತ್ತದೆ. ಹೀಗೆಂದು ನನ್ನ ಮಿತ್ರರಲ್ಲಿ ಒಬ್ಬರು ರೇಗಿ ಬರೆದಿದ್ದಾರೆ. ಇದು ಸ್ತ್ರೀ ಜಗತ್ತಿನ ಅಪಮಾನವೆಂದೂ ತಿಳಿದಿದ್ದಾರೆ. ಅದರಂತೆ ಇಲ್ಲಿಯೂ ಅಪ್ರಕೃತ-(ಕಥಾನಾಯಕ)ನ ಚಿತ್ರ ಕುರಿತು ವ್ಯರ್ಥ ಶೋಕ ಉಚಿತವಾಗಬಹುದು".[1]

"ನನ್ನ ಹಿಂದಣ ಕಾದಂಬರಿ 'ಮೈಮನಗಳ ಸುಳಿಯಲ್ಲಿ' ಲೈಂಗಿಕ ಜೀವನದ ನಾಲ್ಕು ಮುಖಗಳನ್ನು ತೋರಿಸುವ ಸಲುವಾಗಿ ಬರೆದುದು. ಅದನ್ನೇ ಹಲವರು ಅದು ಮಂಜುಳೆಯೆಂಬ ಸೂಳೆಯ ಬದುಕು ಎಂಬ ಅನುಕಂಪವನ್ನು ತೋರಿ, ಮುಖ್ಯ ಸಮಸ್ಯೆಯನ್ನೇ ಮರೆತವರಂತೆ ನನಗೆ ಮೆಚ್ಚಿಕೆಯ ಪತ್ರ ಬರೆದರು. ಸೂಳೆಯ ಸಲುವಾಗಿ ಅವರು ಕೊಟ್ಟ ರಿಯಾಯಿತಿ ಅವಳ ಬಳಿಗೆ ಬಂದವರ ಪಾಲಿಗೆ ಅವರು ಕೊಟ್ಟರೋ ತಿಳಿಯೆ.

ಆ ಕಾದಂಬರಿಯಲ್ಲಿ ಅಂಥವೇ ಸಮಸ್ಯೆಗೆ ಗುರಿಯಾದವರು, ಆ ಬಗೆಯ ರಿಯಾಯಿತಿಯನ್ನು ಪಡೆಯಬೇಕಾದವರೂ ಇಲ್ಲ. ನಮ್ಮ ಸಾಂಪ್ರದಾಯಿಕ ಕಣ್ಣು ಅವರನ್ನು ಎಷ್ಟು ಸಹಾನುಭೂತಿಯಿಂದ ನೋಡೀತೆಂದು ನಾನು ಹೇಳಲಾರೆ. ನಮ್ಮನ್ನು ತೀರ ಹೊರತಾಗಿಸಿಕೊಂಡು ಜಗತ್ತನ್ನು ಅಳೆಯುವ ನೋಟದಿಂದ ಅನ್ಯರ

---

1 ಮುಗಿದ ಯುದ್ಧ–ಪುಟ–I–II

ವಿಚಾರದಲ್ಲಿ ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವುದು ತುಂಬ ಕಷ್ಟದ ಸಂಗತಿ"[2]

—ಮೇಲಿನ ಮಾತುಗಳನ್ನು ನೋಡಿದರೆ, ಕಾದಂಬರಿಯಲ್ಲಿ ಉದ್ದೇಶಿತವಾದ ವಸ್ತುವಿನ ಒಳ ಆಶಯವನ್ನು ಅರಿಯದೆ ವಿಚಾರರಹಿತವಾಗಿ ಆಕ್ಷೇಪಿಸುವ ಓದುಗರ ಬಗೆಗೆ ಕಾರಂತರಿಗೆ ವ್ಯಥೆ ಭಾವವೂ ಇದೆ, ತಮ್ಮ ನಿಲುವಿನ ಬಗ್ಗೆ ನಿಷ್ಠುರತೆಯೂ ತುಂಬಿದೆ ಎನಿಸುತ್ತದೆ. 'ಸರಸಮ್ಮನ ಸಮಾಧಿ'ಯ ಬಗೆಗೆ ಬಂದ ಪ್ರತಿಕ್ರಿಯೆಗೆ 'ಇಲ್ಲಿನ ಪ್ರಶ್ನೆ ಮನುಷ್ಯ ಜಾತಿಗೆ ಸಂಬಂಧಿಸಿದುದು. ಜಾತಿಭೂತ ಪೀಡಿತವಾದ ಸಮಾಜಕ್ಕೆ ಏನೂ ಕಂಡರೂ ಅದೇ ದೆವ್ವ ಕಾಣಿಸಬೇಕೆ!' ಎಂದು ಉದ್ಗಾರ ತೆಗೆಯುತ್ತಾರೆ. ಇಷ್ಟಾದರೂ ಅದನ್ನವರು ತಿರುಗಿ ಓದುಗರ ಮುಂದಿಡಲು ಇಷ್ಟಪಡುತ್ತಾರೆ. 'ಕಾರಣ ದಾಂಪತ್ಯ ವಿರಸಗಳ ದೊಡ್ಡ ಸಮಸ್ಯೆಯನ್ನು ಕುರಿತು ನಮ್ಮ ಮನಸ್ಸು ವಿಚಾರ ಗ್ರಸ್ತವಾಗಲಿ' ಎಂಬುದೇ ಅವರ ಉದ್ದೇಶ. ಓದುಗರನ್ನು ರಂಜಿಸುವ ಒಂದೇ ಉದ್ದೇಶದಿಂದ ಕಾರಂತರು ಬರವಣಿಗೆಗೆ ತೊಡಗಿದವರಲ್ಲ. ಹೀಗಾಗಿ ಓದುಗರು ಆಕ್ಷೇಪಿಸುತ್ತಾರೆಂದಾಗಲಿ, ಅಥವಾ ಅವರ ಮೆಚ್ಚುಗೆಗಾಗಿ ತಮ್ಮ ನಿಲುವನ್ನು ಬದಲಿಸಬೇಕೆಂದಾಗಲಿ, ಹಿಂಜರಿಯಬೇಕೆಂದಾಗಲಿ ಕಾರಂತರಂತಹವರು ಯೋಚಿಸಲಾರರು. ''ನಾನು ನನ್ನ ಜೀವನವನ್ನು ಪ್ರಶ್ನಿಸುತ್ತಿರುವಂತೆ ಸಮಾಜ ಜೀವನವನ್ನೂ ಕುರಿತು ಪ್ರಶ್ನಿಸುವಾಗ, ಇಂಥ ಅಸಮಾಧಾನ ಬಂದರೆ ಏನೂ ಮಾಡುವಂತಿಲ್ಲ. ಜನ ಖುಷಿಪಡಲೆಂದು ಅವರು ಅನುರಕ್ತರಾಗಿರುವ ವಿಷಯಗಳಲ್ಲಿ ಅವರ ಬೆನ್ನುಚಪ್ಪರಿಸುವುದು ನನ್ನ ದಾರಿಯೂ ಅಲ್ಲ. ಲೋಕಕ್ಕೆಲ್ಲ ಮೆಚ್ಚುಗೆಯಾಗುವಂತೆ ಬರೆಯುತ್ತೇನೆ–ಎಂದು ನಾನು ತಿಳಿದುಕೊಂಡೂ ಇಲ್ಲ''–'ಅಳ–ನಿರಾಳ'ದ ಮುನ್ನುಡಿಯಲ್ಲಿ ಹೇಳುವ ಈ ಮಾತುಗಳು ಈ ದಿಶೆಯಲ್ಲಿಯು ಅವರ ನಿಲುವಿಗೆ ಸಾಕ್ಷಿ. ಅನೇಕ ಸಲ ಒಂದು ಕೃತಿ ಅರ್ಥವಾಗದು ಎನ್ನುವಲ್ಲಿ ಲೇಖಕನ ದೌರ್ಬಲ್ಯದಂತೆ ಓದುಗನ ಅಸಮರ್ಥತೆಯೂ ಕಾರಣವಾಗುವ ಸಂಭವವಿರುತ್ತದೆ. ಆದ್ದರಿಂದಲೇ ಕಾರಂತರನ್ನು ಒಂದು ಮಟ್ಟದ ಓದುಗರು ಮಾತ್ರ ಒಪ್ಪಿಕೊಂಡಾರೆಂಬ ಅನಿಸಿಕೆ ಸಹಜವಾಗಿ ಮೂಡುತ್ತದೆ. ಅವರ ಹಲವು ಕಾದಂಬರಿಗಳ ವಿಷಯದಲ್ಲಿ ಈ ಮಾತು ಸತ್ಯವೇ.

ಕಾರಂತರ ಮುನ್ನುಡಿಗಳಲ್ಲಿ ವ್ಯಕ್ತಿಗತ ವಿಷಯಗಳೂ ಅಲ್ಲಲ್ಲಿ ಇಣಕಿ ಹಾಕುತ್ತವೆ. ಸಾಮಾನ್ಯವಾಗಿ ಕಾದಂಬರಿಗಳು ಅನ್ಯರಿಗೆ ಅರ್ಪಣೆಗೊಂಡಲ್ಲಿ ಆ ವ್ಯಕ್ತಿಗಳನ್ನು ಕುರಿತು ಮುನ್ನುಡಿಯಲ್ಲಿ ಕಾರಂತರು ನಾಲ್ಕು ಮಾತು ಹೇಳುವುದನ್ನು ಕಾಣುತ್ತೇವೆ. 'ಅಳಿದ ಮೇಲೆ' ಕಾದಂಬರಿಯು ಯಶವಂತರಂತೆಯೇ ಸ್ನೇಹಜೀವಿಯಾದ, ಕಾರಂತರ ಪ್ರಿಯಮಿತ್ರರಾದ ನಿ. ತುಂಗರಿಗೆ ಸ್ನೇಹದ ಗಾಢ ನೆನಪಿಗಾಗಿ

2 ಕೇವಲ ಮನುಷ್ಯರು

ಆ ಕಾದಂಬರಿ ಅರ್ಪಿತವಾಗಿದೆ. ಸಂದರ್ಭಕ್ಕೆ ಯಥೋಚಿತವೆನಿಸುವಂತೆ ತುಂಗರ ಬಗೆಗೆ ದೀರ್ಘ ಪರಿಚಯವನ್ನು ಕಾರಂತರು ಕೊಡುತ್ತಾರೆ. ಕಾರಂತರ ಮನಸ್ಸು ತೀಕ್ಷ್ಣವೇದನೆ, ವ್ಯಥೆ. ತಳಮಳಕ್ಕೆ ತುರಿಯಾದ ಪ್ರಸಂಗದಲ್ಲಿ ರೂಪಗೊಂಡ ಆ ಕಾದಂಬರಿಯ ಬಗೆಗೆ ತುಂಗರು ಕುತೂಹಲಿಗಳಾಗಿದ್ದರು. ದುರ್ದೈವಕ್ಕೆ ಅದು ಅಚ್ಚಿನಿಂದ ಬರುವುದರಲ್ಲಿಯೇ ತುಂಗರು ವ್ಯಾಧಿಗೀಡಾಗಿ, ಆ ಕಾದಂಬರಿಯೇ ಅವರಿಗೆ ಅರ್ಪಿತವಾದದ್ದು ಕಾರಂತರಿಗೆ ವ್ಯಥೆತಂದ ವಿಷಯ. 'ಮರಳಿ ಮಣ್ಣಿಗೆ'ಯನ್ನು ಕಾರಂತರು ತಾಯಿಗೆ ಅರ್ಪಿಸಿದ್ದಾರೆ. ಅದರ ಮೂರನೆಯ ಮುದ್ರಣದ ಕಾಲಕ್ಕೆ ಇನ್ನಿಲ್ಲವಾದ ಆ ತಾಯಿಯ ಬಗೆಗೆ ಅವರ ಅಂತಃಕರಣವೆಲ್ಲ ಹೊರಸೂಸಿದೆ. "ದೀರ್ಘವಾದ ಸ್ನೇಹಕ್ಕೆ ನನ್ನನ್ನು ಗುರಿಯನ್ನಾಗಿ ಮಾಡಿದ ಅವರ ನೆನಪನ್ನು ನನ್ನ ಮಗನ ಮೃತಿಯ ಬಳಿಕ ಬರೆದ ಈ ಪ್ರಥಮ ಕಾದಂಬರಿಯಲ್ಲಿ ಸ್ಮರಿಸಿದ್ದರೆ ಸೋಜಿಗವೇನಿಲ್ಲ. ಸ್ಮರಿಸದೆ ಹೋದರೆ ತಪ್ಪಲ್ಲವೇ ಎನಿಸುತ್ತದೆ ನನಗೆ"[1]–ಮಿತ್ರ ಸಂಜೀವರಾಯರ ಬಗೆಗೆ ಹೇಳುವ ಮಾತುಗಳು ಅವರ ಸೌಜನ್ಯ ಸೂಚಿಸುತ್ತವೆ.

ದೀರ್ಘಕಾಲ ವಾಸಿಸಿದ ಪುತ್ತೂರಿನ ಜೀವನವನ್ನು ತೊರೆದು ತಮ್ಮ ಹುಟ್ಟೂರಿಗೆ ಬಂದು ನೆಲಸಿದ ವಿಷಯವನ್ನು ಕಾರಂತರು 'ಕನ್ನಡಿಯಲ್ಲಿ ಕಂಡಾತ'ದ ಮುನ್ನುಡಿಯಲ್ಲಿ ಪ್ರಸ್ತಾಪಿಸುತ್ತಾರೆ. ಸದ್ದುಗದ್ದಲವಿಲ್ಲದ ಅಲ್ಲಿಯ ಶಾಂತವಾತಾವರಣವನ್ನು ತೊರೆದು ಬಂದುದಕ್ಕೆ ಒಂದಿಷ್ಟು ಕೊರಗೆಯೂ ಅವರಲ್ಲಿ ಕಾಣುತ್ತದೆ. ಬರೆದ ಪುಸ್ತಕದ ಪ್ರಕಟಣೆ ವಿಳಂಬಗೊಂಡ ಹಿನ್ನೆಲೆಯಲ್ಲಿ, ತಮ್ಮ ಪುಸ್ತಕಗಳ ಪ್ರಕಾಶನದ ಹೊಣೆಯನ್ನೂ ಹೊತ್ತ ಕಾರಂತರು ಬರಹಗಾರನ ದಾರಿದ್ರ್ಯ, ಪ್ರಕಾಶಕನ ಆರ್ಥಿಕ ಅಡಚಣೆಯ ಗೋಳನ್ನು 'ನಂಬಿದವರ ನಾಕ ನರಕ'ದಲ್ಲಿ ತೋಡಿಕೊಳ್ಳುತ್ತಾರೆ.

ಕೃತಿರಚನೆಯಲ್ಲಿ ಲೇಖಕನಿಗಿರುವ ಇತಿಮಿತಿಗಳ ಪ್ರಶ್ನೆಯನ್ನೇ ಸಮಸ್ಯೆಯಾಗಿವುಳ್ಳ 'ಇಳೆಯೆಂಬ...' ಕಾದಂಬರಿಗೆ ಕಾರಂತರು ಬರೆದ ಮುನ್ನುಡಿ ವಿಚಾರಪೂರ್ಣವಾಗಿದೆ. ಒಬ್ಬ ಲೇಖಕನಾಗಿ ಬರಹಗಾರನ ಅಥವಾ ನಾಟಕಕಾರನ ಇತಿಮಿತಿಗಳ ಬಗೆಗೆ ಅವರಿಲ್ಲಿ ಚಿಂತನೆಮಾಡುತ್ತಾರೆ. "ತನ್ನ ಪರಿಸರವನ್ನು ಚಿತ್ರಿಸಲು ಹೊರಟ ನಾಟಕಕಾರನಾಗಲಿ, ಅಲ್ಲಿನ ಪಾತ್ರಗಳ ಸೋಗುಧರಿಸಿ ನಟಿಸಲು ಹೊರಟ ನಟನಾಗಲಿ, ಸುತ್ತಣ ಜಗತ್ತಿನ ತನ್ನಂತಿರುವ ವ್ಯಕ್ತಿಗಳು ಇಳೆಯೆಂಬ ರಂಗಸ್ಥಳದಲ್ಲಿ ಉದ್ದೇಶಪಟ್ಟು ನಟಿಸುವ ನಟರನ್ನು ಇಣುಕಿ ನೋಡಬಲ್ಲ ಸಾಮರ್ಥ್ಯವುಳ್ಳವರೇ ? ಹೀಗೆ ನಾಟಕ ಚಿತ್ರಣಕ್ಕೆ ಅಸಂಖ್ಯ ಮಿತಿಗಳು ಬಂದು ಅಡ್ಡನಿಲ್ಲುತ್ತವೆ. ಅತಿ ಸೂಕ್ಷ್ಮವಾದ ದೃಷ್ಟಿ, ಸಾಕಷ್ಟು ವಿಸ್ತೃತವಾದ ಅನುಭವ. ತನ್ನ ಇತಿಮಿತಿಗಳು ಇನ್ನೊಬ್ಬರ

1. ಆಳ–ನಿರಾಳ ಪುಟ IV

ಇತಿಮಿತಿಯಾಗಬಹುದೆಂಬ ಔದಾರ್ಯ. ತನ್ನ ಸಿಹಿ–ಕಹಿಗಳಿಂದ ಅನ್ಯರನ್ನು ಅಳೆಯಲು ಹೋಗದಿರುವ ತಟಸ್ಥ ದೃಷ್ಟಿ—ಇದ್ದಾಗ ಯಾವುದಾದರೂ ಒಂದು ಸುಂದರ ಕೃತಿ ಸೃಷ್ಟಿಯಾಗಲಿಕ್ಕೆ ಸಾಧ್ಯ. ಅಂಥ ಅರಿವಿನಿಂದ ಬದುಕಿನಲ್ಲಿ ಕಾಣಿಸುವ ಸೊಗಸು ಹೊಲಸುಗಳ ತಾರತಮ್ಯವೆಷ್ಟೆಂದು ಕಾಣಿಸಿಯೂ "ತಾನು ಇಂಥ ಜಗತ್ತಿನಲ್ಲೇ ಬದುಕಬೇಕಾಗಿದೆ ಎಂಬ ಪ್ರಜ್ಞೆ ವ್ಯಕ್ತಿಯನ್ನು ನಡೆಯಿಸಿದರೆ ಆಗ ಬಹುದು".

ಸೃಷ್ಟಿಕ್ರಿಯೆಯ ಹಿನ್ನೆಲೆಯಲ್ಲಿ ಲೇಖಕನಿಗಿರಬೇಕಾದ ತಿಳಿವಳಿಕೆಯ ಬಗೆಗೆ ಕಾರಂತರ ವ್ಯಕ್ತಿಗತ ಧೋರಣೆ ಇಲ್ಲಿ ಸ್ಪಷ್ಟಗೊಳ್ಳುತ್ತದೆ. ಬದುಕಿನ ತೀರ ಹತ್ತಿರದ ಚಿತ್ರಣವಾಗಿರುವುದರಿಂದಲೇ ಕಾರಂತರ ಕಾದಂಬರಿಗಳನ್ನು ನಾವು ಹೆಚ್ಚು ಪರಿಗಣಿಸುವಂತಾಗಿದೆ. ಆದರೆ ಬರಹಗಾರನಾಗಿ ತನ್ನ ಲೋಕಾನುಭವ ಇನ್ನೂ ಗಾಢವಾಗಬೇಕೆಂಬ ಪ್ರಜ್ಞೆ ಕಾರಂತರಿಗೆ ಕಾಡಿದೆ ಏನೋ ಎನ್ನುವ ಭಾವ ಇಲ್ಲಿಯ ಮುನ್ನುಡಿಯ ಮಾತುಗಳಿಂದ ಓದುಗನಿಗೆ ಉಂಟಾಗುತ್ತದೆ. ಎಷ್ಟೇ ತಿಳಿದುಕೊಂಡವನೆಂದುಕೊಂಡರೂ, ಅರಿತುಕೊಳ್ಳಬೇಕೆಂಬ ದೃಷ್ಟಿಯುಳ್ಳ ವ್ಯಕ್ತಿಗೆ ತನ್ನ ಅರೆತಿಳುವಳಿಕೆಯ ಪ್ರಜ್ಞೆ ಕಾಡುತ್ತಲೇ ಇರುತ್ತದೆ. ಅಂತಹ ಮನಸ್ಸುಳ್ಳ ಕಾರಂತರು ಹಲವಾರು ವಕ್ತಿಗಳ ಹಲವಾರು ಮನಸುಳ್ಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನುಳ್ಳ ತನ್ನ ಪರಿಸರದ ಬಗೆಗೆ ತನ್ನ ದೃಷ್ಟಿ ಇನ್ನೂ ಸೂಕ್ಷ್ಮಗೊಳ್ಳಬೇಕೆಂದು ಬಯಸಿದರೆ, ತನ್ನ ಪರಿಮಿತಿಯ ಬಗೆಗೆ ಯೋಚಿಸಿದರೆ ಆಶ್ಚರ್ಯಪಡಬೇಕಿಲ್ಲ.

ಕಾದಂಬರಿಗಳ ವೈವಿಧ್ಯವನ್ನವಲಂಬಿಸಿಕೊಂಡು ಕಾರಂತರ ಮುನ್ನುಡಿಗಳ ವಿಷಯ ವ್ಯಾಪನೆ ಹಲವು ತೆರನಾಗಿದೆ. ಮುನ್ನುಡಿಗಳು ಸಮಸ್ಯೆಗಳನ್ನು ಚರ್ಚಿಸಿವೆ; ಕ್ಲಿಷ್ಟವೆನಿಸುವಲ್ಲಿ ಸರಳರೂಪಕೊಟ್ಟಿವೆ; ಪರಿಸರ ಪ್ರಜ್ಞೆ ಲೇಖಕನ ಇತಿಮಿತಿಗಳನ್ನು ಕುರಿತು ಯೋಚಿಸುವೆ. ಕಾದಂಬರಿಯ ವಸ್ತುವಿಗೆ ಹಿನ್ನೆಲೆಯಾಗಿರುವ ಕಾರಂತರ ವ್ಯಕ್ತಿನಿಷ್ಠತೆಯೂ ಅವರ ಮುನ್ನುಡಿಗಳಲ್ಲಿ ಬಹಳ ಸಲ ಸೇರ್ಪಡೆಯಾಗುವುದರಿಂದ ಅವು ಇನ್ನೂ ಮಹತ್ವದವುಗಳಾಗುತ್ತವೆ.

ತನ್ನ ವಸ್ತು ಪರಿಮಿತಿಯಲ್ಲಿ ಬದುಕನ್ನು ಅರ್ಥೈಸಲು ಯತ್ನಿಸುವ ಒಂದು ಕೃತಿಯ ನಡೆಯಲ್ಲಿ ಲೇಖಕನ ವೈಯಕ್ತಿಕ ಧೋರಣೆಗಳನ್ನು ಪ್ರತಿಸಲವೂ ಬೆರಳಿಟ್ಟು ತೋರಿಸುವುದು ಕಷ್ಟವಾಗುತ್ತದೆ. ಕಾರಂತರು ಮುನ್ನುಡಿಯಲ್ಲಿಯೇ ತಮ್ಮ ನಿಲುವನ್ನು ಅಭಿವ್ಯಕ್ತಗೊಳಿಸುವುದರಿಂದ ಅವರ ವ್ಯಕ್ತಿಗತ ಧೋರಣೆಗಳಿಗೂ ಅವರ ಬರವಣಿಗೆಗೂ ಇರುವ ನಿಕಟತೆ ಸ್ಪಷ್ಟಗೊಳ್ಳುತ್ತ ಹೋಗುತ್ತದೆ. ಕಾರಂತರು ಮುನ್ನುಡಿಯ ಲ್ಲಿ ಬರೆದಂತೆಯೇ ವಿಮರ್ಶೆಯ ಮಾನದಂಡ ನಿಲ್ಲಬೇಕೆಂದಿಲ್ಲವಾದರೂ ವಿಮರ್ಶೆಯ ಹೆಜ್ಜೆಯಲ್ಲಿ ಇವರ ಮುನ್ನುಡಿಗಳು ನೆರವಾಗುತ್ತವೆ; ಕನಿಷ್ಟ ಪಕ್ಷ ಪರಿಗಣಿಸಬೇಕಾದವಾಗುತ್ತವೆ.

ಬಳ್ಳಿಗಾವೆಯ ತಾರಾಭಗವತಿ ವಿಗ್ರಹ ಮತ್ತು “ಸುಕುಮಾರ ಚರಿತೆ”ಯ ರಚನಾ ಕಾಲ

ಎಂ. ಚಿದಾನಂದಮೂರ್ತಿ

ಶಾಂತಿನಾಥನ “ಸುಕುಮಾರ ಚರಿತೆ”ಯ ಕಾಲ ಸು. ಕ್ರಿ ಶ. 1060 ಎಂದು ಡಿ. ಎಲ್. ನರಸಿಂಹಾಚಾರ್ಯರು ತೀರ್ಮಾನಿಸಿದ್ದಾರೆ.[1] ಅದಕ್ಕೆ ಅವರು ಕೊಡುವ ಮೂರು ಆಧಾರಗಳು ಹೀಗಿವೆ.

(1) ಶಾಂತಿನಾಥನೇ ಬರೆದಿರುವ ಕ್ರಿ.ಶ. 1068ರ ಶಾಸನದಲ್ಲಿ ತನ್ನ ‘‘ಸುಕುಮಾರ ಚರಿತೆ’’ ಕಾವ್ಯದ ಹೆಸರನ್ನು ಹೇಳಿಕೊಂಡಿರುವುದರಿಂದ ಆ ಕಾವ್ಯದ ಕಾಲ 1068 ಕ್ಕಿಂತ ಹಿಂದಿನದು ಎಂಬುದು ಸ್ಪಷ್ಟವಾಗುತ್ತದೆ.

(2) ಶಾಂತಿನಾಥನ ಅಧಿಪತಿ ಬನವಸೆ ನಾಡಿನ ಮಹಾ ಮಂಡಳೇಶ್ವರ ಲಕ್ಷ್ಮಣರಾಜ. ಶಾಸನದಲ್ಲಿ ಕವಿ ಅವನನ್ನು ಬಹುವಾಗಿ ಕೀರ್ತಿಸಿದ್ದರೂ ತನ್ನ ‘‘ಸುಕುಮಾರ ಚರಿತೆ’’ಯಲ್ಲಿ ಅವನನ್ನು ಎಲ್ಲೂ ಉಲ್ಲೇಖ ಮಾಡಿಲ್ಲದಿರುವುದರಿಂದ, ಅವನು ತನ್ನ ಕಾವ್ಯವನ್ನು ಬರೆದಾಗ ಲಕ್ಷ್ಮಣರಾಜನ ಆಶ್ರಯಕ್ಕೆ ಇನ್ನೂ ಬಂದಿರಲಿಲ್ಲ. ಶಾಸನಾಧಾರದ ಮೇಲೆ ಲಕ್ಷ್ಮಣರಾಜ ಸು. ಕ್ರಿ.ಶ. 1065 ರಲ್ಲಿ ಬನವಸೆ ನಾಡಿಗೆ ಅಧಿಕಾರಿಯಾಗಿ ಬಂದನೆಂದು ಹೇಳಲವಕಾಶವಿರುವುದರಿಂದ ‘‘ಸುಕುಮಾರ ಚರಿತೆ’’ಯು ಕ್ರಿ.ಶ. 1065 ಕ್ಕಿಂತ ಹಿಂದೆ ರಚಿತವಾಗಿರಬೇಕು.

(3) ನಗರದ 57ನೇ ಶಾಸನದಲ್ಲಿ ವಿವೇಕರಾಣಿದಿ ಸ್ತುತಿ ರೂಪವಾದ ಪದ್ಯಕ್ಕೂ ‘‘ಸುಕುಮಾರ ಚರಿತೆ’’ದ 1. 26 ನೆಯ ಪದ್ಯಕ್ಕೂ ಶೈಲಿಯಲ್ಲಿ ಎದ್ದು ಕಾಣುವ ಸಾಮ್ಯ ಆಕಸ್ಮಿಕವಲ್ಲ. ನಗರದ ಶಾಸನ ಕಾಲ ಕ್ರಿ.ಶ. 1062 ಎಂದು ಹೇಳಲವಕಾಶವಿರುವುದರಿಂದ, ಮತ್ತು ‘‘ಸುಕುಮಾರ ಚರಿತೆ’’ದ ಪದ್ಯದ ಪ್ರಭಾವ ನಗರದ ಶಾಸನ ಕವಿಯ ಮೇಲೆ ಆಗಿರುವುದರಿಂದಲೂ, ‘‘ಸುಕುಮಾರ ಚರಿತೆ’’ದ ಕಾಲ ಕ್ರಿ.ಶ. 1062ಕ್ಕೆ ಹಿಂದೆ ಹೋಗುತ್ತದೆ. ಆ ಕಾರಣ, ‘‘ಸುಕುಮಾರ ಚರಿತೆ’’ದ ಕಾಲವನ್ನು ಸು. ಕ್ರಿ.ಶ. 1060 ಎಂದು ನಿರ್ಧರಿಸಬಹುದು.

---

1. ಸುಕುಮಾರ ಚರಿತಂ (ಸಂ : ಟಿ. ಎಸ್. ರಾಮರಾವ್ ಮತ್ತು ಡಿ. ಎಲ್. ನರಸಿಂಹಾಚಾರ್, ಶಿವಮೊಗ್ಗ, 1954) ಪು. X

"ಸುಕುಮಾರ ಚರಿತ"ದ ರಚನಾಕಾಲ ಕ್ರಿ.ಶ. 1068 ಕ್ಕೆ ಹಿಂದಿನದು; ಆದರೆ ಬಹು ಹಿಂದಿನದಲ್ಲ ಎಂಬುದು ಸ್ಪಷ್ಟ. ಆದರೆ ಎಷ್ಟು ಹಿಂದೆ ? ನರಸಿಂಹಾಚಾರ್ಯರ ವಾದದ ದುರ್ಬಲಾಂಶವೆಂದರೆ, "ಸುಕುಮಾರ ಚರಿತೆ"ಯಲ್ಲಿ ಲಕ್ಷ್ಮಣರಾಜನ ಉಲ್ಲೇಖವಿರದ ಕಾರಣ, ಆಗ ಇನ್ನೂ ಕವಿ ಅವನ ಆಶ್ರಯಕ್ಕೆ ಬಂದಿರಲಿಲ್ಲವೆಂಬುದೇ ಆಗಿದೆ. ಆ ವಾದವನ್ನು ಈಗ ಪರೀಕ್ಷಿಸೋಣ. ಪಂಪ ತನ್ನ "ಆದಿಪುರಾಣ" ದಲ್ಲಿ ಎಲ್ಲೂ ತನ್ನ ಪೋಷಕ ಅರಿಕೇಸರಿಯ ಹೆಸರು ಹೇಳಿಲ್ಲ. ಆದರೆ ತನ್ನ ಬಿರುದಾದ "ಕವಿತಾ ಗುಣಾರ್ಣವ" ಎಂಬುದನ್ನು ಅವನು ಅಲ್ಲಿ ಹೇಳಿಕೊಂಡಿದ್ದಾನೆ ಎಂಬುದನ್ನು ಗಮನಿಸಿದರೆ[2], "ಗುಣಾರ್ಣವ" ನಾದ ಅರಿಕೇಸರಿ ಕೊಟ್ಟ ಬಿರುದು ಅದಾಗಿರುವುದರಿಂದ ಅವನು "ಆದಿಪುರಾಣ" ಬರೆಯುವ ಕಾಲಕ್ಕಾಗಲೇ ಅರಿಕೇಸರಿಯ ಆಶ್ರಯಕ್ಕೆ ಬಂದಿದ್ದನೆಂಬುದು ಸ್ಪಷ್ಟ. ಆ ಕಾರಣ, "ಸುಕುಮಾರ ಚರಿತ" ದಲ್ಲಿ ಲಕ್ಷ್ಮಣರಾಜನ ಹೆಸರು ಬರದಿದ್ದರೆ ಕವಿಯು ಲಕ್ಷ್ಮಣರಾಜನ ಆಶ್ರಯವನ್ನು ಪಡೆದಿರಲಿಲ್ಲವೆಂಬುದಾಗಿ ಅರ್ಥವಾಗುವುದಿಲ್ಲ.

ಈಗ ನಗರದ ಶಾಸನದ ವಿಷಯಕ್ಕೆ ಬರೋಣ. ತೇದಿಯಿಲ್ಲದ ನಗರ 57ನೇ ಶಾಸನವನ್ನು ಬರೆದವನು "ಮಲ್ಲ" ಎಂಬ ಕವಿ.[3] ಅವನೂ ಕ್ರಿ.ಶ. 1062 ರಲ್ಲಿ ರಚಿತವಾದ ನಗರ 58 ನೇ ಶಾಸನ ಬರೆದ ಮಲ್ಲಿನಾಥನೂ ಅಭಿನ್ನರಿರಬಹುದು. ಎರಡೂ ಶಾಸನಗಳಲ್ಲಿ ಸಮಾನ ಪದ್ಯಗಳುಂಟು. ಆದರೆ, 58 ನೇ ಶಾಸನದ ಕಾಲವನ್ನೇ ನರಸಿಂಹಾಚಾರ್ಯರು 57 ನೇ ಶಾಸನಕ್ಕೂ ಅನ್ವಯಿಸುವುದಕ್ಕೆ ಏನೂ ಆಧಾರವಿಲ್ಲ. ಆ ಮಾತು ಹಾಗಿರಲಿ. ಆದರೆ ನಗರ 57 ರಲ್ಲಿರುವ ದಿವಾಕರಣಂದಿ ಸ್ತುತಿರೂಪವಾದ "ಚಾರು ಚರಿತ್ರರೀ ದೊರೆಯರಾರೆನಿಪೊಳ್ಪಿನ..." ಎಂಬ ಪದ್ಯಕ್ಕೂ "ಸುಕುಮಾರ ಚರಿತ"ದ 1 26 ನೆಯ ಪದ್ಯಕ್ಕೂ ಶೈಲಿ ಮತ್ತು ಪದ ಪ್ರಯೋಗಗಳಲ್ಲಿ "ಇರುವ ನಿಕಟ ಸಾಮ್ಯ ಆಕಸ್ಮಿಕವಾದುದಲ್ಲವೆಂದು", ಮಲ್ಲಿನಾಥನು "ಸುಕುಮಾರ ಚರಿತ"ದ ಆ ಪದ್ಯವನ್ನು ಅನುಕರಿಸಿರುವುದರಿಂದ "ಸುಕುಮಾರ ಚರಿತ"ವು ಕ್ರಿ ಶ. 1062 ಕ್ಕಿಂತ ಹಿಂದೆ ರಚಿತವಾಯಿತೆಂಬ ನರಸಿಂಹಾಚಾರ್ಯರ ವಾದವು ನನಗಿನ್ನೂ ಅರ್ಥವಾಗಿಲ್ಲ. ಶಾಸನದ ಪದ್ಯ ಹೀಗಿದೆ :

ಚಾರುಚರಿತ್ರರೀ ದೊರೆಯರಾರೆನಿಪೊಳ್ಪಿನ ಚಂದ್ರಕೀರ್ತಿ ಭ
ಟ್ಟಾರಕರಗ್ರಶಿಷ್ಯರಘಹಾರಿಗಳಾರ್ಹತತತ್ವವಸ್ತು ವಿ
ಸ್ತಾರಕರಂಗಜಾರಿಗಳಶೇಷವಿಶೇಷಗುಣಾವಳೀಮನೋ
ಹಾರಿಗಳೆಂಬಿನಂ ನೆಗಳ್ದರಲ್ತೆ ದಿವಾಕರಣಂದಿ ಸೂರಿಗಳ್ ॥

---

2. "ಇದು ಸಿಚ್ಚಂ ಪೊನಿತರ್ಣವಂಬೊಲತಿಗಂಭೀರಂ ಕವಿತ್ವಂ । ಜಗಕ್ಕದಜಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನಭ್ಯುದಯಪ್ರಾಪ್ತನಿಮಿತ್ತಂ..." (ಆದಿಪುರಾಣ, 1.26). ಆಶ್ವಾಸಾಂತ್ಯದ ಗದ್ಯ "ಕವಿತಾಗುಣಾರ್ಣವಪ್ರಣೀತಮಪ್ಪ ಆದಿಪುರಾಣದೊಳ್" ಎಂಬುದನ್ನೂ ಗಮನಿಸಿ.

3. ಈ ಶಾಸನದ ಕಾಲ ಬಿ. ಎಲ್. ರೈಸ್ ಪ್ರಕಾರ ಸು. ಕ್ರಿ.ಶ. 1077.

"ಸುಕುಮಾರ ಚರಿತ"ದ ಪದ್ಯ (1.26) ಹೀಗಿದೆ :

ಕ್ಷಮೆ ಮೆಯ್ ಮಾರ್ದವಮೋಜೆ ಸಾಜಮುಳವಟ್ಟಿರ್ದಾರ್ಜವಂ ಸೈಪು ಶೌ
ಚಮುದಾತ್ತಸ್ಥಿತಿ ನಿತ್ಯಮೊಂದಿದಱತಂ ತ್ಯಾಗಂ ಲಸತ್ಕೀರ್ತಿ ಸಂ
ಯಮಮಾಚಾರಗುಣಂ ತಪಂ ಛಲಮಕಿಂಚನ್ಯಂ ನಯಂ ಬ್ರಹ್ಮಚ
ರ್ಯ [ಮೆ] ಮಾನೋನ್ನತಿ ವರ್ಧಮಾನಮುನಿಗಕ್ಕುಂ ಪೆಱರ್ಗಕ್ಕುಮೇ ॥

ಇವೆರಡಕ್ಕೂ ಯಾವುದೇ ರೀತಿಯ ಹೋಲಿಕೆಯೂ ಇಲ್ಲವೆಂಬುದು ತೀರ ಸ್ಪಷ್ಟ. ಒಂದು ವೇಳೆ 1.26 ಎಂಬುದು ಅಚ್ಚಿನ ತಪ್ಪಾಗಿರಬಹುದಾಗಿದ್ದರೂ, "ಸುಕುಮಾರ ಚರಿತ"ದ ಪ್ರಥಮಾಶ್ವಾಸದ ಯಾವುದೇ ಪದ್ಯಕ್ಕೂ ಮೇಲಿನ ಶಾಸನದ ಪದ್ಯಕ್ಕೂ ಹೋಲಿಕೆ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ನಗರ 57ನೇ ಶಾಸನಕ್ಕೆ 58ನೇ ಶಾಸನಕಾಲವನ್ನು ಆರೋಪಿಸಿದ್ದು, ಎರಡು ಪದ್ಯಗಳಿಗೆ ಇಲ್ಲದ ಸಾಮ್ಯವನ್ನು ಕಲ್ಪಿಸಿದ್ದು ನರಸಿಂಹಾಚಾರ್ಯರಿಗೆ ಅರಿಯದೆ ಆದ ಅಚಾತುರ್ಯಗಳೆಂದೇ ನನ್ನ ಭಾವನೆ. ಆ ಕಾರಣ, ಸು. ಕ್ರಿ.ಶ. 1060 ಎಂಬ ಅವರು "ಸುಕುಮಾರ ಚರಿತೆ"ಗೆ ಕೊಟ್ಟ ಕಾಲವನ್ನು ಗಂಭೀರವಾಗಿ ಗಮನಿಸದೆ, ಈಗ ಕಾಲನಿರ್ಧಾರಕ್ಕೆ ಬೇರೇನಾದರೂ ಆಧಾರಗಳಿವೆಯೇ ಎಂಬುದರತ್ತ ಗಮನ ಹರಿಸೋಣ.

ಕವಿ ಶಾಂತಿನಾಥನು ಲಕ್ಷ್ಮಣ ಮಹಾಮಂಡಲೇಶ್ವರನ ಅಧೀನದಲ್ಲಿದ್ದ ಬನವಸೆ 12000 ನಾಡಿಗೆ ವಿತ್ತಾಧಿಕಾರಿಯಾಗಿದ್ದ.[4] ಬನವಸೆ ನಾಡಿನ ರಾಜಧಾನಿ ಬಳ್ಳಿಗಾವೆ, ಮತ್ತು ಸಹಜವಾಗಿಯೇ ಶಾಂತಿನಾಥ ಬಳ್ಳಿಗಾವೆಯ ನಿವಾಸಿ. ನಿಷ್ಠಾವಂತ ಜೈನನಾದ ಶಾಂತಿನಾಥನು ಶಾಂತಿ ತೀರ್ಥಂಕರನ ಬಸದಿಯನ್ನು ಕಲ್ಲಿನಲ್ಲಿ ಕಟ್ಟಿಸಿಕೊಡಬೇಕೆಂದು ಕೇಳಿಕೊಂಡದ್ದರ ಮೇರೆಗೆ ಲಕ್ಷ್ಮಣನು ಆ ಬಸದಿಯನ್ನು ಕಟ್ಟಿಸಿಕೊಡುತ್ತಾನೆ-ಅದನ್ನು ಹೇಳುವ ಶಾಸನವೇ ಶಾಂತಿನಾಥ ವಿರಚಿತ, ಕ್ರಿ.ಶ. 1068ರ ಶಿಕಾರಿಪುರ 136ನೇ ಶಾಸನ. ವಿತ್ತಾಧಿಕಾರಿಯೂ ರಾಜ್ಯದ ಪ್ರಮುಖ ಅಧಿಕಾರಿಯೂ ಮಂತ್ರಿಯೂ ಆಗಿದ್ದ ಶಾಂತಿನಾಥನಿಗೆ[5] ಬಳ್ಳಿಗಾವೆ ನಗರದಲ್ಲಿ ನಡೆಯುತ್ತಿದ್ದ ಎಲ್ಲ ಘಟನೆಗಳೂ ತಿಳಿದಿರುತ್ತಿದ್ದುವು. ಅವನು ಬರೆದಿರುವ ಶಾಸನದಲ್ಲಿ[6] ಬಳ್ಳಿಗಾವೆ ನಗರದಲ್ಲಿ ಜೈನ, ಶೈವ, ಬೌದ್ಧ, ವೈಷ್ಣವ ಮತಗಳಿದ್ದ ಉಲ್ಲೇಖ ಬರುತ್ತದೆ. ("ಚಂಚಚ್ಚಾಮೀಕರ

4 ಆ ಕಾರಣ, ಲಕ್ಷ್ಮಣನನ್ನು ಅವನ ಪೋಷಕನೆಂದು ಕರೆಯುವುದು ತಪ್ಪಾಗುತ್ತದೆ. ಕವಿಯು ಲಕ್ಷ್ಮಣನ ಕೈಕೆಳಗಿನ ಅಧಿಕಾರಿಯೇ ಹೊರತು, ಪೊನ್ನ ರನ್ನರಂತೆ ಮಹಾಮಂಡಲೇಶ್ವರನ ಆಶ್ರಯದಲ್ಲಿದ್ದ ಕವಿಯಲ್ಲ.

5 Epigraphia Carnatica VII, SK. 136, 1068 A.D.– "ಇರೆ ಬನವಸೆ ಪನ್ನಿರ್ಚ್ಛಾಸಿರಕ್ಕಮರ್ತ್ಥಾಧಿಕಾರಿಯುಂ ಕಾರ್ಯಧುರಂಧರನುಂ ತದ್ರಾಜ್ಯ ಸಮುದ್ಧರಣನುಮೆನೆ ನೆಗೞ್ದ ಮಂತ್ರಿ ಮಂತ್ರಿನಿಧಾನಂ".

6 ಅದೇ.

ರತ್ನಾಂಚಿತ ಜಿನ ರುದ್ರ ಬುದ್ಧ ಹರಿ ವಿಪ್ರಕುಳೋ...ಹ ಸಂಕುಳದಿಂ ಪಂಚಮಠ ಸ್ಥಾನಮೆನಿಸುಗುಂ ಬಳಿನಗರಂ"). ಹನ್ನೊಂದನೇ ಶತಮಾನದಲ್ಲಿ ಬಳ್ಳಿಗಾವೆಯು ಕರ್ನಾಟಕದಲ್ಲಿ ಕಡಿಮೆ ಸಂಖ್ಯೆಯಲ್ಲಾದರೂ ಇದ್ದ ಬೌದ್ಧ ಕೇಂದ್ರಗಳಲ್ಲಿ ಪ್ರಮುಖವಾಗಿದ್ದಿತು. ಅಲ್ಲಿನ ಎರಡು ಶಾಸನಗಳು[7] ಆ ಊರಿನಲ್ಲಿನ ಬೌದ್ಧಧರ್ಮದ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುತ್ತವೆ. ಕ್ರಿ.ಶ. 1065ರಲ್ಲಿ ಹುಟ್ಟಿದ ಶಿಕಾರಿಪುರ 170ನೇ ಶಾಸನದ ಪ್ರಕಾರ "ಸಾವಾಸಿಗಳಧಿಷ್ಠಾಯಕ" ನಾಗಿದ್ದ ರೂಪಭಟ್ಟಯ್ಯ ಎಂಬಾತ ಆ ಊರಲ್ಲಿ ಜಯಂತಿಪ್ರಭ ಬೌದ್ಧ ವಿಹಾರವನ್ನ ಮಾಡಿಸಿ, ಆ ವಿಹಾರದ ತಾರಾಭಗವತಿ, ಶ್ರೀಕೇಶವದೇವ, ಲೋಕೇಶ್ವರದೇವ, ಬೌದ್ಧದೇವ ಇತ್ಯಾದಿ ದೇವತೆಗಳ ಅರ್ಚನಾನಿಮಿತ್ತಕ್ಕೂ ಅಲ್ಲಿದ್ದ ಭಿಕ್ಕ ಭಿಕ್ಕಣಿಯರಿಗೂ ದತ್ತಿಯನ್ನು ಕೊಡಿಸುತ್ತಾನೆ. ಆ ಭಾಗ ಹೀಗಿದೆ

—"ಶ್ರೀಮತ್ ಜಯಂತಿಪ್ರಬೌದ್ಧವಿಹಾರಮಂ ಮಾಡಿಸಿ ತಮಗೆಯುಂ ತಮ್ಮ ಮಾಡಿಸಿದ ತಾರಾಭಗವತಿಯ ಶ್ರೀ ಕೇಶವದೇವರ ಲೋಕೇಶ್ವರದೇವ ಬೌದ್ಧದೇವರ ಅಲ್ಲಿಯ ಸಮಸ್ತ ಪರಿವಾರದೇವರ ಅರ್ಚನ ಪೂಜಾನಿಮಿತ್ತಕ್ಕಂ ಮೇಲೆ ಖಂಡಸ್ಫುಟಿತ ನವಕರ್ಮಕ್ಕಂ ಯೋಗಿಸಿಯರ ಕುಸಳಿಯರ ಸನ್ಯಾಸಿಗಳ ಆಹಾರದಾನಕ್ಕಂ..."

ಈ ಶಾಸನದ ಪ್ರಕಾರ ವಿಹಾರ ನಿರ್ಮಾಣವೂ ತಾರಾ ಭಗವತಿ ಇತ್ಯಾದಿ ದೈವಗಳ ಪ್ರತಿಷ್ಠಾಪನೆಯೂ ನಡೆದುದು ಕ್ರಿ ಶ. 1065 ರಲ್ಲಿ ಮತ್ತು ಅಷ್ಟನ್ನೂ ಮಾಡಿಸಿದವನು "ಸವಾಸಿ"ಗಳ ಮುಖ್ಯಸ್ಥನಾದ ರೂಪಭಟ್ಟಯ್ಯ.

ಕ್ರಿ. ಶ. 1067 ರಲ್ಲಿ ಹುಟ್ಟಿರುವ ಶಿಕಾರಿಪುರ 169ನೇ ಶಾಸನದ ಪ್ರಕಾರ ತಾರಾಭಗವತಿಯನ್ನು ಮಾಡಿಸಿದವಳು "ಸವಾಸಿ" ಹಂಪಭಟ್ಟನ ಹೆಂಡತಿ ನಾಗಿಯಕ್ಕ ("ನೆಗಳ್ದಿರ್ದ ಬಳ್ಳಿ[ಗಾ]ವೆಯೊಳಗಣ್ಯಗಣ್ಯಪುಣ್ಯಾತ್ಮೆ ನಾಗಿಯಕ್ಕಂ ತಾರಾಭಗವತಿಯಂ ಮಾಡಿಸಿದಳ್..." ಅವಳು ತಾರಾಭಗವತಿಯ ಅರ್ಚನೆ ಪೂಜೆಗಳಿಗಾಗಿ ಚಾಳುಕ್ಯ ಚಕ್ರವರ್ತಿಯನ್ನು ಬೇಡಿಕೊಂಡು, ಜಯಂತಿಪ್ರಭ ಬೌದ್ಧ ಬಳಾರರ ಪಾದಗಳನ್ನು ತೊಳೆದು ದತ್ತಿ ಕೊಡಿಸುತ್ತಾಳೆ. ರೂಪಭಟ್ಟಯ್ಯ ತಾನು ಕಟ್ಟಿಸಿದ ವಿಹಾರಕ್ಕೆ ವಿಹಾರದ ಮುಖ್ಯರಾದ ಜಯಂತಿಪ್ರಭಬೌದ್ಧ ಭಟ್ಟಾರಕರ ಹೆಸರನ್ನೇ ಇಟ್ಟರು ಎಂಬುದು ಸ್ಪಷ್ಟವಾಗಿದೆ.

ಇಲ್ಲಿನ ಸಮಸ್ಯೆ—ತಾರಾಭಗವತಿಯನ್ನು ಮಾಡಿಸಿದವರು ಯಾರು— ನಾಗಿಯಕ್ಕನೇ ರೂಪಭಟ್ಟಯ್ಯನೇ ? ಎರಡರಲ್ಲೂ ಇಬ್ಬರೂ ಮಾಡಿಸಿದರೆಂದಿರುವುದು ಗೊಂದಲಕ್ಕೆ ಕಾರಣವಾಗಿದೆ. ಬಳ್ಳಿಗಾವೆಯಲ್ಲಿ ದೊರಕಿರುವ ತಾರಾವಿಗ್ರಹದ ಪಾದದ ಬಳಿ ಇರುವ ಸ್ತ್ರೀ ಚಿತ್ರವು ನಾಗಿಯಕ್ಕನದಾದರೆ ಆಗ ಈ ತಾರಾಭಗವತಿಯನ್ನು ಮಾಡಿಸಿದವಳು ಅವಳೇ ಎಂದು ಖಚಿತವಾಗುತ್ತದೆ. ಹಾಗಾದರೆ

7 ಅದೇ. SK, 169, 1067 A.D. & SK 170, 1065 AD.

ರೂಪಭಟ್ಟಯ್ಯ ಮಾಡಿಸಿದ ತಾರಾಭಗವತಿ ಬೇರೊಂದು ಆಗಿದ್ದು ಅದು ನಮಗೆ ದೊರಕಿಲ್ಲವೆಂದು ಭಾವಿಸಬಹುದೇ ? ಅಥವಾ, "ರೂಪಭಟ್ಟ", "ಹಂಪಬಟ್ಟ" ಇಬ್ಬರೂ ಅಭಿನ್ನರೆಂದೂ ಒಂದು ಹೆಸರು ಇನ್ನೊಂದರ ಅಪಲಿಖಿತವೆಂದು ಭಾವಿಸಬೇಕೇ ? ಒಂದು ವೇಳೆ ಇಬ್ಬರೂ ಬೇರೆಯೆಂದು ಭಾವಿಸಿದರೂ, ರೂಪಭಟ್ಟಯ್ಯ ಕಟ್ಟಿಸಿದ ವಿಹಾರದಲ್ಲಿ ತಾರಾಭಗವತಿಯ ವಿಗ್ರಹವನ್ನು ಮಾಡಿಸಿದವಳು ನಾಗಿಯಕ್ಕ ಎಂಬ ಸದ್ಯದ ಗ್ರಹಿಕೆಯನ್ನು ಇಟ್ಟುಕೊಂಡು ಮುಂದುವರಿಯುವುದಾದರೆ, ಕ್ರಿ.ಶ. 1065ರಲ್ಲಿ ಶಾಸನದಲ್ಲಿ ತಾರಾಭಗವತಿಯ ಉಲ್ಲೇಖವಿರುವುದರಿಂದ ಆ ವರ್ಷ ನಿರ್ಮಾಣವಾದ ವಿಹಾರದಲ್ಲಿ ತಾರಾಭಗವತಿಯ ಪ್ರತಿಷ್ಠಾಪನೆಯಾಯಿತೆಂದೂ, ಮುಂದೆ ಕ್ರಿ. ಶ. 1067ರಲ್ಲಿ ನಾಗಿಯಕ್ಕ ತಾನು ಆ ವಿಹಾರದಲ್ಲಿ ಮಾಡಿಸಿದ ತಾರಾಭಗವತಿ ದೈವದ ಅರ್ಚನಾದಿಗಳಿಗೆ ದತ್ತಿಯನ್ನು ಬಿಡಿಸಿದಳೆಂದೂ ಸದ್ಯಕ್ಕೆ ತೀರ್ಮಾನಿಸಬಹುದು.8

ಈ ಹಿನ್ನೆಲೆಯಲ್ಲಿ ಶಾಂತಿನಾಥನ "ಸುಕುಮಾರ ಚರಿತೆ"ಯ (3. ೧. ವಚನ) ಒಬ್ಬ ಜೋಯಿಸನ ವರ್ಣನೆ ಗಮನಾರ್ಹ—

"ಎಂಬುದುಮಾ ಪಂಡಿತಂ ಕನ್ನಗಳ್ಳನಂತೆ ಬಳಪಮಂ ತೆಗೆದು, ಕಬ್ಬಿಗನಂತೆ ಗೋಮೂತ್ರಿಕ ವೃತ್ತಾಳಂಕೃತನಾಗಿ, ಭಂಡಾರಿಗನಂತಾಯಮಂ ಹಿಡಿದು, ಜೂದುಗಾಜನಂತೆ ಕವಡೆಯಂ ತೆಗೆದು, ತುರಗಾರೋಹನಂತಾರೂಢಕ್ರಮಮಂ ಮೆಱೆದು, ವೈದ್ಯನಂತೆ ಪಂಚಾಂಗಶುದ್ಧಿಯಂ ನೋಡಿ, ಮಂತ್ರವಾದಿಯಂತೆ ಗ್ರಹಗತಿಯಂ ಕಂಡು, <u>ತಥಾಗತಮತೋಪಾಸಕನಂತೆ ತಾರಾಪಥಕ್ಕೆಜಗಿ,</u> ಕೃಷಿನಿರತನಂತೆ ರಾಶಿಯಂ ನಿಲಿಸಿ, ವಿಹಗದಂತೆ ಖೇಚಕ್ರಮಂ ವರ್ತಿಸಿ"

ಮೇಲಿನ ಉಲ್ಲೇಖದಲ್ಲಿ ಗುರುತಿಸಿರುವ ಭಾಗದಲ್ಲಿ ಶ್ಲೇಷೆ ಇದೆಯೆಂಬುದು ಸ್ಪಷ್ಟ. ಜೋಯಿಸನಿಗೆ ಸಂಬಂಧಿಸಿದಂತೆ ಹೇಳುವುದಾದರೆ "ತಾರಾ" ಎಂದರೆ ನಕ್ಷತ್ರ; "ತಾರಾಪಥ"ವು ನಕ್ಷತ್ರಗಳ ಮಾರ್ಗ, ಅಥವಾ ನಕ್ಷತ್ರಗಳ ಸ್ಥಿತಿಗತಿಯ ಅರ್ಥವನ್ನು ಹೇಳುತ್ತದೆ. "ತಥಾಗತಮತೋಪಾಸಕ" ಅಥವಾ ಬೌದ್ಧ ಸಾಧಕನ ದೃಷ್ಟಿಯಿಂದ ಹೇಳುವುದಾದರೆ "ತಾರಾ" ಶಬ್ದವು ತಾರಾಭಗವತಿಯನ್ನು ಸೂಚಿಸುತ್ತದೆಯೆಂಬಲ್ಲಿ ಸಂದೇಹವಿಲ್ಲ. ಬೌದ್ಧ ಭಿಕ್ಷುವು ತಾರಾಭಗವತಿಯ ಮಾರ್ಗಕ್ಕೆ ಪಾದಕ್ಕೆ ಎರಗುವುದು ಇಲ್ಲಿ ಸೂಚಿತವಾಗಿದೆ. ಹಿಂದಿನ ಇಡೀ ಕನ್ನಡ ಸಾಹಿತ್ಯದಲ್ಲಿ ತಾರಾಭಗವತಿಯ ಏಕೈಕ ಉಲ್ಲೇಖವೆಂದರೆ ಮೇಲಿನದೇ ಆಗಿದೆ.

ಬಳ್ಳಿಗಾವೆ ನಿವಾಸಿಯಾದ ಶಾಂತಿನಾಥ ಕಂಡಿರಬಹುದಾದ ತಾರಾಭಗವತಿಯ ವಿಗ್ರಹ ಯಾವುದಿರಬಹುದು? ಈಚೆಗೆ ಬನವಾಸಿಯಲ್ಲಿ ತಾರಾಭಗವತಿಯ

8. ಶಿಕಾರಿಪುರ 169–170ನೇ ಶಾಸನಗಳಲ್ಲಿ ಬರುವ ಹಂಪಬಟ್ಟ, ರೂಪಭಟ್ಟಯ್ಯಗಳ ಹೆಸರಿರುವ ಮೂಲಪಾಠವನ್ನು ಎಚ್ಚರಿಕೆಯಿಂದ ಪರಿಶೀಲಿಸುವ ಅಗತ್ಯವಿದೆ.

ವಿಗ್ರಹವು ದೊರಕಿದ್ದು ಅವರ ಕಾಲದ ವಿಷಯ ಸ್ಪಷ್ಟವಾಗಬೇಕಾಗಿದೆ.[9] ಶಾಂತಿನಾಥನ ಗಮನದಲ್ಲಿರುವುದು ಬಹುಶಃ ಅದಲ್ಲ, ಅವನ ಊರಿನದೇ ಆದ ಬಳ್ಳಿಗಾವೆಯ ತಾರಾಭಗವತಿಯೇ. ಬಳ್ಳಿಗಾವೆಯ ಶಾಸನದ ಪ್ರಕಾರ ಅಲ್ಲಿಯ ವಿಹಾರದಲ್ಲಿ ಯೋಗಿನಿಯರೂ ಸನ್ಯಾಸಿಗಳೂ ಇದ್ದರು. ಅವರು ತಥಾಗತಮತೋಪಾಸಕರು: ಧರ್ಮದಲ್ಲಿ ಬುದ್ಧಮತಾನುಯಾಯಿಗಳಾದರೂ, ಅವರ ಮುಖ್ಯ ಆರಾಧ್ಯದೈವದಲ್ಲಿ ಬುದ್ಧನಿಗಿಂತ ತಾರಾಭಗವತಿಗೆ ಹೆಚ್ಚಿನ ಪ್ರಾಮುಖ್ಯವಿದ್ದಿತು (ಮುಂದೆ ನೋಡಿ). ಅದನ್ನು ಗಮನಿಸಿದ್ದ ಶಾಂತಿನಾಥ ಮೇಲಿನ ಉಪಮೆಯಲ್ಲಿ ತಾರಾಭಗವತಿಯ ಆರಾಧನೆಯನ್ನು ಸೂಚಿಸಿದ್ದಾನೆ. ಕ್ರಿ. ಶ. 1065ರಲ್ಲಿ ಬಳ್ಳಿಗಾವೆಯಲ್ಲಿ ಸ್ಥಾಪಿತಳಾದ ತಾರಾಭಗವತಿಯ ಆರಾಧನೆ ಶಾಂತಿನಾಥ ಕವಿಯ ಮನಸ್ಸಿನಲ್ಲಿ ತುಂಬಿಕೊಂಡಿದ್ದ ಕಾರಣದಿಂದಲೇ ಅವನು ಆ ವಿರಳ ಉಪಮೆಯನ್ನು ಕೊಡಲು ಕಾರಣ. ಎಂದರೆ "ಸುಕುಮಾರಚರಿತೆ"ಯು ಕ್ರಿ.ಶ. 1065ರಿಂದ ಈಚೆಗೆ, ಕ್ರಿ. ಶ. 1068 ರಿಂದ ಆಚೆಗೆ, ಎಂದರೆ ಕ್ರಿ. ಶ. 1066–67ರಲ್ಲಿ ರಚಿತವಾಯಿತು ಎಂದು ಹೆಚ್ಚು ಕಡಿಮೆ ನಿಕರವಾಗಿ ನಿರ್ಣಯಿಸಬಹುದಾಗಿದೆ. ಕ್ರಿ. ಶ. 1066-67ರಲ್ಲಿ ಎಂಬುದು ಬಹು ಸಮಾಧಾನಕರವಾದ ತೇದಿ; ಏಕೆಂದರೆ ಕ್ರಿ. ಶ. 1065ರಲ್ಲಿ ಸ್ಥಾಪಿತವಾದ ತಾರಾಭಗವತಿಯ ನೆನಪು ಕವಿಯ ಮನಸ್ಸಿನಲ್ಲಿ ಇನ್ನೂ ಹೊಚ್ಚ ಹೊಸದಾಗಿತ್ತು; ಕ್ರಿ. ಶ. 1068ರಲ್ಲಿ ಶಾಸನ ಬರೆದಾಗ ಶಾಂತಿನಾಥ ಕವಿಗೆ ಅವನೇ ಬರೆದ ಕಾವ್ಯ "ಸುಕುಮಾರ ಚರಿತೆ"ಯು ಮನಸ್ಸಿನಲ್ಲಿ ಹೊಚ್ಚ ಹೊಸದಾಗಿದ್ದುದರಿಂದ ಅವನ ಕಾವ್ಯದ ಸುಮಾರು ಐವತ್ತು ಪದ್ಯಗಳು ಶಾಸನದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿಂದ ಉದ್ಧೃತವಾಗಿವೆ.[10]

ಸು. ಕ್ರಿ.ಶ. 1066-7ರಲ್ಲಿ ರಚಿತವಾದ "ಸುಕುಮಾರ ಚರಿತ"ದ ತಾರಾಭಗವತಿಯ ಉಲ್ಲೇಖ ಹಲವು ದೃಷ್ಟಿಗಳಿಂದ ಪ್ರಮುಖವಾದುದು. ಬಳ್ಳಿಗಾವೆಯಲ್ಲದೆ, ಬನವಾಸಿ, ಕೋಳಿವಾಡಗಳಲ್ಲಿ ತಾರಾ ವಿಗ್ರಹಗಳು ದೊರಕಿವೆ; ಡಂಬಳ ಶಾಸನದಲ್ಲಿ ತಾರಾಭಗವತಿಯನ್ನು 'ತಥಾಗತನ' ಹೃದಯದಲ್ಲಿ ನೆಲಸಿರತಕ್ಕವಳು ಎಂದು ವರ್ಣಿಸಲಾಗಿದೆ. ಈ ಉಲ್ಲೇಖಗಳನ್ನೂ, ಮಾಂಸಾಹಾರಿಗಳಾದ ಬೌದ್ಧರನ್ನೂ ಹೇಳುವ ಯಶಸ್ತಿಲಕ ಚಂಪೂವಿನ ಸೋಮೇಶ್ವರನ ಉಲ್ಲೇಖವನ್ನೂ, ಉರಿಲಿಂಗಪೆದ್ದಿಯು ಬೌದ್ಧ ಮತವನ್ನು 'ಕಾಯದ ದರ್ಶನ'ವೆಂದು ಕರೆಯುವುದನ್ನೂ ಲಕ್ಷ್ಯದಲ್ಲಿಟ್ಟುಕೊಂಡರೆ,

---

9. ತಾರಾಭಗವತಿ ವಿಗ್ರಹವನ್ನು ಕಂಡುಹಿಡಿದವರು ಶ್ರೀ. ಎಚ್. ಆರ್. ರಘುನಾಥಭಟ್. ಈ ವಿಗ್ರಹದ ಚಿತ್ರವನ್ನು ಬೆಂಗಳೂರಿನ Archaeological Survey of India (Mid–Southern Circle) ಕಚೇರಿಯಲ್ಲಿ ನೋಡಿ. ಅದರ ಕಿರೀಟದಲ್ಲಿ ಬುದ್ಧನ ಚಿತ್ರವಿರುವುದನ್ನು ಖಚಿತಪಡಿಸಿಕೊಂಡಿದ್ದೇನೆ.

10. ಸುಕುಮಾರ ಚರಿತೆ, ಪ್ರಸ್ತಾವನೆ, ಪು. viii

ಕರ್ನಾಟಕದಲ್ಲಿ ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಪ್ರಚಲಿತವಾಗಿದ್ದುದು ಬೌದ್ಧ ಧರ್ಮದ ತಾಂತ್ರಿಕ ಪ್ರಭೇದವಾದ ವಜ್ರಯಾನವೇ ಆಗಿತ್ತು.[11] ಶಾಂತಿನಾಥ ಹೇಳುವ 'ತಥಾಗತಮುಕೋಪಾಸಕ'ನು ಬೌದ್ಧಧರ್ಮದ ವಜ್ರಯಾನ ಪಂಥದ ತಾಂತ್ರಿಕ ಸಾಧಕನೇ ಎಂದು ಹೇಳಬೇಕಾಗುತ್ತದೆ.

11. ಈ ಬಗ್ಗೆ ವಿವರಗಳಿಗೆ ನೋಡಿ-ಎಂ. ಚಿದಾನಂದ ಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1979. ಪು. 115-25.

ಕೊಂಕು ಪದಗಳು–ಕೆಲವು ಟಿಪ್ಪಣಿಗಳು

ಎಸ್. ಎಸ್. ರೇಣುಕಾರಾಧ್ಯ

ಯಾವುದೇ ಭಾಷೆಯ ಪದಕೋಶದಲ್ಲಿಯೂ ಗುರುತಿಸಬಹುದಾದ ಒಂದು ವಿಶಿಷ್ಟ ಪದಗಳ ಗುಂಪನ್ನು ಕೊಂಕು ಪದಗಳು ಎಂಬ ಹೆಸರಿನಿಂದ ನಿರ್ದೇಶಿಸಬಹುದೆಂದು ತೋರುತ್ತದೆ. ತೀರ ವ್ಯಾಪಕವಾದ ಅರ್ಥದಲ್ಲಿ ಅತ್ಯಂತ ತ್ವರಿತವಾಗಿ ಬದಲಾಗುವ, ರಂಜಕ ಗುಣವುಳ್ಳ, ಮತ್ತು ಸಂದರ್ಭೋಚಿತವಾಗಿ ಬಳಕೆಯಾಗುವ ನವೋನವ ಪದಗಳನ್ನು ಕೊಂಕು ಪದಗಳು ಎಂದು ಕರೆಯಬಹುದು. ಕೊಂಕು ಪದಗಳೆಂದರೇನು ? ಎಂಬುದಕ್ಕೆ ಸಮರ್ಪಕವಾದ ವಿವರಣೆ ಇದಲ್ಲವಾಗುವ

---

* 'Slang' ಎಂಬುದಕ್ಕೆ 'ಕೊಂಕು' ;'Slang words' ಎಂಬುದಕ್ಕೆ 'ಕೊಂಕು ಪದಗಳು'–ಎಂಬ ಪದಗಳನ್ನು ಸಂವಾದಿಗಳಾಗಿ ಟಂಕಿಸಲಾಗಿದೆ. ನನ್ನ ಅಧ್ಯಾಪಕರು, ಪ್ರಾಧ್ಯಾಪಕರುಗಳೊಂದಿಗೆ ಈ ಬಗ್ಗೆ ಚರ್ಚಿಸಿದಾಗ ಸೂಚಿತವಾದ ಇತರ ಪದಗಳು: 'ಛಾತಿ', 'ವಕ್ರ', 'ಚಾಟು', 'ಛದ್ಮ' 'ಮರೆ'/'ಮಾರು' ಇತ್ಯಾದಿ. ಇವೆಲ್ಲವೂ ಒಂದು ಅರ್ಥದಲ್ಲಿ ಸಮರ್ಪಕ, ಮತ್ತೊಂದು ಅರ್ಥದಲ್ಲಿ ಅಸಮರ್ಪಕ. ಇದ್ದುದರಲ್ಲಿ 'ಕೊಂಕು'–'ಕೊಂಕು ಪದ' ಎಂದು ಬಳಸುವುದು ಸೂಕ್ತ ಎನ್ನಿಸಿದೆ. 'ಕೊಂಕು' ಎನ್ನುವುದಕ್ಕೆ ಕಟಕಿ, ಚುಚ್ಚುಮಾತು, ವ್ಯಂಗ್ಯ ಇತ್ಯಾದಿ ಅರ್ಥಗಳಿರುವಂತೆಯೇ ನೇರವಲ್ಲದ, ವಕ್ರತ್ವದಿಂದ ಕೂಡಿದ ಎಂಬೆಲ್ಲ ಅರ್ಥಗಳೂ ಇವೆ. "ಕೊಂಕುವೆತ್ತ ಪೊಸನುಡಿ" ಎಂಬ ಪಂಪ ಕವಿಯ ಮಾತಿನಲ್ಲಿ 'ಕೊಂಕು' ಎನ್ನುವುದು ಮಾರ್ಗಾಂತರಿತ ಅಥವಾ ಅತಿಕ್ರಮಿತ (Deviated) ಎಂಬರ್ಥದಲ್ಲಿದೆ. ಒಂದರ್ಥದಲ್ಲಿ 'Slang' ಕೂಡ ಮಾರ್ಗಾಂತರಿತವಾದದ್ದೇ ಆಗಿರುತ್ತದೆ. ಮತ್ತು ಕೊಂಕು ಶಬ್ದಕ್ಕಿರುವ ವಿವಿಧ ಅರ್ಥಗಳು Slang words ಗೆ ಅನ್ವಯವಾಗುತ್ತವೆ. ಆದರೆ Slang ನ ಸಾಮಾಜಿಕ ನೆಲೆಯನ್ನು ಈ ಪದಕ್ಕಿಂತ 'ಛದ್ಮ' ಪದ ಸೂಚಿಸಬಲ್ಲುದಾಗುತ್ತದೆ.

'Slang' ಬಹುಶಃ 'Slang' ಅಥವಾ Slanguage (ಆದಿಯ 'S' 'Thieve-slanguage' ಇಂದ ಬಂದದ್ದಿರಬೇಕು) ಇಂದ ನಿಷ್ಪನ್ನವಾಗಿರಬಹುದೆಂದೂ, ಈ ಪರಿಭಾಷೆ ಮೊತ್ತಮೊದಲಿಗೆ 18 ನೇ ಶತಮಾನದ ಮಧ್ಯದ ವೇಳೆಗೆ ಇಂಗ್ಲೆಂಡಿನಲ್ಲಿ ಬಳಕೆಯಾಯಿತಾದರೂ ಇಂಗ್ಲಿಷ್‌ನಲ್ಲಿ 'slang'ಗೆ ಸಂಬಂಧಿಸಿದ ಸಾಹಿತ್ಯ 16 ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆಂದೂ ಹೇಳಲಾಗಿದೆ. (ನೋಡಿ ; Mario Pie, The Story of Language, London, 1952. page : 170)

ಸಾಧ್ಯತೆಯಿದೆಯಾದರೂ, ಈ ವಿವರಣೆಯಲ್ಲಿರುವ 'ತ್ವರಿತ ಬದಲಾಗುವಿಕೆ' 'ರಂಜಕ ಗುಣ', 'ಸಂದರ್ಭೋಚಿತ ಬಳಕೆ', 'ನವ್ಯೋನವತೆ'–ಇವೆಲ್ಲ ಕೊಂಕು ಪದಗಳ ಮುಖ್ಯ ಲಕ್ಷಣಗಳೆಂಬುದು ಸ್ಪಷ್ಟ.

'ಕೊಂಕು' (Slang) ಎನ್ನುವುದು ಮೂಲಭೂತವಾಗಿ ಒಂದು 'ಸಮಾಜೋಭಾಷಿಕ ಪ್ರಭೇದ' (Socio-Linguistic variation). ಇದನ್ನು ಒಂದು ಭಾಷೆಯ ಸ್ವನ ವ್ಯವಸ್ಥೆ, ವಾಕ್ಯ ರಚನೆ, ಕಾಕು ಮೊದಲಾದ ಬೇರೆ ಬೇರೆ ನೆಲೆಗಳಲ್ಲಿ ಗುರುತಿಸಬಹುದಾದರೂ ಪದಕೋಶ ಮತ್ತು ಅರ್ಥದ ನೆಲೆಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ. ಒಂದು ಭಾಷೆಯಲ್ಲಿನ ಕೊಂಕು ಗುಣವನ್ನು ಕುರಿತ ವ್ಯಾಪಕವಾದ ಅಧ್ಯಯನಗಳಲ್ಲಿ ಅದು ಆ ಭಾಷೆಯ ಯಾವ ನೆಲೆಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ ಎಂಬ ನಿರ್ಣಯಗಳಿಗೆ ಬರುವ ಸಾಧ್ಯತೆ ಕೂಡ ಇದೆ. ಆದರೆ ಇಲ್ಲಿನ ಸದ್ಯದ ಉದ್ದೇಶ ಕನ್ನಡದಲ್ಲಿ ಬಳಕೆಯಾಗುತ್ತಿರುವ ಕೆಲವೊಂದು ಕೊಂಕು ಪದಗಳನ್ನು ಅವುಗಳ ಲಕ್ಷಣಗಳ ಹಿನ್ನೆಲೆಯಲ್ಲಿ ವಿವರಿಸುವುದು ಮಾತ್ರ ಆಗಿದೆ.

ಕೊಂಕು ಪದಗಳಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಮೂರು ಅಂಶಗಳು ಗಮನಾರ್ಹವಾಗುತ್ತವೆ : (1) ಕೊಂಕು ಪದಗಳು ಯಾವಾಗ ಹುಟ್ಟುತ್ತವೆ ?
(2) ಏಕೆ ಹುಟ್ಟುತ್ತವೆ ?
(3) ಹೇಗೆ ಹುಟ್ಟುತ್ತವೆ ?

ಮೊದಲೆರಡು ಅಂಶಗಳು ಪರಸ್ಪರ ಸಂಬಂಧಿಯಾದವುಗಳಾಗಿದ್ದು ಕೊಂಕು ಪದಗಳಿಗಿರುವ 'ಸಂದರ್ಭ ಮಿತಿ' (Contextual Limitation) ಮತ್ತು ಉದ್ದೇಶವನ್ನು ಹೇಳಿದರೆ ಕೊನೆಯದು ಅದು ಬಳಕೆಗೆ ಬರುವ ಕ್ರಮವನ್ನು ಹೇಳುತ್ತದೆ.

ಯಾವಾಗ ? ಮತ್ತು ಏಕೆ ? ಎಂಬೆರಡು ಅಂಶಗಳಿಗೆ 'ವಿಶಿಷ್ಟ ಸಂದರ್ಭಗಳಲ್ಲಿ' ಮತ್ತು 'ವಿಶಿಷ್ಟ ಪರಿಣಾಮಕ್ಕಾಗಿ' ಎಂಬ ವಿವರಣೆಯನ್ನು ನೀಡಬಹುದು. ಈ 'ವಿಶಿಷ್ಟ ಸಂದರ್ಭ' ಎನ್ನುವುದು ಸಮಾಜದ ನಿರ್ದಿಷ್ಟ ಗುಂಪಿಗೆ (specific group) ಸಂಬಂಧಿಸಿದ್ದಾಗಿದ್ದು ಆ ವಿಶಿಷ್ಟ ಸಂದರ್ಭ ಗುಂಪಿನಿಂದ ಗುಂಪಿಗೆ ಬೇರೆಯಾಗಬಹುದು. 'ನಿರ್ದಿಷ್ಟ ಗುಂಪು' ಎನ್ನುವುದು ಸಮಾನ ವೃತ್ತಿ, ಹವ್ಯಾಸ, ಆಸಕ್ತಿ–ಇತ್ಯಾದಿಗಳನ್ನು ಆಧರಿಸಿದ 'ಸಾಮಾಜಿಕ ಗುಂಪು' (Social group)ಆಗಿರುತ್ತದೆ. ಪ್ರತಿಯೊಬ್ಬನೂ ಭಾಷೆಯನ್ನು ಬಳಸುವಾಗ, ತನ್ನನ್ನು ತಾನು ಗುರುತಿಸಿಕೊಳ್ಳುವ ಗುಂಪು ಮತ್ತು ಸಂದರ್ಭಗಳಿಗೆ (group and context) ಉಚಿತವಾಗಿಯೇ ಬಳಸುತ್ತಿರುತ್ತಾನೆ ಮತ್ತು ಅವುಗಳಿಗನುಸಾರವಾಗಿ ಅವನ ಭಾಷಾ ಬಳಕೆಯೂ ಬೇರೆಯಾಗುತ್ತಿರುತ್ತದೆ. (ಇದು ವ್ಯಕ್ತಿ ಭಾಷೆಯಲ್ಲೇ ಇರುವ ವಿವಿಧ ಶೈಲಿಯ ಸ್ತರಗಳಿಗೆ ಸಂಬಂಧಿಸಿದ ಅಂಶ)


ಕೆಲವರು ಆತ್ಮೀಯ ವಲಯದಲ್ಲಿ ಸಂಭಾಷಣೆಯಲ್ಲಿ ತೊಡಗಿದ್ದಾರೆಂದು ಭಾವಿಸೋಣ. ಅವರ ಸಂಭಾಷಣೆ ಯಾವನೋ ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಸಂಬಂಧಿಸಿದ್ದಾಗಿದೆ :

"ಅವನು ಮಹಾ **ಚತ್ರಿ**, ಅವನನ್ನು ನಂಬಿದರೆ **ತಿರುಪತಿ** ಗ್ಯಾರಂಟಿ"

"ಮೊನ್ನೆ ನನಗೇ **ಟೋಪಿ** ಹಾಕಲು ನೋಡಿದ!"

"ಅವನು ನಿನ್ನ ರೂಂ ಮೇಟ್ ಆದ್ರೆ ನೀನು **ಚೊಂಬು** ಹಿಡೀತೀಯ"

ಇಲ್ಲಿ ಬಳಕೆಯಾದ 'ಚತ್ರಿ', 'ಟೋಪಿ', 'ತಿರುಪತಿ', 'ಚೊಂಬು'–ಇವೆಲ್ಲ ಕೊಂಕು ಪದಗಳು. ಇವು ಬಳಕೆಯಾದ ಸಂದರ್ಭವನ್ನು ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಒಂದು ನಕ್ಷೆಯ ಮೂಲಕ ಸೂಚಿಸಬಹುದು.



ಗುಂಪು 1 ರಲ್ಲಿನ ಎಲ್ಲರಿಗೂ ಆ ಪದಗಳ ಕೊಂಕಿನ ಅರ್ಥ (Slangy meaning) ತಿಳಿದಿರುವುದರಿಂದ ಆ ಪದಗಳು ಮತ್ತು ಅವುಗಳನ್ನೊಳಗೊಂಡ ಸಂಭಾಷಣೆ ಅರ್ಥಪೂರ್ಣವಾಗಿದೆ. ಆದರೆ ಆ ಗುಂಪಿನ ಹೊರಗಿನ ವ್ಯಕ್ತಿಯೊಬ್ಬನಿಗೆ (ಗುಂಪು. 2) ಅರ್ಥಪೂರ್ಣವಲ್ಲ. ಅರ್ಥಾತ್ ಸಂವಹನ ಅಸಂಪೂರ್ಣವಾಗಿದೆ. ಏಕೆಂದರೆ ಅವನು ಗ್ರಹಿಸುವುದು ಚತ್ರಿ, ತಿರುಪತಿ, ಟೋಪಿ, ಚೊಂಬು ಇವುಗಳನ್ನು ಅನುಕ್ರಮವಾಗಿ Umbrella, a place, a cap, a water container ಎಂಬ ಸಾಮಾನ್ಯ ಅರ್ಥಗಳಲ್ಲಿ. ಗುಂಪು 1 ರಲ್ಲಿನ ವ್ಯಕ್ತಿ ಅನುಕ್ರಮವಾಗಿ ತಳುಕಿನವ/ನಂಬಬಾರದವ, ಮೋಸ, ವಂಚನೆ, ನಿರ್ಗತಿಯಾಗುವಿಕೆ ಎಂಬ ವಿಶೇಷ ಅರ್ಥಗಳಲ್ಲಿ ಗ್ರಹಿಸುತ್ತಾನೆ. ಎಂದರೆ ಆ ವಿಶಿಷ್ಟ ಸಂದರ್ಭದಲ್ಲಿ ವಿಶಿಷ್ಟ ಅರ್ಥಗ್ರಹಣೆ ಸಾಧ್ಯವಾಯಿತೆಂಬುದು ಸ್ಪಷ್ಟ. ಎಲ್ಲ ಕೊಂಕು ಪದಗಳಿಗೂ ಈ ಮಾತು ಅನ್ವಯವಾಗುತ್ತದೆ. 'ಉಳ' (=book worm), ಕುಟುಮು/'ಕುಡುಮಿ' (=Studious), 'ಗಾಂಧಿ', 'ಬುದ್ದ', 'ಸನ್ಯಾಸಿ' (=ನಿಸ್ಸಂಗ ಸ್ವಭಾವದ, ದುಶ್ಚಟಗಳಿಲ್ಲದ, ಅತರ್ಮುಖಿ) ತೀರ್ಥ, ಗುಂಡು, ಟಾನಿಕ್ (=ಮಾದಕ ಪಾನಿಯ; drinks), ನಾಮ (=ಮೋಸ ಹೋಗು)–ಹೀಗೆ ಅನೇಕ ಪದಗಳನ್ನು ಉದಾಹರಿಸಬಹುದು. ಇಲ್ಲೆಲ್ಲ

ವಿಶಿಷ್ಟ ಸಂದರ್ಭದಲ್ಲಿ ವಿಶಿಷ್ಟ ಪರಿಣಾಮದ ಉದ್ದೇಶವಿರುವುದು ಸ್ಪಷ್ಟ. ಈ 'ವಿಶೇಷ ಪರಿಣಾಮ' ಎನ್ನುವುದು ನಾನು ಆಡುವ ಮಾತು ಹೊಸತನದಿಂದ ಕೂಡಿರಬೇಕು, ಅರ್ಥ ಸಂವಹನ ವಿಶೇಷ ಪರಿಣಾಮವನ್ನುಂಟುಮಾಡಬೇಕು ಎಂಬ ಉದ್ದೇಶ ಪೂರ್ವಕ ಭಾಷಾ ಬಳಕೆಯಿಂದ ಆದದ್ದು. ಹಾಗೆ ನೋಡಿದರೆ ಬಹುತೇಕ ಕೊಂಕು ಪದಗಳು ಹುಟ್ಟುವುದೇ ಇಂಥ ಉದ್ದೇಶದ ಕಾರಣದಿಂದ.[1]

ಕೊಂಕು ಪದಗಳು ಯಾವಾಗ ? ಮತ್ತು ಏಕೆ ಹುಟ್ಟುತ್ತವೆ ? ಎಂಬಂತೆಯೇ ಯಾರಿಂದ ಹುಟ್ಟುತ್ತವೆ ? ಎಂಬುದು ಸಹ ಕುತೂಹಲಕರ ಅಂಶ. ಸಾಮಾನ್ಯವಾಗಿ ಯಾವುದೇ 'ಭಾಷಿಕ ನಾವೀನ್ಯತೆ' (Linguistic Innovation) ತಲೆದೋರುವಂತೆಯೇ ಇವುಗಳು ಕೂಡ ಯಾವನೋ ಒಬ್ಬ ವ್ಯಕ್ತಿಯಿಂದ ಮೊದಲು ಪ್ರಾರಂಭವಾಗುತ್ತವೆ. ಆದರೆ ಆ ವ್ಯಕ್ತಿ ಬಹುಮಟ್ಟಿಗೆ ಯುವ ಪೀಳಿಗೆಯವನೇ ಆಗಿದ್ದು ವಾಕ್ಚತುರನಾಗಿರುತ್ತಾನೆ ; ತನ್ನ ವಾಕ್ಚಾತುರ್ಯದಿಂದ ವಿಶೇಷ ಅರ್ಥ, ಹಾಸ್ಯ ಮತ್ತು ರಂಜಕತೆಯನ್ನು ಉಂಟುಮಾಡಬಲ್ಲವನಾಗಿರುತ್ತಾನೆ. ಅಂಥ ವ್ಯಕ್ತಿಗಳು ಒಮ್ಮೆ ಬಳಸಿ ಅದು ಚೆನ್ನಾಗಿದೆ ಎನಿಸಿದ ತಕ್ಷಣ ಅವನ ಸುತ್ತಣವರಿಂದ ಅನುಕರಣೆಗೆ ಒಳಗಾಗಿ, ಅತ್ಯಂತ ಜನಪ್ರಿಯವಾಗಿ ಬಳಕೆಗೆ ಬರುತ್ತವೆ. ಬಹುತೇಕ ಕೊಂಕು ಪದಗಳು ಹುಟ್ಟುವುದು ಇಂಥ ಜನರಿಂದಲೇ. ಆ ವ್ಯಕ್ತಿ ಒಬ್ಬ ಪತ್ರಕರ್ತನೋ ಕವಿಯೋ ಆಗಿದ್ದಾಗ ಅವು ದಾಖಲು ಕೂಡ ಆಗಿಡುತ್ತವೆ.[2]

ಕೊಂಕು ಪದಗಳು ಹೇಗೆ ಹುಟ್ಟುತ್ತವೆ ? ಎಂಬ ಅಂಶ ಅವುಗಳ ಮೂಲ (Source) ಏನು ? ಎಂಬುದಕ್ಕೆ ಕೂಡ ಸಂಬಂಧಿಸಿದೆ. ಬಹುತೇಕ ಕೊಂಕು ಪದಗಳು ಅವುಗಳ ಹೊರ ರೂಪಕ್ಕೆ (Superficial form) ಸಂಬಂಧಿಸಿದಂತೆ ಭಾಷೆಯಲ್ಲಿ ಮೊದಲಿನಿಂದಲೂ ಇದ್ದವುಗಳೇ ಆಗಿರುತ್ತವೆ (ಈ ಅರ್ಥದಲ್ಲಿ ಅವು ಹೊಸ ಸೃಷ್ಟಿಗಳೇನೂ ಅಲ್ಲ) ಆದರೆ ಆ ಪದಗಳು ಕೊಂಕಿನ ಪಟ್ಟವನ್ನು ಪಡೆಯುವಾಗ ಮೊದಲು ಇದ್ದ ಸಾಮಾನ್ಯ ಅರ್ಥಕ್ಕಿಂತ ಭಿನ್ನವಾದ ಇನ್ನೊಂದು ಹೊಸ ಅರ್ಥವನ್ನು ಸೂಚಿಸಬಲ್ಲವಾಗಿರುತ್ತವೆ.[3] ಎಂದರೆ ರೂಢಿಬದ್ಧವಾದ ಒಂದು ಪದದ ಅರ್ಥಕ್ಕೆ ತಿರುವನ್ನು


---

1 Sturtevant, Linguistic Change, London, 1965. page 107

2 ಲಂಕೇಶ್ ಪತ್ರಿಕೆ ಕನ್ನಡದಲ್ಲಿ ಬಳಕೆಯಲ್ಲಿರುವ ಹಲವು ಕೊಂಕು ಪದಗಳನ್ನು ಬಳಸಿ ದಾಖಲಿಸಿದೆ. ಅದೇ ರೀತಿ ಹಲವು ಹೊಸ ಸೃಷ್ಟಿಗಳನ್ನೂ ಹುಟ್ಟುಹಾಕಿದೆ : 'ಶರಣ', 'ಚೆಡ್ಡಿ', 'ಬಾಧಿ', 'ಖಾಕಿ', 'ತಕ್ಕಡಿ' (= ನ್ಯಾಯಾಧೀಶ) 'ಮೇಲುಕೋಟೆ', ಮುಂ. ಶೇಕ್ಸ್‌ಪಿಯರ್ ಅವನ ಕಾಲದ 'hubub', 'fire work', 'bump' 'dwindle' ಮೊದಲಾದ ಕೊಂಕು ಪದಗಳನ್ನು ತನ್ನ ಕೃತಿಗಳಲ್ಲಿ ಬಳಸಿದ್ದಾನೆಂದು ಹೇಳಲಾಗಿದೆ. ನೋಡಿ ; Mario pei, ಪೂರ್ವೋಕ್ತ ಪು. 172.

3 Otto Jespersen, 'causes of change', classics in Linguistics (Ed.) Donald E. Hayden and others, London, 1971. page. 299.

ಹಾಕಿ ಅಥವಾ ಆ ಅರ್ಥವನ್ನು ಮುರಿದು ಬೇರೊಂದು ಅರ್ಥವನ್ನು ಆ ಪದಕ್ಕೆ ಹುಟ್ಟುಹಾಕಲಾಗುತ್ತದೆ. ಈ ಕಾರಣದಿಂದ ಇವೆಲ್ಲ ಭಾಷೆಯ ಸಾಮಾನ್ಯ ನೆಲೆಯಿಂದ ಸೃಷ್ಟಿಯಾದ ಅತಿಕ್ರಮಿತ ಅಥವಾ ಮಾರ್ಗಾಂತರಿತ ರೂಪಗಳು (Deviated forms) ಆಗಿರುತ್ತವೆ. ಆದರೆ ಒಂದು ಪದ ಕೊಂಕಿನ ಗಂಧವನ್ನು ಪಡೆದ ಮೇಲೂ ಮೊದಲಿದ್ದ ಅರ್ಥದಲ್ಲಿ ಕೂಡ ಬಳಕೆಯಲ್ಲಿರುತ್ತದೆ. ಹೀಗಾಗಿ ಈ ಹಂತದಲ್ಲಿ ಒಂದು ಪದ ಎರಡು ಅರ್ಥಗಳನ್ನು (ಸಾಮಾನ್ಯ ಮತ್ತು ವಿಶೇಷ) ಸಾಂದರ್ಭಿಕವಾಗಿ ಸೂಚಿಸುತ್ತಿರುತ್ತದೆ. ಅಥವಾ ಎರಡು ಅರ್ಥಗಳನ್ನು ಸೂಚಿಸುವ ಕಾರಣಕ್ಕೆ ಅವು ಬೇರೆ ಬೇರೆಯ ಎರಡು ಪದಗಳೂ ಆಗಿರುತ್ತವೆ ಎನ್ನಬಹುದು. ಈ ವಿವರಗಳನ್ನು ಕೆಳಕಂಡಂತೆ ಸೂಚಿಸಬಹುದೆಂದು ತೋರುತ್ತದೆ.



ಇಂದು ಕನ್ನಡದಲ್ಲಿ ಬಳಕೆಯಲ್ಲಿರುವ ಬಹಳಷ್ಟು ಕೊಂಕು ಪದಗಳು ಮೊದಲಿನಿಂದಲೂ ಇದ್ದವುಗಳೇ. ಮೇಲಿನ ವಿವರಗಳಿಗನುಗುಣವಾಗಿ ಕೆಲವನ್ನಿಲ್ಲಿ ನೋಡಬಹುದು.

ಪದ	ಸಾಮಾನ್ಯಾರ್ಥ	ಕೊಂಕು ಪದವಾಗಿ ಅದರ ವಿಶೇಷಾರ್ಥ
ಚತ್ರಿ (< ಛತ್ರಿ)	= ಕೊಡೆ	ತಳುಕಿನವ/ನಂಬಬಾರದವ
ಟೋಪಿ	= cap	ಮೋಸಮಾಡು
ಚೊಂಬು	= ನೀರು ತುಂಬುವ ಪಾತ್ರೆ	ನಿರ್ಗತಿಕನಾಗು
ತೋಪು	= ಮರಗಳ ಗುಂಪು (ಊರಿಗೊಂದು ತೋಪು ಇದ್ದೇ ಇರುತ್ತದೆ)	ಹಾಳಾಗು
ಉಳ (< ಹುಳ)	= ಯಾವುದೇ ಬಗೆಯ ಹುಳು	book worm

ತಿರುಪತಿ ಮೇಲುಕೋಟೆ	= ಸ್ಥಳದ ಹೆಸರುಗಳು	ಪಂಗನಾಮ ಹಾಕು
ನಾಮ	= ಹೆಸರು/ಹಣೆಯ ಮೇಲೆ ಹಾಕುವ ಉದ್ದ ಬೊಟ್ಟು	
ಗುಂಡು	= ಗುಂಡಗಿನ ವಸ್ತು|ಗೋಲಿ/ತುಪಾಕಿಯ ಗೋಲಿ	Drinks (ಮಾದಕ ಪಾನೀಯ)
ತೀರ್ಥ	= ಪವಿತ್ರ ಪ್ರಸಾದ	
ಔಷ್ಧಿ (<ಔಷಧಿ)	= medicine	
ಹಕ್ಕಿ	= bird	ಸುಂದರ ಯುವತಿ
ಹೂವು	= flower	
ಹಣ್ಣು	= fruit	
ಗುಲಾಬಿ	= rose	
ಗಾಡಿ	= ಚಲುವು/ಎತ್ತಿನಬಂಡಿ	ವೇಶ್ಯೆ
ಕಲಾಯಿ	= ಪಾತ್ರೆಗೆ ಹಾಕುವ ತವರದ ಲೇಪ	ಬೋಳುತಲೆ| ನುಣ್ಣಗೆ ಬೋಳಿಸಿದ ತಲೆ

ಈಗಾಗಲೇ ಇದ್ದ ಒಂದು ಪದ ಹೊಸ ಅರ್ಥ ಸೂಚಕ ಸಾಧ್ಯತೆ ಪಡೆದ ಮೇಲೆ ಕೊಂಕು ಪದವಾಗುವಂತೆಯೇ ಪರಭಾಷೆಯ ಕೆಲವು ಪರಿಚಿತ ಶಬ್ದಗಳೂ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಬಳಕೆಗೆ ಬಂದುಬಿಡುತ್ತವೆ. ಇಂಗ್ಲೀಷಿನ Shine, Rail, Reel, Blade, Shave–ಇತ್ಯಾದಿಗಳು ಅವುಗಳ ಸಾಮಾನ್ಯ ಅರ್ಥಕ್ಕಿಂತ ವಿಭಿನ್ನವಾದ ಒಂದು ವಿಶೇಷ ಅರ್ಥದಲ್ಲಿ ಕನ್ನಡದಲ್ಲಿ ಬಳಕೆಗೆ ಬಂದಿರುವುದನ್ನು ಗಮನಿಸಬಹುದು. ಶೈನು = ಸುಂದರ ವ್ಯಕ್ತಿತ್ವ/ಬುದ್ಧಿವಂತಿಕೆಯ ತೋರಿಕೆ ಅಥವಾ ಪ್ರದರ್ಶನ; ರೈಲು, ರೀಲು = ಸುಳ್ಳು/ಹುರುಳಿಲ್ಲದ; ಬ್ಲೇಡು, ಶೇವು – ಖರ್ಚು ಮಾಡಿಸು. ಈ ಉದಾಹರಣೆಗಳಲ್ಲಿ ವ್ಯಕ್ತವಾಗುವ ಮತ್ತೊಂದು ಮುಖ್ಯ ಅಂಶವೆಂದರೆ ಒಂದೇ ಅರ್ಥದಲ್ಲಿ ಹಲವು ಪದಗಳು ಬಳಕೆಯಾಗುವುದು.

ಸಾದೃಶ್ಯ ಸೃಷ್ಟಿ ಅನೇಕ ಭಾಷಿಕ ನಾವಿನ್ಯಗಳಿಗೆ ಕಾರಣವಾಗುವಂತೆ ಈ ಸಂದರ್ಭದಲ್ಲೂ ಕೆಲಸ ಮಾಡುತ್ತದೆ. ಬಹುವಚನ ಸೂಚಕವಾದ ಇಂಗ್ಲೀಷಿನ 'S' ಕನ್ನಡದ ವ್ಯಕ್ತಿನಾಮಗಳಲ್ಲಿ ಸೇರಿ ಬಳಕೆಯಾಗುವುದು ಕೆಲವೇ ತಿಂಗಳುಗಳ ಹಿಂದೆ ಪ್ರಚಲಿತವಿತ್ತು. ಲಂಕೇಶ್ ಪತ್ರಿಕೆಯಲ್ಲಿ ಒಮ್ಮೆ ಗುಪ್ಸ್, ಬಿಪ್ಸ್, ಬಿಲ್ಲಿಂಗ್ಸ್ – ಇತ್ಯಾದಿ ಬಳಕೆಯಾದದ್ದು, ಆ ಪತ್ರಿಕೆಯ ಓದುಗರಿಗೆ ಅಪೇಕ್ಷಣೀಯವಾಗಿ ಕಂಡುಬಂದಿರಲೇಬೇಕು, ಇತರ ಹೆಸರುಗಳಿಗೂ ಅನಪೇಕ್ಷಿತ 'S' ಹತ್ತಿಸಿ ಹೇಳುವುದು (ಉದಾ: ರಾಮ್ಸ್, ನಾಗ್ಸ್, ಪ್ರಭ್ಸ್, ಸಿದ್ಲಿಂಗ್ಸ್) ಹೆಚ್ಚು ಪ್ರಚಾರಕ್ಕೆ ಬಂತು. ಈಗ ಅದಾಗಲೇ ತನ್ನ ಪ್ರಚುರತೆಯನ್ನು ಕಳೆದುಕೊಳ್ಳುತ್ತಿದೆ.

ಪ್ರಚಾರಕ್ಕೆ ಬಂದ ಯಾವುದೇ ಕೊಂಕು ಪದವೂ ಅದು ಎಷ್ಟು ಬೇಗ ಪ್ರಚಾರಕ್ಕೆ ಬರುತ್ತದೋ, ಎಷ್ಟು ಬೇಗ ಜನಪ್ರಿಯವಾಗುತ್ತದೋ, ಅಷ್ಟೇ ಬೇಗ ಕಣ್ಮರೆಯಾಗುತ್ತದೆ, ಮಾಯವಾಗುತ್ತದೆ. 'ಅತಿ ಜನಪ್ರಿಯತೆ'ಯಂತೆಯೇ (extreme femiliarity) 'ಅತಿನಶ್ವರತೆ' (extreme motality) ಕೂಡ ಅವುಗಳ ಒಂದು ಮುಖ್ಯ ಲಕ್ಷಣ. ಅವುಗಳ ಜೀವಿತದ ಅವಧಿ ತೀರ ಕಡಿಮೆ. ಒಂದೇ ದಿನ, ವಾರ, ತಿಂಗಳು, ವರ್ಷ, ಹೆಚ್ಚೆಂದರೆ ಒಂದು ದಶಕವಷ್ಟೆ. ಜನ ಒಂದು ಕೊಂಕು ಪದದ ಬಳಕೆಯಲ್ಲಿ ಆಸಕ್ತಿ ತೋರುತ್ತಿಲ್ಲವೆಂದರೆ ಆ ಪದ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆಯೆಂದೇ ಅರ್ಥ. ಜನಪ್ರಿಯತೆಯನ್ನು ಕಳೆದುಕೊಂಡ ಮೇಲೆ ಅವು ಕಣ್ಮರೆಯಾಗಿಬಿಡುತ್ತವೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಶಿಷ್ಟ ಭಾಷೆಯ ನೆಲೆಗೆ ಏರುವುದೂ ಉಂಟು. ಆಗ ಅವುಗಳ ಕೊಂಕಿನ ಅರ್ಥವೇ (slangy meaning) ಸಾಮಾನ್ಯ ಅರ್ಥವೆಂಬಂತೆ ಬಳಕೆಯಾಗುತ್ತದೆ. ಮಣ್ಣಿನ ಮಡಕೆ ಎಂಬರ್ಥದಲ್ಲಿ ಬಳಕೆಯಲ್ಲಿದ್ದ ಇಟಾಲಿಯನ್ ಪದ (testa) ಒಂದು ಕಾಲಕ್ಕೆ ಬೋಳುತಲೆಯವನು (bold headed man) ಎಂಬರ್ಥದಲ್ಲಿ ಕೊಂಕುಪದವಾಗಿ ಬಳಕೆಗೆ ಬಂತು. ಆಮೇಲೆ 'ತಲೆ' ಎಂಬರ್ಥದಲ್ಲಿ ಸಾಮಾನ್ಯ ಪದವಾಯಿತಂತೆ.[4]

ಭಾಷೆಯ ಒಂದು ಸಾಮಾನ್ಯ ಪದ	ಕೊಂಕು ಪದ
ಮಣ್ಣಿನ ಮಡಕೆ = Testa →	ಬೋಳುತಲೆಯವ = Testa
ಸಾಮಾನ್ಯಾರ್ಥ	ವಿಶೇಷಾರ್ಥ
	ಸಾಮಾನ್ಯ ಪದ
	→ ತಲೆ (head) = Testa
	ಸಾಮಾನ್ಯಾರ್ಥ

ಇಂಗ್ಲೀಷಿನಲ್ಲಿ ಶೇಕಡ ಎರಡರಷ್ಟು ಪದಕೋಶ ಇಂಥ ಪದಗಳಿಂದ ತುಂಬಿದೆಯೆಂದು ಹೇಳಲಾಗಿದೆ.[5]

ಅನೇಕ ಸಂದರ್ಭಗಳಲ್ಲಿ ಕೊಂಕು ಪದಗಳ ಬಳಕೆ ಪರಿಮಿತ ಗುಂಪಿನ ವ್ಯಕ್ತಿಗಳ ನಡುವೆ ಇರುವ ಅತಿ ನಿಕಟತೆಯ (Intimacy) ದ್ಯೋತಕವಾಗಿ ಕೂಡ ಕಾಣಬರುತ್ತದೆ. ಹಾಗೆ ನೋಡಿದರೆ ಕೊಂಕು ಪದಗಳ ನಿಯೋಗದ ವ್ಯಾಪ್ತಿಯಲ್ಲಿ ರಂಜಕತೆ, ಹಾಸ್ಯ ಉಂಟುಮಾಡುವುದರ ಜೊತೆಗೆ ನಿಕಟತೆಯ ಸೂಚಕವಾಗಿ ಕೆಲಸ

4. Encyclopedia Britannica, Vol. 20, Page : 766-B
5. ಅದೇ ಪು. 767

ಮಾಡುವುದನ್ನೂ ಸೇರಿಸಬೇಕು. ಅಲ್ಲದೆ ಮಾತನಾಡಿದ್ದು ಆ ಪರಿಮಿತ ವಲಯದ ಹೊರಗಿನ ವಲಯದ ವ್ಯಕ್ತಿಗೆ ತಿಳಿಯಬಾರದೆಂಬ ರಹಸ್ಯದ ಉದ್ದೇಶವೂ ಇರುತ್ತದೆ. (ಯಾವುದೇ ಭಾಷೆಯಲ್ಲಿಯೂ ಸ್ತ್ರೀಯರಿಗೆ ಸಂಬಂಧಿಸಿದಂತೆ ಹೆಚ್ಚು ಕೊಂಕು ಪದಗಳಿರುವ ಅಂಶವನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕೆಂದು ತೋರುತ್ತದೆ) ಈ ಉದ್ದೇಶದ ಒಂದು ಅತಿಯಲ್ಲಿ (extreme point) ಕೊಂಕು ಪದಗಳು ರಹಸ್ಯ ಭಾಷೆಯಂತೆ ಕೆಲಸ ಮಾಡುತ್ತವೆ. ಈ ಹಿನ್ನೆಲೆಯಲ್ಲಿ ಅತ್ಯಂತ ಕೃತಕ ರೂಪಗಳಾದ ರೇಮಿಂಗ್(Rhyming) ಕೊಂಕು ಪದಗಳು(ಕಾಕ್‌ನೀ (Cockney)ಗುಂಪಿನ ಜನರಲ್ಲಿ ಬಳಕೆಯಲ್ಲಿದ್ದ ಕೊಂಕು ಪದಗಳ ಒಂದು ಬಗೆ,) ಪ್ರತಿರೂಪ ಕೊಂಕು ಪದಗಳು (Backward Slang), ಕೇಂದ್ರೀಯ ಕೊಂಕು ಪದಗಳು (Centre Slang) ಇತ್ಯಾದಿಗಳನ್ನೆಲ್ಲ ಕೊಂಕು ಪದಗಳ ಬೇರೆ ಬೇರೆ ಬಗೆಗಳೆಂದು ಹೇಳಲಾಗಿದೆ.[6] ಇವೆಲ್ಲ ಸೃಷ್ಟಿಯಾಗುವ ಸ್ವರೂಪವೇ ಅತ್ಯಂತ ಕೃತಕವಾಗಿರುತ್ತದೆ ಎಂಬ ಕಾರಣಕ್ಕೆ, ಕೃತಕ ರೂಪಗಳೆಂದು ಕರೆಯುವುದರಲ್ಲಿ ತಪ್ಪಿಲ್ಲ. ಉದಾಹರಣೆಗೆ ಇಲ್ಲಿ ಪ್ರತಿರೂಪ ಕೊಂಕು ಪದಗಳನ್ನು ನೋಡಬಹುದು. ಒಂದು ಪದದಲ್ಲಿರುವ ಪ್ರತಿಯೊಂದು ಅಕ್ಷರವನ್ನೂ ಅನುಕ್ರಮವಾಗಿ ಹೇಳುವುದರ ಬದಲು ಪ್ರತಿಕ್ರಮವಾಗಿ (backward) ಹೇಳುವುದರ ಮೂಲಕ ಇಂಥ ಪದಗಳು ಸೃಷ್ಟಿಯಾಗುತ್ತವೆ. ಉದಾ : ಸಿನಿಮಾ> ಮಾನಿಸಿ : ಪ್ರೇಯಸಿ>ಸಿಯಪ್ರೇ ; ಕೊಡು>ಡುಕೊ, ಮುಂ. ಇಂಥ ಪ್ರಯತ್ನಗಳನ್ನು ಆಗಾಗ ಗಮನಿಸುತ್ತಲೇ ಇರುತ್ತೇವೆ–ಅದರಲ್ಲೂ ಬೇರೆಯವರಿಗೂ ತಿಳಿಯಬಾರದಂತಹ ಸಂಗತಿ ಹೇಳುವಾಗ. ಕೆಲವೇಳೆ ಅತಿ ಇಷ್ಟವಾದವರ, ಅಥವಾ ಬೇಸರವಾದವರ ಹೆಸರುಗಳನ್ನು ಈ ಬಗೆಯಲ್ಲಿ ಹೇಳುವುದುಂಟು. ಎ. ಬಿ. ಶ್ರೀಕಂಠಯ್ಯ ಎಂಬ ಕವಿಯೊಬ್ಬರು (ತಮ್ಮ ಹೆಸರನ್ನು ತಿರುಗು ಮುರುಗಾಗಿಸಿ) ತಮ್ಮ ಕಾವ್ಯನಾಮವಾಗಿ ಅಯ್ಯತ್ನಕೀರ್ಸ್, ಬಿ.ಎ. (Ayyatnakeers B.A.) ಎಂಬುದಾಗಿ ಇಟ್ಟುಕೊಂಡಿದ್ದುದನ್ನು ಕೂಡ ಇಲ್ಲಿ ಸೂಚಿಸಬಹುದು.

ಕೆಲವು ಪದಗಳ ಆದ್ಯಕ್ಷರಗಳ ಆಧಾರದಮೇಲೆ ಸೃಷ್ಟಿಯಾದ ಸಂಕ್ಷಿಪ್ತ ರೂಪಗಳು ಕೂಡ ಕೊಂಕು ಪದಗಳಾಗಿ ಬಳಕೆಗೆ ಬರುವುದುಂಟು. ಎಲ್ಲ ಸಂಕ್ಷಿಪ್ತ ರೂಪಗಳೂ ಕೊಂಕು ಪದಗಳಾಗುವುದಿಲ್ಲ. ಆದರೆ ಅವುಗಳಲ್ಲಿ ಕೆಲವು ಈ ಸ್ವರೂಪದಲ್ಲಿ ತೋರಿ ಬರುತ್ತವೆ ಉದಾ : ಕ.ಬು. ಎಂಬುದು ಕಸದಬುಟ್ಟಿ ಎಂಬುದರ ಸಂಕ್ಷಿಪ್ತ ರೂಪವಾಗಿದ್ದು ಕ.ಬು. ಸಾಹಿತಿ, ಕ.ಬು. ವಿದ್ವಾಂಸ, ಕ.ಬು. ಲೇಖಕ, ಇತ್ಯಾದಿಯಾಗಿ ಬಳಕೆಯಾಗುತ್ತಿದೆ. ಅದೇ ರೀತಿ ಕೆಲವು ಕನ್ನಡದ ಪದ, ಪದಪುಂಜಗಳ ಇಂಥ ಸಂಕ್ಷಿಪ್ತ ರೂಪಗಳು ಇಂಗ್ಲಿಷ್ ಸ್ಪೆಲಿಂಗುಗಳ ಆಧಾರದ ಮೇಲೆ ಸೃಷ್ಟಿಯಾಗುವುದನ್ನು ಗಮನಿಸಬಹುದು. 'ಎಚ್ಚೆಮ್‌ಟಿ' ಎಂದು ಕೆಲವರನ್ನು ಕರೆಯುವುದುಂಟು.

---

6. ಅದೇ.

(ಹಳ್ಳಿ ಗಮಾರತನ ಎಂಬರ್ಥದಲ್ಲಿ) ಅದರ ವಿವರಣೆ : ಹೆಗಲ ಮೇಲೆ ಟವಲ್ಲು (H.M.T.). ಅದೇ ರೀತಿ ತಲೆಹರಟೆ ಎಂಬುದಕ್ಕೆ ಟಿ. ಹೆಚ್., ತಿಕ್ಕಲು/ತಿಕಲ ಎನ್ನುವುದಕ್ಕೆ ಟಿ.ಕೆ.ಎಲ್. ಮುಂ.

ಸೈಮನ್ ಪಾಟರ್ ಎಂಬಾತ ಕೊಂಕು ಪದಗಳನ್ನು ಉತ್ತಮ ಮತ್ತು ಅಧಮ ಎಂಬುದಾಗಿ ವಿಂಗಡಿಸುತ್ತಾನೆ. ಅವನ ಪ್ರಕಾರ ಉತ್ತಮ ಕೊಂಕು ಪದಗಳು "ಅನಾಮಿಕ (nameless) ಕವಿಗಳ ಕವಿತ್ವರೂಪಿಗಳಂತಿದ್ದು, ದಿನದಿನವೂ ಅವುಗಳ ಪ್ರವಾಹ ಭಾಷೆಯಲ್ಲಿ ಸತತವಾಗಿರುತ್ತದೆ; ಅಂಥ ರೂಪಗಳು–ರಮ್ಯ, ಮಧುರ ಮತ್ತು ಪರಿಣಾಮಕಾರಿ ಅರ್ಥಸೂಚಕಗಳಾಗಿರುತ್ತವೆ. ಅಧಮ ಕೊಂಕು ಪದಗಳು ಇವಕ್ಕೆ ತದ್ವಿರುದ್ಧವಾಗಿದ್ದು ಒರಟು ಮತ್ತು ಕ್ಷುದ್ರ ಅರ್ಥಗಳನ್ನು ಹೇಳುತ್ತವೆ." ಎಂದು ಹೇಳಿ ಘೋಷಣೆಗಳು, ಓಟು ಪಡೆಯುವ ಉದ್ದೇಶದ ರಾಜಕೀಯದ ಅರೆಸುಳ್ಳು ಪದಗಳನ್ನೂ ಅಧಮ ರೂಪಗಳಲ್ಲಿ ಸೇರಿಸುತ್ತಾನೆ.[7]

ಮಡಿವಂತ ಭಾವನೆಯ ಕೆಲವರು ಕೊಂಕು ಪದಗಳ ಬಗ್ಗೆ, ಅವು ಅಶಿಷ್ಟ ಮತ್ತು ಅನಾಗರಿಕ ರೂಪಗಳು; ಕಳ್ಳರು ಮತ್ತು ಭಿಕ್ಷುಕರ ಉಪಭಾಷಿಕ ರೂಪಗಳು ಎಂದೆಲ್ಲ ಅಭಿಪ್ರಾಯಪಟ್ಟಿದ್ದಾರೆ. ಕೆಲವರು ಮೆಚ್ಚುಗೆಯ ಅಭಿಪ್ರಾಯಗಳನ್ನೂ ಹೇಳಿದ್ದಾರೆ. ಅಮೆರಿಕದ ಅರ್ಥವಿಜ್ಞಾನಿ (Semanticist) ಎಸ್. ಐ. ಹಯಕವಾ (S. I. Hayakawa) ಕೊಂಕು ಪದಗಳನ್ನು "ದಿನನಿತ್ಯದ ಕಾವ್ಯ" (The poetry of every day life) ಎನ್ನುತ್ತಾನೆ. ವೈಜ್ಞಾನಿಕ ಪರಿಭಾಷೆಯಲ್ಲಿ ಅವು ಉತ್ತಮವೂ ಅಲ್ಲ, ಅಧಮವೂ ಅಲ್ಲ. ಭಾಷಿಕ ಬೆಳವಣಿಗೆಯ ಸಹಜ ಸ್ವರೂಪದ ಒಂದು ಅವಿಚ್ಛಿನ್ನ ಭಾಗ. ಭಾಷೆಯಲ್ಲಿ ಅವು ಎಷ್ಟೋ ವೇಳೆ ಸುಲಲಿತ, ಮಧುರ ಮತ್ತು ಸುಂದರ ಅರ್ಥ ಛಾಯೆಗಳನ್ನು ತರುತ್ತವೆ. ಇಷ್ಟೆಲ್ಲದರ ನಡುವೆ ಈ ಕ್ಷೇತ್ರ ಅಧ್ಯಯನ ಯೋಗ್ಯವಾಗಿದೆ.

ಆಕರಗಳು :

Mario pei, The story of Language, London, 1952
Robart A Hall, Jr., Introductory Linguistics, Delhi. 1969
Simeon Potter, our Language, London, 1964
Peter Trudgill, Socio Linguistics : An Introduction, penguin 1974
Encyclopedia Britannica, Vol. 20
Sturtevant, Linguistic change, London, 1965
Donald E. Hayden and others (Ed) classics in Linguistics, London, 1971

---

7. Simeon potter, our Language, London, 1964. Page. 133

ಚೆನ್ನವೀರ ಕಣವಿಯವರ ಕಾವ್ಯದಲ್ಲಿ ಜನಪದ ಸತ್ವ

ಸಿ. ಕೆ. ಸಾವಲಗಿ

ಯಾವುದೇ ಕವಿ, ತನ್ನ ಜನಾಂಗದ, ಬದುಕಿನ ಪ್ರತಿನಿಧಿಯಾಗಿರುತ್ತಾನೆ. ಮತ್ತು ತಾನು ಹುಟ್ಟಿಬೆಳೆದ, ಆ ಬದುಕಿನ ಸಂಸ್ಕೃತಿಯ ಸತ್ವ-ಸಾರವನ್ನು ತನ್ನ ಕಾವ್ಯದಲ್ಲಿ ಭಟ್ಟಿಯಿಳಿಸಿರುತ್ತಾನೆ. ಈ ಹಿನ್ನೆಲೆಯಲ್ಲಿ ಚೆನ್ನವೀರ ಕಣವಿಯವರು ಕುವೆಂಪು, ಬೇಂದ್ರೆ, ಆನಂದಕಂದ, ಮಧುರಚೆನ್ನ, ಕೆ. ಎಸ್. ಎನ್., ಅಡಿಗ, ಶರಣರು, ದಾಸರು, ಮತ್ತು ವರ್ಡ್ಸ್‌ವರ್ಥ್, ಕೋಲ್‌ರಿಜ್, ಯೇಟ್ಸ್ ಕವಿ–ಮೊದಲಾದವರಿಂದ ಸ್ಫೂರ್ತಿ–ಪ್ರೇರಣೆ ಪಡೆದು, ತಮ್ಮ ಕಾವ್ಯದಲ್ಲಿ ತಮ್ಮತನವನ್ನು ಹೊರಹೊಮ್ಮಿಸಲು ಪ್ರಯತ್ನಿಸಿದರಾದರೂ, ತಾವು ಹುಟ್ಟಿ-ಬೆಳೆದ ಹಳ್ಳಿಯ ಸಂಸ್ಕೃತಿ ಮತ್ತು ಅದರಿಂದುದಿಸಿದ ಸಾಹಿತ್ಯದ ಸತ್ವ (ಜನಪದ ಸಾಹಿತ್ಯ)ದಿಂದಲೂ, ತಮ್ಮ ಕಾವ್ಯದ ಯಶಸ್ಸನ್ನು ಸಾಧಿಸಿದ್ದಾರೆ. ಇವರ "ಬುದ್ಧಿ-ಭಾವಗಳಿಗೆ" ದಟ್ಟವಾದ ಜನಪದದ ಸಂಸ್ಕಾರವಿರುವುದರಿಂದ, ಜನಪದದ ಶ್ರೀಮಂತ ಅನುಭವ ಲೋಕದ ಜೊತೆಗೆ, ದೇಶೀಪದಬಂಧ, ಮಾತಿನ ಧ್ವನಿ-ಕಾಕುಗಳನ್ನು ಹದವರಿತು ಸ್ವೀಕರಿಸಿದ್ದಾರೆ. ಆದುದರಿಂದ ಧ್ವನಿಸಾಮರ್ಥ್ಯವನ್ನು ಸಾರ್ಥಕವಾಗಿ ಬಳಸಿ, ಕಾವ್ಯಭಾಷೆಗೆ, ನಿಜವಾದ ಹೊಸತನ ಒದಗಿಸಿದ್ದಾರೆ;[1] ಎಂಬ ಮಾತಿನಲ್ಲಿ ಅತಿಶಯೋಕ್ತಿಯೇನಿಲ್ಲ.

ಕಣವಿಯವರು ಬೇಂದ್ರೆ, ಮಧುರಚೆನ್ನ, ಆನಂದಕಂದ, ಜಿ. ಪಿ. ರಾಜರತ್ನಂ, ಮತ್ತು ಕಂಬಾರರಂತೆ, ನೇರವಾಗಿ ಜನಪದ ಸತ್ವದಿಂದ ಪ್ರಭಾವಿತರಾಗಿರದಿದ್ದರೂ, ಜನಪದದ ಭಾವ-ಭಾವನೆ, ಗೇಯತೆ, ಮುಕ್ತ ಛಂದಸ್ಸು, ಮತ್ತದರ ಸೊಗಸು-ಸೊಗಡುಗಳಿಗೆ ಮಾರುಹೋಗಿ ಅದನ್ನೆಲ್ಲ, ಅರಿತೋ, ಅರಿಯದೆಯೋ, ತಮ್ಮ ಕಾವ್ಯದಲ್ಲಿ ತರಲು ಪ್ರಯತ್ನಿಸಿದ್ದಾರೆ. ಹೀಗೆ ಉತ್ತರ ಕರ್ನಾಟಕದ ಜನಪದ ಸತ್ವವನ್ನು ಅರಗಿಸಿ-ಅಳವಡಿಸಿಕೊಂಡು, ತಮ್ಮ ಕಾವ್ಯದ ಅರ್ಥ ಶ್ರೀಮಂತಿಕೆಯನ್ನು ಹೆಚ್ಚಿಸಲು ಪ್ರಯತ್ನಿಸಿದ ಉತ್ತರ ಕರ್ನಾಟಕದ ಕವಿಗಳಲ್ಲಿ ಚೆನ್ನವೀರ ಕಣವಿಯವರೂ ಒಬ್ಬರು. ಹೊಸಗನ್ನಡದ 'ನವೋದಯ' ಮತ್ತು 'ನವ್ಯ'–ಎರಡೂ ಮಾರ್ಗಗಳಲ್ಲಿ ತನ್ನದೇ ಆದ ವಿಶಿಷ್ಟ ಜನಪದ ಸಂಸ್ಕಾರ ಮತ್ತು ಆಧುನಿಕ

---

1 ಶಾಮಸುಂದರ ಬಿದರಕುಂದಿ : 'ನವೋದಯ ಪರಂಪರೆ ಮತ್ತು ಕಣವಿ' 'ಚೆಂಬೆಳಕು'; ಸಂ. : ಜಿ. ಎಸ್. ಕಾವಸೆ ಪುಟ. 337

ಸಂವೇದನೆಗಳ ಅಭಿವ್ಯಕ್ತಿಯಲ್ಲಿ 'ಬೇಂದ್ರೆ'ಯವರಂತೆ ಬದುಕಿನ ಹೊಸ ಅರ್ಥ, ಹೊಸಮೌಲ್ಯ ಕಂಡವರು ಕವಿ ಕಣವಿ. ತಾವು ಹುಟ್ಟಿ ಬೆಳೆದ ಗ್ರಾಮೀಣ ಪರಿಸರ ಮತ್ತು ಜನಪದೀಯ ಸತ್ವವುಳ್ಳ ಬೇಂದ್ರೆ, ಮಧುರಚೆನ್ನರಂಥ-ಕವಿಗಳ ಪ್ರಭಾವ ಕವಿ ಕಣವಿಯವರಿಗೆ, ಸಹಜವಾಗಿಯೇ, ಜನಪದ ಸತ್ವದ ಸ್ಫೂರ್ತಿ ಸೆಲೆಯೊಡೆಯಲು ಕಾರಣವಾದುವು. ಜನಪದ ಸತ್ವದ ಸ್ಫೂರ್ತಿ-ಪ್ರೇರಣೆಗಳಿಂದಲೇ ಕಣವಿಯವರು ಹಲವಾರು ಕವನಗಳನ್ನು ರಚಿಸಿದ್ದಾರೆ.

ಇವರ

1

ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ
....

2

ಬಗಾಟ ಬಗರಿ
ತಿರುಗುವ ತಿಗರಿ
....

3

ಕಂಬ ಕಂಬಾಟ
ನಿಂಬೀಯ ತೋಟ (ಮಧುಚಂದ್ರ)

ಮತ್ತು 'ಆನಿ ಬಂತವ್ವಾ ಆನಿ' (ಮಧುಚಂದ್ರ)–ಮೊದಲಾದ ಕವನಗಳ ಸಾಲುಗಳೇ ಜನಪದ ಶಿಶುಪ್ರಾಸಗಳಾಗಿವೆ. ಪ್ರಸ್ತುತ ಕವನಗಳ ಮುಂದಿನ ಕವಿಯ ಭಾವನೆಗಳೆಲ್ಲವೂ ಈ ಶಿಶುಗೀತಗಳ ಲಯದಿಂದಲೇ ಪ್ರೇರಣೆ ಪಡೆದು ಮುಂದೆಸಾಗುತ್ತವೆ. ಬೆಳುದಿಂಗಳಲ್ಲಿ ಹೆಣ್ಣು ಮಕ್ಕಳು ಹಾಡುತ್ತ ಆಡುವ, ಆಡುತ್ತ ಹಾಡುವ. ಈ ಕವನಗಳು ಜನಪದ ಮುಕ್ತ ಛಂದಸ್ಸಿನಲ್ಲಿಯೇ ಇವೆ. ಅಲ್ಲದೆ, ಕಣವಿಯವರ, ರಾಜಕೀಯ ವಿಡಂಬನೆಯನ್ನು ಒಳಗೊಂಡ 'ಲಾಗಹೊಡಿಯಲೊ ಮಂಗ' (ಮಣ್ಣಿನ ಮೆರವಣಿಗೆ) ಕವಿತೆ, ಜನಪದದಲ್ಲ ಜನಜನಿತವಾದ ಎರಡು ಮಕ್ಕಳ ಪ್ರಾಣಿಕಥೆಗಳನ್ನು ಆಧರಿಸಿಯೇ ವಿಸ್ತೃತಗೊಂಡುದು ತಿಳಿದು ಬರುತ್ತದೆ.

ನೀ ಕೊಟ್ಟ ಹಣ್ಣು–ರುಚಿ ಹೃದಯವಿನ್ನೆಷ್ಟು ಸವಿ
ಕಡಲ ತಳದಲಿ ಮೊಸಳೆ ತೆರೆದ ಬಾಯಿ
ಮರದಲ್ಲಿ ಹೃದಯವನು ಬಿಟ್ಟ ಸೋಜಿಗವ ನುಡಿ
ಬದುಕಿಕೊಳ್ಳಲು ಇದೇ ತಕ್ಕ ದಾರಿ

o o o o

ಬೆಕ್ಕು-ಬೆಣ್ಣೆಯ ಜಗಳದಲ್ಲಿ ತಕ್ಕಡಿತೂಗಿ
ನ್ಯಾಯದಾನವಗೈದ ನಿನ್ನ ಬುದ್ಧಿ
ರಾಜಕಾರಣಿಗಳನು ತಲೆದೂಗಿಸಿದಿಹುದಿಲ್ಲಿ
ನಿನಗಿಂತ ಅವರಿಗೇ ಹೆಚ್ಚು ಸಿದ್ಧಿ.

ಹಾಗೆಯೇ ಇವರ 'ಒಂದು ಪುಟ್ಟ ಹಕ್ಕಿಗೆ (ಮಧುಚಂದ್ರ), 'ಯಾರು ಕೇಳುತ್ತಾರೆ ಹೇಳಿರಣ್ಣ' (ನಗರದಲ್ಲಿ ನೆರಳು), 'ಇವನಿಂದಲೇ ನಮಗೆ ದೈಗು-ಬೇಗು' (ದೀಪಧಾರಿ),'ಅಲ್ಲ ಮಾತ್ಕೇಳ್ತೀನಿ' (ಜೀವಧ್ವನಿ), 'ಜೋಳದಪಾಳಿ' (ಜೀವಧ್ವನಿ), 'ನಾಗಪಂಚಮಿ' (ಜೀವಧ್ವನಿ) 'ಸಂಕ್ರಮಣ'; 'ನೆಲದ ಮಕ್ಕಳಿಗೆ ನಲ್ವಾಡು' (ಎರಡು ದಡ) 'ಪಣತಿ' (ದೀಪಧಾರಿ), 'ಭಾವಜೀವಿ' ನಗರದಲ್ಲಿ ನೆರಳು, 'ಧಾರವಾಡದಲ್ಲಿ ಮಳೆಗಾಲ' (ನೆಲಮುಗಿಲು) 'ಪಕ್ಷಿತಟಾಕ' (ನಗರದಲ್ಲಿ ನೆರಳು) 'ಹೊಸಬಾಳಿನ ಯೋಜನೆ' (ನೆಲಮುಗಿಲು)-ಮೊದಲಾದ ಕವನಗಳಲ್ಲಿ ಜನಪದ ಕುಣಿತಮಣಿತ, ಜನಪದ ಧಾಟಿ-ಲಯ, ಬಯಲಾಟ, ಸೋಗು, ಬಯಲಾಟದ ಸಂಭಾಷಣೆ, ಸಾರಥಿ, ಜೋಗುಳ ಹಾಡಿನ ಲಯ, ಏಕತಾರಿಪದ, ಹಂತಿಪದ, ಬೀಸುವಪದ, ಮಕ್ಕಳ ಆಟ ನೋಟ, ಸೂತ್ರದ ಗೊಂಬೆ, ಕಿಳ್ಳಿಕ್ಯಾತ, ಜನಪದವಾದ್ಯಗಳು, ಗಾದೆ, ಒಗಟು, ನುಡಿಗಟ್ಟು, ರೂಢಿ ಮಾತು, ಕೂಡುನುಡಿ, ಮೊದಲಾದುವುಗಳೆಲ್ಲ ಉಲ್ಲೇಖಿತಗೊಂಡು ಕಾವ್ಯದ ಸೃಷ್ಟಿಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದು ಕಂಡುಬರುತ್ತದೆ. "ಕಣವಿಯವರ ಕಾವ್ಯಜೀವನ ಮೂಲತಃ ಪರಿಸರ ಸಂವೇದಿಯಾದದ್ದು."[2] ಆದುದರಿಂದಲೇ ಈ ಮೇಲಿನ ಎಲ್ಲ ಕವನಗಳು ಜನಪದ ಸತ್ವದ ಪ್ರೇರಣೆಯಿಂದಲೇ ಸುಳುಹುದೋರಿ, ಕವಿಯು ಆಧುನಿಕ ಪ್ರಜ್ಞೆಯೊಂದಿಗೆ, ಸಮಕಾಲೀನ ಬದುಕನ್ನು ಸುಂದರವಾಗಿ ಚಿತ್ರಿಸಿವೆ. ಕವಿ ಕಣವಿಯವರ ಜನಪದ ಸತ್ವ ಮೆಚ್ಚುವಂಥದು. ಒಂದು ಉದಾಹರಣೆ ನೋಡಿ–

ಚೆಂಡುಹೂ ತುಂಬೆ ಹೂ ಹೊನ್ನಾವರೆ ಹುಚ್ಚೆಳ್ಳು,
ಸಜ್ಜೆ, ಜೋಳದ ತೆನೆಗೆ ಸುಂಕವಾಡಿ
ಮಣ್ಣ ಕುಡಿಕೆಯನೊಡೆದು ಪುಟಿಯುತಿದೆ ಕಾರಂಜಿ
ಬಣ್ಣಬಣ್ಣದ ಬದುಕನೆಲ್ಲ ತೂರಿ (ದೀಪಧಾರಿ: 'ಪಣತಿ' ಕವಿತೆ)

ಕಣವಿಯವರ ಮೊದಮೊದಲಿನ ಕವನಸಂಕಲನಗಳಾದ, 'ಕಾವ್ಯಾಕ್ಷಿ', 'ಭಾವಜೀವಿ', ಮಣ್ಣಿನ ಮೆರವಣಿಗೆ', 'ಎರಡು ದಡ'–ಮೊದಲಾದವುಗಳಲ್ಲಿಂತೂ ಜನಪದ ಸತ್ವ ನಿರಾಯಾಸವಾಗಿ ಹರಿದಾಡಿದೆ ; ಇದರಿಂದ ಇವರ ಕಾವ್ಯಾಭಿವ್ಯಕ್ತಿಗೆ ಒಂದು ಗಟ್ಟಿತನ–ಜಿಗುಟುತನ ಬಂದಿದೆ. ಜನಪದ ಕವಿಗೆ ಪ್ರಕೃತಿಯ ಯಾವ ವಸ್ತುವಾದರೂ ಕಾವ್ಯವಸ್ತುವಾಗುತ್ತದೆ. ಕಣವಿಯವರಿಗೂ ಕೂಡ ತಾನು ನೋಡಿದ

2 ಡಾ॥ ಜಿ. ಎಸ್. ಶಿವರುದ್ರಪ್ಪ: ಜೀವಧ್ವನಿ, ಕೊನೆಯಲ್ಲಿ

ಮುದ್ದಿನಕುರಿಮರಿ, ನಾಯಿ, ಬೆಕ್ಕು, ಮಂಗ, ಮೊಸಳೆ, ನೆರಳು, ಗೋದಿಹೊಲ, ಜೇನು, ಮಾಮರ, ಗುಡಿಸಲು, ದನಕರುಗಳ ಗುಂಪು, ಹೂಗಿಡಬಳ್ಳಿ, ಮುಳ್ಳುಕಂಟಿ ಕಲ್ಲುಮಣ್ಣು-ಹುಲ್ಲು, ಹೊಂಗೆ, ಮಾವು-ಬೇವು, ಹಕ್ಕಿ, ದನಗಾಹಿ-ಈ ಎಲ್ಲ ಗ್ರಾಮೀಣ ಪರಿಸರದ ಅನುಭವಗಳು ಕಾವ್ಯಾಭಿವ್ಯಕ್ತಿಯ ವಸ್ತುಗಳಾಗಿವೆ. ಇನ್ನೂ ನಾಗರಿಕ ನಾಗರವು ಹುತ್ತುಕಟ್ಟದ, ತನ್ನ ಹಳ್ಳಿಯ ಹಲವಾರು ಚಿಕ್ಕಂದಿನ ನೆನಪುಗಳು ಕವಿಯ ಸ್ಮೃತಿಪಟಲದ ಮೇಲೆ ಹರಿದುಬಂದು, ಕಾವ್ಯವಾಗುವುದನ್ನು ಗಮನಿಸಬೇಕು.

“ಸಣ್ಣ ಸಿದ್ದಾಗ............
ನಮ್ಮೂರ ಹೊರಗಿನ ಆಲದಮರದ ದಟ್ಟ ನೆರಳಲ್ಲಿ
ಗೋಲಿಯಾಡಿ, ಬೆರಳಿಗೆ ನೆತ್ತರು ಬರುವಂತೆ ಡೀಕಿ ಡೀಕಿಸಿ,
ಒಬ್ಬರಿಗೊಬ್ಬರು ತೆಕ್ಕಿಬಿದ್ದು, ಅಂಗಿಹರಿದು
ಅತ್ತಿದ್ದು ಮತ್ತೆ ನಕ್ಕಿದ್ದು, ಸಂತೋಷ ಉಕ್ಕಿದ್ದು
ನೆನಪಾಗುತ್ತದೆ” (ನಗರದಲ್ಲ ನೆರಳು)

ಅಷ್ಟೇ ಅಲ್ಲ; ತಮ್ಮೂರ ಸುತ್ತಮುತ್ತಿನ ಕೆರೆ, ಅದರ ದಂಡೆ, ಗಿಡಗಂಟಿ, ಮೋಡ, ರೈಲುಕಂಬಿ, ಕಾಲೇಜು, ಹೊಗೆಯಾಡುವ ಇಟ್ಟಂಗಿ ಭಟ್ಟಿ, ಕೊಕ್ಕರೆ ಕಪ್ಪೆ, ಮೀನು, ಹಾವು, ಜೋತಿರುವ ಗೀಜಗ ಗೂಡು, ಗೋವು, ಹಕ್ಕಿ-ಇತ್ಯಾದಿಗಳೆಲ್ಲ, ಕವಿಯ ನೆನಪಿನಾಳದಿಂದ ಹೊಮ್ಮಿ ಕಾವ್ಯಕ್ಕೆ ಕುಮ್ಮಕ್ಕು ನೀಡಿವೆ. ಇನ್ನು, ಇಂದು ನಗರದಲ್ಲಿ ನೆಲೆಸಿದ ಕವಿ ಕಣವಿಯವರು, ಅಂದಿನ ಹಳ್ಳಿಯ ತಮ್ಮ ಬಾಲ್ಯದ ಹತ್ತಾರು ಸವಿನೆನಪುಗಳನ್ನು, ತಮ್ಮ 'ಭಾವಜೀವಿ'ಯಲ್ಲಿ ಒಂದೊಂದಾಗಿ ಬಿಚ್ಚುತ್ತಾ ಹೋಗುವುದನ್ನು ಗಮನಿಸಿದರೆ; ಮತ್ತು ಸ್ವತಃ ಕವಿಯೇ ತಾವು ಬಾಲ್ಯದಲ್ಲಿ ಕಂಡುಂಡ ಅನುಭವಗಳು, ತಮ್ಮ ಕಾವ್ಯಕ್ಕೆ ಮೂಲನೆಲೆಯಾಗಿ ಪ್ರೇರೇಪಿಸಿವೆ, ಎಂದು ಹೇಳುವುದನ್ನು ನೋಡಿದರೆ, ಅವರಿಗಿರುವ ಜನಪದ ಸತ್ವದ ಆಳ-ಅಗಲಗಳ ಅರಿವಾಗುತ್ತದೆ.

“ಆಟ ಬಯಲಾಟದಲಿ ಕೋಲು-ಕುಣಿತಗಳಲ್ಲಿ
ಹಂತಿ ತಿರುಗುವ ಸುಗ್ಗಿ ಮೊದಲಾಗಿರೆ
ಮುಕ್ಕುಮುಕ್ಕಿಗೆ ಬೀಸುಕಲ್ಲ ಜೊತೆ ಹಾಡುಗರ
ಸುರಿಮಳೆಯು ಜನಪದವ ಪ್ರೇರಿಸುತಿರೆ” (ಭಾವಜೀವಿ)

ಬಯಲಾಟ, ಕೋಲಾಟ, ಹಂತಿಪದ, ಬೀಸುಕಲ್ಲಪದ-ಮೊದಲಾದವುಗಳು ಕವಿಯ ಬಾಲ್ಯ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದುದರಿಂದಲೇ, ಅವಿಂದು ಕಣವಿಯವರ ಕಾವ್ಯದ ಸ್ಫೂರ್ತಿಸೆಲೆಯಾಗಿವೆ, ನೆಲೆಯಾಗಿವೆ.

ಕವಿ ಕಣವಿಯವರು, ಕುವೆಂಪು, ಬೇಂದ್ರೆ ಅವರಂತೆ ಸಂಪೂರ್ಣವಾಗಿ ಪ್ರಕೃತಿ ಕವಿಯಲ್ಲ, ಅದರ ಉಪಾಸಕರೂ ಅಲ್ಲ; ಆದರೆ, ಪ್ರಕೃತಿಯ ಚೆಲ್ವಿಕೆಯನ್ನು,

ಅದರ ಬಗೆಗೆ ತಮಗಿರುವ ಆನಂದೋತ್ಸಾಹಗಳನ್ನು, ಅದರ ಅಂಗೋಪಾಂಗಗಳ ಮೂಲಕ ವರ್ಣನಾತ್ಮಕವಾಗಿ ವರ್ಣಿಸುವ ಕವಿಯಾಗಿದ್ದಾರೆ. ಇವರು ಚಿಕ್ಕಂದಿನಲ್ಲಿ ಕಂಡ ತಮ್ಮೂರಿನ ಗುಡ್ಡ, ಅದರ ಬದಿಯ ಕಿರುಹಳ್ಳ, ಸುವಿಶಾಲ ಆಲ, ಎಲೆವಳ್ಳಿ ತೋಟ, ಈಶ್ವರನ ಗುಡಿ, ಕಲ್ಲುಕಟ್ಟೆ, ಮಾದರಕೇರಿ, ಕೆಮ್ಮರಡಿ, ಮೊದಲಾದ ನಿಸರ್ಗದ ನಾನಾ ದೃಶ್ಯಗಳನ್ನು, ತಮ್ಮ ನೆನಪಿನಾಳದಿಂದ ಒಂದೊಂದಾಗಿ ಎತ್ತಿ ಕವನೀಕರಿಸಿ, ಓದುಗರ ಮುಂದಿಡುತ್ತಾರೆ. ಅಲ್ಲದೆ, ಬಾಲ್ಯದಲ್ಲಿ ಮನೆ ಹಿರಿಯರ ಕಣ್ಣು ತಪ್ಪಿಸಿ ಆಡಿದ ಗುಂಡು, ಗಜಗ, ಚಿಣ್ಣಿಕೋಲು, ಚೆಲ್ಲವತ್ತದಕಾಯಿ, ಬುಗುರಿ, ಮೊದಲಾದುವನ್ನು ಆಡಿದ ನೆನಪು ಕವಿಗೆ ಮರುಕಳಿಸಿದೆ. ಚಿಕ್ಕಂದಿನಲ್ಲಾಡಿದ ಮುಟ್ಟಾಟದ ನೆನಪೂ ಕವಿಗಿದೆ–‘ಬಿಟ್ಟಿಟ್ಟೆ ಬೆಳಗಾತು ತಟ್ಟಿಮನಿ ಹಾಳಾತು, ಹಾಳು ಗೋಡೆಯ ದೆವ್ವ ಬಂದು ಬಡಿತು’, ಎಂದು ಹಾಡುತ್ತ ಆಡಿದ ‘ಕಣ್ಣು ಮುಚ್ಚಾಲೆ ಆಟ,’ ಗೊಂಬೆ ಮದುವೆ ಮಾಡಿದ ಆಟಗಳೆಲ್ಲವೂ, ಕವಿಯ ಸ್ಮೃತಿಯಿಂದ ಜಾರಿ ಹೋಗಿಲ್ಲ. ಲಂಬಾಣಿಗಳ ಉಡುಪು ತೊಡಪುಗಳಿಗೆ ಮನಸೋತ ಕಣವಿಯವರು, ಎಲ್ಲ ಬಾಲಕರಂತೆ, ‘ಲಂಬಾಣಿ ಬಿಲ್‌ಗಿಲ್ ನಾಬಂದೆ ನಿಲ್‌ನಿಲ್ ಕಟಗಿ ಹೊರಿ ಚೆಲ್‌ಚೆಲ್’ ಎಂದು ಅವರನ್ನು ಅಣಕಿಸಿ, ಆನಂದ ಪಟ್ಟುದುಂಟು ; ಸುಡುಗಾಡ ಸಿದ್ಧನನ್ನು ಕಂಡುದುಂಟು, ಆತನಿಗೆ ಹೆದರಿ ಅತ್ತದ್ದೂ ಉಂಟು. ಜೋಳದ ಪಯಿರಿನಲ್ಲಿ, ಅಕ್ಕಡಿಯ ಬಳ್ಳಿಗಳ ಸಾಲಿನಲ್ಲಿ ಹಾಯ್ದು, ಬನ್ನಿಗಿಡದಡಿಯಲ್ಲಿ ಬುತ್ತಿಯುನ್ನುಂಡು, ತತ್ರಾಣಿಯಲ್ಲಿಯ, ನೀರು ಕುಡಿದ ಕಣವಿಯವರಿಗೆ ಜನಪದದ ದಟ್ಟವಾದ ಅನುಭವವಿದೆ. ಇವರು ಹಲವಾರು ಬಾರಿ ಹೊಲ, ಗದ್ದೆ, ತೋಟ-ಪಟ್ಟಿಗಳಿಗೆ ಹೋಗಿ ಬಂದವರಿರಬೇಕು. ಆದರೆ ಈಗ ಕಣವಿಯವರು, ಯಾವುದೋ ಊರಿಗೆ, ‘ಕೊಲ್ಲಾರಿಚಕ್ಕಡಿ’ಯಲ್ಲಿ ಹೊರಟಂತೆ ಕಾಣುತ್ತದೆ. ಆ ಸಂದರ್ಭದಲ್ಲಿ ತಮಗಾದ ಅನುಭವವನ್ನು ಕಾವ್ಯಾತ್ಮಕವಾಗಿ ಹೇಳುವ ರೀತಿಯನ್ನು ನೋಡಿ–

> ‘ಕೊಲ್ಲಾರಿ ಚಕ್ಕಡಿಗೆ ಹೂಡಿರುವ ಎತ್ತುಗಳ
> ಕೊರಳ ಗೆಜ್ಜೆಯ ಸರವು ಟಿಂಟಣಿಸಲು
> ಮೂಕೆಯಲಿ ಕುಳಿತಿರುವ ಆಳು ಲಾವಣಿ ಹಾಡೆ
> ಕಿವಿಗೊಟ್ಟು ಕೇಳುವವು ಬಾನು-ಬಯಲು

ಈ ಅನುಭವ ಉಂಟಾದದ್ದು ಬಾಲ್ಯದ ಕಣವಿಯವರಿಗೆ ; ಅದು ಕಾವ್ಯರೂಪ ತಾಳಿದ್ದು ಕವಿ ಕಣವಿಯವರಿಂದ. ಅಲ್ಲದೆ, ಇವರು ಹಲವಾರು ಜನಪದದ ರಾಜರಾಣಿ ಕತೆ, ದೇವ-ದೆವ್ವಗಳ ಕತೆ, ಸೆಟ್ಟಿ ಕತೆ, ಕಟ್ಟುಕತೆಗಳನ್ನು ತಲೆಯಾಡಿಸಿ, ಕೇಳಿದ್ದಾರೆ. ಮಳೆಯಲ್ಲಿ ತೋಯಿಸಿಕೊಂಡು, ನೀರಾಟ ಆಡಿದ್ದಾರೆ ; ಕಮ್ಮಾರ ಮಾನಪ್ಪ, ಆತನ ಕೆಂಗುಲಿಮೆ ತಿದಿ, ಕುಂಬಾರ ಮಲ್ಲಣ್ಣ, ಆತನ ತಿಗುರಿ, ಅವನ ಹೆಂಚಿನ ಮನೆಗಳೆಲ್ಲವೂ ಕಣವಿಯವರಿಗೆ ಗೊತ್ತು.

ಕಣವಿಯವರಿಗೂ, ಜನಪದದ ಬದುಕಿಗೂ ಇರುವ ಗಾಢವಾದ ಸಂಬಂಧವನ್ನು ಕೆಳಗಿನ ಒಂದೇ ಒಂದು ನುಡಿಯಿಂದ ತಿಳಿದುಕೊಳ್ಳಬಹುದು.

ಕೆರವು ಹೊಲಿಯುವ ದೀನದಲಿತ ಮಾದರ ದುರಗ
'ಮುಟ್ಟಬೇಡಿರಿ ತಂದೆ'—ಎಂಬ ನುಡಿಗೆ
ನನ್ನೆದೆಯು ಕಸವಿಸಿಯು ಹೇಳತೀರದು ಆಗ
ಬಾಲಕರಿಗೆಲ್ಲಿಯದೊ ಮಡಿ ಮೈಲಿಗೆ

ಇಲ್ಲಿಯ ಗೆರೆ ಎಳೆದ ಸಾಲು ಬಾಲಕ ಕಣವಿಯವರಿಂದ ಬರಲಿಕ್ಕೆ ಸಾಧ್ಯವೇ ಇಲ್ಲ ; ಅದು ಕವಿ ಕಣವಿಯವರ ಬಾಯಿಂದ ಬಂದ ಮಾತು. ಅದೇನೆ ಇದ್ದರೂ ಕಣವಿಯವರಿಗೂ ಮತ್ತು ಜನಪದಕ್ಕೂ ಒಂದು ರೀತಿಯ ಬೆಸುಗೆ ಇದ್ದುದು ಮಾತ್ರ ಸುಳ್ಳಲ್ಲವೆಂಬುದು ಈ ಮೇಲಿನ ನುಡಿಯಿಂದ ವಿದಿತವಾಗುತ್ತದೆ.

ಹಾಗೆಯೇ, ಕಿಸೆತುಂಬೆಲ್ಲ ಕಾರಿಬೋರೆಯ ಹಣ್ಣು, ಇಪ್ಪಿಚಪ್ಪರಬದನೆ, ಮತ್ತು ಮಾಂಗಾಯ್ಗಳನ್ನು ತುಂಬಿಕೊಂಡು, ಕೊಳಲನೂದುತ, ಮಹಿಷವಾಹನನಾಗಿ, ಬರುವ ದನಕಾಯುವ ನಿಂಗ, ಒಡೆದ ಕನ್ನಡಿ, ಮುರಿದ ಮೊಂಡುಗತ್ತಿಯ ಕೆಲಸಗಾರ ಕೆಂಚ– ಮೊದಲಾದವರನ್ನೆಲ್ಲ ಕಣವಿಯವರು ಕಂಡಿದ್ದಾರೆ. ಅಲ್ಲದೆ ಇರುಳಿನಲ್ಲಿ, ಕಂದೀಲು ಬೆಳಕಿನಲ್ಲಿ, ಕೊಡೆಹಿಡಿದು, 'ಸುವ್ವಿಬಾ ಚೆನ್ನಯ್ಯ, ಸುವ್ವಿಬಾ ಲಿಂಗಯ್ಯ, ಸುವ್ವಿ ಬಾ' ಎನ್ನುತ್ತ ಸಾರುತ್ತ ಬರುವ ಸಾರುವಯ್ಯನ ಕಂಡ ನೆನಪು ಕಣವಿಯವರಿಗೆ ಮರುಕಳಿಸಿದೆ.

ಹೀಗೆ, ಕಣವಿಯವರು ತಮ್ಮ ಬಾಲ್ಯದ ಬಾಳಸಂಪುಟದಲ್ಲಿ, ಕಂಡುಂಡ ಜನಪದ ಪರಿಸರವನ್ನು, ಕವಿ ಕಣವಿಯವರು ಮರುಕಳಿಸಿ ನೆನೆದುದೇ, ಅಳಿಸಲಾರದ ಮಧುರ ಭಾವಗೀತವಾಗಿ 'ಭಾವಜೀವಿ'ಯಲ್ಲಿ ಹೊಮ್ಮಿದೆ. ಅದಕ್ಕಾಗಿ ಬಾಲ್ಯ ಜೀವನಕ್ಕೆ ಕಣವಿಯವರು ದೊಡ್ಡ ಮಹತ್ವವನ್ನೇ ನೀಡಿದ್ದಾರೆ.

'ಬಾಳ ಸಂಪುಟದಲ್ಲಿ ಬಾಲ್ಯವೆಂಬುದದೊಂದು
ಅಳಿಸಲಾರದ ಮಧುರ ಭಾವಗೀತ ;
ಮುಂದೆ ಬಹ ಅನುಭವದ ಕಹಿ ಫಲವನುಣ್ಣುತಿರೆ
ಮರುಕಳಿಸಿ ನೆನೆಯುವುದೆ ನಮ್ಮ ಸ್ವಾರ್ಥ; (ಭಾವಜೀವಿ)

ಕವಿ ಕಣವಿಯವರಿಗೆ, ಪ್ರಕೃತಿ ಮಡಿಲಲ್ಲಿ ಬದುಕುವ ಒಕ್ಕಲು ಮಕ್ಕಳ, ಸಂಸ್ಕೃತಿಯ ಪರಿಜ್ಞಾನವೂ ಚೆನ್ನಾಗಿ ಇದ್ದಂತೆ ತೋರುತ್ತದೆ. ಇವರ 'ಎರಡು ದಡ'ದ 'ಸಂಕ್ರಮಣ' ಮತ್ತು 'ನೆಲದಮಕ್ಕಳಿಗೆ ನಲ್ವಾಡು'–ಗೀತರೂಪಕಗಳೇ, ಮೇಲಿನ ಮಾತಿಗೆ ಸಾಕ್ಷಿ ನುಡಿಯುತ್ತವೆ. 'ಸಂಕ್ರಮಣ' ಕವಿತೆಯಲ್ಲಿ ನಿವೇದಕ, ಭೂಮಿ, ರೈತರು, ಅವರ ಹೆಂಡಂದಿರು ; ಕವಿ, ನದಿ ಮತ್ತು ಪಕ್ಷಿ– ಇವೆಲ್ಲದರ

ಒಂದು ದೊಡ್ಡ ಮೇಳವೇ ಮಿಳಿತಗೊಂಡಿದೆ. ಸಂಕ್ರಮಣ ಕಾಲದಲ್ಲಿಯ, ರೈತನ ಬದುಕಿನ ಹಲವಾರು ಮಗ್ಗುಲುಗಳ, ಚಿತ್ರವನ್ನು ಕವಿ ಇಲ್ಲಿ ಚಿತ್ರಿಸುತ್ತಾರೆ. ಗೋಧಿ ಬೆಳಸಿ, ಕುಸುಬೆ, ಕೈಯೆತ್ತರ ಬೆಳೆದ ಕಬ್ಬು, ಕುಸುರಿನಂಥ ಕುಬುಸ, ನವಿಲುಕುಣಿತ, ಹಸಿರುಹತ್ತಿ ಹೊಲ–ಇತ್ಯಾದಿ ವಿವರಗಳನ್ನೊಳಗೊಂಡ, ಬೆಳವಲನಾಡಿನ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ ಕವಿ ಕಣವಿಯವರು.

ಒಬ್ಬ ರೈತನ ಹೆಂಡತಿ ಈ 'ಸಂಕ್ರಮಣ' ಕಾಲದಲ್ಲಿ ಹೀಗೆ ಹಾಡುತ್ತಾಳೆ.

ಕುಸುಬೆ ಹೂವ ಕುಸುರಿನಂಥ
ಕುಬುಸ ಕೊಡಿಸುತಾನೆ
....
ಮತ್ತೊಬ್ಬ ರೈತನ ಹೆಂಡತಿ—
ಒಡೆದ ತುಟಿಗೆ ಕಡಲೆಗಿಡದ
ಹುಳಿಯ ತೊಡೆಯುತಾನೆ
ಕಾಯಿ ಸುಲಿದು, ಕಾಳುಮಾಡಿ
ನನಗೆ ತಿನಿಸುತಾನೆ ; ಎಂದರೆ—
ಇನ್ನೊಬ್ಬ ರೈತನ ಹೆಂಡತಿ—
ಕಾಲಪಿಲ್ಲೆ, ಮೂಗುಬಟ್ಟು
ಮಾಡಿಕೊಡಿಸುತಾನೆ
ಜರದಪಟಕ ಸುತ್ತಿಕೊಂಡು
ಹೂವ ಮುಡಿಸುತಾನೆ—ಎನ್ನುತ್ತಾಳೆ.

ಇಂಥ ಹೃದಯ ತಟ್ಟುವ, ವಿವರಗಳನ್ನು ಕೊಡುವುದು ನಾಗರಿಕ ಗಾಳಿ ಸೋಂಕದ ಗ್ರಾಮ ಜೀವನದ, ಆಳವಾದ ಮತ್ತು ಅಷ್ಟೇ ಆತ್ಮೀಯವಾದ ಪರಿಚಯ ಕವಿ ಕಣವಿಯವರಿಗೆ, ಇದ್ದುದರಿಂದಲೇ ಸಾಧ್ಯವಾಗಿದೆ. ಹಾಗೆಯೇ ನೆಲದ ಮಕ್ಕಳಿಗೆ ನಲ್ವಾಡು–ಗೀತರೂಪಕದಲ್ಲಿ, ತುಂಗಭದ್ರಾ ನದಿ, ರೈತ, ರೈತನ ಹೆಂಡತಿ, ರೈತರ ಸಮೂಹ, ಪಶ್ಚಾತ್ತಾಪ ಪಡೆದ ರಾಜಕಾರಣಿ ಮತ್ತು ಕವಿ–ಈ ನಾಲ್ಮೊಗಗಳಿಂದ, ಕಣವಿಯವರು ಗ್ರಾಮಜೀವನದ ಹತ್ತಾರು ಚಿತ್ರಗಳನ್ನು ಕೆತ್ತುವುದರ ಜೊತೆಗೆ, ನಾಡಜೀವನದ, ಹಲವು ಪದರುಗಳನ್ನು ಬಿಚ್ಚುತ್ತಾ ಹೋಗುತ್ತಾರೆ. ಕೊನೆಯಲ್ಲಿ ಕಣವಿಯವರು, ರೈತರಿಗೆ ಮಾರ್ಗದರ್ಶನ ನೀಡುವುದು, ಅವರಿಗೆ ರೈತಾಪಿ ಜನರಲ್ಲಿರುವ ಆಳವಾದ ಅಭಿಮಾನ, ಪ್ರೀತಿಗಳ ದ್ಯೋತಕವೇ ಆಗಿದೆ.

ಒಕ್ಕಲಿಗ ದುಡಿದದ್ದು ದಂಡಕ್ಕೆ ಹೆಂಡಕ್ಕೆ
ಹಂಡಬಂಡರ ಮಾತು ಸುಳ್ಳು ಮಾಡು
....
ನಿನ್ನ ಮನೆಮಠ-ಮಾನ್ಯ, ನಿನ್ನ ಹೊಲ ಧನ-ಧಾನ್ಯ
ನೀ ಬೆಳೆದ ತೆನೆಗಳೇ ಹೊಂಬಾವುಟ :

ನಿನ್ನ ಬಂಡಿಯು ಗಾಲಿಯಲ್ಲಿ ತಿರುಗಿದೆ ಜಗವು
ನಿನ್ನಿಂದಲೇ ದಿಲ್ಲಿ ಮಂತ್ರಿ–ಮಕುಟ
....
ಗಡಿ ಕಾಯ್ದು ಮಡಿದವರು, ಸೀವದಕೆ ದುಡಿದವರು.

ಇತ್ಯಾದಿಯಾದ ಮಾತುಗಳನ್ನು, ರೈತರಿಗೆ ಹೇಳುವ ಶಕ್ತಿ ಕಣವಿಯವರಿಗೆ ಬಂದದ್ದು, ಅವರ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂಬ ವಾಣಿಯ ಪ್ರಭಾವ ದಿಂದಲೇ. ಕವಿತೆಯ ಕೊನೆಯಲ್ಲಿ, ಕವಿ ವಿನಯದಿಂದ ಮತ್ತು ಅಷ್ಟೇ ಪ್ರಾಮಾಣಿ ಕತೆಯಿಂದ, ತಾನು ಅವರಿಂದ ಪಡೆದುದನ್ನು ತಿಳಿಸುತ್ತಾನೆ.

ನಿಮ್ಮ ನುಡಿಯನೆ ಹಿಡಿದು, ಮಿಡಿದು, ಕೇಕೆಯ ಹೊಡೆದು
ಪಡೆದ ಹಾಡಿದು ; ಅಲ್ಲ ಬೇರೆ ಸರಕು.

ಗ್ರಾಮ್ಯ ಜೀವನದ, ಅದರಲ್ಲೂ ಒಕ್ಕಲುಮಕ್ಕಳಿಂದ ಪಡೆದ ಅನುಭವ, ಭಾಷೆ, ವಸ್ತುಗಳೆಲ್ಲವನ್ನೂ, ಕವಿ ಮತ್ತೆ ಅವರಿಗೆ ಸಲ್ಲಿಸುತ್ತಾನೆ. ಇಲ್ಲಿ 'ಕೆರೆಯ ನೀರನ್ನು ಕೆರೆಗೆ ಚೆಲ್ಲುವ' ಕವಿಯ ಹೃದಯ ವೈಶಾಲ್ಯ, ಸಾತ್ವಿಕ ಮನಸ್ಸು–ಬುದ್ಧಿ ಗಳು ವ್ಯಕ್ತವಾಗುತ್ತವೆ.

ಉತ್ತರ ಕರ್ನಾಟಕದ ನೆಲ, ಜಲ ಮತ್ತು ಪ್ರಕೃತಿಗಳಿಂದ ಸ್ಫೂರ್ತರಾದ ಕವಿ ಕಣವಿಯವರು, ಅದರ (ಜನಪದ ಸತ್ವ) ಋಣಭಾರವನ್ನು, ತೀರಿಸಲು ಈ ಕೆಳಗಿನಂತೆ ಪ್ರಯತ್ನಿಸುತ್ತಾರೆ.

ನೆಲದಲ್ಲಿ ಹೊಲ ಹಸಿರು, ಕಾಯಿತೆನೆಗಳ ಕುಸುರು
ದುಡಿವ ಬಡವನ ಹೊಟ್ಟೆ ತಣ್ಣಗಿರಲಿ
ಗಿರಣಿ ಕಾರ್ಖಾನೆಗಳ ಕರ್ಕಶದ ತರ್ಕಕ್ಕೆ
ಗರತಿ ಹಾಡಿನ ಮಧುರ ಸಂಪರ್ಕವಿರಲಿ

(ಹೊಸ ಬಾಳಿನ ಯೋಜನೆ ; ನೆಲಮುಗಿಲು)

ಎತ್ತು, ಚಕ್ಕಡಿ, ಕಾರು, ಬಸ್ಸು, ಟಾಂಗಾ, ರೈಲು
ಬೋಟು, ಹಡಗು, ವಿಮಾನ, ಚಂದ್ರಯಾನ
ಅಂಚೆ, ಬಾನುಲಿ, ತಂತಿ ಇಡಿ ಪ್ರಪಂಚದ ಹಂತಿ
ನುರಿಸಿ ಹೊಂದಿಸಿಕೊಳಲಿ ನವಜೀವನ

(ಹೊ. ಬಾ. ಯೋ. : ನೆಲಮುಗಿಲು)

ಇಂಥ ಮನೋಧರ್ಮ, ನಮ್ಮ ಆಧುನಿಕ ಕನ್ನಡ ಕವಿಗಳಿಗಿರುವುದರಿಂದಲೇ, ಜನಪದ ಸಾಹಿತ್ಯ, ತನ್ನ ಸತ್ವವನ್ನು, ಹೊಸಗನ್ನಡ ಕಾವ್ಯದಲ್ಲಿ ಇಂದಿಗೂ ಉಳಿಸಿ ಕೊಂಡು ಬಂದಿದೆ, ಬೆಳೆಸಿಕೊಂಡು ಬಂದಿದೆ.

ಹೀಗೆ ಜಾನಪದ ಸರ್ವಾಂಗ ಬದುಕಿನ ಸಮಗ್ರ ಅನುಭವ ಕಣವಿಯವರಿಗಿರುವುದರಿಂದ, 'ಹೊಡೆಹಾಯ್ದು ಹಿರಿಯಬದುಕು' ಇವರದಾಗಿದೆ. ಅಂತೆಯೇ, ಇವರ ಸಾಹಿತ್ಯವೂ ಹೊಡೆಹಾಯ್ದು ಸಿಗುಚಿ ನಿಂತಿದೆ.

ಕವಿ ಕಣವಿಯವರು, ತಮ್ಮ ಈವರೆಗಿನ ಎಲ್ಲ ಕವನಗಳಲ್ಲೂ ಒಂದಿಲ್ಲ ಒಂದು ರೀತಿಯಲ್ಲಿ ಜನಪದ ಸತ್ವ-ಸಾರಗಳಿಂದ, ಪ್ರೇರಿತರಾಗಿ-ಅದನ್ನು ತಮ್ಮ ಕಾವ್ಯದ ಅಭಿವ್ಯಕ್ತಿ ಕ್ರಿಯೆಯಲ್ಲಿ ಅಳವಡಿಸಿದ್ದಾರೆ. ಹಳ್ಳಿಗರ ಮಧ್ಯದಲ್ಲಿಯೇ ಹುಟ್ಟಿದ ಇವರಿಗೆ ಹಳ್ಳಿಯ ಸಂಸ್ಕೃತಿಯೇ ಕಾವ್ಯದ ಕೇಂದ್ರ ಬಿಂದುವಾಗಿದ್ದು, ಹೊಸಗನ್ನಡದ ಲಯ-ಗತಿಗಳು ಜೊತೆಯಾಗಿದ್ದು, ತಂತಾನೆ ಹಿಗ್ಗುತ್ತಾ ಹಿಗ್ಗುತ್ತಾ, ಕಾವ್ಯದ ಸುಂದರ ಸೃಷ್ಟಿಯಾಗಿದೆ. ಹೀಗಾಗಿ ಹಳ್ಳಿಗರಲ್ಲಿ ಒಬ್ಬರಾಗಿ ಹುಟ್ಟಿದ ಕಣವಿಯವರಿಗೆ, ಜನಪದ ಪರಿಸರ ಮೀರಿ ಬರೆಯಲು ಸಾಧ್ಯವೇ ಇಲ್ಲ. ಬೇಂದ್ರೆ ಅವರಂತೆ, ಇವರ ಕಾವ್ಯ ಸಂಪೂರ್ಣವಾಗಿ ಜಾನಪದ ಆವರಣದಲ್ಲಿಯೇ ಸೃಷ್ಟಿಯಾಗಿರದಿದ್ದರೂ, ಜನಪದ ಪರಿಸರವನ್ನು ಅಲ್ಲಲ್ಲಿ ನೆನಪಿಗೆ ತರುತ್ತದೆ. ಇದು ಜೀವಂತ ಕವಿಯ, ಜೀವಂತಗುಣ ; ಜೀವಂತಗತಿ.

ಕವಿ ಕಣವಿಯವರು, ಉತ್ತರ ಕರ್ನಾಟಕದ ಜನಪದದಿಂದ ಬಹಳಷ್ಟು ಪ್ರಭಾವಿತರಾದದ್ದು ಗಮನಾರ್ಹ. ಇವರ ಭಾಷಾವೈಖರಿಯಂತೂ ಅಚ್ಚ ಉತ್ತರ ಕರ್ನಾಟಕದ್ದು. ಪರಚಿಪಚಡಿ, ಕುದಿಸಿಗುಗ್ಗರಿ, ಕುಟ್ಟಿಚಟ್ನಿ, ಲಟ್ಟಿಸಿದ ಹಪ್ಪಳ, ಇಟ್ಟುಸಂಡಿಗೆ, ಒಗ್ಗರಣೆ, ಕಮಾಯಿ, ಹುರಿಹಂಚು, ಧುಮುಗುಟ್ಟು, ತದ್ರೂಪ, ಮೂಗುದಾಣ, ಬಿಳಿಜೋಳದ ರೊಟ್ಟಿ, ಗುದುಮುರಿಗೆ, ಪಿಂಡುಗರಾಳಿ, ಕೊಲ್ಲಾರಿ ಬಂಡಿ, ಬಾರಕೋಲು, ಪಿಂಡೆ, ರಂಟೆ-ಕುಂಟೆ-ಕುಳ, ಕುಡ, ಹಂತಿ, ಒಕ್ಕಿ, ಮೂಡಲ ಹೋರಿ, ಹಕ್ಕಲು ಮುಕ್ಕಳಿಸು, ಪಾದಗಟ್ಟೆ, ಹೆಡಮುರಿಗೆ. ಹುಲುಗಲ, ಹುಡದಿ, ಮಾಸು, ಮುಸಲತ್ತು, ಉಸಾಬರಿ, ಪರಲು, ನಿಜಾಯಿಸು-ಮೊದಲಾದ ಉತ್ತರ ಕರ್ನಾಟಕದ ಜನಪದ ಶಬ್ದಗಳಲ್ಲದೆ. ನುಡಿಗಟ್ಟು, ಕೂಡುನುಡಿ ಮತ್ತು ಹಲವಾರು ರೂಢಿಮಾತುಗಳನ್ನು ಕಣವಿಯವರು ಹದವರಿತು, ಬಹಳ ಸಮರ್ಥವಾಗಿ, ತಮ್ಮ ಕಾವ್ಯದಲ್ಲಿ ದುಡಿಸಿಕೊಳ್ಳುತ್ತಾರೆ. ಅಡ್ಡಾತಿಡ್ಡಿ ಗಡಿಕೊರೆ ಅಡಾಡ್ತಅಡವಿ ಬಿದ್ದ, ಕಣ್ಣಿಗೆ ಕತ್ತಲುಗಟ್ಟು, ಬೆಂದುಹುರಪಳಿಸು, ಒಡಲುರಿತಾಪ, ಹೊತ್ತುಹೊರೆ, ಕೆಮ್ಮಿಕ್ಯಾಕರಿಸು, ಜಾಲಗುಂಡಾಡಿಸು, ಹದ್ದುಗಿಹಾರು ; ಠಕ್ಕಮುಕ್ಕಿ, ಸಳಮಳ, ಕೀಸರುಬಾಸರು, ಕಿರಿಚುತಿರಿಚು, ಹಸಬಿಸಿ, ಹಂಡಬಂಡ, ಅಬಡಾಜಬಡಾ, ಅಹು ಅಹುತ, ಸುಗ್ಗುಸುರಿ, ಹಾಲುಜೇನು, ಮಟಮಟ, ಬಣಬಣ, ಪಿಳಿಪಿಳಿ, ದಬದಬ, ಚಕಚಕ, ಚಿಲಿಪಿಲಿ, ಪಟಪಟ. ಕಲಕಲ, ಕಿಲಕಿಲ, ಮಿಣಿಮಿಣಿ, ಸೆಳತಸೆಳತ, ಕಳಕಳಿಸಿ, ಥಳಥಳಿಸಿ, ದುಡುದುಡು, ಕಟಕಟೆ, ಚಿಣಿಚಿಟಲ್ (ಉರಿಸಪ್ಪಳ), ಗಿಗಿಗಿ, ಬಣಬಣ, ಒಜ್ಜಬರಿ, ಹಾಡದೇಪಾಡದೇ. ಕುಲುಕುಲು, ತರತರ, ಮಿರಿಮಿರಿ, ಎಳ್ಳುಎಣ್ಣೆ, ಹಳ

ಬರುಹೊಸಬರು, ಮಕ್ಕಳುಮರಿ, ಹಳ್ಳಿದಿಳ್ಳಿ, ಕಳ್ಳುಬಳ್ಳಿ, ಒನಪು ಒಯ್ಯಾರ, ಮಾನಮರ್ಯಾದೆ(?) ಮಾತಮಾನ್ಯ, ಧನಧಾನ್ಯ, ಗರ್ದಿಗಮ್ಮತ್ತು, ದಬಾಯಿಸಿ ನಿಭಾಯಿಸಿ, ಸಳಸಳ, ಜುಳುಜುಳು, ರಸರಸ, ತಪತಪ, ನೆನೆನೆಸೆ, ಬಿಸಿಬಿಸಿ, ಗುಟುಗುಟು, ತಟತಟ, ಕಚಲ್‌ಪಚಲ್, ಜುಣುಜುಣು, ಕತಕತ, ಬಣಬಣ, ಒಣಒಣ, ತೆನೆತೆನೆ, ಸೇಸೆಳಕು, ಭರಭರ, ಪಚಡಿಕಿಚಡಿ, ಕುರುಕುರು, ಗಿಮಿಗಿಮಿ, ಗದಗದ, ಗಳಗಳ, ಜಳಜಳ, ದುಡ್ಡುದುಗ್ಗಾಣಿ, ಧಿಮಿಧಿಮಿ, ಸರಸರ, ಪುದುಪುದು, ಕಚಪಚ; ಏರಿಸಿಹಿಡಿ ನಡೆಯಾರಭಿಡೆ, ಛೀ ಹಚಾ, ಗಸ್ತಿಹೊಡೆ, ಮಟಮಟಮಧ್ಯಾಹ್ನ, ಗದಗದ ನಡುಗಿ, ನುಚ್ಚುನೂರಾಗಿ, ನುಚ್ಚುನೂರ್ಕಡಿ, ಜಕ್ಕಿಸಿಹೋಗು, ಗೆದ್ದೆತ್ತಿನಬಾಲ, ಗುಮ್ಮನಗುಸುಗ, ಸಳಮಳಕುದಿಸಿ, ಗುರ್ರೆನುವ ಬಾವುಗ, ಕತಕತ, ಕುದಿಸು, ಹಲ್ಲು ಕಿಸ್ತು, ಸಕ್ಕರೆವಾಗೀನು–ಇತ್ಯಾದಿಯಾದ ನುಡಿಗಟ್ಟು, ಕೂಡುನುಡಿ ಮತ್ತು ಲೋಕ ರೂಢಿ ಮಾತುಗಳನ್ನು, ಕಣವಿಯವರು, ಕಾವ್ಯದಲ್ಲಿ ಯಥೇಚ್ಛವಾಗಿ ಬಳಸು ವುದರಿಂದ, ಕಾವ್ಯದ ಸಹಜತೆ, ಅದರ ಅರ್ಥಗಾಂಭೀರ್ಯಗಳು ಹೆಚ್ಚಿವೆ, ಮತ್ತು ಅವರ ಕಾವ್ಯದ ವ್ಯಂಗ್ಯ–ವಿಡಂಬನೆಗಳಿಗೆ ಒಂದು ಮೊನಚು-ಹರಿತ ಉಂಟಾಗಿದೆ.

ಇಷ್ಟಲ್ಲದೆ, ಕಣವಿಯವರು, ಹಲವಾರು ಗಾದೆಮಾತುಗಳನ್ನು, ಒಗಟು ಮೊದಲಾದ ಜನಪದೀಯ ಅಂಶಗಳನ್ನು ತಮ್ಮ ಕಾವ್ಯದುದ್ದಕ್ಕೂ ಬಳಸುತ್ತಲೇ ಹೋಗುತ್ತಾರೆ. ಉದಾಹರಣೆಗೆ ಕೆಲವನ್ನು ನೋಡಬಹುದು.

"ಹಿಡಿದಿಹರೆ ಹಿಡಿತುಂಬ, ಬಿಟ್ಟಿಹರೆ ಜಗತುಂಬ" (ಗೊಮ್ಮಟೇಶ; ಎರಡು ದಡ) ಎನ್ನುವ ಕಣವಿ ಅವರ ಮಾತು, ಜನಪದದ 'ಹಿಡದರ ಹಿಡಿತುಂಬ, ಬಿಟ್ರ ಮನಿತುಂಬ–ಎನ್ನುವ ಒಗಟಿನಿಂದಲೇ ಪ್ರೇರಣೆಗೊಂಡಿದ್ದರೆ ಆಶ್ಚರ್ಯವೇನಿಲ್ಲ. (ಉತ್ತರ ಬೆಳಕು)

'ಜೋಗತಿಯಾದವಳಂತೆ ಮುಪ್ಪಾದ ಸೂಳೆ' (ಎರಡುದಡ) ಎನ್ನುವ ಇವರ ಇನ್ನೊಂದು ಮಾತು, 'ಜೋಗತಿ ಮುಪ್ಪಾಗಿ ಸೂಳಿ ಆದ್ಹಂತ'–ಎನ್ನುವ ಗಾದೆ ಯಿಂದಲೇ ಸ್ಫೂರ್ತಿಪಡೆದಿದೆ. 'ಮಳೆ ಬಂದರೆ ಮಗ ಉಂಡರೆ ಕೇಡೆ?' (ಎರಡು ದಡ) ಎನ್ನುವ ಮಾತು ಜನಪದದ 'ಮಗ ಉಂಡ್ರೆ ಕೆಟ್ಟಿಲ್ಲ; ಮಳಿ ಬಂದ್ರ ಕೆಟ್ಟಿಲ್ಲ'- ಎಂಬ ಗಾದೆಯಿಂದಲೇ ಬಾದುದು. ಹಾಗೆಯೇ 'ಹೊಟ್ಟೆಯಂಥ ವೈರಿಯಿಲ್ಲ, ರೊಟ್ಟಿಯಂಥ ಮಿತ್ರರು' (ಕುಟುಂಬ ಸೌಖ್ಯದ ಆಖ್ಯಾನ : ನಗರದಲ್ಲಿ ನೆರಳು); 'ಗಾಳಿಗುದ್ದಿ ಮೈ ನೋಯಿಸಿ;' 'ಹತ್ತು ಹಡೆವುದಕ್ಕಿಂತ ಒಂದು ಮುತ್ತು ಹಡೆವುದು ಲೇಸು', 'ತಾಳುವ ತಾಕತ್ತಿದ್ದರೆ ಬಾಳ', 'ಗಡ್ಡಕ್ಕೆ ಬೆಂಕಿ ಹತ್ತಿದ ಮೇಲೆ ಬಾವಿಯು ತೋಡುವ ಜಾಣ' (ಕುಟುಂಬ ಸೌಖ್ಯದ ಆಖ್ಯಾನ, ನಗರದಲ್ಲಿ ನೆರಳು.) 'ಒಕ್ಕಲಿಗ ದುಡಿದದ್ದು ದಂಡಕ್ಕೆ ಹೆಂಡಕ್ಕೆ (ಎರಡುದಡ–ನೆಲದ ಮಕ್ಕಳಿಗೆ ಸಲ್ವಾಡು) 'ಬೆಳ್ಳಿ

ಗಿದ್ದದ್ದೆಲ್ಲ ಹಾಲೆಂದು ಕುಡಿದೆವ್ರೋ' (ಹಂಸಕ್ಷೀರ; ನೆಲಮುಗಿಲು) 'ತುಂಬಿದಕೊಡ ತುಳುಕಿತೆಂಬರೆ' (ಬಸವಣ್ಣನವರಿಗೆ ಬಾಷ್ಪಾಂಜಲಿ : ಆಕಾಶಬುಟ್ಟಿ) ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿದು (ಕಾಲನಿಲ್ಲುವುದಿಲ್ಲ; ಎರಡುಮಡ)— ಮೊದಲಾದವುಗಳು ಜನಪದದಲ್ಲಿ ಪ್ರಚಾರದಲ್ಲಿರುವ ಗಾದೆಮಾತುಗಳೆಂದು ಬೇರೆ ಹೇಳಬೇಕಾಗಿಲ್ಲ. "ಹೊರಿಸಿಕೊಂಡು ಹೋದ ನಾಯಿ, ಮೊಲನೇನ ಹಿಡಿವುದಯ್ಯಾ" (ಸಾಧನೆ; ನೆಲಮುಗಿಲು) ಎನ್ನುವ ಮಾತನ್ನು, ಕಣವಿಯವರು, ಶರಣರಿಂದ ತೆಗೆದುಕೊಂಡಿದ್ದದರೂ, ಅದು ಮೂಲತಃ ಜನಪದ ಜನಾಂಗದಲ್ಲಿ ಪ್ರಚಲಿತವಿದ್ದುದೇ ಆಗಿದೆ.

ಕಣವಿಯವರು, ಉತ್ತರ ಕರ್ನಾಟಕದ ವೇಷ ಭೂಷಣಗಳಾದ, ಇಳಕಲ್‌ಸೀರಿ, ಜರದಸೆಲ್ಲೇ, ಜರದಪಟಕ, ಬಗಲಗಸಿ ಅಂಗಿ, ಕುಪ್ಪುಸ, ಮೂಗಬಟ್ಟು—ಕಾಲಪಿಲ್ಲೆ, ಮೊದಲಾದವುಗಳನ್ನು ತಮ್ಮ ಕಾವ್ಯದಲ್ಲಿ ಉಲ್ಲೇಖಿಸುತ್ತಾರೆ.

ಅಲ್ಲದೆ, 'ಕಿಳ್ಳಿಕ್ಯಾತ' (ಜನಪದ ಗೊಂಬೆಯಾಟದ ಸೂತ್ರಧಾರ) ; 'ಪಣತಿ' (ಉತ್ತರ ಕರ್ನಾಟಕದ ವಿಶೇಷ ದೀಪ ಉರಿಸಲು ಉಪಯೋಗಿಸುವ ವಸ್ತು) ಅಡುಪು (ನಾಯಿಗೆ ಹತ್ತುವ ಒಂದು ಚರ್ಮರೋಗ); 'ಪೌಳಿ' (ಗುಡಿಯ ಪ್ರಾಕಾರ; ಸವದತ್ತಿ ಎಲ್ಲಮ್ಮ ದೇವಸ್ಥಾನದಲ್ಲಿ ಕಾಣಬಹುದು) ; 'ನಿನ್ನಾಲ್ಕುಂಧೋ' (ಎಲ್ಲಮ್ಮನ ಭಕ್ತರು ಉಗ್ಗಡಿಸುವ ನುಡಿ) ರಣಹಲಗೆ ; ಮುಪ್ಪಳಿ. (ಜನಪದ ಚರ್ಮವಾದ್ಯಗಳು) ಹುಡತಂತು (ಕಬ್ಬಡಿ ಆಟ), 'ಸೂತ್ರದ ಗೊಂಬೆ' (ಜನಪದ ಕಲೆ) 'ಹಚ್ಚೆ' (ಜನಪದ ಕಲೆ) 'ರಂಗವಲ್ಲಿ' (ಜನಪದ ಕಲೆ), 'ಕೇದಿಗೆ' (ಜನಪದ ಹೂವು) 'ನಸುಗುನ್ನಿಕಾಯಿ, ಮದುಗುಣಿಕೆ' (ಜನಪದ ವೈದ್ಯಕ್ಕೆ ಸಂಬಂಧಿಸಿದ ಹೂವುಗಳು) 'ತೂಗಂತೊಟ್ಟಿಲವಾಗಿ ಬೆಳ್ಳಿ ಬಟ್ಟಲವಾಗಿ' : (ಸಾರುವಯ್ಯನ ಹರಕೆ ; ಹೆಳವರ ಹರಕೆಯೂ ಹೌದು). 'ಬುಡಬುಡಿಕೆ' (ಜನಪದ ಕಲಾವಿದನ ವಾದ್ಯ) : ಮೂಡಲಹೋರಿ (ಒಂದು ಜಾತಿಯ ಉತ್ತರ ಕರ್ನಾಟಕದ ಪ್ರಸಿದ್ಧ ಹೋರಿ) 'ಅವಲು ಬವಲು ಕಂಚೀಬವಲು, ಇವರ ಬಿಟ್ಟವರಾರು' (ಚಿಕ್ಕಮಕ್ಕಳು ಮುಟ್ಟಾಟ ಆಡುವಾಗ, ಹೀಗೆ ಹೇಳುತ್ತಾರೆ.('ಬಯಲಾಟದ ವೇಷ ಕಳೆದು ಬೆಳಗು ಬರಲು ಮರೆದವು' (ಯುಗ ಯುಗದ ಹಾಡು: ನೆಲಮುಗಿಲು) ಇತ್ಯಾದಿ ಅಂಶಗಳೆಲ್ಲವನ್ನೂ ಕಣವಿಯವರು ಪ್ರಸ್ತಾಪಿಸುತ್ತಾರೆ. ಒಮ್ಮೊಮ್ಮೆ, ಇವರು ಥೇಟ ಜನಪದವನ್ನು ಬರೆಯುತ್ತಾರೇನೋ ಅನ್ನಿಸುತ್ತದೆ.

ಕಾರ ಮಳೆಯು ; ಕಪ್ಪಾತ ಮಳೆಯು ;
ಸುರಿಮಳೆಯು ; ಸುರಿಮಳೆಯು (ನೀರು ಹರಿದಿದೆ ನಿರಾತಂಕ ; ನೆಲ ಮುಗಿಲು)

ಎನ್ನುವ ಸಾಲುಗಳು —ಚಿಕ್ಕ ಮಕ್ಕಳ

'ಕಳ್ಳಿ, ಮಳ್ಳಿ
ಕಪಾಟ ಮಳ್ಳಿ
ಬಾರಲೆ ಮಳೆಯೆ
ಸುರಿಯಲೆ ಮಳೆಯೆ

ಶಿಶು ಪ್ರಾಸವನ್ನು ಅನುಕರಿಸಿಯೇ ಹುಟ್ಟಿವೆ ಎಂಬುದರಲ್ಲಿ ಸಂಶಯವೇ ಇಲ್ಲ.

ಕಣವಿಯವರು ತಮ್ಮ ಕಾವ್ಯದಲ್ಲಿ, ಅಲ್ಲಲ್ಲಿ ಬಯಲಾಟದ ಸಂಭಾಷಣೆಯನ್ನೂ ಅನುಸರಿಸುತ್ತಾರೆ. ಇದಕ್ಕೆ ಒಂದು ಉದಾಹರಣೆ ನೋಡಿ :

ತಾವು ಬಂದರದಾರು ? ನಾಮಾಂಕಿತವೇನು ?
ಒಡನುಡಿವಿರಾ ಸ್ವಾಮಿ—ಇವ ಸಾರಥಿ
ಹೇಳುತ್ತೇನೆ ಕೇಳು, ಅದೇನಿರುವುದು ಹೇಳು,
ಬೆಳತನಕ ಈ ಭೂಪರೊಂದೇ ರೀತಿ (ಹೊಸಬಾಳಿನ ಯೋಜನೆ : ನೆಲಮುಗಿಲು)

'ಸಾರಥಿ' ಮತ್ತು ಬಯಲಾಟದ ಇತರ ಪಾತ್ರಗಳ ನಡುವಿನ ಸಂಭಾಷಣೆಯೇ ಇದು.

'ಮಂತ್ರ ಮಾಟಗಳಿಂದ ಮಾವು ಕಾಯಾಗುವುದೇ ?' (ಹೊಸ ಬಾಳಿನ ಯೋಜನೆ : ನೆಲಮುಗಿಲ) ಎನ್ನುವ ಕಣವಿಯವರ ಮಾತು ಜನಪದ ಆಶಯವನ್ನು ಪ್ರಶ್ನಿಸಿದೆ. ಮಂತ್ರ ಮಾಟಗಳಿಂದ ಮಾವು ಕಾಯಾಗುವುದು, ಇದ್ದುದಿದ್ದ ಹಾಗೆಯೇ ಅದು ಮರದಿಂದ ತಟ್ಟನೆ, ಉದುರುವುದು—ಜನಪದ ಅದ್ಭುತ ಕಥೆಗಳ ಆಶಯವಾಗಿದೆ; ಇದನ್ನು ಬಲ್ಲರು ಕವಿಗಳು.

ಹೀಗೆಯೇ, ಕಣವಿಯವರ ಕಾವ್ಯದಲ್ಲಿ, ಜನಪದಸತ್ವ, ಯಾವ ಯಾವ ರೀತಿಯಲ್ಲಿ, ಯಾವ ಯಾವ ರೂಪದಲ್ಲಿ ಕಂಡುಬರುತ್ತದೆ ಎನ್ನುವುದಕ್ಕೆ ಹತ್ತಾರು ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ಇವರ ಕಾವ್ಯದ ಜನಪದ ಸತ್ವ ನಿಚ್ಚಳವಾಗಿ, ಕಣ್ಣಿಗೆ ಹೊಡೆಯುವಷ್ಟು, ಪರಿಣಾಮಕಾರಿಯಾಗಿ, ಅಲ್ಲಲ್ಲಿ ಮಿಡಿದಿದೆ.

ನಿಂತ ನೀರು

ಎಚ್. ಎಚ್. ಗಂಗಾಧರಾಚಾರ್

ಬಾವಿಯಲ್ಲಿ ನಿಶ್ಚಲವಾಗಿ ನಿಂತುಬಿಟ್ಟಿದೆ ನೀರು
ಬಿಂದಿಗೆಯಿಂದ ನೀರನ್ನು ತುಂಬಿ ತುಂಬಿ ಮೈಗೆರೆದುಕೊಳ್ಳುವವರಿಲ್ಲ
ಪಾತ್ರೆ ಬೆಳಗುವವರಿಲ್ಲ; ಬಟ್ಟೆ ಒಗೆಯುವವರಿಲ್ಲ.
ಬಾವಿಯ ಮೆಟ್ಟಿಲುಗಳ ಮೇಲೆಲ್ಲ ಪಾಚಿಕಟ್ಟಿ,
ಕಾಲಿಟ್ಟರೆ ಜಾರುತ್ತದೆ; ಬಾವಿಯೊಳಕ್ಕೇ ಸೆಳೆದುಕೊಳ್ಳುತ್ತದೆ.
ನೀರಿನ ಮೇಲೆಲ್ಲ ಅಂತರಗಂಗೆ ಗಿಡ ಬೆಳೆದು,
ನೀರೇ ಕಾಣದ ಹಾಗೆ ಮುಚ್ಚಿಕೊಂಡಿದೆ; ಹಸಿರೊಂದೇ ಕಣ್ಣು ತುಂಬುತ್ತಿದೆ.
ನಿಂತ ನೀರು ಕ್ರಮೇಣ ಕೊಳೆತು,
ಅಸಂಖ್ಯಾತ ಕ್ರಿಮಿಗಳಿಗೆ ಆವಾಸಸ್ಥಾನವಾಗುತ್ತಿದೆ.
ಇದು ಹೀಗೇ ಇದ್ದರೆ ಯಾವ ಹೆಂಗಳೆಯರೂ ಈ ಬಾವಿಗೆ ಬರುವುದಿಲ್ಲ.
ಪಶು–ಪಕ್ಷಿಗಳೂ ಸಹ ಇತ್ತ ಸುಳಿಯುವುದಿಲ್ಲ.
ಎಷ್ಟು ಕಷ್ಟಪಟ್ಟು ಕಟ್ಟಿಸಿದ ಬಾವಿ ?
ಈ ಬಾವಿಯಲ್ಲಿ ಮೊಟ್ಟ ಮೊದಲು ನೀರಿನ ಸೆಲೆ ಕಂಡಾಗ
ಜನ ಜಾತ್ರೆ ನೆರೆದಿತ್ತಲ್ಲ! ಸಂತೋಷದ ಸೊಲ್ಲು ಹೊರ ಹೊಮ್ಮಿತ್ತಲ್ಲ!
ಯುವಕರು ಹಗಲಿಡೀ ಈಜಾಡಿದ್ದರಲ್ಲ!
ಹೆಂಗಳೆಯರು ಪಾತ್ರೆ ಬೆಳಗುತ್ತ, ಬಟ್ಟೆ ಒಗೆಯುತ್ತ
ಮೆಟ್ಟಿಲುಗಳ ಮೇಲೆ ಒಗೆದ ಬಟ್ಟೆಗಳ ಒಣಹಾಕುತ್ತ,
ಸುಖ ದುಃಖ ಸಂಗತಿಗಳ ವಿನಿಮಯ ಮಾಡಿಕೊಳ್ಳುತ್ತ ನಲಿದಿದ್ದರಲ್ಲ!
ಇದರ ಗತವೈಭವ ನೆನೆಸಿಕೊಂಡರೆ, ಹೊಟ್ಟೆ ಉರಿದುಹೋಗುತ್ತೆ.
ಕ್ರಿಮಿನಾಶಕಗಳ ಸಿಂಪಡಿಸಿ, ಈ ಬಾವಿಯ ಮತ್ತೆ ಶುದ್ಧೀಕರಿಸಬೇಕೆನಿಸುತ್ತೆ.
ಮೆಟ್ಟಿಲುಗಳ ಮೇಲೆ ಕಟ್ಟಿರುವ ಪಾಚಿಯ ಉಜ್ಜಿ ಉಜ್ಜಿ ತೊಳೆಯ ಬೇಕೆನಿಸುತ್ತೆ.

ಆಗ ಬರಬಹುದೆ–ಮತ್ತೆ ಈಜುವುದಕ್ಕೆ ಯುವಕರು ?
ನೀರು ಕುಡಿಯುವುದಕ್ಕೆ ಪಶು–ಪಕ್ಷಿಗಳು ?
ಮರುಕಳಿಸಬಹುದೆ ಗತವೈಭವ ?
ಸಾರ್ಥಕವಾಗಬಹುದೆ ಕಟ್ಟಿಸಿದವರ ಶ್ರಮ ?

ಆಧುನಿಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ಕೇಶಿರಾಜ

ಗೋಪಾಲಕೃಷ್ಣ ಹೆಗಡೆ

“ಬುಭುಕ್ಷಿತೈಃ ವ್ಯಾಕರಣಂ ನಭುಜ್ಯತೇ”–ಈ ಮುಂತಾದ ಟೀಕೆಗಳು ಸಾಕಷ್ಟು ಹಿಂದಿನಿಂದಲೂ ತಕಾಯಿಸುತ್ತಲೇ ಬಂದಿವೆ. ಅಂತೆಯೇ “ಅಸಂದೇಹಾರ್ಥಂಚ ಅಧ್ಯೇಯಂ ವ್ಯಾಕರಣಂ”–ಎಂದು ಮುಂತಾಗಿ ಪತಂಜಲಿಗಳಂಥವರು ಉತ್ತರಿಸುತ್ತಲೇ ಬಂದಿದ್ದಾರೆ. ಆಧುನಿಕ ಸಂದರ್ಭದಲ್ಲಿ ಭಾಷೆಯು ವಿಶ್ವಸ್ಥವಾದ ಸಂಬಂಧಗಳನ್ನು ಅರಿತು, ಅಭ್ಯಸಿಸಿ ‘ಭಾಷೆಯ ಅಧ್ಯಯನ ಮನುಷ್ಯನ ಅಧ್ಯಯನವೇ ಆಗಿದೆ’ ಎಂಬ ಗಟ್ಟಿಯಾದ ನೆಲೆಯೊಂದು ಸ್ಥಾಪಿತವಾಗಿದೆ.

ವಿಶಾಲವಾದ ಅರ್ಥವ್ಯಾಪ್ತಿಯನ್ನು ಪಡೆದ ಇಂದಿನ ಭಾಷಾವಿಜ್ಞಾನದ ಮೂಲರೂಪವನ್ನು ಹುಡುಕುತ್ತಹೊರಟರೆ ‘ವ್ಯಾಕರಣಶಾಸ್ತ್ರ’ ಎಂಬ ವ್ಯವಸ್ಥೆಯನ್ನು ಅನುಲಕ್ಷಿಸಬೇಕಾಗುತ್ತದೆ. ಈ ವ್ಯಾಕರಣಶಾಸ್ತ್ರಗಳು ಪದಸಂಸ್ಕಾರಗಳನ್ನು ತಿಳಿಸುವಲ್ಲಿ ಹೆಚ್ಚು ಒತ್ತುಕೊಟ್ಟು ನಿಂತಂತೆ ಕಾಣುತ್ತದೆ. ಅಲ್ಲದೆ ಒಂದುಕಾಲದಲ್ಲಿ ಅವಸ್ಥಾಂತರಗಳನ್ನು ಹೊಂದುತ್ತಿರುವ ಭಾಷೆಗೆ ಬಂಧನ ಹಾಕುವ ವ್ಯವಸ್ಥೆಯಾಗಿತ್ತು. ‘ಶಬ್ದಾನುಶಾಸನ’, ‘ಭಾಷಾಭೂಷಣ’–ಮುಂತಾದ ಶಿರೋನಾಮೆಗಳೇ ಭಾಷೆಯ ಕುರಿತಾದ ಕಟ್ಟುಪಾಡುಗಳನ್ನು ಧ್ವನಿಸುತ್ತವೆ. ಬದಲಾವಣೆ ಪ್ರಕೃತಿ ಧರ್ಮ. ಭಾಷೆಯೂ ಈ ಬದಲಾವಣೆಯ ಧರ್ಮಕ್ಕೆ ಬದ್ಧವಾದದ್ದು. ಅಂದರೆ ಭಾಷೆ ನಿರಂತರ ಬದಲಾಗುವುದು ಸಹಜ ಪ್ರಕ್ರಿಯೆ. ಈ ನಿಯಮ ನಮ್ಮ ಹಿಂದಿನವರಿಗೂ ಸ್ಪಷ್ಟವಾಗಿತ್ತು. ಆದರೂ ಪಾಣಿನಿಯಂಥವರು ಭಾಷೆಯ ಬದಲಾವಣೆಯನ್ನು ತಡೆಯಲು ಅವಿರತ ಪ್ರಯತ್ನ ಮಾಡಿದರು. ಒಂದು ಹಂತದಲ್ಲಿ ವಿಫಲರಾದರು. ಏಕೆಂದರೆ ಭಾಷೆ ಪ್ರಕೃತಿಯಂತೆ ಸತ್ಯವಾದದ್ದು. ಆದರೆ ಅದು ಪ್ರಕೃತಿಜನ್ಯವಲ್ಲ, ಪ್ರಯತ್ನಜನ್ಯ. ಹುಟ್ಟಿಗೊಮ್ಮೆ ಹೊಸತನವನ್ನು ಪಡೆಯುವಂತಹದ್ದು. ಪ್ರಾಚೀನ ವಯ್ಯಾಕರಣರು ಈ ದೃಷ್ಟಿಯಲ್ಲಿ ವಿಫಲರಾದರೂ ಕೂಡಾ ಅವರ ಒಟ್ಟುಕೊಡುಗೆ ಆಧುನಿಕ ಭಾಷಾ ವಿಜ್ಞಾನಕ್ಕೆ ಮಹತ್ವದ ಮೌಲ್ಯವಾಗಿದೆ. ಅಲ್ಲದೆ ಅವರ ಭಾಷಾ ವಿಧಾಯಕತೆ ಕೂಡಾ ಅನುಕೂಲಕರವಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಆಧುನಿಕ ಭಾಷಾಶಾಸ್ತ್ರಜ್ಞನಿಗೆ ನಿಘಂಟಿನ ವೈಚಿತ್ರ್ಯವನ್ನು, ವ್ಯಾಕರಣದ ಕಟ್ಟುಪಾಡುಗಳನ್ನು ಮೀರಿನಿಲ್ಲುವ ಭಾಷಾರೂಪಗಳೂ ಅತ್ಯಗತ್ಯ. ಅತ ಅದನ್ನು ಅಲ್ಲಗಳೆಯದೆ ಅಂತಹ ರೂಪಗಳೂ ಭಾಷೆಯ ಒಂದು ಸಾಧ್ಯತೆ ಎಂಬುದನ್ನು ಗುರುತಿಸುತ್ತಾನೆ

ಭಾಷೆಯ ಯಾವರೂಪವನ್ನೂ ವರ್ಜಿಸದೆ ಶುದ್ಧ, ಅಶುದ್ಧ ಎಂಬ ನಿರ್ಣಯಕ್ಕೆ ಕೈ ಇಕ್ಕದೆ ಭಾಷೆಯ ಎಲ್ಲ ಅವಸ್ಥೆಯನ್ನೂ ಗಮನಿಸುತ್ತಾನೆ.

ಆಧುನಿಕ ಭಾಷಾವಿಜ್ಞಾನಿಯಾದವನು ವ್ಯವಹಾರದಲ್ಲಿರುವ ಅಂದರೆ ಜೀವಂತ ಭಾಷೆಯನ್ನು ಪ್ರಧಾನವಾಗಿ ಪರಿಗಣಿಸುತ್ತಾನೆ. ಅದು ವಾಚಿಕದಿಂದ ಹೊರತಾಗಿ ಅವನ ಚರ್ಚೆ ಇರುವುದಿಲ್ಲ. ಏಕೆಂದರೆ ಭಾಷೆ ಉಚ್ಚರಿತ ಧ್ವನಿಸಂಕೇತಗಳ ವ್ಯವಸ್ಥೆ (Arbitrary System of Vocal Symbols) ಅದು ಯಾದೃಚ್ಛಿಕ ಎಂಬುದನ್ನು ಆಧುನಿಕ ಭಾಷಾವಿಜ್ಞಾನಿ ತಿಳಿದಿರುವುದರಿಂದ ಭಾಷೆಯ ವ್ಯತ್ಯಾಸವನ್ನು ತಪ್ಪಿಸಲು ಯತ್ನಿಸದೆ ಅದನ್ನು ಗುರುತಿಸುತ್ತಾನೆ.

ನಿಷ್ಠಾವಂತ ವರ್ಣನಾತ್ಮಕ ವ್ಯಾಕರಣಕಾರನೊಬ್ಬನು ಒಂದು ಕಾಲದ, ಒಂದು ಪ್ರದೇಶದ ನಿರ್ದಿಷ್ಟ ಜನ ಮಾತಾಡುವ ಭಾಷೆಯನ್ನು ವಿವರಿಸುತ್ತಾನೆ. ಹಾಗೆ ವಿವರಿಸುವಾಗಲೂ ಒಬ್ಬ *ಆದರ್ಶವ್ಯಕ್ತಿಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ. ಆತನ ದೃಷ್ಟಿ ಕೇವಲ ಶಬ್ದಯಾದಿಯ ಕಡೆಗೆ ಇರದೆ ವರ್ಣ ಹಾಗೂ ಉಚ್ಚಾರಣೆಯ ಕಡೆಗೂ ಇರುತ್ತದೆ. ಕೇವಲ ಪದಸಿದ್ಧಿಯನ್ನು ಕುರಿತು ಚಿಂತಿಸದೆ ಭಾಷೆಯ ಬೇರೆ ಬೇರೆ ಅಂಗಗಳಾದ ಧ್ವನಿ, ಧ್ವನಿಮಾ, ಪದ, ವಾಕ್ಯ ಇತ್ಯಾದಿಗಳನ್ನೆಲ್ಲಾ ವಿಶ್ಲೇಷಿಸಬೇಕಾಗುತ್ತದೆ.

19-20ನೇ ಶತಮಾನದಲ್ಲಿ ಉಳಿದ ಕ್ಷೇತ್ರಗಳಂತೆ ಭಾಷಾವಿಜ್ಞಾನವೂ ತನ್ನ ಮೇರೆಯನ್ನು ಗುರುತಿಸಿಕೊಂಡು ಬೇರೆ ಬೇರೆ ಶಾಖೆಗಳಾಗಿ ಬೆಳೆಯುತ್ತಿದೆ. ಐತಿಹಾಸಿಕ, ವರ್ಣನಾತ್ಮಕ, ಸಾಮಾಜಿಕ, ತೌಲನಿಕ ಶಾಖೆಗಳಲ್ಲದೆ ಶೈಲಿವಿಜ್ಞಾನ, ಧ್ವನಿವಿಜ್ಞಾನ ಮುಂತಾದ ಹೊಸ ಹೊಸ ಕವಲುಗಳು—ಇತರ ಸಮಾಜವಿಜ್ಞಾನಗಳ ಜೊತೆಗೆ ತಮ್ಮ ಅನುಸ್ಯೂತವಾದ ಸಂಬಂಧವನ್ನು ಗುರುತಿಸಿಕೊಂಡಿವೆ.

ಹೀಗೆ ಬಹುಮುಖಿವಾಗಿ ಬೆಳೆಯುತ್ತಿರುವ ಭಾಷಾ ವಿಜ್ಞಾನದ ಕ್ಷೇತ್ರದಲ್ಲಿ ನಿಂತು 13ನೇ ಶತಮಾನದ ಕೇಶಿರಾಜನನ್ನು ನಿರ್ದೇಶಿಸ ಹೊರಟಾಗ ಆತನ ಪರಿಮಿತಿಗಳನ್ನೂ ನಾವು ಗುರುತಿಸಬೇಕಾಗುತ್ತದೆ. ತನ್ಮೂಲಕ ಕೇಶಿರಾಜನಲ್ಲಿ ಎಷ್ಟರ ಮಟ್ಟಿಗೆ ಆಧುನಿಕ ಪ್ರಜ್ಞೆ ಇತ್ತು? ಆತ ಕೇವಲ ಸಂಪ್ರದಾಯಶರಣ ವೈಯಾಕರಣಿಯೇ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಲು ಯತ್ನಿಸಲಾಗಿದೆ.

---

* ಆದರ್ಶ ವ್ಯಕ್ತಿ : ಅಂದರೆ ಆತ 1 ಭಾಷಾವಿಜ್ಞಾನಿ ವಿವರಿಸಬೇಕೆಂದಿರುವ ಭಾಷೆಯ ಇತರ ಪ್ರಭೇದಗಳನ್ನಾಗಲಿ, ಬೇರೆ ಭಾಷೆಯನ್ನಾಗಲಿ ಅರಿತಿರಬಾರದು. 2 ದೇಶ ಸಂಚಾರಿಯಾಗಿರಬಾರದು. 3 ಶಿಕ್ಷಣ ವೇತ್ತನಾಗಿರಬಾರದು. 4 ಮಧ್ಯವಯಸ್ಸನ್ನು ದಾಟಿರಬೇಕು. 5 ತೀರ ಎಳೆಯವನೂ, ಮುದುಕನೂ ಆಗಿರಬಾರದು—ಇತ್ಯಾದಿ ಲಕ್ಷಣಗಳಿರಬೇಕು.

ಕೇಶಿರಾಜ ಮೂಲತಃ ಉಭಯಭಾಷಾ ವಿಶಾರದ. ಆತ ಬದುಕುತ್ತಿದ್ದ ಕಾಲ ಸಂಸ್ಕೃತ ತನ್ನ ವರ್ಚಸ್ಸನ್ನು ಉಳಿಸಿಕೊಂಡ ಕಾಲ. ಪ್ರಾಚುರ್ಯಪಡೆದ ಹಳಗನ್ನಡ ಕಾವ್ಯಗಳೆಲ್ಲ ಸಂಸ್ಕೃತದ ಜಾಡಿನಲ್ಲಿಯೇ ಹುಟ್ಟಿ, ಬೆಳೆದು ಬದುಕಿಬಾಳಿದ ಕಾಲ. ಹೀಗಾಗಿ ಅಂದಿನ ಬಹುಸಂಖ್ಯಾತರು ಒಪ್ಪಿಕೊಂಡ ಹಾಗೂ ಅಪ್ಪಿಕೊಂಡ 'ಗಿರ್ವಾಣವಾಣಿ'ಯೇ ಕನ್ನಡದ ತಾಯಿ-ಎಂದು ಕೇಶಿರಾಜ ಒಪ್ಪಿಕೊಂಡ. ಅಂದರೆ ಶಬ್ದಮಣಿದರ್ಪಣವನ್ನು ಬರೆಯ ಹೊರಟ ಕೇಶಿರಾಜ 'ಕನ್ನಡ ಸಂಸ್ಕೃತಜನ್ಯ' ಎಂಬ ಪೂರ್ವಗ್ರಹಿಕೆಯ ಸಿದ್ಧಮನಸ್ಕನಾದಕಾರಣ ಸಂಸ್ಕೃತದ ಕನ್ನಡಕದಲ್ಲಿ ಕನ್ನಡವನ್ನು ಕಾಣತೊಡಗಿದ. ಆತ ತಾನು ಆಯ್ದುಕೊಂಡ ವಿಚಾರವನ್ನು ವಿವರಿಸುವಾಗಲೆಲ್ಲ ಸಂಸ್ಕೃತ ಭಾಷಾ ಸಂವಿಧಾನವನ್ನು ಮೊದಲು ವಿವರಿಸಿ ತದನಂತರ ಕನ್ನಡದ ವಿಚಾರವನ್ನು ವಿವರಿಸುತ್ತಾನೆ. ಅವನ ಸ್ವಂತಭಾಷೆ ಕೂಡಾ ಸಾಕಷ್ಟು ಪ್ರಮಾಣದಲ್ಲಿ ಸಂಸ್ಕೃತಮಯವಾಗಿದೆ. 'ಪೇಳಲ್ಪಡೆಗುಂ' ಎಂದು ಅಪೂರ್ವವಾಗಿ ಕರ್ಮಣಿ ಪ್ರಯೋಗವನ್ನು ಬಳಸಿಕೊಂಡಿದ್ದಾನೆ. ಲಿಂಗಮೊಂಬತ್ತು ತೆರಂ—ಎಂದು ಸಂಸ್ಕೃತ ಲಿಂಗ ವಿವಕ್ಷೆಯನ್ನು ಮಂಡಿಸಿ ತದನಂತರ

ಪುರುಷರೆ ಪುಲ್ಲಿಂಗಂ ಸ್ತ್ರೀ
ಯರೆ ತಾಂ ಸ್ತ್ರೀ ಲಿಂಗಮುಳಿದುವೆಲ್ಲಂ ನಪ್ಪಾ
ಗಿರೆ ಸಲ್ಗುಂ ಕನ್ನಡದೊಳ್
ಪರಿವರ್ತಿಸವುಟಿದಲಿಂಗವೊಳವಾಗಿರ್ದುಂ ।। ೧೨೧ ।।

—ಎನ್ನುತ್ತಾನೆ.

ಸಂಸ್ಕೃತ ವಚನ ವ್ಯವಸ್ಥೆಯ ಮೇಲೆನಿಂತು 'ದ್ವಿವಚನಂ ಉಚಿತದೆ ಬರ್ಕುಂ'—ಎಂದುಬಿಡುತ್ತಾನೆ. ಕೇಶಿರಾಜನ ಕಣ್ಣಿಗೆ ಸಂಸ್ಕೃತದ ಕನ್ನಡಕ ಇತ್ತು ಎಂಬುದಕ್ಕೆ ಇದಲ್ಲದೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದೆ.

ಕೇಶಿರಾಜನ ಪೂರ್ವನಿರ್ಧಾರಿತ ಮನೋವ್ಯಾಪಾರದಿಂದಾಗಿ ಆತನ ಸಂಶೋಧನಾ ಬುದ್ಧಿ ಕುಂಠಿತವಾಗಿದೆ. ಅಂದರೆ ಸಂಸ್ಕೃತ ವಾಙ್ಮಯ ಲೋಕದಿಂದ ಹೊರನಿಂತು ಆತನಿಂದ ಕನ್ನಡದ ಅವಸ್ಥೆಯನ್ನು ಅರಿಯಲಾಗಲಿಲ್ಲ. ಡಾ॥ ಆರ್. ವರದಾಚಾರ್ ಅವರು —"ಕೇಶಿರಾಜ ಜ್ಞಾತಿಭಾಷೆಗಳಾದ ತಮಿಳು ತೆಲುಗು ಮುಂತಾದವುಗಳನ್ನು ಲಕ್ಷಿಸಲಿಲ್ಲ" ಎಂದು ತಮ್ಮ ಆಕ್ಷೇಪಣೆಯನ್ನು ಮುಂದಿಡುತ್ತಾರೆ. ಈ ಆಕ್ಷೇಪಣೆ ಸತ್ಯವಾದರೂ 'ಸಂಸ್ಕೃತವೇ ತಾಯಿಭಾಷೆ' ಎಂದು ಕೇಶಿರಾಜ ಖಚಿತವಾಗಿ ತಿಳಿದ ಕಾರಣ ಉಳಿದ ಜ್ಞಾತಿಭಾಷೆಗಳ ಕಡೆಗೆ ಕಣ್ಣು ಹಾಯಿಸದೇ ಇರುವುದು ಆಶ್ಚರ್ಯವಲ್ಲ. ಅಲ್ಲದೆ ಕೇಶಿರಾಜನಿಗೆ ಜ್ಞಾತಿಭಾಷೆಗಳ (ತಮಿಳು, ತೆಲುಗು) ಸಂಪರ್ಕ ಇತ್ತು ಎಂದು ಹೇಳಲು ಸಾಧ್ಯವಿಲ್ಲ.

ಸಂಸ್ಕೃತದ ಭದ್ರಬುನಾದಿಯ ಮೇಲೆ ನಿಂತ ಕೇಶಿರಾಜ "ಅವರ್ಣಂ ಪಿಂಗಿದಾಕ್ಷರಂ ನಾಮಿಯೆಂದುಂ ಪೇಳಲ್ಪಡೆಗುಂ' ಎಂಬ ಕನ್ನಡಕ್ಕೆ ಅನವಶ್ಯಕವಾದ ವಿಚಾರವನ್ನು ವಿವರಿಸ ಹೊರಡುತ್ತಾನೆ.

ಕೇಶಿರಾಜನ ವಯ್ಯಕ್ತಿಕವಾದ ಒಲವು ಎಷ್ಟೇ ಸಂಸ್ಕೃತವತ್ತ ವಾಲಿದ್ದರೂ ಕೆಲವು ವಿಷಯಗಳ ಕುರಿತು ಆತ ಪ್ರಾಮಾಣಿಕನಾಗುತ್ತಾನೆ ಇದಕ್ಕೆ ಆಡುಭಾಷೆಯ ಪರಿಸರದ ಒತ್ತಡವೂ ಕಾರಣವಾಗಿದೆ.

'ಸವನಿಸಿದೆ ಏ ಒ ಓ ಯೆಂಬಿವು ಕನ್ನಡದೊಳ್ ಸ್ವಭಾವದಿಂದೊಳವು'

— ಎಂದು ದೇಶೀಯ ಅಕ್ಷರಗಳನ್ನು ಮರೆಯಿಲ್ಲದೆ ಹೇಳುತ್ತಾನೆ ಕೇಶಿರಾಜನ ವೈಶಿಷ್ಟ್ಯ ಇರುವದು 'ಸಂಧಿಪ್ರಕರಣ'ದಲ್ಲಿ. ಅಲ್ಲಿ ಮಾತ್ರ ಆತ ಸಂಸ್ಕೃತ ಸಂಧಿಗಳನ್ನೆಲ್ಲಾ ಕೈಬಿಟ್ಟು ಕನ್ನಡ ಸಂಧಿಗಳನ್ನು ಮಾತ್ರ ಎತ್ತಿಕೊಳ್ಳುತ್ತಾನೆ. ಇಲ್ಲಿ ಆತನ ಕನ್ನಡ ಭಾಷಾ ಪ್ರಜ್ಞೆಯನ್ನು ಗುರುತಿಸಬಹುದು. ಶಬ್ದಶಾಸ್ತ್ರದ ಕೊನೆಯಲ್ಲಿ ಕನ್ನಡದ ಅಸಾಧಾರಣ ಲಕ್ಷಣಗಳನ್ನು ಹೇಳುತ್ತಾನೆ. ಹೀಗೆ ಕನ್ನಡ ಭಾಷಾಪ್ರಜ್ಞೆ ಅಲ್ಲಲ್ಲಿ ಸ್ಫುಟವಾಗಿ ಕಂಡರೂ ಆತನ ಒಟ್ಟು ತಿಳಿವಳಿಕೆ 'ಕನ್ನಡ ಸಂಸ್ಕೃತಜನ್ಯ' ಎಂಬುದೇ ಆಗಿದೆ. ಕೇಶಿರಾಜನಿಗೆ ಸ್ಫುರಿಸಿದ ಕನ್ನಡದ ಈ ಅಸಾಧಾರಣ ಲಕ್ಷಣಗಳು ಆಧುನಿಕ ಭಾಷಾವಿಜ್ಞಾನಿಗೆ ಅನುಕೂಲದ ಒಂದು ಭಾಗವಾಗಿದೆ. ಈ ದೃಷ್ಟಿಯಿಂದ ಆತ ನಿಷ್ಠಾವಂತ ವಯ್ಯಾಕರಣನಲ್ಲದಿದ್ದರೂ ಸ್ತುತ್ಯಾರ್ಹ.

ಮೂಲತಃ ಕೇಶಿರಾಜನು ಸಂಪ್ರದಾಯ ಪ್ರಯೋಗ ವಯ್ಯಾಕರಣ. ಹಳಗನ್ನಡ ಕಾವ್ಯಗಳನ್ನು ಇಟ್ಟುಕೊಂಡು ವ್ಯಾಕರಣ ಬರೆಯ ಹೊರಟ ಈತನಿಗೆ ಮಹಾಪ್ರಾಣದ ಸಮಸ್ಯೆ ತೀವ್ರವಾಗಿಯೇ ಕಾಡಿದೆ. ಈ ಸಮಸ್ಯೆಯ ಸುಳಿಯಿಂದ ಆತ ಹೊರಬರಲೇ ಇಲ್ಲ.

ಮಾರ್ಗವಿದರ್ ಸಂಖ್ಯೆಯೊಳಂ
ಭೋರ್ಗರೆವಸುಕೃತಿಯೊಳಂ ಪ್ರಯೋಗಿಸುತಿರ್ಪರ್' ॥ 24 ॥ ಎಂದು ತಾನೂ ಅದನ್ನು ಒಪ್ಪಿಕೊಳ್ಳುತ್ತಾನೆ ಅಲ್ಲದೆ ಅದು 'ನಿಜೋಜ್ವಳವಾಗಿ ಒಳವು' ಎಂದು ಘೋಷಿಸುತ್ತಾನೆ. ಈ ಮಾತು ಭಾಷಾಶಾಸ್ತ್ರದ ಕೂಲಂಕಷ ಚರ್ಚೆಗೆ ಒಳಗಾಗಿ 'ನಾತ್ರ (ನ+ಅತ್ರ) ಪ್ರಾಯೇಣ ವರ್ಗಾಣಾಂ ದ್ವಿತೀಯ ಚತುರ್ಥಃ' – ಎಂಬ ನಾಗವರ್ಮನ ಮತಕ್ಕೆ ಪ್ರಾಶಸ್ತ್ಯ ದೊರೆಯುವುದರಿಂದ–ಕೇಶಿರಾಜನ ಮಹಾಪ್ರಾಣ ವಿಚಾರ, ಪ್ರಯೋಗ ಶರಣ ಮಾತ್ರವಾಗಿಯೇ ಉಳಿಯುತ್ತದೆ. ಹೀಗಿದ್ದರೂ ಆತನದು ಅನನ್ಯಶರಣತೆ ಅಲ್ಲ.

ಕೇಶಿರಾಜ ಹಳಗನ್ನಡ ನಡುಗನ್ನಡವಾಗಿ ರೂಪಾಂತರವಾಗುತ್ತಿರುವ ಸಂಧಿಕಾಲದಲ್ಲಿ ಬದುಕಿದ್ದ ವ್ಯಕ್ತಿಯಾದ ಕಾರಣ ಆತನಿಗೆ ಆಯ್ಕೆಯ ಪ್ರಶ್ನೆ ಎದುರಾಗಿದೆ.

ಭಾಷೆಯ ಎರಡು ಸ್ಥಿತಿಗಳನ್ನು ಕಂಡಾಗ ಹೀಗಾಗುವದು ಅನಿವಾರ್ಯ. ಅಂತಹ ಸಂದರ್ಭದಲ್ಲಿ ಎರಡು ರೂಪಗಳನ್ನು ನೀಡಿ ತನ್ನ ಪ್ರಾಮಾಣಿಕತೆಯನ್ನು ಉಳಿಸಿ ಕೊಳ್ಳಲು ಯತ್ನಿಸಿದ್ದಾನೆ.

> 'ಕೆಲವು ನಿಜಬಿಂದುಗಳ್
> ಕೆಲವು ವಿಕಲ್ಪಾರ್ಥ ಬಿಂದುಗಳ್'

...ಎಂದು ಹೇಳುವಲ್ಲಿ ಆ ಕಾಲದ ಭಾಷೆಯ ಬದಲಾವಣೆಯ ಸ್ವರೂಪ ಕಾಣುತ್ತದೆ. ಆತನೇ ನೀಡುವ ರೂಪಗಳನ್ನು ನೋಡಿದರೆ ಜನ ಬಳಕೆಯಲ್ಲಿ ಈಗಾಗಲೇ ಬಿಂದುಲೋಪ ಹೇಗ ನಡೆದಿತ್ತು ಎಂಬುದನ್ನು ತಿಳಿಯಬಹುದು. ಉದಾ : ತುಳುಂಕು>ತುಳುಕು ನೊರಂಜ>ನೊರಜು—ಇತ್ಯಾದಿ.

ಒಂದು ಭಾಷೆಯನ್ನು ವರ್ಣಿಸ ಹೊರಟಾಗ ಅದರ ಹೊಸ ಹಾಗೂ ಹಳೆಯ ರೂಪಗಳೆರಡನ್ನೂ ಎದುರು ಹಾಕಿಕೊಂಡರೆ ಸಾಮಾನ್ಯ ನಿಯಮ ಮಾಡಬಹುದಾದ ಕಡೆಗೂ ಅಪವಾದವನ್ನು ಹೇಳಬೇಕಾಗುತ್ತದೆ. ಇದು ಸರಿ, ಇದು ತಪ್ಪು ಎಂದು ಹೇಳಿದರೆ ವ್ಯಾಕರಣ ವಿಧಾಯಕವಾಗುತ್ತದೆ. ಆಧುನಿಕ ಭಾಷಾ ವಿಜ್ಞಾನಿ ಈ ಭಾಷಾ ವಿಧಾಯಕತೆಯನ್ನು ಒಪ್ಪುವುದಿಲ್ಲ. ಕೇಶಿರಾಜ ಈ ಎರಡೂ ಮಾರ್ಗ ಗಳಲ್ಲಿ ಶ್ರಮಿಸಿರುವ ಕಾರಣದಿಂದಲೇ ಆತನ ಸ್ಥಾನ ಪ್ರಾಚೀನ ವಯ್ಯಾಕರಣರಿಗಿಂತ ಭಿನ್ನವಾಗುತ್ತದೆ.

ತನ್ನ ಸಮಕಾಲೀನ ಭಾಷೆಯನ್ನು ಗಮನಿಸುವುದರ ಮೂಲಕ ಆತ ತನ್ನ ವೈಜ್ಞಾನಿಕ ಮನೋಭಾವವನ್ನು ಮೆರೆದಿದ್ದಾನೆ. ತನ್ನ ಕಾಲಕ್ಕಾಗಲೇ ವ್ಯಂಜನಾಂತ ಪದಗಳು ಸ್ವರಾಂತವಾಗುತ್ತಿರುವುವನ್ನು ಗಮನಿಸಿದ್ದಾನೆ. 'ಲಾಂತ' ಶಬ್ದಗಳು 'ಳಾಂತ' ವಾಗುತ್ತಿರುವದನ್ನು ನೋಡಿ ಆತನ ವಿಧಾಯಕ ಪ್ರಜ್ಞೆ ಜಾಗ್ರತವಾಗು ತ್ತದೆ. 'ಗ್ರಾಮ್ಯರ್ ಅರಿಯದೆ ಉಚ್ಚರಿಪರ್ ಕುಳಾಂತ ಭ್ರಮೆಯಿಂ' ಎನ್ನುವಾಗ ಆತನ ನೋವು ಏನೇ ಇದ್ದರೂ ಲಾಂತಗಳು ಳಾಂತವಾಗುತ್ತಿರುವದು ಸತ್ಯಚಿತ್ರವಾಗಿ ಬಿಡುತ್ತದೆ. 'ಪ' ಕಾರ 'ಹ' ಕಾರವಾಗುತ್ತಿತ್ತು ಎಂಬುದನ್ನು ಪೂರ್ವಕವಿಸ್ಮ ರಣೆಯ ಸೂತ್ರದಲ್ಲಿಯೇ ಗಮನಿಸಬಹುದು. ಅಲ್ಲಿ 'ಪಂಪ'ನನ್ನು 'ಹಂಪ' ಎಂದೇ ನೆನೆಯುತ್ತಾನೆ. (ಕಿಟೆಲ್ ಪ್ರತಿ) ಅಸಗ>ಅಗಸ ಆಗಿರುವಲ್ಲಿ ವರ್ಣ ವಿಪರ್ಯಯವನ್ನು ಕಾಣುತ್ತೇವೆ.

೧. ಜಟಿಕ್ಕೆ ಸಂದೇಹಂ ಕುಳಂಗಳೆ ಅಪ್ಪುವು (ಸೂ. 32 ವೃತ್ತಿ)
೨. ಮಹಾಕವಿ ಕೃತಿದ್ರಷ್ಟಮುಂ ನಿರಾಕುಲ ಮುಕುರ್ವೆಂ (ಸೂ. 33)
೩. ಈ ಪೇಳ್ದ ಶಬ್ದಂಗಳ್ ಜಟಿಕ್ಕೆ ಸಂದೇಹಂಗಳ್
ಇವಂ ಪ್ರಯೋಗಮೆಂ ತೆಂತು ಪೇಳ್ವುದು (ಸೂ. 35ರ ವೃತ್ತಿ)

ಕೇಶಿರಾಜನ ಈ ಚರ್ಚೆಗಳನ್ನು ಗಮನಿಸಿದರೆ ಅವನ ಕಾಲಕ್ಕೆ ಱ ೞ 'ೞ' ಕಾರ ಮರೆಯಾಗುತ್ತಿತ್ತು. 'ಮಹಾಕವಿ ಕೃತಿದ್ರಷ್ಟಮುಂ ನಿರಾಕುಲ ಮುಸಿರ್ವೆಂ-ಎಂಬ ಮಾತು ಇದಕ್ಕೆ ಪೋಷಕವಾಗಿದೆ.

ಕೇಶಿರಾಜನಿಗೆ 'ೞ' ಕಾರದ ಬಳಕೆಯ ಬಗ್ಗೆ ಸಂದೇಹ ತಲೆದೋರಿದೆ. 'ೞ' ಕಾರವನ್ನು ಉಳಿಸಿಕೊಳ್ಳಲು ಮಹಾಕವಿ ಕೃತಿಗಳನ್ನು ಮುಂದಿಡುತ್ತಾನೆ. ಎಂತಹ ಆಧಾರಗಳನ್ನು ಮುಂದಿಟ್ಟರೂ ಅದು ಬದುಕಿ ಬರಲಿಲ್ಲ. ತಕಟರೇಫ ಕೇಶಿರಾಜನ ಕಾಲಕ್ಕೆ ಸರಿಯಾಗಿ ಬಳಕೆಯಾಗುತ್ತಿರುವ ನಿಮಿತ್ತ ಆತ ಅದರ ಗೊಡವೆಗೇ ಹೋಗುವದಿಲ್ಲ. ಸಮಕಾಲೀನ ಭಾಷೆಯ ಜೊತೆಗೆ ಅದರ ಉಚ್ಚಾರಣೆಯ ಮಹತ್ವವನ್ನು ಕೇಶಿರಾಜ ಅರಿತಿದ್ದ. ಒಟ್ಟಿನಲ್ಲಿ ಕೇಶಿರಾಜನ ಕುರಿತು ಸ್ಥೂಲವಾಗಿ ಕೆಲವು ವಿಚಾರಗಳನ್ನು ಹೀಗೆ ಹೇಳಬಹುದು.

1. ನಿಷ್ಠಾವಂತ ವಿವರಣಾತ್ಮಕ ವಯ್ಯಾಕರಣಿ ಅಲ್ಲದಿದ್ದರೂ ಆ ಲಕ್ಷಣಗಳು ಕೇಶಿರಾಜನಲ್ಲಿವೆ.
2. ಅಳಿದು ಹೋಗುತ್ತಿರುವ ಹಳೆಯರೂಪಗಳನ್ನು ಉಳಿಸಲು ಯತ್ನಿಸಿ ವಿಧಾಯಕನಾದರೂ ತನ್ನ ಪ್ರಾಮಾಣಿಕತೆಯನ್ನು ಬಿಡಲಿಲ್ಲ.
3. ಭಾಷೆಯ ಉಚ್ಚಾರಣೆಯ ಮಹತ್ವ ಗೊತ್ತಿರುವ ಕಾರಣದಿಂದಲೇ ಆತನ ಕೃತಿಯಲ್ಲಿ ಭಾಷಾವಿಜ್ಞಾನಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳು ಒಡಮೂಡಿವೆ.
4. ಹಳಗನ್ನಡದ ರೂಪಗಳನ್ನು ಕಾವ್ಯದ ಮೂಲಕ ತಿಳಿಯಲು ಇಂದಿಗೂ ಭಾಷಾವಿಜ್ಞಾನಿಗೆ ಕೇಶಿರಾಜನ ಶಬ್ದಮಣಿದರ್ಪಣ ಅತ್ಯವಶ್ಯ.
5. ತನ್ನ ಕಾಲದ ಆಡು ಮಾತನ್ನು ಲಕ್ಷಿಸಿದ ಕಾರಣ ಭಾಷೆಯ ಅವಸ್ಥಾಂತರಗಳನ್ನು ಗಮನಿಸುವಲ್ಲಿ ಆಧುನಿಕ ಭಾಷಾವಿಜ್ಞಾನಿಗೆ ಅದು ಮಹತ್ವದ್ದಾಗುತ್ತದೆ.
6. ಕೇಶಿರಾಜನ ಆಲೋಚನಾವಲಯ ಪೂರ್ವ ನಿಶ್ಚಿತ ಗಡಿಯನ್ನು ಹೊಂದಿರುವ ಕಾರಣ ಸಾಕಷ್ಟು ದ್ವಂದ್ವವನ್ನು ಆತನಿಗೆ ಉಂಟು ಮಾಡಿದೆ.
7. ಕೇಶಿರಾಜ ಹುಟ್ಟಿ ಬೆಳೆದ ವ್ಯವಸ್ಥೆಯೇ ವಿಧಾಯಕವಾದದ್ದು. ಜೀವನದ ಎಲ್ಲ ಕ್ಷೇತ್ರಗಳೂ ವಿಧಾಯಕವಾಗಿ ಇರುವ ಅಲ್ಲಿ ವ್ಯಾಕರಣವೂ ವಿಧಾಯಕವಾಗಿರುವ ಸಾಧ್ಯತೆ ಇದೆ.

೮. ಆಧುನಿಕ ಭಾಷಾವಿಜ್ಞಾನದಲ್ಲಿ 'Language Plan' ಎಂಬ ಹೊಸ ಶಾಖೆ ವಿಧಾಯಕತೆಯನ್ನೇ ಹೇಳುತ್ತದೆ. ಆದರೆ ಈ ವಿಧಾಯಕತೆಗೂ ಕೇಶಿರಾಜನ ವಿಧಾಯಕತೆಗೂ ವ್ಯತ್ಯಾಸ ಇದೆ. ಕೇಶಿರಾಜನ ಕಾಲಕ್ಕೆ ಕಲಿಸುವ ದೃಷ್ಟಿಯಲ್ಲಿ ಅದು ವಿಧಾಯಕವಾಗಿತ್ತು. ಇಂದು ಭಾಷೆಯನ್ನು ಬಳಸುವವರ ಮೂಲಕ ಒಂದು ಹೊಸ ಸಾಧ್ಯತೆಯನ್ನು ಕಾಣುವುದಕ್ಕಾಗಿ ವಿಧಾಯಕ ಕ್ರಮ ಬಳಕೆಗೆ ಬರುತ್ತಿದೆ. ಕಾರಣ, ವಿಧಾಯಕ (Prescriptive) ಎಂಬ ಅಂಶವನ್ನೇ ಎತ್ತಿಹಿಡಿದು ಕೇಶಿರಾಜನನ್ನು ನೋಡುವ ದೃಷ್ಟಿಯೇ ಬೇರೆಯಾಗಬಾರದು–

1. ಗಮಕ ಸಮಾಸದಿಂ
2. ಱ ೞ ಕುಳ ಕ್ಷಳದಿಂ
3. ಶ್ರುತಿಸಹ್ಯ ಸಂಧಿಯಿಂ
4. ಸಮುಚಿತವಾಗಿ ಬರ್ಪ ಸತಿ ಸಪ್ತಮಿಯಿಂ
5. ಸಮಸಂಸ್ಕೃತೋಕ್ತಿಯಿಂ
6. ವ ಮ ಹ ಪ ಭೇದದಿಂ
7. ವಿರಹಿತಾವ್ಯಯ ಸಂಸ್ಕೃತ ಲಿಂಗದಿಂ
8. ಪದೋತ್ತಮ ಶಿಥಿಲತ್ವದಿಂ
9. ಯತಿ ವಿಲಂಘನದಿಂದರಿದಲ್ತೆ ಕನ್ನಡಂ

ಎಂದು ಹೇಳುವದರ ಮೂಲಕ ಕನ್ನಡದ ಸ್ಥಾನವನ್ನು ಆತ ನಿರ್ದೇಶಿಸಿದ್ದಾನೆ. ಕೇಶಿರಾಜನಲ್ಲಿ ವೈಯಾಕರಣರ ವಿಧಾಯಕತೆಯೊಟ್ಟಿಗೆ ಭಾಷಾವಿಜ್ಞಾನಿಗಳ ಪ್ರಾಮಾಣಿಕತೆಯೂ ಇರುವ ಕಾರಣದಿಂದಲೇ ಆತ ಇಂದಿಗೂ ಬದುಕಿಬಂದಿದ್ದಾನೆ.

ಮಕ್ಕಳನ್ನು ಬೆಳೆಸುವುದರ ಬಗೆಗೆ ಗ್ರಾಮೀಣ ತಾಯಂದಿರ ಮನೋವೃತ್ತಿಯ ಒಂದು ಅಧ್ಯಯನ

ಡಾ|| ಬಿ. ಜಿ. ಸುಧಾ
ಮತ್ತು
ಸ್ಮಿತಾ ತಿವಾರಿ

ಪ್ರಸ್ತಾವನೆ :

ಶೈಶವದಲ್ಲಿ ಹಾಗೂ ಕೌಮಾರ್ಯದಲ್ಲಿ ಬೆಳೆಯುವ ಮಕ್ಕಳ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯ ಮೇಲೆ ಪರಿಣಾಮವನ್ನುಂಟುಮಾಡುವ ಅನೇಕ ಸಂಗತಿಗಳಲ್ಲಿ ತಾಯಿಯ ಪ್ರಭಾವ ಅತ್ಯಂತ ಹಿರಿದು. ಆಕೆಯ ಪ್ರೀತಿ, ಸಂಸ್ಕೃತಿ ಮತ್ತು ಮಕ್ಕಳನ್ನು ಬೆಳೆಸುವುದರ ಬಗ್ಗೆ ಆಕೆಗಿರುವ ಮನೋವೃತ್ತಿ ಮಗುವಿನ ಸರ್ವತೋಮುಖ ಬೆಳವಣಿಗೆಯ ದಿಸೆಯನ್ನು ನಿಶ್ಚಯಿಸುತ್ತದೆ. ಮಕ್ಕಳನ್ನು ಬೆಳೆಸುವುದು ಎಂದರೆ ಅವರ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಭಾವನಾತ್ಮಕ ಪೂರೈಕೆಗಳನ್ನು ಸರಿಯಾದ ರೀತಿಯಲ್ಲಿ ಪೂರೈಸಿ, ಅವರನ್ನು ಸ್ವತಂತ್ರರೂ, ಪ್ರಾಮಾಣಿಕರೂ, ಆತ್ಮವಿಶ್ವಾಸವುಳ್ಳವರೂ ಆದಂಥ ಪ್ರೌಢರನ್ನಾಗಿ ಮಾಡುವುದೇ ಆಗಿದೆ. ಈ ದಿಸೆಯಲ್ಲಿ ತಾಯಿಯು ತನ್ನ ಮಕ್ಕಳ ಬೆಳವಣಿಗೆಯ ಬಗ್ಗೆ ಹೊಂದಿರುವ ಮನೋವೃತ್ತಿ ಅತ್ಯಂತ ಮುಖ್ಯವಾದುದು. ಈ ಮನೋವೃತ್ತಿಯಿಂದಾಗಿ ತಾನು ಏನುಮಾಡಬೇಕು ? ಏನು ಮಾಡಬಾರದು ? ಎಂಬ ವಿವೇಚನೆಯುಂಟಾಗುವುದರ ಜೊತೆಗೆ ತನ್ನ ಪಾತ್ರದ ಅರಿವೂ ಸಹ ಆಕೆಗೆ ಆಗುತ್ತದೆ.

ಅನೇಕ ಸಂಶೋಧಕರು ಮಕ್ಕಳ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಸಂಗತಿಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಿದ್ದಾರೆ. ಕುಟುಂಬದ ರಚನೆ, ಕುಟುಂಬದಲ್ಲಿರುವ ಜನರ ಸಂಖ್ಯೆ, ಸಾಮಾಜೊ-ಆರ್ಥಿಕ ಮಟ್ಟ, ಸಾಂಸ್ಕೃತಿಕ ಹಿನ್ನೆಲೆ, ಧಾರ್ಮಿಕ ಆಚಾರಗಳು ಮತ್ತು ಪದ್ಧತಿಗಳು, ಭಾಷೆ ಮತ್ತು ನಂಬಿಕೆಗಳು ಇವೆಲ್ಲವೂ ಮಗುವಿನ ಬೆಳವಣಿಗೆಯ ಮೇಲೆ ಸಾಕಷ್ಟು ಪರಿಣಾಮವನ್ನುಂಟುಮಾಡುವ ಸಂಗತಿಗಳಾಗಿದ್ದರೂ ತಾಯಿಯು ತನ್ನ ನಡವಳಿಕೆಯಿಂದ ಮತ್ತು ಮಗುವನ್ನು ಸಾಕುವ ಪದ್ಧತಿಯಿಂದ ಅದರ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತಾಳೆ ಎಂಬುದನ್ನು ಸಾದರಪಡಿಸಿದೆ (ಕೇಂಟ್ ಮತ್ತು ಡೇವಿಸ್, 1966 ; ಧುವಲ್, 1966 ;

ವೀಟ್. 1966 ; ಲೂಯಿಸ್, ಮೈಕೇಲ್ ಮತ್ತು ವ್ಯಾಲರಿ, 1979 ; ಸಿಲ್ವರ್ ಸನ್ ಮತ್ತು ರೈನಾ, 1979 ; ಕ್ಯಾಂಪ್‌ಬೆಲ್ ಮತ್ತು ಸೂಸನ್, 1979).

ಮಕ್ಕಳನ್ನು ಬೆಳೆಸುವ ಪದ್ಧತಿ ಗ್ರಾಮೀಣ ಹಾಗೂ ಪಟ್ಟಣದ ಕುಟುಂಬಗಳಲ್ಲಿ ಬೇರೆ ಬೇರೆಯಾಗಿರುತ್ತವೆ, ಅನೇಕ ಕಾರಣಗಳಿಂದಾಗಿ. ಬಹುಶಃ ಗ್ರಾಮಾಂತರ ತಾಯಂದಿರು ತಮ್ಮ ಶಿಕ್ಷಣದ ಮಟ್ಟದಿಂದಾಗಲಿ ಅಥವಾ ಪರಿಸರದ ಇತಿಮಿತಿಯಿಂದಾಗಿ ತೃಪ್ತಿಕರ ರೀತಿಯಲ್ಲಿ ಮಕ್ಕಳನ್ನು ಬೆಳೆಸುವ ಸಾಧ್ಯತೆ ಆಗಲಾರದು. ಹೀಗಾಗಿ, ಅದರ ಬಗ್ಗೆ ಅವರಿಗಿರುವ ಪ್ರಜ್ಞೆಯೂ ಸಹ ಮಿತಿಯುಳ್ಳದ್ದಾಗಿರಬಹುದು. ಈ ದೃಷ್ಟಿಯಿಂದ ಮಕ್ಕಳನ್ನು ಬೆಳೆಸುವ ಬಗೆಗೆ ಗ್ರಾಮಾಂತರ ತಾಯಂದಿರ ಮನೋವೃತ್ತಿಯ ಅಧ್ಯಯನ ಲಾಭದಾಯಕವಾಗಿದೆ.

ಪ್ರಸ್ತುತ ಸಂಶೋಧನೆ

ಗ್ರಾಮಾಂತರ ತಾಯಂದಿರ ಮನೋವೃತ್ತಿಯನ್ನು ಅಧ್ಯಯನ ಮಾಡುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣ ಅಭಿವೃದ್ಧಿ ಅಧ್ಯಯನ ಕೇಂದ್ರದಲ್ಲಿ ಈ ಅಧ್ಯಯನವನ್ನು ಕೈಗೊಂಡು, ಅದರಂತೆ ಬೆಂಗಳೂರು ಜಿಲ್ಲೆಯ ಕೊಮ್ಮಘಟ್ಟ ಎಂಬ ಚಿಕ್ಕ ಹಳ್ಳಿಯಲ್ಲಿನ ನೂರ ಹನ್ನೊಂದು ಕುಟುಂಬಗಳ ಪೈಕಿ, ಇಪ್ಪತ್ತು ಕುಟುಂಬದ ತಾಯಂದಿರನ್ನು ಒಂದು ಪ್ರಶ್ನಾವಳಿಯ ಸಹಿತ ಸಂದರ್ಶಿಸಲಾಯಿತು. ಪ್ರಶ್ನಾವಳಿಯಲ್ಲಿ ನಲವತ್ತೈದು ಮನೋವೃತ್ತಿ ಸೂಚಕ ಹೇಳಿಕೆಗಳಿದ್ದು, ಅವುಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿತ್ತು. ಹೇಳಿಕೆಗಳನ್ನು ಬಹಳ ಜಾಗರೂಕತೆಯಿಂದ ಹಾಗೂ ಶಿಕ್ಷಣ, ಮನಃಶಾಸ್ತ್ರ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರಗಳಲ್ಲಿನ ತಜ್ಞರ ಸಲಹೆಯ ಮೇಲೆ ಪರಿಷ್ಕರಿಸಿ ಸಿದ್ಧಪಡಿಸಲಾಗಿತ್ತು. ಅವರಿಂದ ಪಡೆದ ಉತ್ತರಗಳನ್ನು ಶೇಕಡಾ ಕ್ರಮ ಮತ್ತು ಕೈವರ್ಗ (chi-square) ತಂತ್ರದಿಂದ ವಿಶ್ಲೇಷಿಸಲಾಯಿತು.

ಈ ಕೆಳಗಿನ ಪಟ್ಟಿಗಳಲ್ಲಿ ಲಬ್ಧಾಂಶವನ್ನು ವಿಶ್ಲೇಷಿಸಿ ವಿವರಿಸಲಾಗಿದೆ.

ಪಟ್ಟಿ ಒಂದರಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಹೇಳಿಕೆಗಳ ಉತ್ತರಗಳನ್ನು ವಿಶ್ಲೇಷಿಸಲಾಗಿದೆ.

ಪಟ್ಟಿ ಒಂದು

ಶಿಕ್ಷಣಕ್ಕೆ ಸಂಬಂಧಪಟ್ಟ ಹೇಳಿಕೆಗಳ ವಿಶ್ಲೇಷಣೆ :

ಕ್ರಮ ಸಂಖ್ಯೆ	ಹೇಳಿಕೆ	ಉತ್ತರಗಳು								ಕೈವರ್ಗ
		ಪೂರ್ಣ ಸಮ್ಮತಿ		ಸಮ್ಮತಿ		ಅಸಮ್ಮತಿ		ಪೂರ್ಣ ಅಸಮ್ಮತಿ		
		ಸಂ.	ಶೇ.	ಸಂ.	ಶೇ.	ಸಂ.	ಶೇ.	ಸಂ.	ಶೇ.	
1	ಮಗುವಿನ ಮೊದಲ ಗುರು ತಾಯಿ (+)	1	5	19	95	—	—	—	—	52.9**
2	ಮಗನ ಶಿಕ್ಷಣದಷ್ಟೇ ಮಗಳ ಶಿಕ್ಷಣವೂ ಮುಖ್ಯ (+)	8	40	10	50	1	5	1	5	13.2*
3	ತಾಯಿಯು ಮಕ್ಕಳಿಗೆ ಹಿರಿಯರನ್ನು ಗೌರವಿಸಲು ಕಲಿಸುವುದು (+)	12	60	8	40	--	—	—	—	21.6**
4	ಲೈಂಗಿಕ ಶಿಕ್ಷಣದ ಬಗ್ಗೆ ತಾಯಿಯು ತನ್ನ ಹೆಣ್ಣು ಮಕ್ಕಳಿಗೆ ತಿಳುವಳಿಕೆ ಕೊಡಬೇಕು (+)	—	—	18	90	2	10	—	—	15.2*
5	ಮಕ್ಕಳ ವ್ಯಾಯಾಮದ ಬಗ್ಗೆ ತಾಯಿಯು ಗಮನ ಕೊಡಬೇಕಾಗಿಲ್ಲ (–)	—	—	6	30	14	70	—	—	26.4**
6	ತಂದೆ ತಾಯಿಗಳು ಮಕ್ಕಳ ಕಲಿಕೆಯ ಸಮಸ್ಯೆಗಳಲ್ಲಿ ನೆರವಾಗಬೇಕು (+)	1	5	13	65	5	25	1	5	19.2**

7	ತಂದೆ ತಾಯಿಗಳು ಮಕ್ಕಳನ್ನು ಮನೆಗೆಲಸದಲ್ಲಿ ತೊಡಗಿಸಬೇಕಾಗಿಲ್ಲ (–)	—	—	6	30	13	65	1	5	21.2**
8	ಮಕ್ಕಳಿಗೆ ಆಸಕ್ತಿ ಇಲ್ಲದಿದ್ದರೆ ಶಾಲೆಗೆ ಹೋಗುವಂತೆ ಅವರನ್ನು ಬಲಾತ್ಕರಿಸಬೇಕಾಗಿಲ್ಲ (–)	—	—	7	35	6	30	7	35	6.8
9	ಮಕ್ಕಳ ಆಕಾಂಕ್ಷೆಗೆ ತಕ್ಕಂತೆ ತಂದೆ ತಾಯಿಗಳು ಅವರಿಗೆ ಶಿಕ್ಷಣ ನೀಡಬೇಕು (+)	—	—	13	65	7	35	—	—	23.6**
10	ಮಕ್ಕಳು ಎಂತಹ ಸಾಹಿತ್ಯವನ್ನು ಓದುತ್ತಾರೆಂಬುದನ್ನು ಆಗಾಗ್ಗೆ ಪರೀಕ್ಷಿಸಬೇಕು (+)	1	5	16	80	2	10	1	5	32.4**
11	ತನ್ನ ಮಕ್ಕಳಿಗೆ ತಾಯಿಯು ಶೌಚಾಭ್ಯಾಸಗಳನ್ನು ಕಲಿಸಬೇಕು (+)	5	25	14	70	1	5	—	—	21.0**
12	ಮಕ್ಕಳ ಆಹಾರ ಸೇವನೆಯ ಅಭ್ಯಾಸದ ಬಗ್ಗೆ ತಾಯಿಯು ಕಾಳಜಿ ವಹಿಸಬೇಕಾಗಿಲ್ಲ (–)	—	—	2	10	17	85	1	5	34.2**

[** $P_{(3,0.001)} = 16.27$; * $P_{(3,0.01)} = 11.34$]

ಮೇಲಿನ ಪಟ್ಟಿಯಲ್ಲಿರುವ ಹನ್ನೆರಡು ಹೇಳಿಕೆಗಳ ಕೈವರ್ಗದ ಬೆಲೆಯಲ್ಲಿ ಒಂದನ್ನು ಬಿಟ್ಟು ಮಿಕ್ಕ ಎಲ್ಲವೂ 0.01 ಮತ್ತು 0.001 ಮಟ್ಟದಲ್ಲಿ ಮಹತ್ವ ಉಳ್ಳದ್ದಾಗಿದೆ. ಅಂದರೆ ಕೇಳಿದ ಎಲ್ಲ ಹೇಳಿಕೆಗೂ ತಾಯಂದಿರು ಕೊಟ್ಟ ಉತ್ತರ ಸ್ಪಷ್ಟ ಹಾಗೂ ಖಚಿತವಾಗಿದೆ ಎಂದಾಯಿತು. ಆದರೆ ಎಂಟನೆಯ ಹೇಳಿಕೆ: "ಮಕ್ಕಳಿಗೆ ಆಸಕ್ತಿ ಇಲ್ಲದಿದ್ದರೆ ಶಾಲೆಗೆ ಅವರನ್ನು ಹೋಗಲು ಬಲಾತ್ಕರಿಸಬೇಕಾಗಿಲ್ಲ", ಎಂಬುದಕ್ಕೆ ಅವರ ಉತ್ತರ ಸಂದಿಗ್ಧವಾಗಿತ್ತು. ಆದ್ದರಿಂದ ಇದರ ಬಗ್ಗೆ ಅವರಲ್ಲಿ ಒಮ್ಮತವಿಲ್ಲವೆಂದು ತಿಳಿದು ಬರುತ್ತದೆ.

ಉಳಿದ ಹೇಳಿಕೆಗಳ ಬಗ್ಗೆ ಅವರ ಮನೋವೃತ್ತಿಯು ಖಚಿತವಾಗಿದ್ದು ಮಕ್ಕಳನ್ನು ಬೆಳೆಸುವುದರಲ್ಲಿ ಶೈಕ್ಷಣಿಕ ಅಂಶದ ಬಗ್ಗೆ ಅವರ ಪ್ರವೃತ್ತಿಯನ್ನು ಗ್ರಾಮೀಣ ತಾಯಂದಿರು ನಿಖರವಾಗಿ ನಿರೂಪಿಸಿದ್ದಾರೆ. ಇದರಲ್ಲಿ ಎಂಟು ಹೇಳಿಕೆಗಳಿಗೆ ತಮ್ಮ ಸಮ್ಮತಿಯನ್ನು ಸೂಚಿಸಿ, ತಾವು ಏನು ಮಾಡಬೇಕು ಎಂಬುದರ ಬಗ್ಗೆ ತಮಗೆ ಸರಿಯಾದ ಅರಿವಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಂದರೆ 'ತಾಯಿಯು ಮಗುವಿನ ಪ್ರಥಮ ಗುರು,' 'ಮಗ ಮತ್ತು ಮಗಳನ್ನು ಸಮಾನವಾಗಿ ಬೆಳೆಸಬೇಕು,' 'ಹಿರಿಯರನ್ನು ಗೌರವಿಸಲು ಅವರಿಗೆ ಕಲಿಸಬೇಕು,' 'ಲೈಂಗಿಕ ಶಿಕ್ಷಣವನ್ನು ಅವರಿಗೆ ನೀಡಬೇಕು,' 'ಅವರ ಕಲಿಕೆಯ ಸಮಸ್ಯೆಯನ್ನು ಬಿಡಿಸಬೇಕು', 'ಅವರ ಆಕಾಂಕ್ಷೆಗೆ ತಕ್ಕಂತೆ ಅವರಿಗೆ ಶಿಕ್ಷಣ ನೀಡಬೇಕು', 'ಅವರು ಓದುವ ಸಾಹಿತ್ಯದ ಬಗ್ಗೆ ಗಮನವೀಯಬೇಕು', ಹಾಗೂ 'ಅವರಿಗೆ ಶೌಚಾಭ್ಯಾಸಗಳನ್ನು ಕಲಿಸಬೇಕು'–ಈ ಅಂಶಗಳ ಬಗ್ಗೆ ತಮ್ಮ ಕರ್ತವ್ಯದ ಅರಿವನ್ನು ಅವರು ಸ್ಪಷ್ಟಪಡಿಸಿದ್ದಾರೆ. ಹಾಗೆಯೇ ಉಳಿದ ಹೇಳಿಕೆಗಳ ಬಗ್ಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿ, 'ಮಕ್ಕಳ ವ್ಯಾಯಾಮದ ಬಗ್ಗೆ ಗಮನಕೊಡಬೇಕೆಂಬುದನ್ನು', 'ಅವರಿಗೆ ಮನೆಯ ಕೆಲಸ ಕಲಿಸಬೇಕೆಂಬುದನ್ನು'. ಮತ್ತು 'ಅವರ ಆಹಾರ ಸೇವನೆಯ ಬಗ್ಗೆ ಗಮನವೀಯಬೇಕೆಂಬುದನ್ನು ಸಹ ಒಪ್ಪಿಕೊಂಡಿದ್ದಾರೆ.

ಈ ಮುಂದಿನ ಪಟ್ಟಿಯಲ್ಲಿ ಶಿಸ್ತಿನ ಬಗ್ಗೆ ಕೊಟ್ಟಿರುವ ಹೇಳಿಕೆಗಳ ಉತ್ತರವನ್ನು ವಿಶ್ಲೇಷಿಸಲಾಗಿದೆ.

ಪಟ್ಟಿ ಎರಡು

ಶಿಸ್ತಿಗೆ ಸಂಬಂಧ ಪಟ್ಟ ಹೇಳಿಕೆಗಳ ವಿಶ್ಲೇಷಣೆ

ಕ್ರಮ ಸಂಖ್ಯೆ	ಹೇಳಿಕೆ	ಉತ್ತರಗಳು: ಪೂರ್ಣ ಸಮ್ಮತಿ ಸಂ.	ಪೂರ್ಣ ಸಮ್ಮತಿ ಶೇ.	ಸಮ್ಮತಿ ಸಂ.	ಸಮ್ಮತಿ ಶೇ.	ಅಸಮ್ಮತಿ ಸಂ.	ಅಸಮ್ಮತಿ ಶೇ.	ಪೂರ್ಣ ಅಸಮ್ಮತಿ ಸಂ.	ಪೂರ್ಣ ಅಸಮ್ಮತಿ ಶೇ.	ಕೈ ವರ್ಗ
1	ಮಗುವಿನ ವರ್ತನೆಯನ್ನು ಸರಿಪಡಿಸಲು ತಾಯಿಯು ಅದನ್ನು ಶಿಕ್ಷಿಸಬೇಕು (+)	8	40	10	50	1	5	1	5	13.2*
2	ಮಗುವನ್ನು ಸಂಭಾಳಿಸಲು ತಾಯಿಗೆ ಸಾಧ್ಯವಾಗದಿದ್ದರೆ ಅದರ ತಂದೆಗೆ ದೂರು ಕೊಡಬೇಕು (–)	1	5	7	35	9	45	3	15	8 0
3	ಮಕ್ಕಳನ್ನು ಹೆಚ್ಚು ಪ್ರೀತಿಸುವುದಕ್ಕಿಂತ ಅವರನ್ನು ಭಯದಲ್ಲಿರಿಸುವುದು ಮೇಲು (–)	4	20	8	40	5	25	3	15	2.8
4	ತಾಯಿಯು ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು +	1	5	5	25	11	55	3	15	11.2
5	ಹಿರಿಯರ ವ್ಯವಹಾರಗಳಲ್ಲಿ ಮಕ್ಕಳು ತಲೆ ಹಾಕುವುದನ್ನು ತಡೆಯಲು ತಾಯಿಯು ಅವರನ್ನು ಅಂಕೆಯಲ್ಲಿರಿಸಬೇಕು (+)	7	35	13	65	—	—	—	—	23.6**

6	ಮಕ್ಕಳು ಮೆಚ್ಚುಗೆಗೆ ಪಾತ್ರರಾದರೂ ಅವರನ್ನು ತಾಯಿಯು ಹೊಗಳಬಾರದು (–)	1	5	10	50	7	35	2	10	10.8
7	ತಾಯಿಯು ಮಕ್ಕಳನ್ನು ದಂಡಿಸುವುದಕ್ಕಿಂತ ಅವರನ್ನು ಪ್ರೀತಿಸಬೇಕು (+)	1	5	3	15	16	80	—	—	33.2**
8	ಮಕ್ಕಳ ಬಗ್ಗೆ ಇತರರು ದೂರಿತ್ತಾಗ ತಾಯಿಯು ಮಕ್ಕಳನ್ನು ಅನುಮೋದಿಸಬೇಕು (–)	—	—	4	20	14	70	2	10	23.2**
9	ಚಿಕ್ಕ ಮಕ್ಕಗಳನ್ನು ಅಂಕೆಯಿಲ್ಲದೆ ಬೆಳೆಯಲು ಬಿಡಬೇಕು (–)	1	5	—	—	9	45	10	50	16.4**
10	ಮಕ್ಕಳು ತರುವ ದೂರಿನ ಬಗ್ಗೆ ತಂದೆ ತಾಯಿಗಳು ಗಮನ ಕೊಡಬಾರದು (–)	—	—	16	80	4	20	—	—	34.4**
11	ತಂದೆ ತಾಯಿಗಳನ್ನು ಮಕ್ಕಳು ರೇಗಿಸಿದಾಗ ಅವರನ್ನು ಹೊಡೆಯುವುದು ತಪ್ಪಲ್ಲ (–)	—	—	16	80	3	15	1	5	33.2**

[**P (3,0.001) = 16.27 ; *P (3,0.01) = 11.34]

ಮೇಲಿನ ಪಟ್ಟಿಯಲ್ಲಿ ಶಿಸ್ತಿನ ಬಗ್ಗೆ ಹನ್ನೊಂದು ಹೇಳಿಕೆಗಳಿದ್ದು, ಅವುಗಳಲ್ಲಿ ನಾಲ್ಕು ಹೇಳಿಕೆಗಳು ತಾಯಂದಿರು ತಮ್ಮ ಮಕ್ಕಳನ್ನು ಶಿಸ್ತಿನಿಂದ ಬೆಳೆಸಲು ಏನು ಮಾಡಬೇಕು ? ಎಂಬುದನ್ನು ನಿರೂಪಿಸಿ, ಉಳಿದ ಹೇಳಿಕೆಗಳು ಅವರು ಏನನ್ನು ಮಾಡಬಾರದು ? ಎಂಬುದನ್ನು ನಿರ್ದೇಶಿಸುವಂಥವು. ಅವರ ಉತ್ತರಗಳ ಬಗ್ಗೆ ಲಬ್ಧವಾದ ಕೈವರ್ಗ ಬೆಲೆಯು ನಾಲ್ಕು ಹೇಳಿಕೆಗಳಲ್ಲಿ ಮಹತ್ವವಿಲ್ಲದುದಾಗಿದ್ದು, ಉಳಿದ ಏಳು ಹೇಳಿಕೆಗಳ ಬಗ್ಗೆ ಅವು 0.01 ಮತ್ತು 0.001 ಮಟ್ಟದಲ್ಲಿ ಮಹತ್ವವುಳ್ಳವಾಗಿವೆ. ಅಂದರೆ 'ತಾಯಿಯು ಮಕ್ಕಳ ಬಗ್ಗೆ ತಂದೆಗೆ ದೂರು ಕೊಡಬೇಕು', 'ತಾಯಿಯು ಮಕ್ಕಳನ್ನು ಹೆದರಿಕೆಯಲ್ಲಿರಿಸಬೇಕು' 'ತಾಯಿಯು ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು', ಹಾಗೂ 'ತಾಯಿಯು ಮಕ್ಕಳನ್ನು ಹೊಗಳಬಾರದು'— ಈ ನಾಲ್ಕು ಹೇಳಿಕೆಗಳ ಬಗ್ಗೆ ತಾಯಂದಿರ ಉತ್ತರಗಳಲ್ಲಿ ಭಿನ್ನಾಭಿಪ್ರಾಯವಿದ್ದು, ಅವರಲ್ಲಿ ಒಮ್ಮತವಿಲ್ಲ. ಆದರೆ ಉಳಿದ ಹೇಳಿಕೆಗಳ ಬಗ್ಗೆ ಅವರಲ್ಲಿ ನಿಖರವಾದ ಅಭಿಪ್ರಾಯವಿರುವುದು ಕಂಡು ಬರುತ್ತದೆ. 'ತಾಯಿಯು ಮಕ್ಕಳನ್ನು ಶಿಕ್ಷಿಸಬೇಕು', 'ತಾಯಿಯು ಮಕ್ಕಳನ್ನು ಅಂಕೆಯಲ್ಲಿಡಬೇಕು', ತಾಯಿಯು ಮಕ್ಕಳನ್ನು ಶಿಕ್ಷಿಸುವುದಕ್ಕಿಂತ ಪ್ರೀತಿಸಬೇಕು', 'ತಂದೆ ತಾಯಿಗಳು ಮಕ್ಕಳ ದೂರಿನ ಬಗ್ಗೆ ಗಮನ ಕೊಡಬೇಕಾಗಿಲ್ಲ', ಹಾಗೂ 'ತಂದೆ ತಾಯಿಗಳು ಮಕ್ಕಳನ್ನು ಹೊಡೆಯುವುದು ತಪ್ಪಲ್ಲ'— ಈ ಹೇಳಿಕೆಗಳ ಬಗ್ಗೆ ತಮ್ಮ ಸಮ್ಮತಿಯನ್ನು ಖಚಿತವಾಗಿ ಸೂಚಿಸಿದ್ದಾರೆ. ಹಾಗೂ, 'ತಾಯಿಯು ಇತರರು ತಮ್ಮ ಮಕ್ಕಳ ಬಗ್ಗೆ ದೂರಿತ್ತಾಗ ತಮ್ಮ ಮಕ್ಕಳನ್ನು ಅನುಮೋದಿಸಬೇಕು' ಮತ್ತು 'ಚಿಕ್ಕ ಮಕ್ಕಳನ್ನು ಅಂಕೆ ಇಲ್ಲದೆ ಬೆಳೆಸಬೇಕು'— ಈ ಹೇಳಿಕೆಗಳ ಬಗ್ಗೆ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ.

ಪಟ್ಟಿ ಮೂರರಲ್ಲಿ ಸಾಮಾಜೀಕರಣಕ್ಕೆ ಸಂಬಂಧಪಟ್ಟ ಹೇಳಿಕೆಗಳನ್ನು ವಿಶ್ಲೇಷಿಸಲಾಗಿದೆ.

ಪಟ್ಟಿ ಮೂರು

ಸಾಮಾಜೀಕರಣಕ್ಕೆ ಸಂಬಂಧ ಪಟ್ಟ ಹೇಳಿಕೆಗಳ ವಿಶ್ಲೇಷಣೆ

ಕ್ರಮ ಸಂಖ್ಯೆ	ಹೇಳಿಕೆ	ಉತ್ತರಗಳು: ಪೂರ್ಣ ಸಮ್ಮತಿ ಸಂ.	ಪೂರ್ಣ ಸಮ್ಮತಿ ಶೇ.	ಸಮ್ಮತಿ ಸಂ.	ಸಮ್ಮತಿ ಶೇ.	ಅಸಮ್ಮತಿ ಸಂ.	ಅಸಮ್ಮತಿ ಶೇ.	ಪೂರ್ಣ ಅಸಮ್ಮತಿ ಸಂ.	ಪೂರ್ಣ ಅಸಮ್ಮತಿ ಶೇ.	ಕೈ ವರ್ಗ
1	ಮಗ ಮತ್ತು ಮಗಳೊಡನೆ ತಂದೆ ತಾಯಿಗಳು ಸಮಾನವಾಗಿ ನಡೆದುಕೊಳ್ಳಬೇಕು (+)	4	20	15	75	1	5	—	—	24.8**
2	ತಾಯಿಯು ತನ್ನ ಮಕ್ಕಳ ಎಲ್ಲ ಕೋರಿಕೆಗಳನ್ನು ವಿವೇಚಿಸದೆ ಈಡೇರಿಸಬೇಕು (−)	—	—	6	30	9	45	5	25	8.4
3	ತಮ್ಮ ಮಕ್ಕಳು ಯಾರ ಸಹವಾಸ ಮಾಡುವರೋ ಎಂಬುವದರ ಬಗ್ಗೆ ತಾಯಿಯು ಒಂದು ಕಣ್ಣಿಟ್ಟಿರಬೇಕು (+)	2	10	14	70	4	20	—	—	23.2**
4	ತನ್ನ ಸಂಸ್ಕೃತಿಯ ಬಗ್ಗೆ ತನ್ನ ಮಕ್ಕಳಿಗೆ ಶಿಕ್ಷಣ ನೀಡುವುದು ತಾಯಿಯ ಆದ್ಯ ಕರ್ತವ್ಯ (+)	8	40	12	60	—	—	—	—	21.6**
5	ಮಕ್ಕಳು ತಮ್ಮ ಮೌಲ್ಯಗಳನ್ನು ಅನುಸರಿಸುವ ಸಲುವಾಗಿ ತಾಯಿಯು ಇತರ ಕೆಟ್ಟ ಪ್ರಭಾವಗಳನ್ನು ತಡೆಗಟ್ಟಬೇಕು. (+)	1	5	15	75	1	5	—	—	27.2**

6	ಮಕ್ಕಳು ಹದಿನಾರನೇ ವಯಸ್ಸಿಗೆ ಬರುತ್ತಲೆ ತಂದೆ ತಾಯಿಗಳು ಅವರನ್ನು ತಮಗೆ ಸಮಾನರಂತೆ ಕಾಣಬೇಕು (+)	—	—	13	65	7	35	—	—	23.6**
7	ತಮ್ಮ ಮಕ್ಕಳ ಎದುರಿನಲ್ಲಿ ತಂದೆ ತಾಯಿಗಳು ಜಗಳವಾಡುವುದು ತಪ್ಪಲ್ಲ (−)	2	10	7	35	10	50	1	5	10.8
8	ತಮ್ಮ ಸಂಪ್ರದಾಯದ ವಿರುದ್ಧ ವರ್ತಿಸುವಂತಹ ಸ್ವಾತಂತ್ರ್ಯವನ್ನು ಮಕ್ಕಳಿಗೆ ತಂದೆ ತಾಯಿಗಳು ಕೊಡಬೇಕು (+)	1	5	2	10	8	40	9	45	10.8
9	ತಾಯಿಯು ತನ್ನ ಎಂಜಲು ತಟ್ಟೆಯಿಂದ ಮಕ್ಕಳಿಗೆ ಉಣಿಸಬಾರದು (−)	—	—	9	45	11	55	—	—	20.4**
10	ತನ್ನ ಮಕ್ಕಳ ಕೆಟ್ಟ ಅಭ್ಯಾಸಗಳಿಗೆ ಹೆಚ್ಚು ಗಮನ ಕೊಡಬಾರದು (−)	—	—	1	5	9	45	10	50	16.4**

(**P (3,0.001) = 16.27)

ಸಾಮಾಜೀಕರಣಕ್ಕೆ ಸಂಬಂಧಪಟ್ಟ ಹೇಳಿಕೆಗಳಲ್ಲಿ ಮೂರು ಹೇಳಿಕೆಗಳಿಗೆ ಅವರ ಉತ್ತರದ ಕೈವರ್ಗದ ಬೆಲೆಯು ಮಹತ್ವವಿಲ್ಲದಾಗಿದ್ದು, ಉಳಿದ ಏಳು ಹೇಳಿಕೆಗಳಿಗೆ ಅವು 0,001 ಮಟ್ಟದಲ್ಲಿ ಮಹತ್ವವುಳ್ಳದ್ದಾಗಿದೆ, 'ಮಕ್ಕಳ ಎಲ್ಲ ಕೋರಿಕೆಗಳನ್ನು ತಾಯಿಯು ಈಡೇರಿಸಬೇಕು', ಮಕ್ಕಳ ಎದುರಿನಲ್ಲಿ ತಂದೆ ತಾಯಿಗಳು ಜಗಳವಾಡುವುದು ತಪ್ಪಲ್ಲ', ಮತ್ತು 'ಸಂಪ್ರದಾಯದ ವಿರುದ್ಧ ಮಕ್ಕಳು ವರ್ತಿಸಲು ಅವರಿಗೆ ಸ್ವಾತಂತ್ರ್ಯವೀಯಬೇಕು'— ಈ ಹೇಳಿಕೆಗಳ ಬಗ್ಗೆ ತಾಯಂದಿರಲ್ಲಿ ಭಿನ್ನಾಭಿಪ್ರಾಯವಿದೆ. ಹಾಗೆಯೇ, 'ತನ್ನ ಎಂಜಲನ್ನು ಮಕ್ಕಳಿಗೆ ತಿನ್ನಿಸಬಾರದು' ಎಂಬುದರ ಬಗ್ಗೆಯೂ ಸಹ ಅವರಲ್ಲಿ ನಿಖರವಾದ ಭಿನ್ನಮತವಿದೆ. ಉಳಿದ ಹೇಳಿಕೆಗಳ ಬಗ್ಗೆ ಅವರಲ್ಲಿ ಒಮ್ಮತವಿದ್ದು ಈ ಹೇಳಿಕೆಗಳನ್ನು ಒಪ್ಪಿದ್ದಾರೆ: 'ಮಗ ಮತ್ತು ಮಗಳೊಡನೆ ಸಮಾನವಾಗಿ ವರ್ತಿಸಬೇಕು', 'ಮಕ್ಕಳು ಬೆಳೆಸಿಕೊಳ್ಳುವ ಸ್ನೇಹಿತರ ಬಗ್ಗೆ ಒಂದು ಕಣ್ಣಿಟ್ಟಿರಬೇಕು', ತಮ್ಮ ಸಂಸ್ಕೃತಿಯ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡಬೇಕು', 'ಮಕ್ಕಳ ಮೇಲಿನ ಕೆಟ್ಟ ಪ್ರಭಾವವನ್ನು ತಡೆಗಟ್ಟಬೇಕು', 'ದತ್ತಕ್ಕೆ ಬಂದ ಮಕ್ಕಳನ್ನು ಸಮಾನವಾಗಿ ಕಾಣಬೇಕು' ಆದರೆ 'ಮಕ್ಕಳ ಕೆಟ್ಟ ಅಭ್ಯಾಸಗಳ ಬಗ್ಗೆ ಗಮನಕೊಡಬಾರದು' ಎಂಬುದಕ್ಕೆ ತಾಯಂದಿರ ಒಪ್ಪಿಗೆಯಿಲ್ಲ.

ಈ ನಾಲ್ಕನೆಯ ಪಟ್ಟಿಯಲ್ಲಿ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಹೇಳಿಕೆಗಳ ಉತ್ತರಗಳನ್ನು ವಿಶ್ಲೇಷಿಸಲಾಗಿದೆ.

ಪಟ್ಟಿ ನಾಲ್ಕು

ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಹೇಳಿಕೆಗಳ ವಿಶ್ಲೇಷಣೆ

ಕ್ರಮ ಸಂಖ್ಯೆ	ಹೇಳಿಕೆ	ಉತ್ತರಗಳು: ಪೂರ್ಣ ಸಮ್ಮತಿ		ಸಮ್ಮತಿ		ಅಸಮ್ಮತಿ		ಪೂರ್ಣ ಅಸಮ್ಮತಿ		ಕೈ ವರ್ಗ
		ಸಂ.	ಶೇ.	ಸಂ.	ಶೇ.	ಸಂ.	ಶೇ.	ಸಂ.	ಶೇ.	
1	ತಮ್ಮದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಮಕ್ಕಳಿಗೆ ತಾಯಿಯು ಸಹಾಯ ಮಾಡಬೇಕು (+)	12	60	8	40	—	—	—	—	21.6**
2	ತಾಯಿಯು ಆದಷ್ಟು ಬೇಗ ತನ್ನ ಮಕ್ಕಳು ತನ್ನಿಂದ ಸ್ವತಂತ್ರರಾಗುವಂತೆ ನೋಡಿಕೊಳ್ಳಬೇಕು (+)	1	5	2	10	14	70	—	—	22.0**
3	ಮಕ್ಕಳು ತಮ್ಮ ಮಾನಸಿಕ ತುಮುಲವನ್ನು ಪರಿಹರಿಸಿಕೊಳ್ಳಲು ತಾಯಿಯು ಸಹಾಯ ಮಾಡಬೇಕು (+)	2	10	12	60	6	30	—	—	16.8**
4	ಯಾವ ಕಾರಣಕ್ಕಾಗಿಯೇ ಆಗಲಿ ತಾಯಿಯು ತನ್ನ ಮಕ್ಕಳೊಂದಿಗೆ ಸುಳ್ಳು ನುಡಿಯಬಾರದು (+)	1	5	12	60	7	35	—	—	18.8**
5	ಮಗುವು ಅತ್ತಾಗಲೆಲ್ಲ ತಾಯಿಯು ಅದಕ್ಕೆ ಏನಾದರೂ ತಿನ್ನಲು ಕೊಡಬೇಕು (−)	—	—	14	70	6	30	—	—	26.4**

6	ಮೊದಲೇ ಪಡೆದಿರುವ ತಾಯಿಗೆ ಮಕ್ಕಳು ಒಂದು ಅನಿಷ್ಟ (–)	—	—	1	5	10	50	9	45	16.4**
7	ಅತಿ ಹೆಚ್ಚಿನ ಮನೆಗೆಲಸದಿಂದಾಗಿ ತಾಯಿಯು ತನ್ನ ಮಕ್ಕಳ ಅವಶ್ಯಕತೆಗೆ ಗಮನ ಕೊಡಬೇಕಾಗಿಲ್ಲ (–)	—	—	6	30	12	60	2	10	16.8**
8	ತಂದೆ ತಾಯಿಗಳು ತಮ್ಮ ಮಕ್ಕಳ ಮೌಲ್ಯ ಗೌರವಿಸ ಬೇಕಾಗಿಲ್ಲ (–)	—	—	13	65	7	35	—	—	23.6**
9	ತಾಯಿಯು ತನ್ನ ಮಕ್ಕಳ ಆರೋಗ್ಯದ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲ ಏಕೆಂದರೆ ಅದು ದೇವರಿಗೆ ಸಂಬಂಧಿಸಿದ್ದು (–)	—	—	—	—	16	80	4	20	34.4**
10	ಹಟಮಾರಿ ಮಕ್ಕಳನ್ನು ಹೊಡೆದಾಗಲಿ ಅಥವಾ ಬೈದಾಗಲಿ ತಾಯಿಯು ತಿದ್ದಬೇಕು (+)	2	10	16	80	1	5	1	5	32.4**
11	ಆದಷ್ಟು ಬೇಗ ಮಗುವಿಗೆ ತಾಯಿ ಹಾಲೂಡಿಸುವುದನ್ನು ಬಿಡಿಸುವುದು ಮೇಲು (+)	1	5	6	30	13	65	—	—	21.6**

$\left\{ ^{**}\ P_{(3, 0.001)} = 16.27 \right\}$

ಈ ಪಟ್ಟಿಯಲ್ಲಿನ ಎಲ್ಲ ಹೇಳಿಕೆಗಳ ಕೈವರ್ಗ ಬೆಲೆಯು ಮಹತ್ವದ್ದಾಗಿದ್ದು, ತಾಯಂದಿರ ಅಭಿಪ್ರಾಯವು ಇವುಗಳ ಬಗ್ಗೆ ಬಹಳ ನಿಶ್ಚಯವಾಗಿದೆ ಎಂದು ತಿಳಿದು ಬರುತ್ತದೆ. ತಾಯಂದಿರು ಈ ಕೆಳಗಿನ ಹೇಳಿಕೆಗಳ ಬಗ್ಗೆ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ: 'ತಾಯಿಯು ಮಕ್ಕಳ ವ್ಯಕ್ತಿತ್ವ ಬೆಳವಣಿಗೆಗೆ ಸಹಾಯಕಳಾಗ ಬೇಕು,' 'ಅವರ ಮಾನಸಿಕ ಸಮಸ್ಯೆಗಳನ್ನು ಬಿಡಿಸಲು ಸಹಾಯ ಮಾಡಬೇಕು,' ಅವರೊಡನೆ ಸುಳ್ಳು ಹೇಳಬಾರದು,' 'ಮಕ್ಕಳು ಅತ್ತಾಗ ಅವರಿಗೆ ಏನನ್ನಾದರು ತಿನ್ನಲು ಕೊಡಬೇಕು,' 'ಅವರ ವಾಲ್ಯಗಳನ್ನು ಗೌರವಿಸಬೇಕಾಗಿಲ್ಲ', ಮಕ್ಕಳನ್ನು ಹೊಡೆದು ಅಥವಾ ಬೈದು ಅವರನ್ನು ಸರಿಯಾದ ದಾರಿಗೆ ತರಬೇಕು'. ಇದಕ್ಕೆ ವಿರುದ್ಧವಾಗಿ ಉಳಿದ ಹೇಳಿಕೆಗಳ ಬಗ್ಗೆ ತಾಯಂದಿರಿಗೆ ಸಮ್ಮತಿ ಇಲ್ಲ: 'ಆದಷ್ಟು ಬೇಗ ತಾಯಿಯಿಂದ ಸ್ವತಂತ್ರವಾಗಿ ಬೆಳೆಯಬೇಕು', 'ಮೊದಲೇ ದಣಿದಿರುವ ತಾಯಿಗೆ ಮಕ್ಕಳು ಒಂದು ಅನಿಷ್ಟ'. 'ಗೃಹಕಾರ್ಯದಿಂದಾಗಿ ತಾಯಿಯು ಮಕ್ಕಳ ಅವಶ್ಯಕತೆಗಳನ್ನು ಪೂರೈಸಬೇಕಾಗಿಲ್ಲ', 'ದೇವರಿಗೆ ಸಂಬಂಧಿಸಿದ ವಿಷಯವಾದ್ದ ರಿಂದ ಮಕ್ಕಳ ಆರೋಗ್ಯದ ಬಗ್ಗೆ ತಾಯಿಯು ಏನನ್ನೂ ಮಾಡಬೇಕಾಗಿಲ್ಲ' ಮತ್ತು 'ಬೇಗ ತಾಯ ಹಾಲುಣಿಸುವುದನ್ನು ಬಿಡಿಸಬೇಕು' – ಈ ಅಂಶಗಳ ಬಗ್ಗೆ ಅವರಿಗೆ ಸಮ್ಮತಿ ಇಲ್ಲ.

ಉಪಸಂಹಾರ :

ಈ ಸಂಶೋಧನೆಯಿಂದ ಗ್ರಾಮೀಣ ತಾಯಂದಿರಲ್ಲಿ ಮಕ್ಕಳನ್ನು ಬೆಳೆಸುವುದರ ಬಗ್ಗೆ, ಅಂದರೆ ಅವರ ಶೈಕ್ಷಣಿಕ, ಸಾಮಾಜಿಕ, ಶಿಸ್ತಿನ ಹಾಗೂ ವ್ಯಕ್ತಿತ್ವದ ವಿಷಯ ದಲ್ಲಿ ಉತ್ತಮ ತಿಳಿವಳಿಕೆ ಇದ್ದು. ಅವರು ತಮ್ಮ ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎನ್ನುವ ಅಂಶ ಸಿದ್ಧವಾಗಿದೆ. ಆದರೂ ಇಂದಿನ ಸಮಾಜದ ಬೆಳವಣಿಗೆಯ ದೃಷ್ಟಿಯಿಂದ ಮತ್ತು ಆಧುನೀಕರಣದ ಪ್ರಗತಿಯ ದೃಷ್ಟಿಯಿಂದ ಅವರಲ್ಲಿ ಹಲವು ಸಂಪ್ರದಾಯಿಕ ತಪ್ಪು ಕಲ್ಪನೆಗಳು ಇರುವುದೂ ಸಹ ಗೋಚರ ವಾಗಿದೆ. ಈ ದೃಷ್ಟಿಯಲ್ಲಿ ನೂತನ ವಿಷಯಗಳ ಬಗ್ಗೆ ಅವರಿಗೆ ತಿಳಿವಳಿಕೆ ಕೊಡ ಬೇಕಾಗಿದೆ. ಒಟ್ಟಿನಲ್ಲಿ ಗ್ರಾಮೀಣ ತಾಯಂದಿರು ತಮ್ಮ ಮಕ್ಕಳ ಬೆಳವಣಿಗೆಯ ಬಗ್ಗೆ ಅತ್ಯಂತ ಕಾಳಜಿ ವಹಿಸುವವರಲ್ಲದೆ. ಅವರ ಏಳಿಗೆಗೆ ತ್ಯಾಗ ಮಾಡಲು ಸಿದ್ಧರಿದ್ದು, ತಮ್ಮ ಮಕ್ಕಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಕಲ್ಪಿಸಿಕೊಡುವುದರಲ್ಲಿ ಕಾತರ ರಾಗಿದ್ದಾರೆ ಎಂಬ ಅಂಶ ಸ್ಪಷ್ಟವಾಗಿದೆ. ಅವರ ಮನೋವೃತ್ತಿ ಉತ್ತಮ ವಾಗಿದ್ದು, ತಮ್ಮ ಸಂಸ್ಕೃತಿಯ ಹಾಗು ಪರಂಪರೆಯ ಚೌಕಟ್ಟಿನಲ್ಲಿ ತಮ್ಮ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಿ. ತಮ್ಮ ಮಕ್ಕಳು ಶಿಸ್ತು ಹಾಗೂ ಸಂಯಮದಿಂದ ಕೂಡಿದ ಉತ್ತಮ ಪ್ರಜೆಗಳಾಗಲು ನೆರವಾಗುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ಬೆಂಗಳೂರು ಜಿಲ್ಲೆಯ ಹಲವು ಸ್ಥಳ ನಾಮಾಂತ್ಯಗಳ (Suffix) ವೈಶಿಷ್ಟ್ಯ

ಮೂಲ : **ಕೆ. ಆರ್. ಮೋಹನ್**
ಅನು : **ಕೆ. ಎಸ್. ರಾಮಮೂರ್ತಿ**

ಕರ್ನಾಟಕವು ಅಪಾರವಾದ ಶಾಸನ ಸಂಪತ್ತಿಗೆ ಆಗರವಾಗಿದೆ. ನೂರಾರು ಮತ್ತು ಸಾವಿರಾರು ಶಾಸನಗಳು ಕರ್ನಾಟಕದ ಎಲ್ಲ ಪ್ರದೇಶಗಳಲ್ಲೂ ಹರಡಿಕೊಂಡಿವೆ. ಶಾಸನಗಳಲ್ಲಿ ಅನೇಕ ವಿಧವಾದ ಸ್ಥಳಗಳ ಹೆಸರುಗಳು ದೊರೆಯುತ್ತವೆ. ಮೈಸೂರು ಜಿಲ್ಲೆಯೊಂದರಲ್ಲೇ ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಸ್ಥಳ ನಾಮಗಳು ವಿವಿಧ ಶಾಸನಗಳಲ್ಲಿ ದೊರೆಯುತ್ತವೆ ಈ ಸ್ಥಳನಾಮಗಳ ಅಂತ್ಯಗಳು ತಮ್ಮದೇ ಆದ ಹಲವು ವಿಶಿಷ್ಟತೆಗಳಿಂದ ಕೂಡಿರುತ್ತವೆ.

ಕರ್ನಾಟಕದ ಎಲ್ಲ ಪ್ರಾಂತ್ಯಗಳ ಸ್ಥಳನಾಮಾಂತ್ಯಗಳ ಅಧ್ಯಯನದ ಹರವು ವಿಶಾಲವಾಗಿರುವುದರಿಂದ, ಪ್ರಸ್ತುತ ಲೇಖನದಲ್ಲಿ ಬೆಂಗಳೂರು ಜಿಲ್ಲೆಗೆ ಸೇರಿದ ಅನೇಕ ಸ್ಥಳಗಳ, ಸ್ಥಳನಾಮಾಂತ್ಯಗಳ ವೈಶಿಷ್ಟ್ಯಗಳ ಬಗ್ಗೆ ವಿವೇಚಿಸಲಾಗಿದೆ. ಇಲ್ಲಿ ಸಂಗ್ರಹಿಸಿರುವ ಸ್ಥಳನಾಮಗಳು ಕ್ರಿ. 1336 ರವರೆಗೆ ಮಾತ್ರ. ಬೆಂಗಳೂರು ಜಿಲ್ಲೆಯಲ್ಲಿ ದೊರೆಯುವ ಸ್ಥಳನಾಮಗಳು ಸಾಮಾನ್ಯವಾಗಿ 'ನಾಡು', 'ನಟ್ಟು', 'ಪಲ್ಲಿ', 'ಹಳ್ಳಿ' ಮತ್ತು ಸಂಖ್ಯಾಸೂಚಿಗಳಿಂದ ಕೊನೆಗೊಳ್ಳುತ್ತವೆ.

'ನಾಡು'—'ನಟ್ಟು' ಇವುಗಳಿಂದ ಕೊನೆಗೊಳ್ಳುವ ಸ್ಥಳನಾಮಗಳು :

ಪ್ರಾಚೀನ ಕಾಲದಿಂದಲೂ ಬೆಂಗಳೂರು ಜಿಲ್ಲೆಗೆ ಸೇರಿದ ಅನೇಕ ಗ್ರಾಮಗಳ ನಾಮಾಂತ್ಯಗಳು 'ನಾಡು'—'ನಟ್ಟು' ಎಂಬ ಪ್ರತ್ಯಯಗಳಿಂದ ಕೊನೆಗೊಂಡ ಉದಾಹರಣೆಗಳು ದೊರೆಯುತ್ತವೆ. 'ನಟ್ಟು'ಪದವು ಮೂಲ ದ್ರಾವಿಡ ಭಾಷೆಗೆ ಉದಾಹರಣೆಯಾಗಿದೆ. 'ನಾಡು'ಪದವನ್ನು ಪ್ರಾಚೀನ ಕಾಲದಿಂದಲೂ ಒಂದು ಪ್ರಾಂತ್ಯದ ಭಾಗವೆಂದು ಪರಿಗಣಿಸುತ್ತಿದ್ದರು. ಇದಕ್ಕೆ ಉದಾಹರಣೆಯೆಂದರೆ,

'ಇಳ್ಬಿಪಕ್ಕನಟ್ಟು' E.C. Vol. 9, Bn 23, P 9

'ಜಿಗಲ್ ನಾಡು' E. C. Vol. 9, Kn 43, P 126, A. D. 1207

ಮೇಲೆ ವಿವರಿಸಿದ ನಾಡು—ನಟ್ಟುಗಳು ತಮ್ಮ ಸ್ವರೂಪವನ್ನು ನಿಧಾನವಾಗಿ ಕಳೆದುಕೊಂಡವು; ಹಾಗೂ ಇಂತಹ ಉದಾಹರಣೆಗಳು ಇಂದು ದೊರೆಯಲಾರವು.

ಕನ್ನಡ ಭಾಷೆಯು ಮೂಲ ದ್ರಾವಿಡ ಭಾಷೆಯಿಂದ ಬೇರೆಯಾಗುವಾಗ ಮೂಲ ದ್ರಾವಿಡ ಪದ 'ನಟ್ಟು'—'ನಾಡು' ಪದವಾಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

'ಪಲ್ಲಿ'–'ಹಳ್ಳಿ' ಇವುಗಳಿಂದ ಕೊನೆಗೊಳ್ಳುವ ಸ್ಥಳ ನಾಮಗಳು :

ಬೆಂಗಳೂರು ಜಿಲ್ಲೆಯಲ್ಲಿ ದೊರೆಯುವ ಸ್ಥಳನಾಮಗಳು 'ಪಲ್ಲಿ' ಮತ್ತು 'ಹಳ್ಳಿ' ಎಂಬ ಪ್ರತ್ಯಯಗಳಿಂದ ಅಂತ್ಯವಾಗುತ್ತವೆ. ಆಧುನಿಕ ಕಾಲದಲ್ಲಿ 'ಪಲ್ಲಿ' ಎಂಬ ಪದ ಪ್ರಯೋಗ ಕಡಿಮೆಯಾಗಿ 'ಹಳ್ಳಿ' ಎಂಬ ಪದ ಪ್ರಯೋಗವು ಹೆಚ್ಚಾಗಿ ಚಲಾವಣೆಯಲ್ಲಿದೆ. ಚಿಕ್ಕ ಗ್ರಾಮಕ್ಕೆ 'ಹಳ್ಳಿ' ಎಂಬ ಪದ ಪ್ರಯೋಗವು ರೂಢಿಯಲ್ಲಿದೆ. 'ಪಲ್ಲಿ'ಪದಕ್ಕೆ ಬದಲಾಗಿ 'ಹಳ್ಳಿ' ಪದ ಪ್ರಯೋಗವು ಹತ್ತನೆಯ ಶತಮಾನದಿಂದ ಆರಂಭವಾಯಿತೆಂದು ಭಾಷಾಶಾಸ್ತ್ರದ ಅಧ್ಯಯನದ ಮೂಲಕ ತಿಳಿದು ಬರುತ್ತದೆ. ಇದರಿಂದಾಗಿ 'ಪಲ್ಲಿ' ಪದವು 'ಹಳ್ಳಿ' ಪದಕ್ಕಿಂತ ಪ್ರಾಚೀನವಾದುದೆಂದು ಹೇಳಬಹುದು. 'ಪಲ್ಲಿ'– 'ಹಳ್ಳಿ'– ಯಾಗಿರುವುಕ್ಕೆ ಹಲವು ನಿದರ್ಶನಗಳನ್ನು ಇಲ್ಲಿ ಕಾಣಬಹುದು.

ಅರ್ಪೆಯುರವನ್ ಪಲ್ಲಿ>ಅರುವನ ಹಳ್ಳಿ E.C. Vol. 9, Ht 59, P135, A.D. 1315

ಕರುಪಲ್ಲಿ>ಕರಹಳ್ಳಿ E. C. Vol. 9, NL 57, P 47, A. D. 1319

ಮೂಗನ ಹಳ್ಳಿ>ಮೋಗೇನ ಹಳ್ಳಿ E. C. Vol. 9, Cp 73, P 146, A. D. 1318

'ಊರು' ಪ್ರತ್ಯಯದಿಂದ ಕೊನೆಗೊಳ್ಳುವ ಸ್ಥಳನಾಮಗಳು :

ಬೆಂಗಳೂರು ಜಿಲ್ಲೆಯ ಅನೇಕ ಶಾಸನಗಳಲ್ಲಿ ಹಿಂದೆ ಇದ್ದ ಊರು ಎಂಬ ಪ್ರತ್ಯಯರೂಪವೇ ಇಂದಿಗೂ ಉಳಿದು ಕೊಂಡಿದೆ. ಆದರೆ ಸ್ಥಳನಾಮ ರೂಪಗಳಲ್ಲಿ ಮಾತ್ರ ನಾವು ಬದಲಾವಣೆ ಕಾಣಬಹುದು.

ತಿಪ್ಪೂರು> ತಿಪ್ಪೂರು E. C. Vol. 9, Db 42

ಮಸಲೂರು>ಮಾಲೂರು E. C. Vol. 9, Cp 132, P 200 A. D. 1007

ಸಂಖ್ಯಾ ಸೂಚಕ ಪ್ರತ್ಯಯಗಳಿಂದ ಕೊನೆಗೊಳ್ಳುವ ಸ್ಥಳನಾಮಗಳು :

ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ದೊರೆಯುವ ಸ್ಥಳನಾಮಗಳು ಸಂಖ್ಯಾ ಸೂಚಕಗಳಿಂದಲೂ ಕೂಡ ಕೊನೆಗೊಳ್ಳುತ್ತವೆ.

ಪುನ್ನಾಡ್ 70 E.C. Vol 9, Db 38, P 83 A.D. 1328.
ಪಲಸಿಗ್ಗೆ 12000 E.C. Vol 9, Cp 137, P 162.

ಈ ಸಂಖ್ಯಾಸೂಚಿ ಪ್ರತ್ಯಯಗಳು ಏನನ್ನು ಹೇಳುತ್ತವೆಂದು ನಿರ್ದಿಷ್ಟವಾಗಿ ಹೇಳಲಾಗದು. ಇವು ಬಹಳ ಹಿಂದೆ ವಿಭಾಗಗಳಾಗಿದ್ದಿರಬಹುದು. ಪ್ರಸಿದ್ಧ ಇತಿಹಾಸಕಾರರ ಅಭಿಪ್ರಾಯದಂತೆ ಈ ಸಂಖ್ಯಾಸೂಚಿ ಪ್ರತ್ಯಯಗಳು ಚಿನ್ನದ ರೂಪದಲ್ಲಿ ವಸೂಲಾಗುವ ತೆರಿಗೆಯ ಮೊತ್ತವನ್ನು ಸೂಚಿಸುತ್ತವೆಂದೂ, ಮತ್ತೆ ಕೆಲವರು ಇತಿಹಾಸಕಾರರು, ಆಯಾ ಸ್ಥಳದಲ್ಲಿ ನೆಲಸಿರುವ ನಿವಾಸಿಗಳ ಜನಸಂಖ್ಯೆಯನ್ನು ಸೂಚಿಸುತ್ತವೆಂದೂ ಊಹಿಸುತ್ತಾರೆ.

ಸಂಕೀರ್ಣ ಸ್ಥಳ ನಾಮಾಂತ್ಯಗಳು :– ನಿರ್ದಿಷ್ಟ ವಿಭಾಗಕ್ಕೆ ಒಳಪಡದ ನಾಮಾಂತ್ಯಗಳನ್ನು ಮತ್ತು ಅನಿರ್ದಿಷ್ಟ ನಾಮಾಂತ್ಯಗಳನ್ನು ಹೊಂದಿರುವ ಸ್ಥಳನಾಮಗಳನ್ನು ಇಲ್ಲಿ ಚರ್ಚಿಸಲಾಗಿದೆ.

'ಬೈರಟ್ಟಿ' E.C. Vol 9, Ht 124, P 127.
'ಸೂಲಿಬೆಲೆ' E.C. Vol 9, Ht 56, P 115 A.D. 1330.

ಈ ಸ್ಥಳನಾಮಗಳನ್ನು ಇಂದು ನಾವು ಗುರುತಿಸುವುದು ಬಹಳ ಕಷ್ಟ. ಏಕೆಂದರೆ ಇವುಗಳಲ್ಲಿ ಅನೇಕವು ಹಿಂದೆ ಪ್ರಾಂತ್ಯ ವಿಭಾಗಗಳ ಹೆಸರುಗಳಾಗಿದ್ದು ಕ್ರಮೇಣ ಇವುಗಳು ತಮ್ಮ ರೂಪವನ್ನೇ ಬದಲಾಯಿಸಿಕೊಂಡವು.

ಬೆಂಗಳೂರು ಜಿಲ್ಲೆಯ ಸ್ಥಳನಾಮಗಳೂ ವಿವಿಧ ರೀತಿಯ ಪ್ರತ್ಯಯಗಳಿಂದ ಅಂತ್ಯಗೊಳ್ಳುತ್ತವೆ. ಹಿಂದೆ ಇದ್ದ ರೂಪಗಳೂ ಈಗ ಮಾಯವಾಗಿ ಈಗ ಹೊಸ ರೂಪಗಳೂ ಕಾಣಿಸಿಕೊಂಡಿವೆ. ಈ ಬದಲಾವಣೆಗಳಿಗೆ ಕಾರಣಗಳನ್ನು ಹೀಗೆ ಊಹಿಸಬಹುದು.

1. ಭಾಷೆ ನಿಂತ ನೀರಲ್ಲ; ಅದು ಹರಿಯುವ ಪ್ರವಾಹ. ಕಾಲಕಾಲಕ್ಕೆ ಅದು ಬದಲಾವಣೆ ಹೊಂದುತ್ತದೆ. ಇದರಂತೆ ಶಾಸನಗಳಲ್ಲಿ ಉಲ್ಲೇಖಿವಾಗಿರುವ ಸ್ಥಳ ನಾಮಾಂತ್ಯಗಳು ಸಹ ಸಹಜವಾಗಿ ಬದಲಾವಣೆ ಹೊಂದಿವೆ. 2. ಜನತೆಯು ಭಾಷೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು, ಹಲವು ಬಾರಿ ತಪ್ಪಾಗಿ ಉಚ್ಚರಿಸುವರು (ಮಾನವ ಸೌಲಭ್ಯಾಕಾಂಕ್ಷಿ). ಇದರಿಂದಾಗಿ ಬದಲಾವಣೆಗಳು ಸಹಜ.

ಗ್ರಂಥಋಣ

1. ಅಭಿಶಂಕರ್, ಕ., 'ಜಿಲ್ಲೆಯ ಭೌಗೋಲಿಕ ಕೋಶ' 'ಬೆಂಗಳೂರು ಜಿಲ್ಲೆ' 1978, ಪುಟ 149-51.

2. ಚಿದಾನಂದ ಮೂರ್ತಿ ಎಂ., 'ವಾರ ಅಥವ ವರದಿಂದ ಕೊನೆಯಾಗುವ ಸ್ಥಳನಾಮಗಳು'—"ಸಾಧನೆ" ವಿಸ್ತಾರ (Volume) 7, ಭಾಗ 2 ; ಬೆಂಗಳೂರು, 1978, ಪುಟ 149-51.

3. ಸಿಲ್ವಿ, ಸ. 'ಕೆನರಾದ ಸ್ಥಳನಾಮ ಅಧ್ಯಯನ', ಬೊಂಬಾಯಿ, 1963.

4. ರಘುಪತಿ ಭಟ್, ಕೆ., 'ಕಾರ್ ಎಂಬುದು ತುಳು ನಾಡಿನಲ್ಲಿ'—ಎಂಬ ಸ್ಥಳನಾಮಗಳ ಅಧ್ಯಯನ, "ಸಾಧನೆ", ವಿಸ್ತಾರ 7, ಭಾಗ 3, ಬೆಂಗಳೂರು, 1978, ಪುಟ 146-49.

ಬಸವಣ್ಣನವರು ಮತ್ತು ಮಾಣಿಕ್ಕವಾಚಕರು : ಒಂದು ತೌಲನಿಕ ದೃಷ್ಟಿ

ಸಿ. ಶಿವಷಣ್ಮುಗಂ

ಬಸವಣ್ಣನವರು ಮತ್ತು ಮಾಣಿಕ್ಕವಾಚಕರು ಇಬ್ಬರೂ ಕ್ರಮವಾಗಿ ಕರ್ನಾಟಕ ಮತ್ತು ತಮಿಳು ನಾಡಿನಲ್ಲಿ ಹುಟ್ಟಿ ಬೆಳೆದ ಶೈವ ಧರ್ಮದ ನಾಯಕರು ಮತ್ತು ಕವಿಗಳು. ಇಬ್ಬರೂ ಮಂತ್ರಿಯಾಗಿ ಕೆಲಸಮಾಡಿದ್ದವರು. ಜೈನ ಧರ್ಮದಿಂದ ಶೈವ ಧರ್ಮವನ್ನು ಕಾಪಾಡುವ ದಿಶೆಯಲ್ಲಿ ವಿಶೇಷವಾಗಿ ದುಡಿದವರು. ಇವರ ಇಬ್ಬರ ಕೃತಿಗಳಲ್ಲೂ ಅನೇಕ ಸ್ಥಲಗಳಲ್ಲಿ, ಆಲೋಚನಾಸರಣಿಯಲ್ಲಿ ಸಮಾನ ಮನೋಧರ್ಮವನ್ನು ಕಾಣಬಹುದು. ಇಬ್ಬರ ಜೀವನದಲ್ಲೂ ಕಾಣಬಹುದಾದ ಸಮಾನತೆ ಮತ್ತು ವಿಭಿನ್ನತೆಯನ್ನು ನಾವು ಈ ಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ನೋಡಲು ಪ್ರಯತ್ನಿಸಲಾಗಿದೆ.

ಜನನ ಮತ್ತು ಜೀವನ

ಬಸವಣ್ಣನವರು

ತರ್ದವಾಡಿನಾಡಿನ ಬಾಗೆವಾಡಿ ಎಂಬ ಸ್ಥಳದಲ್ಲಿ ಬಸವಣ್ಣನವರು ಮಾದಿರಾಜ ಮತ್ತು ಮಾದಾಂಬೆ ಎಂಬ ಶೈವ ಬ್ರಾಹ್ಮಣ ದಂಪತಿಗಳಿಗೆ ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿದರು. ಮಾದಿರಾಜನು ಅಗ್ರಹಾರದ ನಾಯಕನಾಗಿದ್ದದರಿಂದ ಅವರಲ್ಲಿ ಜ್ಞಾನ, ವಿವೇಕ, ಗಾಂಭೀರ್ಯಗಳು ಮುಪ್ಪುರಿಗೊಂಡಿದ್ದವು. ಬಸವಣ್ಣನವರು ಹುಡುಗನಾಗಿದ್ದಾಗಲೆ ಚಿಂತನೆಮಾಡುವ ಶಕ್ತಿ ಹೊಂದಿದ್ದರು. ಕಲ್ಲಿನ ನಾಗರಕ್ಕೆ ಜನರು ಹಾಲು ಎರೆದು ಪೂಜಿಸುವುದನ್ನೂ, ನಿಜವಾದ ಹಾವು ಬಂದರೆ ಅದನ್ನು ಕೊಂದು ಹಾಕುತ್ತಿದ್ದುದನ್ನೂ ನೋಡಿದ್ದರು. ಈ ವಿರೋಧಕ್ಕೆ ಅರ್ಥವೇನು ಎಂದು ಅವರ ಬಾಲಮತಿ ಬಹುವಾಗಿ ಚಿಂತಿಸಿತು. ಅವರು ತಮ್ಮ ಉಪನಯನ ಸಮಾರಂಭಕ್ಕೆ ಒಪ್ಪಲಿಲ್ಲ. ಮುಂದೆ ಅವರು ತಮ್ಮ ತೀಕ್ಷ್ಣ ಬುದ್ಧಿಮತ್ತೆಯಿಂದ ಬಿಜ್ಜಳನ ಮಂತ್ರಿಗಳಾದರು. ಬಸವಣ್ಣನವರು ಬಿಜ್ಜಳನ ದಂಡನಾಯಕರಾಗಿದ್ದ ಸಮಯದಲ್ಲಿ ರಾಜ್ಯದ ಭಂಡಾರವನ್ನು ವೀರಶೈವ ಧರ್ಮದ ಪ್ರಚಾರಕ್ಕಾಗಿ ಹಾಗೂ ಶಿವಶರಣರ ಸೇವೆಗಾಗಿ ವಿನಿಯೋಗಿಸಿದರು ಎಂಬ ಆಪಾದನೆಯನ್ನು ಅವರ ವಿರೋಧಿಗಳು ಮಾಡಿದರು.

ಇವರು ದೊಡ್ಡ ಧಾರ್ಮಿಕ ಪುರುಷರಾಗಿದ್ದಂತೆಯೇ ಶ್ರೇಷ್ಠ ವಚನಕಾರರಾಗಿಯೂ ಇದ್ದರು. ವಚನಕಾರರಲ್ಲಿ ಬಸವಣ್ಣನವರು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುವರು. ಆ ಕಾಲದಲ್ಲಿ ಕವಿಗಳು ಪ್ರೌಢವಾದ ಕಾವ್ಯಗಳನ್ನು ರಚಿಸುತ್ತಿದ್ದರು. ಅವುಗಳ ಭಾಷೆ ಹಳಗನ್ನಡ. ಆದರೆ ಬಸವಣ್ಣನವರು ಜನಸಾಮಾನ್ಯನ ಮನೆ–ಮನಗಳನ್ನು ಮುಟ್ಟುವ, ಬಳಕೆಯಲ್ಲಿಲ್ಲದ ಚಂಪೂ ಕಾವ್ಯ ಸಂಪ್ರದಾಯದಭಾಷೆಯನ್ನು ತ್ಯಜಿಸಿ ಜನಸಾಮಾನ್ಯರಿಗಾಗಿ ಸರಳ ಭಾಷೆಯಲ್ಲಿ ವಚನಗಳನ್ನು ಬರೆದದ್ದು ಅವರಿಗೆ ಇದ್ದ ಧರ್ಮಪ್ರಸಾರದ ಉದ್ದೇಶವನ್ನೂ ಸಾಮಾನ್ಯ ಜನರ ವಿಷಯದಲ್ಲಿ ಇದ್ದ ಕರುಣೆಯನ್ನೂ ತೋರಿಸುತ್ತದೆ. ಕನ್ನಡ ಸಾಹಿತ್ಯೇತಿಹಾಸದಲ್ಲಿ ವಚನ ಸಾಹಿತ್ಯದ ಘಟ್ಟವು ಒಂದು ಕ್ರಾಂತಿಯ ಯುಗವಾಗಿದೆ (ಚಿದಾನಂದಮೂರ್ತಿ, 1967).

ಮಾಣಿಕ್ಕವಾಚಕರು

ಹುಟ್ಟು ಮತ್ತು ಬಾಲ್ಯ

ಮಾಣಿಕ್ಕವಾಚಕರು ಎಂಟನೆಯ ಶತಮಾನದಲ್ಲಿ ತಮಿಳುನಾಡಿನ ಪಾಂಡ್ಯ ದೇಶದ ತಿರುವಾದವೂರ್ ಎಂಬ ಸ್ಥಳದಲ್ಲಿ ಬ್ರಾಹ್ಮಣ ದಂಪತಿಗಳಿಗೆ ಹುಟ್ಟಿದವರು. ಈ ಸ್ಥಳ ಮಧುರೆಯ ಹತ್ತಿರ ವೈಗೈ ನದಿಯ ತೀರದಲ್ಲಿ ಇದೆ. ತಿರುವಾದವೂರೆಂಬ ಸ್ಥಳದಲ್ಲಿ ಹುಟ್ಟಿದ್ದರಿಂದ ಬಾಲ್ಯದಲ್ಲಿ ಅವರ ಹೆಸರು ತಿರುವಾದವೂರಾರ್ ಎಂದು ಇತ್ತು. ಮುಂದೆ ಅವರು ಮಾಣಿಕ್ಕವಾಚಕರ್ (ಅಂದರೆ ಅವರ ನುಡಿಗಳು ಮಾಣಿಕ್ಯದ ಹಾಗೆ ಇದೆ ಎಂಬ ಅರ್ಥದಲ್ಲಿ) ಎಂದು ಕರೆಯಲಾದರು. ಅವರ ಕೃತಿ "ತಿರುವಾಚಕಂ" (ಅಂದರೆ ದೇವರನುಡಿಗಳು) ಎಂದು ಕರೆಯಲ್ಪಟ್ಟಿತು. ಆ ಕಾಲದಲ್ಲಿ ಮಧುರೆಯನ್ನು ಆಳಿದ ರಾಜನ ಹೆಸರು ಅರಿಮರ್ದನ ಪಾಂಡಿಯನ್ ಎಂಬುದು.

ಮಾಣಿಕ್ಕವಾಚಕರು ತಮ್ಮ ಹದಿನಾರನೆಯ ವರ್ಷದಲ್ಲಿ ಎಲ್ಲ ಆಗಮಗಳನ್ನೂ ಧರ್ಮ ಕೃತಿಗಳನ್ನೂ ಓದಿದ್ದರು. ಅವರ ಬುದ್ಧಿ ಶಕ್ತಿಯನ್ನೂ ಜ್ಞಾನವನ್ನೂ ತಿಳಿದ ರಾಜನು ಅವರನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡನು. ಅವರಿಗೆ "ತೆನ್ನವನ್ ಬ್ರಹ್ಮರಾಯನ್" (ಅಂದರೆ ದಕ್ಷಿಣದ ದೊರೆ) ಎಂಬ ಬಿರುದನ್ನು ಕೊಟ್ಟನು. ಅವರು ಮಂತ್ರಿಯಾಗಿದ್ದರೂ ಯಾವಾಗಲೂ ತಮ್ಮ ಮನಸ್ಸಿನಲ್ಲಿ ಶಿವನನ್ನೇ ನೆನೆಯುತ್ತಿದ್ದರು. ಅವರು ಸದಾ 'ಶಿವಾಯನಮಃ' ಎಂಬ ಪಂಚಾಕ್ಷರೀ ಮಂತ್ರದ ಬಗ್ಗೆಯೂ ಈ ಲೋಕದ ಬಂಧನಗಳಿಂದ ಬಿಡುಗಡೆಯಾಗಿ ಮೋಕ್ಷವನ್ನು ಪಡೆಯುವ ಬಗ್ಗೆಯೂ ಯೋಚಿಸುತ್ತಿದ್ದರು. ಹೇಗೆ ಸಣ್ಣ ರೆಕ್ಕೆಗಳನ್ನೊಳಗೊಂಡ ದುಂಬಿಯು ಒಂದು ಹೂವಿನಿಂದ ಇನ್ನೊಂದು ಹೂವಿಗೆ ತಿರುಗಾಡಿ ಹಲವಾರು ಅಡವಿಗಳನ್ನು ಹುಡುಕಿ ಜೇನನ್ನು ಶೇಖರಿಸುತ್ತದೋ ಹಾಗೆ ಅವರು ಹಲವಾರು ಶೈವಧರ್ಮದ ನಾಯಕರನ್ನು ಹುಡುಕಿ ಎಲ್ಲರಿಗೂ ಮೇಲಾದ ಶಿವನನ್ನು ನೋಡಲು ಪ್ರಯತ್ನ ಮಾಡಿದರು.

ಅವರ ಬದಲಾವಣೆ

ಒಂದು ದಿನ ರಾಜನು ತನ್ನ ದರ್ಬಾರಿನಲ್ಲಿ ತನ್ನ ಮಂತ್ರಿಗಳು ಹಾಗೂ ಸಾಮಂತರ ಜೊತೆಯಲ್ಲಿ ಕುಳಿತಿರುವಾಗ ಸುದ್ದಿಗಾರರು ನೆರೆ ರಾಜ್ಯವಾದ ಚೋಳ ನಾಡಿಗೆ ದೂರ ದೇಶದಿಂದ ಕುದುರೆಗಳು ಹಡಗುಗಳಲ್ಲಿ ಬಂದಿವೆಯೆಂದು ತಿಳಿಸಿದರು. ಒಡನೆ ರಾಜ ತನ್ನ ಮುಖ್ಯಮಂತ್ರಿಯಾದ ಮಾಣಿಕ್ಕವಾಚಕರನ್ನು ತಿರುಪ್ಪೆರುಂದುರೈ[1] ಎಂಬ ಬಂದರಿಗೆ ಹೋಗಿ ಬೇಕಾದಷ್ಟು ಕುದುರೆಗಳನ್ನು ಕೊಂಡುಕೊಂಡು ಬರಹೇಳಿ, ಸಾಕಷ್ಟು ಹಣವನ್ನು ತನ್ನ ಭಂಡಾರದಿಂದ ತೆಗೆದುಕೊಳ್ಳಲು ಅಪ್ಪಣೆ ಮಾಡಿದನು. ಹಾಗೆಯೇ ಮಾಣಿಕ್ಕವಾಚಕರು ತನ್ನ ಸೇವಕರ ಜೊತೆಯಲ್ಲಿ ಹೊರಟು ತಿಪ್ಪೆರುಂದುರೈಯನ್ನು ತಲುಪಿದರು. ಅಲ್ಲಿ ಎಲ್ಲೆಲ್ಲಿ ನೋಡಿದರೂ ದಟ್ಟವಾದ ಅರಣ್ಯ. ಸುವಾಸನೆಯ ಹೂಗಳ, ಮರಗಳ ಕೊಂಬೆಗಳ ಮೇಲೆ ಕುಳಿತು ಹಾಡುತ್ತಿರುವ ಹಕ್ಕಿಗಳು ಇವೆಲ್ಲಾ ಅಲ್ಲಿ ಇದ್ದುವು. ಅಲ್ಲಿ ಒಂದು ವಿಶಾಲದ ಕುರುಂದಂ[2] ಮರದ ಕೆಳಗೆ ಮಾನವ ರೂಪದ ಗುರುಗಳೊಬ್ಬರು ತಮ್ಮ ಶಿಷ್ಯರ ಜೊತೆಯಲ್ಲಿ ಕುಳಿತು ತಮ್ಮ ಶಿಷ್ಯರಿಗೆ ವೇದಾಗಮಗಳನ್ನು ಕಲಿಸುತ್ತಿದ್ದರು. ತಮ್ಮ ಸೇವಕರೊಡನೆ ಬಂದ ಮಾಣಿಕ್ಕವಾಚಕರು ಅಲ್ಲಿ ಹೋಗಿ ಆ ಗುರುಗಳನ್ನು ನೋಡಿ ತಮ್ಮನ್ನೂ ಲೋಕವನ್ನೂ ಮರೆತು ಬಿಟ್ಟರು. ಮುಂದೆ ಅವರಿಂದ ಜ್ಞಾನದೀಕ್ಷೆ ಪಡೆದು ಜೀವನ್ ಮುಕ್ತರಾಗಿ ಬಿಟ್ಟರು. ತಮ್ಮ ಬೆಲೆಬಾಳುವ ಆಭರಣಗಳನ್ನೂ ಉಡುಪುಗಳನ್ನೂ ಬಿಟ್ಟುಬಿಟ್ಟು ಸನ್ಯಾಸಿಯಾದರು. ಅವರು ಕುದುರೆಗಳನ್ನು ಖರೀದಿಸಲೆಂದು ತಂದಿದ್ದ ಹಣವನ್ನೆಲ್ಲಾ ವ್ಯಯಮಾಡಿ ಒಂದು ದೊಡ್ಡ ದೇವಸ್ಥಾನವನ್ನು ಕಟ್ಟಿಸಿದರು.

ಮಧುರೆಯಲ್ಲಿ

ಇಷ್ಟರೊಳಗೆ ಅವರ ಜೊತೆಯಲ್ಲಿ ಬಂದಿದ್ದವರು ಅವರು ಮಾಡುವ ಕಾರ್ಯಗಳನ್ನು ನೋಡಿ ಗಾಬರಿಯಾದರು. ರಾಜನ ಭಂಡಾರವನ್ನೆಲ್ಲಾ ದೇವಸ್ಥಾನವನ್ನು ಕಟ್ಟುವುದರಲ್ಲಿ ವ್ಯಯಿಸಿದುದನ್ನು ನೋಡಿ ಅವರಿಗೆ ಬುದ್ಧಿ ಹೇಳಿದರು. ಆದರೆ ಮಾಣಿಕ್ಕವಾಚಕರು ಅವರ ಮಾತನ್ನು ಕೇಳದೆ 'ಮತ್ತೆ ನೀವೇಕೆ ನನ್ನನ್ನು ಈ ಲೋಕಕ್ಕೆ ಬಂಧಿಸುತ್ತೀರಿ' ಎಂದರು. ತಮ್ಮ ಪ್ರಯತ್ನಗಳು ವಿಫಲವಾದುದನ್ನು ನೋಡಿದ ಜೊತೆಯವರು ಮಧುರೆಗೆ ಹಿಂದಿರುಗಿ ಬಂದು ರಾಜನಿಗೆ "ನಮ್ಮ ಪ್ರೀತಿಯ ಮಂತ್ರಿಗಳು ಶೈವ ಸನ್ಯಾಸಿಗಳಾಗಿಬಿಟ್ಟರು. ಅವರು ತಮ್ಮ ಹತ್ತಿರ

---

1. ಇಂದಿನ ಅವುಡೈಯಾರ್ ಕೋಯಿಲ್. ಇದು ಪುದುಕ್ಕೋಟ್ಟೈ ಜಿಲ್ಲೆಯಲ್ಲಿ ಪುದುಕ್ಕೋಟ್ಟೈಯಿಂದ ಇಪ್ಪತ್ತೇಳು ಮೈಲಿ ದೂರದಲ್ಲಿದೆ.
2. "throny trichilia"

ಇದ್ದ ಭಂಡಾರವನ್ನೆಲ್ಲಾ ದೇವರಿಗಾಗಿ ಖರ್ಚುಮಾಡಿದರು" ಎಂದು ದೂರಿದರು. ಮಂತ್ರಿಗಳಿಂದ ಭಂಡಾರದ ಹಣ ಅಪವ್ಯಯವಾದುದನ್ನು ಕೇಳಿ ರಾಜನಿಗೆ ಕೋಪ ಬಂದಿತು. ಅವರನ್ನು ಒಡನೆಯೆ ಸೆರೆಹಿಡಿಯಲು ಅಪ್ಪಣೆಮಾಡಿದನು. ರಾಜನ ಅಪ್ಪಣೆಯನ್ನು ಕೇಳಿದ ಮಾಣಿಕ್ಕವಾಚಕರು "ನನಗೆ ಯಾವ ರಾಜನೂ ತಿಳಿಯದು; ನನಗೆ ಶಿವನು ಮಾತ್ರ ಗೊತ್ತು; ನನ್ನನ್ನು ಸೆರೆ ಹಿಡಿಯಲು ಯಮನು ಬಂದರೂ ಅವನನ್ನು ನನ್ನ ಶಿವನು ಗೆಲ್ಲುತ್ತಾನೆ" ಎಂದರು. ಮುಂದೆ ಮಾಣಿಕ್ಕವಾಚಕರು ರಾಜನ ಅಪ್ಪಣೆಯನ್ನು ಶಿವನ ಮುಂದಿಟ್ಟು "ಏನು ಮಾಡಲಿ?" ಎಂದರು. ಅದಕ್ಕೆ ಶಿವನು "ಭಯವಿಲ್ಲದೆ ಹೋಗಿ ಬಾ. ಭಾದ್ರಪದ ಮಾಸ ಹತ್ತೊಂಬತ್ತನೆ ತಾರೀಖಿನಲ್ಲಿ ರಾಜನಿಗಾಗಿ ಕೊಂಡುಕೊಂಡ ಕುದುರೆಗಳು ಮಧುರೆಗೆ ಬರುತ್ತವೆ ಎಂದು ಹೇಳು" ಎಂದು ನುಡಿದನು. ರಾಜನಿಗೆ ಉಡುಗೊರೆಯಾಗಿ ಕೊಡಲು ಬೇಕಾದಷ್ಟು ಆಭರಣಗಳು, ಚಿನ್ನದ ನಾಣ್ಯಗಳು ಮತ್ತು ಒಂದು ಮಾಣಿಕ್ಯವನ್ನೂ ಕೊಟ್ಟನು. ಹಾಗೆಯೇ, ಮಾಣಿಕ್ಕವಾಚಕರು ತನ್ನ ಗುರುಗಳು ಕೊಟ್ಟಿದ್ದ ಒಂದು ಬೆಳ್ಳಿಯ ರಥದಲ್ಲಿ ಸೇವಕರ ಜೊತೆಯಲ್ಲಿ ಮಧುರೆಗೆ ಹಿಂದಿರುಗಿ ರಾಜನ ಮುಂದೆ ನಿಂತರು. ರಾಜನು ಅವರನ್ನು ನೋಡಿ, ಅವರ ಈ ರೀತಿಯ ವರ್ತನೆಗೆ ಕಾರಣವೇನೆಂದು ಕೇಳಿದನು. ಅದಕ್ಕೆ ಅವರು ವಿನಯದಿಂದ "ಕುದುರೆಗಳು ಕೊಳ್ಳಲ್ಪಟ್ಟಿವೆ. ಅವು ತಿರುಪ್ಪೆರುಂದುರೈಯಲ್ಲಿ ಇವೆ. ಅವುಗಳನ್ನು ನಾನು ತೆಗೆದುಕೊಂಡು ಬಂದಿಲ್ಲ. ಏಕೆಂದರೆ ಭಾದ್ರಪದ ಮಾಸದ ಹತ್ತೊಂಬತ್ತನೆಯ ತಾರೀಖು ಒಳ್ಳೆಯ ದಿನ. ಆ ದಿನದಲ್ಲಿ ಅವುಗಳನ್ನು ನಮ್ಮೂರಿಗೆ ತೆಗೆದುಕೊಂಡು ಬಂದರೆ ನಮಗೆ ಒಳ್ಳೆಯದಾಗುತ್ತದೆ ಎಂದು ಬ್ರಾಹ್ಮಣರು ಹೇಳಿದರು. ಆದರಿಂದ ಅವು ಭಾದ್ರಪದ ಮಾಸದ ಹತ್ತೊಂಬತ್ತನೆಯ ದಿನ ಬರುತ್ತವೆ" ಎಂದು ಹೇಳಿ ತಾವು ತಂದಿದ್ದ ದೊಡ್ಡ ಮಾಣಿಕ್ಯವನ್ನು ರಾಜನಿಗೆ ಕೊಟ್ಟರು. ಆ ದೊಡ್ಡ ಸುಂದರವಾದ ಮಾಣಿಕ್ಯವನ್ನು ನೋಡಿ ರಾಜನಿಗೆ ತುಂಬಾ ಆಶ್ಚರ್ಯವಾಯಿತು. ಅಷ್ಟು ಬೆಲೆ ಬಾಳುವ ಮಾಣಿಕ್ಯವನ್ನು ಅವನು ತನ್ನ ಇಡೀ ಜೀವಮಾನದಲ್ಲಿ ಯಾವಾಗಲೂ ನೋಡಿದ್ದಿಲ್ಲ. ಅದನ್ನು ನೋಡಿದ ರಾಜನು ಮಾಣಿಕ್ಕವಾಚಕರ ಬಗ್ಗೆ ಇತರರು ಹೇಳಿದ್ದು ಬರೀ ಸುಳ್ಳು, ಹೊಟ್ಟೆಯುರಿಯಿಂದ ಹೇಳಿದ್ದು ಎಂದು ನಂಬಿದನು. ಆದರೆ, ರಾಜನ ದೂತರು ಅವನು ನಂಬುವಂತೆ "ಮಾಣಿಕ್ಕವಾಚಕರು ತಿರುಪ್ಪೆರುಂದುರೈಯಲ್ಲಿ ಒಬ್ಬ ಶೈವ ಗುರುಗಳಿಗೆ ಹೂವನ್ನೆಲ್ಲಾ ಕೊಟ್ಟುಬಿಟ್ಟರು; ಆದ್ದರಿಂದ ಅವರು ಹೇಳಿದ ಹಾಗೆ ಹತ್ತೊಂಬತ್ತನೆಯ ದಿನಾಂಕ ಕುದುರೆಗಳು ಬರೋದಿಲ್ಲ" ಎಂದು ಚಾಡಿ ಹೇಳಿದರು. ಇದನ್ನು ನಂಬಿದ ರಾಜನು ಮಾಣಿಕ್ಕವಾಚಕರನ್ನು ಸೆರೆಯಲ್ಲಿ ಹಾಕಿದನು. ಮಾಣಿಕ್ಕವಾಚಕರು ಶಿವನ ಹತ್ತಿರ ತಾವು ಏನೂ ತಪ್ಪು ಮಾಡಿಲ್ಲವೆಂದೂ ತಮ್ಮನ್ನು ಸೆರೆಯಿಂದ ಬಿಡುಗಡೆ ಮಾಡಿಸಬೇಕೆಂದೂ ಬೇಡಿದರು.

ಕುದುರೆಗಳು

ದುಃಖಿಗಳ ದುಃಖಕ್ಕೆ ಪರಿಹಾರ ನೀಡುವುದು ಶಿವನ ಕರ್ತವ್ಯವಲ್ಲವೆ ? ತಾನು ಹೇಳಿದ್ದ ಹಾಗೆ ಹತ್ತೊಂಬತ್ತನೆಯ ದಿನಾಂಕ ಶಿವನು ಕುದುರೆಯೊಡನೆ ಬಂದನು. ಶಿವನು ತನ್ನ ಲೀಲಾವಿನೋದದಿಂದ ಅರಣ್ಯದಲ್ಲಿದ್ದ ನರಿಗಳನ್ನು ಒಳ್ಳೆಯ ಕುದುರೆಗಳಾಗಿ ಮಾಡಿ, ಲೋಕದಲ್ಲಿರುವ ಕಿರುದೈವಗಳನ್ನು ರಾಹುತರನ್ನಾಗಿ ಮಾಡಿ ತನ್ನನ್ನು ಆ ಕುದುರೆಗಳನ್ನು ಮಾರಿದ ವ್ಯಾಪಾರಿಯಂತೆ ಬದಲಿಸಿ ಒಂದು ಒಳ್ಳೆಯ ಕುದುರೆಯ ಮೇಲೆ ಕುಳಿತುಕೊಂಡು ಬಂದನು. ಸುದ್ದಿಗಾರರು ರಾಜನಿಗೆ "ಕೊಂಡುಕೊಂಡಿದ್ದ ಕುದುರೆಗಳು ಬಂದಿವೆ. ಎಣಿಸಲು ಸಾಧ್ಯವಿಲ್ಲದಷ್ಟು ಕುದುರೆಗಳು ಬಂದಿರುವುದರಿಂದ ಕುದುರೆಗಳ ಕಾಲಿಂದ ಮೇಲೆದ್ದ ಧೂಳು ಆಕಾಶವನ್ನೆಲ್ಲಾ ಕವಿದಿದೆ" ಎಂದರು. ತನ್ನ ತಪ್ಪಿನ ಅರಿವಾಗಿ ರಾಜನು ಒಡನೆಯೇ ಮಾಣಿಕ್ಕ ವಾಚಕರನ್ನು ಸೆರೆಯಿಂದ ಬಿಡುಗಡೆ ಮಾಡಿದನು. ಅಶ್ವಶಾಸ್ತ್ರದಲ್ಲಿ ಬಲ್ಲವರು ಬಂದು ಕುದುರೆಗಳನ್ನು ಪರೀಕ್ಷೆ ಮಾಡಿದರು. ಕುದುರೆಗಳು ತುಂಬಾ ಒಳ್ಳೆಯವೆಂದೂ ಅವುಗಳು ನಿಜವಾಗಿಯೂ ಕೊಳ್ಳಲ್ಪಟ್ಟ ಬೆಲೆಗಿಂತ ನಾಲ್ಕು ಮಡಿ ಬೆಲೆಬಾಳುವ ಕುದುರೆಗಳೆಂದೂ ನುಡಿದರು. ರಾಜನಿಗೆ ತುಂಬಾ ಸಂತೋಷವಾಯಿತು. ಕುದುರೆ ವ್ಯಾಪಾರಿ ಕುದುರೆಗಳನ್ನು ರಾಜನಿಗೆ ಕೊಟ್ಟು ತನ್ನ ಪರಿವಾರದೊಡನೆ ಹೊರಟುಹೋದನು. ರಾತ್ರಿಯಾಯಿತು. ಮಧುರಾ ನಗರಿಯು ನಿದ್ರೆಯಲ್ಲಿ ಮುಳುಗಿತು. ಮುಂಜಾನೆಯ ಹೊತ್ತಿಗೆ ಮುಂಚೆಯೇ ಭಯಂಕರವಾದ ಕೂಗಾಟ ಕೇಳಿಸಿತು. ಅದು ಅರಮನೆಯ ಕುದುರೆ ಲಾಯದಿಂದ ಬಂದಿತು. ಹಿಂದಿನ ದಿನ ಬಂದ ಕುದುರೆಗಳು ತಮ್ಮ ಹಳೆಯ ರೂಪವಾದ ನರಿಗಳ ಆಕಾರವನ್ನು ಪಡೆದಿದ್ದವು. ಅವುಗಳು ಮಾಡಿದ ಕೂಗಾಟ ಇಡೀ ನಗರವನ್ನೇ ಎಚ್ಚರಗೊಳ್ಳುವಂತೆ ಮಾಡಿತು. ನರಿಗಳು ಅಲ್ಲಿ ಇದ್ದ ನಿಜವಾದ ಕುದುರೆಗಳನ್ನು ಕೊಂದು ತಿಂದವು. ನಗರದಲ್ಲಿ ಗಲಾಟೆ, ಗಾಬರಿಯನ್ನುಂಟುಮಾಡಿ ಹತ್ತಿರವಿದ್ದ ಕಾಡಿಗೆ ಓಡಿಹೋದವು.

ಇದನ್ನು ತಿಳಿದ ರಾಜನು ತಾನು ಮೋಸಹೋದುದನ್ನು ಅರಿತು ಮತ್ತೆ ತನ್ನ ಮುಖ್ಯಮಂತ್ರಿಯಾದ ಮಾಣಿಕ್ಕವಾಚಕರನ್ನು ಸೆರೆ ಹಿಡಿಯಲು ಅಪ್ಪಣೆ ಮಾಡಿದನು. ಅವರ ಬೆನ್ನಿನಲ್ಲಿ ಒಂದು ಕಲ್ಲನ್ನು ಕಟ್ಟಿ ನೀರಿಲ್ಲದ ವೈಗೈ ನದಿಯ ಮಣ್ಣನಲ್ಲಿ ಬಿಸಿಲಿನಲ್ಲಿ ನಿಲ್ಲುವ ಶಿಕ್ಷೆ ಕೊಟ್ಟನು. ನಡು ಹಗಲಿನ ಬಿಸಿಲಿನಲ್ಲಿ ಬೆಂದ ಮಾಣಿಕ್ಕವಾಚಕರು ತನ್ನನ್ನು ರಕ್ಷಿಸಬೇಕೆಂದೂ, ತನಗೆ ಕೃಪೆ ಮಾಡಬೇಕೆಂದೂ ಶಿವನನ್ನು ಬೇಡಿದರು. ತನ್ನ ಭಕ್ತರನ್ನು ಕಾಪಾಡುವವನೂ ದಂಡಿಸುವವನೂ ಆದ ಶಿವನು ಮತ್ತೆ ಅವರ ಸಹಾಯಕ್ಕೆ ಬಂದನು. ಶಿವನು ತನ್ನ ತಲೆಯಲ್ಲಿರುವ ಗಂಗೆಯನ್ನು ನೋಡಿ ವೈಗೈ ನದಿಯಲ್ಲಿ ಪ್ರಳಯ ಕಾಲದ ಪ್ರವಾಹ ರೂಪದಲ್ಲಿ

ಬರಬೇಕೆಂದೂ ಆ ಪ್ರಳಯದಲ್ಲಿ ಇಡೀ ಮಧುರಾ ನಗರವೇ ಮುಳುಗಬೇಕೆಂದೂ ಹೇಳಿದನು. "ಆನೆಗಳ ಗುಂಪೊಂದು ಬೆಟ್ಟದಿಂದ ಓಡಿಬರುವ ಹಾಗೆ" ವೈಗೈ ನದಿಯಲ್ಲಿ ನೀರಿನ ಪ್ರವಾಹ ಬಂತು. ಪ್ರವಾಹವು ನದಿಯ ದಡವನ್ನು ಮೀರಿ ಹರಿಯಿತು. ಇದನ್ನು ನೋಡಿದ ರಾಜನಿಗೂ ಇತರ ಮಂತ್ರಿಗಳಿಗೂ ತುಂಬಾ ಆಶ್ಚರ್ಯವಾಯಿತು. ತಾನು ಮಾಣಿಕ್ಕವಾಚಕರನ್ನು ದಂಡಿಸಿದ್ದರಿಂದಲೇ ಹೀಗಾಯ್ತು ಎಂದು ತಿಳಿದ ರಾಜನು ಒಡನೆಯೇ ಅವರನ್ನು ಬಿಡುಗಡೆಮಾಡಿದನು. ಮುಂದೆ ಪ್ರಳಯದಿಂದ ಒಡೆದುಹೋದ ನದಿಯ ದಂಡೆಯನ್ನು ಕಟ್ಟಿಸುವ ಕಾರ್ಯವನ್ನು ಅವರಿಗೆ ವಹಿಸಿಕೊಟ್ಟನು. ಮಾಣಿಕ್ಕವಾಚಕರು ನದಿಯನ್ನು ಅಳತೆಮಾಡಿ ಅವರವರಿಗೆ ಇಷ್ಟಿಷ್ಟು ಉದ್ದದ ಭೂಮಿಯೆಂದು ಎಲ್ಲ ಜನರಿಗೂ ಭಾಗಮಾಡಿ ಕೊಟ್ಟರು. ಅಷ್ಟು ಉದ್ದದ ನದಿಗೆ ನಗರದ ಎಲ್ಲ ಜನರೂ ಕಟ್ಟೆ ಕಟ್ಟಿ ಸರಿಮಾಡಬೇಕಾಯಿತು.

ಮಣ್ಣು ಹೊರುವ ಶಿವನು

ಹೀಗೆ ನಗರದಲ್ಲಿ ಎಲ್ಲ ಜನರಿಗೂ ಕೆರೆಯನ್ನು ಕಟ್ಟುವ ಕೆಲಸ ಭಾಗಮಾಡಿ ಕೊಡಲಾಯಿತು. ನಗರದಲ್ಲಿದ್ದ ಜನರಲ್ಲಿ ಒಬ್ಬಳು ವಿಧವೆ. ವಂದಿ ಎಂಬ ಹೆಸರಿನ ಅವಳು ಅಕ್ಕಿ ಹಿಟ್ಟಿನಿಂದ ಪಿಟ್ಟು ಎಂಬ ಒಂದು ಬಗೆಯ ತಿಂಡಿಯನ್ನು ಮಾಡಿ ಮಾರಿ ಜೀವನ ನಡೆಸುತ್ತಿದ್ದಳು. ಅವಳಿಗೆ ನದಿಯ ಒಂದಿಷ್ಟು ಭಾಗವನ್ನು ಕಟ್ಟಿ ಸರಿಪಡಿಸಬೇಕೆಂದು ಅಪ್ಪಣೆಯಾಯಿತು. ಅವಳಿಗೆ ವಯಸ್ಸಾಗಿದ್ದರಿಂದ ಕೆರೆಯನ್ನು ಕಟ್ಟುವುದು ಸಾಧ್ಯವಿರಲಿಲ್ಲ. ಅವಳಿಗೋಸ್ಕರ ಆ ಕೆಲಸವನ್ನು ಮಾಡುವವರು ಬೇರೆ ಯಾರೂ ಇರಲಿಲ್ಲ. ಅವಳು ಬಡವಳಾದ್ದರಿಂದ ಒಬ್ಬ ಕೆಲಸದ ಆಳನ್ನು ಇಟ್ಟುಕೊಂಡು ತನ್ನ ಕರ್ತವ್ಯವನ್ನು ಮುಗಿಸುವುದೂ ಸಾಧ್ಯವಾಗದೆ ಹೋಯಿತು. ತನ್ನ ಕಷ್ಟವನ್ನು ಮೊರೆಯಿಡಲು ಅವಳು ಚೊಕ್ಕನಾಥ ದೇವಾಲಯಕ್ಕೆ ಹೋದಳು. "ಸಹಾಯ ಮಾಡುವವರಿಲ್ಲದವರಿಗೆ ಸಹಾಯ ಮಾಡುವವನೆ, ನಿಮ್ಮ ದಯೆಯನ್ನು ಬೇಡಿ ನಿಮ್ಮ ಹತ್ತಿರ ಬಂದಿರುವೆ" ಎಂದು ಮೊರೆಯಿಟ್ಟಳು. ತಮ್ಮ ದುಃಖವನ್ನು ನಿವಾರಿಸಲು ಬೇಡುವವರಿಗೆ ತಪ್ಪದೆ ಸಹಾಯ ಮಾಡುವ ಶಿವನು ಅವಳ ಮೊರೆಗೆ ಕಿವಿಗೊಟ್ಟನು. ದೇವರ ಗುಡಿಯಿಂದ ಹೊರಬಂದಾಗ ಒಬ್ಬ ಹಳ್ಳಿಯವನು ಹರಿದ ಬಟ್ಟೆಯನ್ನು ಉಟ್ಟುಕೊಂಡು ತನ್ನ ತಲೆಯ ಮೇಲೆ ಮಣ್ಣು ಹೊರುವ ಒಂದು ಬುಟ್ಟಿಯನ್ನೂ ಹೆಗಲಿನ ಮೇಲೆ ಗುದ್ದಲಿಯನ್ನೂ ಹೊತ್ತುಕೊಂಡು ತನ್ನ ಹತ್ತಿರ ಬರುವುದನ್ನು ನೋಡಿ ಆಶ್ಚರ್ಯಪಟ್ಟಳು. ಬಂದವನು ಅವಳನ್ನು ನೋಡಿ "ನನಗೆ ಕೂಲಿ ಕೊಟ್ಟು ಕೆಲಸಕ್ಕೆ ಇಟ್ಟುಕೊಳ್ಳುತ್ತೀಯ? "ನನಗೆ ಹಸಿವಾಗಿದೆ, ನನಗೆ ಊಟ ಕೊಡು. ಮುಂದೆ ನೀನು ಏನು ಹೇಳಿದರೂ ಮಾಡುತ್ತೇನೆ" ಎಂದನು. ತಾನು ದೇವರ ಹತ್ತಿರ ಮೊರೆಯಿಟ್ಟಿದ್ದು ನೆರವೇರಿತೆಂದು ಅವಳಿಗೆ ತುಂಬಾ ಸಂತೋಷ

ವಾಯಿತು. ಆದರೆ, ಶಿವನೇ ತನ್ನ ಸಹಾಯಕ್ಕಾಗಿ ಬಂದಿರುವನು ಎಂಬುದು ಅವಳಿಗೆ ತಿಳಿಯದು. ಅವನ ಕೋರಿಕೆಗೆ ಒಪ್ಪಿದ ಅವಳು ತಾನು ಮಾಡಿದ್ದ ಪಿಟ್ಟನ್ನು ಅವನಿಗೆ ಕೊಟ್ಟಳು. ಅವನು ಸಾಕಷ್ಟು ಪಿಟ್ಟನ್ನು ತಿಂದು ಕೆಲಸಕ್ಕೆ ಹೋದನು. ಆದರೆ ಅವನು ಕೆಲಸಮಾಡದೆ ಹಾಡುಹಾಡುತ್ತಾ ಆಟವಾಡುತ್ತಾ ಇದ್ದನು. ಇದು ಅವನ 'ಆಟ'ದಲ್ಲಿ ಒಂದು ಬಗೆ. ಅವನು ಅಲ್ಲಿ ಇಲ್ಲಿ ಓಡಾಡಿದನು. ತಾನು ಹೊತ್ತುಕೊಂಡು ಬಂದ ಮಣ್ಣನ್ನು ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ ಹಾಕಿದನು. ಮೇಲ್ವಿಚಾರಣೆ ಮಾಡುವವರು ಇವನ ಆಟ ಹಾಗೂ ಹಾಡನ್ನು ನೋಡಿ ಇವನು ಹುಚ್ಚನೇನೋ ಎಂದು ಭಾವಿಸಿದರು. ಮುಂದೆ ಅವನು ತಾನು ಮುದುಕಿಯಿಂದ ತಂದಿದ್ದ ಪಿಟ್ಟೆಲ್ಲವನ್ನೂ ತಿಂದು ಮುಗಿಸಿದನು. ಕೆಲಸವೇನನ್ನೂ ಮಾಡದೆ, ಅವನು ತನ್ನ ಬುಟ್ಟಿಯನ್ನು ತನ್ನ ತಲೆಯ ಕೆಳಗೆ ದಿಂಬಾಗಿ ಇಟ್ಟುಕೊಂಡು ನಿದ್ರೆಮಾಡಲು ಪ್ರಾರಂಭಿಸಿದನು. ಸುದ್ದಿಗಾರರು ಇದನ್ನು ರಾಜನಿಗೆ ತಿಳಿಸಿದರು. ರಾಜನು ಆಳುಗಳನ್ನು ಕಳುಹಿಸಿ ಅವನನ್ನು ಕರೆದುಕೊಂಡು ಬರಹೇಳಿದನು. ಆಳುಗಳು ಅವನನ್ನು ತುಂಬಾ ಕಷ್ಟಪಟ್ಟು ನಿದ್ರೆಯಿಂದ ಎಬ್ಬಿಸಿ ರಾಜನ ಮುಂದೆ ಕರೆದುಕೊಂಡು ಬಂದರು. ಅವನು ಏನೂ ಮಾತಾಡಲಿಲ್ಲ. ಕೋಪದಿಂದ ರಾಜನು ಅವನ ಬೆನ್ನಿನ ಮೇಲೆ ಹೊಡೆಯಿಸಿದನು. ಆದರೆ ಏನು ಆಶ್ಚರ್ಯ! ಆ ಏಟು ಸ್ವರ್ಗದಲ್ಲಿದ್ದ ಎಲ್ಲ ದೇವರ ಬೆನ್ನಲ್ಲೂ, ಲೋಕದಲ್ಲಿದ್ದ ಎಲ್ಲ ಜೀವರಾಶಿಗಳ ಬೆನ್ನಲ್ಲೂ ಬಿತ್ತು. ಅಲ್ಲಿದ್ದ ಜನರೆಲ್ಲರೂ ಮತ್ತೆ ನೋಡಿದಾಗ ಅಲ್ಲಿ ಆ ಕೆಲಸದ ಆಳಿನ ರೂಪದಲ್ಲಿ ಬಂದಿದ್ದ ಶಿವನು ಅದೃಶ್ಯನಾಗಿದ್ದನು.

ಪುರಾತನರು ಮಾಣಿಕ್ಕವಾಚಕರು

ಇದನ್ನು ತಿಳಿದ ಮುಖ್ಯ ಮಂತ್ರಿಗಳಾದ ಮಾಣಿಕ್ಕವಾಚಕರಿಗೆ ತುಂಬಾ ಬೇಸರವಾಯಿತು. ತಮ್ಮಿಂದ ಶಿವನನ್ನು ನೋಡಲಿಕ್ಕಾಗದೆ ಹೋದುದಕ್ಕೆ ಅವರು ಬಹಳವಾಗಿ ದುಃಖಿಸಿದರು. ಮತ್ತೆ ರಾಜನೇ ಅವರ ಹತ್ತಿರ ಬಂದು ತಾನು ಮಾಡಿದ ತಪ್ಪಿಗಾಗಿ ಅವರ ಕ್ಷಮೆಯನ್ನು ಬೇಡಿದನು. ಅಷ್ಟಲ್ಲದೆ, ತನಗೆ ರಾಜ್ಯವನ್ನು ಆಳುವುದಕ್ಕೆ ಬೇಕಾದ ಯೋಗ್ಯತೆಯಿಲ್ಲವೆಂದೂ ಮಾಣಿಕ್ಕವಾಚಕರೇ ರಾಜನಾಗಬೇಕೆಂದೂ ಬೇಡಿದನು. ಆದರೆ ಮಾಣಿಕ್ಕವಾಚಕರು ಅದನ್ನು ಒಪ್ಪಲಿಲ್ಲ. ತನಗೆ ಏನೂ ಬೇಡವೆಂದೂ, ತಾನು ತಿರುಪ್ಪೆರುಂದುರೈಗೆ ಮತ್ತೆ ಹೋಗಬೇಕೆಂದೂ ಅಲ್ಲಿ ಶಿವನ ಪೂಜೆಯಲ್ಲಿ ತನ್ನ ಕಾಲವನ್ನು ಕಳೆಯಬೇಕೆಂದೂ ಹೇಳಿದರು. ರಾಜನು ಅದಕ್ಕೆ ಒಪ್ಪಿದನು. ಒಡನೆಯೇ ಅವರು ಈ ಲೋಕದ ಬಂಧನಗಳೆಲ್ಲವನ್ನೂ ಬಿಟ್ಟು ಸನ್ಯಾಸಿಯಾದರು. ಅಂದಿನಿಂದ ಅವರು ಹೊಸ ಬದುಕನ್ನು ಆರಂಭಿಸಿದರು. ಅವರು ತಿರುಪ್ಪೆರುಂದುರೈಯಲ್ಲಿ ಶಿವನ ಧ್ಯಾನದಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರು. ಮುಂದೆ ಅವರು ತಮಿಳುನಾಡಿನ ಎಲ್ಲೆಡೆಗಳಿಗೂ ಹೋಗಿ ಅಲ್ಲಿದ್ದ ಶಿವನನ್ನು ನೋಡಿ

ಪೂಜೆಮಾಡಿದರು. ಅವರು ತಿರುಪ್ಪೆರುಂದುರೈಯಲ್ಲಿ ಇದ್ದಾಗಲೂ, ಇತರ ಸ್ಥಳಗಳಿಗೆ ಹೋದಾಗಲೂ ಶಿವನ ಲೀಲೆಯನ್ನೂ, ಕೃಪಾಗುಣವನ್ನೂ ಹಾಡಿದರು. ಕೊನೆಯಲ್ಲಿ ಅವರು ಚಿದಂಬರಕ್ಕೆ ಹೋಗಿ ಅಲ್ಲಿ ಶಿವನ ಕೀರ್ತಿಯನ್ನು ಹಾಡಿ ಅಲ್ಲೇ ಶಿವನ ಪಾದಾರವಿಂದಗಳನ್ನು ಸೇರಿದರು.

ಇಬ್ಬರಿಗೂ ಇರುವ ಸಮಾನತೆಗಳು ಮತ್ತು ಭೇದಗಳು

ಮುಂದೆ ಇಬ್ಬರಿಗೂ ಇರುವ ಸಮಾನತೆಗಳನ್ನೂ ಭೇದಗಳನ್ನೂ ನೋಡೋಣ. ಇಬ್ಬರೂ ಬ್ರಾಹ್ಮಣ ತಂದೆ ತಾಯಿಯರಿಗೆ ಹುಟ್ಟಿ ಬಾಲ್ಯದಲ್ಲೇ ವೇದಾಗಮಗಳಲ್ಲಿ, ಶೈವ ಸಿದ್ಧಾಂತಗಳಲ್ಲಿ ಪೂರ್ಣಪಾಂಡಿತ್ಯ ಪಡೆದಿದ್ದರು. ಇಬ್ಬರ ಕಾಲದಲ್ಲೂ ಶೈವ ಸಮಯ ಅಳಿದು ಹೋಗಿ ಬೇರೆ ಧರ್ಮಗಳು ರೂಢಿಯಲ್ಲಿದ್ದವು. ಆಗ ಕರ್ನಾಟಕದಲ್ಲಿ ಜೈನ ಧರ್ಮವೂ ತಮಿಳುನಾಡಿನಲ್ಲಿ ಬೌದ್ಧ ಧರ್ಮವೂ ವಿಶೇಷ ವಾಗಿ ಪ್ರಚಾರದಲ್ಲಿದ್ದವು. ಇವರು ತಮ್ಮ ಭಕ್ತಿಯಿಂದ ಜನರನ್ನು ತಮ್ಮ ಕಡೆ ತಿರುಗಿಸಿ, ಶೈವ ಧರ್ಮದತ್ತ ಅವರು ಒಲವು ಮೂಡುವಂತೆ ಮಾಡಿದರು. ಈರ್ವರೂ ರಾಜ್ಯದ ಮಹಾಮಂತ್ರಿಗಳಾಗಿ ಕೆಲಸ ಮಾಡಿದರು. ತಾವು ಮಂತ್ರಿ ಯಾಗಿದ್ದುದರಿಂದ ತಮಗೆ ಇದ್ದ ಶಕ್ತಿಯನ್ನು ಶೈವ ಧರ್ಮದ ಅಭಿವೃದ್ಧಿಗೆ ಬಳಸಿದರು. ಬಸವಣ್ಣನವರು ರಾಜನ ಭಂಡಾರವನ್ನು ಶಿವಶರಣರಿಗಾಗಿ ವ್ಯಯಿಸಿ ದಂತೆ, ಮಾಣಿಕ್ಕವಾಚಕರೂ ತಮ್ಮ ರಾಜನಾದ ಅರಿಮರ್ದನ ಪಾಂಡಿಯನ ಭಂಡಾರದ ಧನವನ್ನು ಶಿವನ ಗುಡಿಯ ನಿರ್ಮಾಣಕ್ಕಾಗಿ ವ್ಯಯಿಸಿದರು. ಇಬ್ಬರೂ ಶಿವನ ಪರಮ ಭಕ್ತರಾಗಿದ್ದರು. ಶಿವನ ಕರುಣೆಯನ್ನು ಕುರಿತು, ಅವನ ಸ್ವಭಾವ ವನ್ನು ಕುರಿತು ಎಲ್ಲ ಜನರಿಗೂ ತಿಳಿಯುವಂತೆ ಹಾಡು ಹಾಡಿದರು. ಇವರ ಕೃತಿಗಳು ಜನತೆಯ ಆದರಾಭಿಮಾನವನ್ನು ಪಡೆದಿದ್ದವು. ಬಸವಣ್ಣನವರು ರಚಿಸಿದ ವಚನಗಳು ಸಾಧಾರಣ ಜನರ ಆಡುನುಡಿಯಲ್ಲಿ ಇದ್ದುದರಿಂದ ಅವು ಜನಪ್ರಿಯ ಹಾಡುಗಳಾಗಿ ಅವರ ಮನಸ್ಸನ್ನು ಆಕರ್ಷಿಸಿದವು. ಹಾಗೆಯೇ, 'ಮಾಣಿಕ್ಕ ವಾಚಕರ' 'ತಿರುವಾಚಕಂ' ಎಲ್ಲ ಶಿವಭಕ್ತರಿಂದಲೂ ಪ್ರತಿದಿನವೂ ಹಾಡಲ್ಪಟ್ಟವು. 'ತಿರುವಾಚಕ'ಕ್ಕೆ ಕರಗದವರು ಬೇರಾವ ವಾಚಕಕ್ಕೂ ಕರಗರು ಎಂಬ ಗಾದೆಯೇ ಇದೆ. ಅದನ್ನು ಓದುವವರು ಶಿವನ ಕರುಣೆಯನ್ನು ತಿಳಿದು, ಮನಸ್ಸು ಕರಗಿ ಕಣ್ಣೀರು ಹರಿಸುವುದು ನಿಶ್ಚಯಂ.

ಇಬ್ಬರಿಗೂ ಇರುವ ಭೇದಗಳಲ್ಲಿ ಮುಖ್ಯವಾದುದು, ಬಸವಣ್ಣನವರು ಓರ್ವ ಕ್ರಾಂತಿಕಾರರಾಗಿ ಖ್ಯಾತರಾಗಿದ್ದಾರೆ, ಮಾಣಿಕ್ಕವಾಚಕರು ಒಬ್ಬ ಪಕ್ವವಾದ ಶಿವಭಕ್ತ ರಾಗಿ ಪ್ರಸಿದ್ಧರಾಗಿರುವರು. ಶಿವನ ಕರುಣೆ, ಅವನ ಕೃಪೆ ಇವುಗಳೇ ಅವರನ್ನು ಪ್ರಚೋದಿಸಿದವು. ಬಸವಣ್ಣನವರು ಚಿಕ್ಕ ವಯಸ್ಸಿನಲ್ಲೇ ಉಪನಯನ ಸಂಸ್ಕಾರ

ವನ್ನು ನಿರಾಕರಿಸಿ ಮನೆಯನ್ನು ತ್ಯಜಿಸಿ ಬಂದರು. ಅವರು ಸಮಾಜದಲ್ಲಿದ್ದ ಜಾತಿ ಭೇದಗಳನ್ನು ಬಹುವಾಗಿ ಆಕ್ಷೇಪಿಸಿದರು. ಬ್ರಾಹ್ಮಣ, ಶೂದ್ರ ಎಂಬ ಭೇದಗಳು ಅವರಿಗಿಲ್ಲ. ಶಿವಭಕ್ತರೆಲ್ಲರೂ ಒಂದೇ ಜಾತಿಯವರು ಎಂಬುದು ಅವರ ಅಭಿಪ್ರಾಯ. ಇನ್ನೊಂದು ಮುಖ್ಯವಾದ ಭೇದ ಯಾವುದೆಂದರೆ, ಬಸವಣ್ಣನವರು ಇಬ್ಬರು ಹೆಂಗಸರನ್ನು ಮದುವೆ ಮಾಡಿಕೊಂಡು ಸಂಸಾರಿಯಾಗಿದ್ದರು. ತಮ್ಮ ಮನೆಯಲ್ಲಿದ್ದುಕೊಂಡು ತಮ್ಮ ಮನೆಗೆ ಬರುವ ಶಿವಶರಣರಿಗೆ ಸೇವೆ ಸಲ್ಲಿಸುವುದರಲ್ಲಿ ಪರಮಾನಂದ ಪಡೆದವರು. ಆದರೆ, ಮಾಣಿಕ್ಯವಾಚಕರು ಮದುವೆ ಮಾಡಿಕೊಳ್ಳದೆ, ಸಂಸಾರ ಜೀವನ ನಡೆಸದೆ ಒಬ್ಬ ಸನ್ಯಾಸಿಯ ರೀತಿಯಲ್ಲಿ ಬದುಕಿದರು. ಊರೂರಿಗೆ ನಡೆದುಕೊಂಡು ಹೋಗಿ ಶಿವನ ದೇವಸ್ಥಾನಗಳಲ್ಲಿ ಹಾಡು ಹಾಡುತ್ತಾ ಶಿವನನ್ನು ಪೂಜಿಸಿದರು.

ಬಸವಣ್ಣನವರು ಬಿಜ್ಜಳನ ರಾಜಸಭೆಯಲ್ಲಿ ಮಂತ್ರಿಯಾಗಿದ್ದುಕೊಂಡು ವೀರಶೈವ ಧರ್ಮದ ಅಭಿವೃದ್ಧಿಗಾಗಿ ದುಡಿದರು. ಅವರು ಮಾಣಿಕ್ಯವಾಚಕರ ಹಾಗೆ ಆರಂಭದಲ್ಲಿ ಮಂತ್ರಿಯಾಗಿದ್ದು ಮುಂದೆ ಅದನ್ನು ತೊರೆದು ಶಿವಭಕ್ತರಾಗದೆ ಕೊನೆಯುವರೆವಿಗೂ ರಾಜ್ಯದ ಆಡಳಿತ ನಿರ್ವಹಿಸುವವರಾಗಿಯೂ, ವೀರಶೈವ ಧರ್ಮಕ್ಕೆ ಸೇವೆ ಸಲ್ಲಿಸುವವರಾಗಿಯೂ ಇದ್ದುದರಿಂದ ಅವರಲ್ಲಿ ಹಲವು ಕ್ರಾಂತಿಕಾರಕ ಯೋಜನೆಗಳನ್ನು ನೋಡಬಹುದು. ಆದರೆ ಮಾಣಿಕ್ಯವಾಚಕರು ಆರಂಭದಲ್ಲಿ ಮಂತ್ರಿಯಾಗಿದ್ದು ಮುಂದೆ ಶಿವಭಕ್ತರಾದರು. ಅವರು ಒಬ್ಬ ಮಂತ್ರಿ–ಬದಲಿಸಿದ ಶಿವಭಕ್ತರು (A minister-turned-Shiva Bhakta). ಆದ್ದರಿಂದ, ಅವರಲ್ಲಿ ರಾಜಕೀಯ ರಂಗಕ್ಕೆ ಸಂಬಂಧಪಟ್ಟಿರುವ ವಿಚಾರಗಳನ್ನು ನೋಡುವುದು ಸಾಧ್ಯವಿಲ್ಲ. ಬಸವಣ್ಣನವರು ವೀರಶೈವ ಧರ್ಮವನ್ನು ಸಮಾಜಿಕ ದೃಷ್ಟಿಯಿಂದ ನೋಡಿದರು ; ಆದರೆ, ಮಾಣಿಕ್ಯವಾಚಕರು ಶೈವಭಕ್ತರಾಗಿ ಜೀವಿತದ ಕೊನೆಯುವರೆಗೂ ಇದ್ದರು. ಇವರು ಸಮಾಜದಲ್ಲಿರುವ ಕುಂದು ಕೊರತೆಗಳ ಬಗ್ಗೆ ಯೋಚಿಸದೆ ಸ್ವಾತ್ಮ ವಿಮರ್ಶೆ ಮಾಡಿರುವರು. ಬಸವಣ್ಣನವರು ಭಕ್ತರ ಸಲುವಾಗಿ ಹಲವು ಪವಾಡಗಳನ್ನು ಮಾಡಿದರು. ಅವರೇ ತಮ್ಮ ಒಂದು ವಚನದಲ್ಲಿ ತಾನು ಎಂಬತ್ತೆಂಟು ಪವಾಡಗಳ ಜೊತೆಗೆ ಮೂವತ್ತಾರು ಕೊಂಡೆಯವನ್ನು ಪರಿಹರಿಸಿ, ಮೂನ್ನೂರ ಮೂವತ್ತು ಸತ್ತ ಪ್ರಾಣಿಗಳನ್ನು ಮೇಲೆತ್ತಿದುದಾಗಿ ಹೇಳಿಕೊಂಡಿರುವರು. ಆದರೆ ಮಾಣಿಕ್ಯವಾಚಕರು ತಾವಾಗಿಯೇ ಪವಾಡಗಳೇನನ್ನೂ ಮಾಡಲಿಲ್ಲ. ಇವರು ತಮ್ಮನ್ನು ಶಿವನಿಗೆ ಪೂರ್ಣವಾಗಿ ಅರ್ಪಿಸಿಕೊಂಡಿದ್ದರು. ಇವರಿಗಾಗಿ, ಕಷ್ಟಗಳಿಂದ ಕಾಪಾಡುವುದಕ್ಕಾಗಿ ಶಿವನೇ ಇವರ ಪರವಾಗಿ ಕೆಲವು ಪವಾಡಗಳನ್ನು ಮಾಡಿದನು. ಈ ಪವಾಡಗಳನ್ನು ನಾವು ಹಿಂದೆಯೇ ನೋಡಿರುವೆವು.

ಇವರ ಕೃತಿಗಳು

ಬಸವಣ್ಣನವರು ಕೂಡಲಸಂಗಮದಲ್ಲಿದ್ದ ಶಿವನನ್ನು ತುಂಬಾ ಭಕ್ತಿಯಿಂದ ಸೇವೆ ಮಾಡಿದಂತೆ, ಹಲವು ವಚನಗಳನ್ನು ರಚಿಸಿದಂತೆ, ಮಾಣಿಕ್ಕವಾಚಕರು ತಿರುಪ್ಪೆರುಂದುರೈಯೆಂಬ ಸ್ಥಳದಲ್ಲಿದ್ದ ಶಿವನ ಭಕ್ತರಾಗಿ ಅವನ ಮೇಲೆ ಹಲವು ಗೀತೆಗಳನ್ನು ರಚಿಸಿದರು. ಬಸವಣ್ಣನವರ ಕೃತಿಗಳು ಅವರ ಹೆಸರಿನಲ್ಲಿ ಬಂದಿರುವ ವಚನಗಳಾಗಿದ್ದರೆ, ಮಾಣಿಕ್ಕವಾಚಕರ ರಚನೆಗಳು ತಿರುವಾಚಕಂ ಮತ್ತು ತಿರುಕ್ಕೋವೈಯಾರ್ ಎಂಬ ಎರಡು ಕೃತಿಗಳಾಗಿವೆ. 'ತಿರುವಾಚಕ'ದಲ್ಲಿ ಮಾಣಿಕ್ಕವಾಚಕರ ಭಕ್ತಿಗೀತಗಳೂ, 'ತಿರುಕ್ಕೋವೈ'ಯಾರಲ್ಲಿ ಸತಿಪತಿ ಭಾವನೆಯ ಗೀತಗಳು—ತಮ್ಮನ್ನು ಪ್ರಿಯತಮೆಯಾಗಿ ಭಾವಿಸಿ, ದೇವರನ್ನು ಪ್ರಿಯತಮನನ್ನಾಗಿ ಭಾವಿಸಿ ರಚಿಸಿರುವ ಗೀತಗಳು–ಇವೆ.

ಮುಂದೆ ಇವರಿಬ್ಬರ ಕೃತಿಗಳಲ್ಲೂ ಇರುವ ಸಾದೃಶ್ಯಗಳನ್ನು ನೋಡಬಹುದು. ತನ್ನನ್ನು ಸಂಪೂರ್ಣವಾಗಿ ದೇವರಿಗೆ ಅರ್ಪಣೆ ಮಾಡಬೇಕು. ಆ ಬಳಿಕ ತನ್ನಿಂದ ಭಕ್ತಿಯ ನಿವೇದನೆ ಸಾಧ್ಯವಾಗುತ್ತದೆ. ಹಾಗಲ್ಲದೆ ಮಂತ್ರಿಗಳೆಂದೋ ಅಥವಾ ದೊಡ್ಡವರೆಂದೋ ಭಾವಿಸಿಕೊಂಡರೆ ಭಕ್ತಿಯ ನಿವೇದನೆ, ಶಿವನನ್ನು ತ್ರಿಕರಣ ಪೂರ್ವಕವಾಗಿ ಸೇವಿಸುವುದು ಸಾಧ್ಯವಿಲ್ಲ. ಆದ್ದರಿಂದಲೆ ಇಬ್ಬರೂ ತಮ್ಮನ್ನು ಹಲವು ಸಂದರ್ಭಗಳಲ್ಲಿ ಕಿರಿಯನೆಂದೂ, ಹುಚ್ಚನೆಂದೂ, ನಾಯಿಯೆಂದೂ ಕರೆದು ಕೊಳ್ಳುತ್ತಾರೆ.

"ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ!
ಕೂಡಲಸಂಗಮ ದೇವಾ, ಎನಗಿದೇ ದಿಬ್ಯ!" (337)

ಎಂಬ ಬಸವಣ್ಣನವರ ವಚನವನ್ನು ನೋಡಿದರೆ, ಅವರು ಹೇಗೆ ತಮ್ಮನ್ನು ಕಿರಿಯವನೆಂದೂ, ಶಿವಭಕ್ತರನ್ನು ದೊಡ್ಡವರೆಂದೂ ಭಾವಿಸಿಕೊಂಡಿದ್ದರು ಎಂಬುದು ತಿಳಿದು ಬರುತ್ತದೆ. ಈಗ ಮಾಣಿಕ್ಕವಾಚಕರ ಹಾಡನ್ನು ನೋಡೋಣ :

"......
ನಾಯಿಗಿಂತ ಕನಿಷ್ಠವಾಗಿದ್ದ ದಾಸನಾದ ನನಗು
ತಾಯಿಗಿಂತ ಹೆಚ್ಚಿನ ದಯೆ ತೋರಿಸಿದ ತತ್ವನೆ
....."

(ಶಿವಪುರಾಣಂ, ಸಾಲುಗಳು 60-61)

ಎಂದೂ

"ನಾಯಿಗೂ ಕಿರಿಯನಾದ ನಾಯಾದ ನನ್ನನ್ನು
ನಯವಾಗಿ ನೀನೆ ಗೆದ್ದಿರುವೆ........." (501)

ಎಂದೂ ಹಾಡುತ್ತಾರೆ. ಇಬ್ಬರೂ ತಮ್ಮನ್ನು ಎಷ್ಟು ಕಿರಿಯರಾಗಿ ಭಾವಿಸಿದ್ದರು, ಶಿವನ ಮೇಲೆ ಎಷ್ಟು ಭಕ್ತಿಯನ್ನಿಟ್ಟಿದ್ದರು ಎಂಬುದು ತಿಳಿದುಬರುತ್ತದೆ.

ಒಂದು ಸಂದರ್ಭದಲ್ಲಿ ಮಾಣಿಕ್ಯವಾಚಕರು ಹೀಗೆ ಹೇಳುತ್ತಾರೆ :

"ನಿನ್ನೊಳಗೆ ನಿನ್ನೊಡತಿ ನೆಲೆಯಾಗಿರುವಳು
ನಿನ್ನೊಡತಿಯೊಳಗೆ ನೀ ನೆಲೆಗೊಂಡಿರುವೆ
ಶಿವಭಕ್ತರೊಳಗೆ ನೀವಿರ್ವರೂ ನೆಲೆಗೊಂಡು
ಇರುವುದರಿಂದ ದಾಸನಾದ ನಾನು ನಿನ್ನ
ಭಕ್ತರ ನಡುವೆ ಇರುವ ಕೃಪೆ ಮಾಡು
ಪೊನ್ನಾಂಬಲದಲ್ಲಿ ಇರುವ
ಕೊನೆಮೊದಲಿಲ್ಲದವನೆ, ನನ್ನಿಚ್ಛೆಯನ್ನು
ಪೂರೈಸು, ದಯೆಮಾಡಿ"

ಶಿವನು ಎಷ್ಟು ದೊಡ್ಡವನಾಗಿದ್ದರೂ ಅವನನ್ನು ಪೂಜಿಸುವ–ನಿಜವಾದ ಭಕ್ತಿಯಿಂದ ಪೂಜಿಸುವ–ಶಿವಶರಣರಿಗೆ ಕೃಪೆ ಮಾಡುವನು. ಅವನನ್ನು ಪೂಜಿಸುವ ಭಕ್ತರು ಇಲ್ಲವೆಂದರೆ ಶಿವನೂ ಇಲ್ಲವೆಂದು ಹೇಳಬಹುದು. ಏಕೆಂದರೆ, ಶಿವನನ್ನು ನೋಡಿದವರಿಲ್ಲ. ಅವನು ಅರೂಪಿ. ಆದರೆ ಶರಣರು ಅವನ ಕೃಪೆಯನ್ನೂ ದಯೆಯನ್ನೂ ಆ ಮೂಲಕ ಶಿವನನ್ನೂ ತಿಳಿದವರು. ಆದ್ದರಿಂದ ಶಿವನನ್ನು ಪೂಜಿಸಬೇಕೆಂದರೆ ಶಿವನ ಭಕ್ತರನ್ನು ಪೂಜಿಸಬೇಕೆಂಬುದು ಮಾಣಿಕ್ಯವಾಚಕರ ಅಭಿಪ್ರಾಯ. ಹಾಗೆಯೇ ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿರುವರು :

"...
ಈಶ ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ
ನಿಮ್ಮ ವೇಷಧಾರಿಯ ಮನೆಯ ಮಂಗುಳ ನಾನಯ್ಯಾ..." (344)

—ಎಂದೂ, ಇನ್ನೊಂದು ಕಡೆಯಲ್ಲಿ,

"ಶಿವಬಟ್ಟೆಯೊಳೆನ್ನನ್ನು ಇರಿಸಯ್ಯಾ ಪರನೇ..." (63)

—ಎಂದೂ ಹಾಡುತ್ತಾರೆ.

ನಡೆದಾಡುವ ದೇವರಾದ ಶಿವಶರಣರನ್ನು ನಾವು ಪೂಜಿಸಬೇಕು. ಅವನ್ನು ಬಿಟ್ಟು ದೇವಸ್ಥಾನದಲ್ಲಿರುವ ದೇವರಿಗೆ ಪೂಜೆ ಮಾಡುವುದರಲ್ಲಿ ಪುಣ್ಯವೇನೂ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇವರೇ ಇನ್ನೊಂದು ಕಡೆಯಲ್ಲಿ ಹೀಗೆ ಹೇಳುತ್ತಾರೆ :

"ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದರೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ
ನಮ್ಮ ಕೂಡಲ ಸಂಗನ ಶರಣರ ಕಂಡುದಾಸೀನ ಮಾಡಿದರೆ
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ" (197)

ಶಿವಶರಣರಿಗೆ ಎಷ್ಟು ಮುಖ್ಯ ಸ್ಥಾನವನ್ನು ಬಸವಣ್ಣನವರು ಕೊಟ್ಟಿದ್ದರು. ಎಂಬುದು ಇದರಿಂದ ತಿಳಿದುಬರುತ್ತದೆ. ಮಾಣಿಕ್ಕವಾಚಕರೂ, ಬಸವಣ್ಣನವರೂ ಶಿವಭಕ್ತರಿಗೆ ಹೆಚ್ಚಿನ ಮಹತ್ವ ಕೊಡಬೇಕೆಂಬ ವಿಚಾರದಲ್ಲಿ ಸಮಾನ ಮನೋಧರ್ಮಿಗಳು.

ಇಬ್ಬರೂ ಮಂತ್ರಿಯಾಗಿದ್ದು ಶಿವಭಕ್ತರಾದವರು. ಇಬ್ಬರೂ ಶಿವಭಕ್ತಿಯಲ್ಲಿ ತಮ್ಮನ್ನೂ ಎಲ್ಲವನ್ನೂ ಮರೆದವರು. ತಮ್ಮನ್ನೂ ತಮ್ಮ ಒಡವೆಗಳನ್ನೂ ಶಿವನಿಗೆ, ಶಿವಶರಣರಿಗೆ ಅರ್ಪಣೆಮಾಡಿದವರು. ಅವರಿಗೆ ಈ ಲೋಕದ ಡಂಬಾಚಾರ, ಮೋಸ, ವಂಚನೆ, ಕಾಪಟ್ಯ ಹಿಡಿಸದು. ಇಲ್ಲಿರುವ ಜನರಲ್ಲಿರುವ ಕಾಮ, ಕ್ರೋಧ, ಮೋಹ, ಮದ, ಮಾತ್ಸರ್ಯಗಳನ್ನು ನೋಡಿ ಅವರು ತುಂಬಾ ನೊಂದರು. ಆದ್ದರಿಂದ ತಾವು ಈ ಲೋಕದಲ್ಲಿ ಇರಬಾರದು, ತಮ್ಮನ್ನು ಆ ಶಿವನು ಕರೆದುಕೊಳ್ಳಬೇಕೆಂದು ಶಿವನನ್ನು ಕುರಿತು ಅವರು ಬೇಡುತ್ತಾರೆ. ಒಂದು ಮಗುವಿಗೆ ಮನೆಯಲ್ಲಿ ಏನಾದರೂ ತೊಂದರೆ ಅಥವಾ ಕಷ್ಟವಿದ್ದರೆ ಅದು ತಮ್ಮ ತಂದೆ ತಾಯಂದಿರ ಹತ್ತಿರ ಹೇಳುತ್ತದೆ. ಹಾಗೆಯೇ ಇವರು ತಮ್ಮ ತಂದೆ–ತಾಯಾದ ಶಿವನ ಹತ್ತಿರ ತಮ್ಮನ್ನು ಈ ಲೋಕದ ಸುಖ–ದುಃಖಗಳಿಂದ ಕಾಪಾಡಬೇಕೆಂದು ಬೇಡುತ್ತಾರೆ. ಬಸವಣ್ಣನವರು

"ಎನ್ನ ಆಪತ್ತು, ಸುಖ-ದುಃಖವನಿನ್ನಾರಿಗೆ ಹೇಳುವೆ?...... (391)

–ಎಂದು ಹೇಳಿದರೆ, ಮಾಣಿಕ್ಕವಾಚಕರು ಇದನ್ನೇ ಹೀಗೆ ಹೇಳಿರುವರು :

"ಬಾನಿಗೂ ನೆಲಕ್ಕೂ ಹಾರಿ ಇರುವ ಪರವೆ
ಆಸೆ ಬೇರೆ ಇಲ್ಲ ನನಗೆ ನೋಡು
ಚೆಂದವಾಗಿ ಶಿವಪುರದಲ್ಲಿರುವ
ತಿರುಪ್ಪೆರುಂದುರೈಯ ಶಿವನೆ,
ಯಾರಿಗೆ ಮುನಿಯಲಿ ಯಾರಿಗೆ ನಿರೂಪಿಸಲಿ
ಪಡೆದ ನಿನ್ನ ಕೃಪೆಯಿಲ್ಲವೆಂದರೆ
ಭೋರ್ಗರೆವ ಕಡಲಿರುವ ಈ ಲೋಕದಲ್ಲಿ ಬಾಳೋದಿಲ್ಲ ನೋಡು
ಬಾರೆಂದು ಹೇಳು ದಯೆಮಾಡಿ" (446)

ಈ ಲೋಕದ ಬಾಳು ಅವರಿಗೆ ಬೇಸರವಾಯಿತು. ಅವರಿಗೆ ಈ ಲೋಕ ಭೋರ್ಗರೆವ ಕಡಲು. ಅದನ್ನು ಸಹಿಸಲಾಗದೆ ತಮ್ಮನ್ನು ಕರೆದುಕೊಳ್ಳಬೇಕೆಂದು ಶಿವನನ್ನು ಬೇಡುತ್ತಾರೆ.

ಇಬ್ಬರೂ ಶಿವನ ಮೇಲೆ ಇಟ್ಟುಕೊಂಡಿದ್ದ ಭಕ್ತಿ ಅಷ್ಟಿಷ್ಟು ಎಂದು ಹೇಳಲಾಗದು. ಅವರ ಬದುಕು ಶಿವನಿಗಾಗಿ. ಶಿವನಿಗೆ ಭಕ್ತಿಮಾಡುವುದೇ ಅವರ ಕೆಲಸ. ಬಸವಣ್ಣನವರು ಕಪ್ಪಡಿ ಸಂಗಮದಲ್ಲಿದ್ದಾಗ ಅವರು ಪ್ರತಿದಿನವೂ ಮಾಡಿದ ಕೆಲಸ

ಗಳನ್ನು ನೋಡೋಣ : ಅಲ್ಲಿ ಅವರು ದಿನನಿತ್ಯವೂ ಶಿವನನ್ನು ಪೂಜಿಸುತ್ತಿದ್ದ ಕ್ರಮವು ಅವರದೇ ಆಗಿತ್ತು. ಪ್ರಭಾತಕ್ಕೆ ಮುನ್ನವೇ ಎದ್ದು ಭಸ್ಮಧಾರಣೆಮಾಡಿ ಸಂಗನಿಗೆ ಸಾಷ್ಟಾಂಗ ನಮಸ್ಕಾರವನ್ನೆಸಗಿ ತಬ್ಬಿಕೊಂಡಾಗ ಅಪ್ಪರಿಂದಲೇ ಅವರಿಗೆ ರೋಮಾಂಚನವಾಗುತ್ತಿತ್ತು. ಮುಂದೆ ಅವರು ಹೂದೋಟಕ್ಕೆ ಹೋಗಿ ಇನ್ನೂ ದುಂಬಿಗಳು ಮುಟ್ಟದ, ಸೂರ್ಯ ಕಿರಣಗಳು ತಾಗದ, ಮೀಸಲ ಮೊಗ್ಗುಗಳನ್ನು ಆರಿಸಿ ಕೊಯ್ದು ಶಿವನಿಗೆ ಅರ್ಪಣೆ ಮಾಡುವರು. ಅವರ ಮೈ ತುಂಬ ಪುಲಕ, ಕಣ್ಣು ತುಂಬ ನೀರು, ಬಾಯಿ ತುಂಬ ಹಾಡು. "ನನ್ನ ಕಣ್ಣಲ್ಲಿ ಪರಿದಾಡು ಕೂಡಲಸಂಗ, ನನ್ನ ಮನದಲ್ಲಿ ಕುಣಿದಾಡು ಕೂಡಲಸಂಗ" ಎಂದು ಪ್ರಾರ್ಥಿಸುತ್ತಾ ಸ್ನೇಹರಸದಿಂದ, ಸಲುಗೆಯಿಂದ ಆಡಿದರು, ಹಾಡಿದರು. ಶಿವನ ಮೇಲೆ ಇಷ್ಟು ಪ್ರೀತಿಯನ್ನು ಇಟ್ಟುಕೊಂಡಿರುವ ಅವರು ಒಂದೆಡೆಯಲ್ಲಿ ಹೀಗೆ ಹೇಳುತ್ತಾರೆ.

"ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು
ಹಾಡಿ ನಾಲಿಗೆ ದಣಿಯವು, ಇನ್ನೇವೆನಿನ್ನೇವೆ ?
ನಿಮ್ಮ ಕೈಯ್ಯಾರೆ ಪೂಜಿಸಿ ಮನ ದಣಿಯಲೊಲ್ಲದಿನ್ನೇವೆನಿನ್ನೇವೆ ?
ಕೂಡಲ ಸಂಗಮ ದೇವ, ಕೇಳಯ್ಯಾ
ನಿಮ್ಮುದರವ ಬಗಿದಾನು ಹೋಗುವ ಭರವೆನಗೆ" (489)

ಇನ್ನೊಂದೆಡೆಯಲ್ಲಿ,

"ಅರ್ಚಿಸಲರಿಯೆ, ಪೂಜಿಸಲರಿಯೆ !
ನಿಚ್ಚ ಶಿವರಾತ್ರಿಯ ನಾ ಮಾಡಲರಿಯೆ !
ಕಪ್ಪಡಿವೇಷದಿಂದಾನು ಬಂದಾಡುವೆ, ಕಪ್ಪಡಿ ವೇಷದಿಂದ
ಈಶ, ನಿಮ್ಮ ದಾಸರ ದಾಸ ನಾನಯ್ಯಾ
ನಿಮ್ಮ ವೇಷಧಾರಿಯ ಮನೆಯ ಮಂಗುಳ ನಾನಯ್ಯಾ
ಕೂಡಲ ಸಂಗಮ ದೇವಾ,
ನಿಮ್ಮ ಲಾಂಛನವ ಧರಿಸಿಪ್ಪ ಉದರಪೋಷಕ ನಾನಯ್ಯಾ" (344)

ಎಂದು ಹೇಳುತ್ತಾರೆ.

ಬಸವಣ್ಣನವರ ಅಂತರಂಗದ ತುಡಿತ ಈ ಬಗೆಯಾಗಿದ್ದರೆ ಮಾಣಿಕ್ಯ ವಾಚಕರದು ಇನ್ನೊಂದು ಬಗೆ. ಕುದುರೆಯನ್ನು ಕೊಳ್ಳುವುದಕ್ಕೆ ಹೋದವರು ದಾರಿಯಲ್ಲಿ ತಮ್ಮ ಗುರುವನ್ನು ನೋಡಿದಾಗ ಎಲ್ಲವನ್ನೂ ಬಿಟ್ಟು ತಾನೊಬ್ಬ ಮಂತ್ರಿಯೆಂಬುದನ್ನೂ ಮತ್ತು ತಾನು ಕುದುರೆಯನ್ನು ಕೊಳ್ಳುವುದಕ್ಕಾಗಿ ಹೇರಳ ವಾದ ಹಣವನ್ನು ತಂದಿರುವುದನ್ನೂ ಮರೆತು ತನ್ನ ಗುರುವಿನ ಹತ್ತಿರ ಹೋಗಿ ಅವರಿಗೆ ತನ್ನನ್ನು ಪೂರ್ಣವಾಗಿ ಅರ್ಪಿಸಿಕೊಳ್ಳುವರು. ಅವರು ತಮ್ಮ ಮನಸ್ಸನ್ನು ಕುರಿತು ಹೀಗೆ ನುಡಿಯುತ್ತಾರೆ :

"ಆಡುವುದಿಲ್ಲ ಆಟದವನ ಪಾದಗಳ ಮೇಲೆ
ಪ್ರೀತಿಯಿಲ್ಲ ಎಲುಬು ಕರಗುವ ಹಾಗೆ
ಹಾಡುವುದಿಲ್ಲ, ಪದೆಯುವುದೂ ಮಾಡುವುದಿಲ್ಲ
ಅಡಗುವುದಿಲ್ಲ ಪಾದಗಳ ಹೂವನ್ನು
ಸೂಡುವುದಿಲ್ಲ, ಸೂಡಿಸುವುದೂ ಇಲ್ಲ
ನೆರವಿಲ್ಲದ ಹೆಣ ಮನಸ್ಸೆ
ಹುಡುಕುವುದಿಲ್ಲ ಬೀದಿ ಪೂರ್ತಿ, ಅಳುವುದಿಲ್ಲ
ಮಾಡುವುದೊಂದು ಅರಿಯೆನೆ" (31)

ತಾವು ಶಿವನ ಮೇಲೆ ಇಟ್ಟುಕೊಂಡಿರುವ ಭಕ್ತಿ ಸಾಲದು, ಅವನನ್ನು ಇನ್ನೂ ಹೆಚ್ಚಿನ ಭಕ್ತಿಯಿಂದ ಪ್ರಾರ್ಥಿಸಬೇಕೆಂಬ ಆಸೆ ಅವರ ಹಾಡುಗಳಿಂದ ಸ್ಪಷ್ಟವಾಗುತ್ತದೆ.

ಇನ್ನು ಮುಂದೆ ಇವರಿಬ್ಬರೂ ಶಿವನ ಹತ್ತಿರ ಏನನ್ನು ಬೇಡುತ್ತಾರೆಂಬುದನ್ನು ನೋಡೋಣ. ಬಸವಣ್ಣನವರು ತಮ್ಮ ವಚನದಲ್ಲಿ ಶಿವನನ್ನು ಹೀಗೆ ಪ್ರಾರ್ಥಿಸಿರುವರು :

"ಬ್ರಹ್ಮ ಪದವಿಯನೊಲ್ಲೆ. ವಿಷ್ಣು ಪದವಿಯನೊಲ್ಲೆ. ರುದ್ರ ಪದವಿಯನೊಲ್ಲೆ :
ಮತ್ತಾವ ಪದವಿಯನೊಲ್ಲೆನಯ್ಯಾ !
ಕೂಡಲ ಸಂಗಮದೇವಾ. ನಿಮ್ಮ ಸದ್ ಭಕ್ತರ
ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ" (363)

ಮಾಣಿಕ್ಯವಾಚಕರು ಬೇಡುವುದು ಯಾವುದೆಂದರೆ :

"ಬೇಡತಕ್ಕದು ಅರಿದೀಯೆ ನೀನು
ಬೇಡಿದ ಎಲ್ಲ ಕೊಡುವವನು ನೀನು
ಬೇಡುವ ಬ್ರಹ್ಮ ವಿಷ್ಣುವಿಗೆ ತಿಳಿದಿಲ್ಲ ನೀನು
ಬೇಕೆಂದು ನನ್ನನ್ನು ಆಳಾಗಿಸಿಕೊಂಡಿರುವೆ
ಬೇಡಿ ಯಾವುದನ್ನೂ ನೀನು ಕೊಟ್ಟೇಯೆ
ನೀನು ಕೊಡುವುದನ್ನೇ ನಾನು ಬೇಡುತ್ತೇನೆ
ನಾನಾಗಿ ಬೇಡುವ ಉಡುಗೊರೆಯೊಂದು ಉಂಟೆಂದರೆ
ಅದೂ ಸಹ ನಿನ್ನ ಬೇಡಿಕೆಯಲ್ಲವೆ !" (499)

ಮಾಣಿಕ್ಯವಾಚಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನಾನು ಬೇಡುವುದು ಏನಾದರೂ ಇದ್ದರೆ ಅದೂ ಸಹಾ ನಿನ್ನ ಇಚ್ಛೆಯೇ ಅನ್ನುತ್ತಾರೆ. ಇನ್ನೊಂದೆಡೆಯಲ್ಲಿ ಅವರೆ ಹೀಗೆ ಹೇಳುತ್ತಾರೆ :

"ಹತ್ತಿಗಿಂತ ಮೃದುವಾದ ಪಾದಗಳನ್ನು ಹೊಂದಿರುವ ನಿನ್ನ ಮೇಲಲ್ಲದೆ
ಇಚ್ಛೆ ಬೇರೆ ನನಗಿಲ್ಲ ನೋಡು..." (451)

ಹೀಗೆ ಇಬ್ಬರೂ ಶಿವನನ್ನು ಬಿಟ್ಟು ಬೇರೊಂದನ್ನು ನೆನೆಯದೆ ಅವನನ್ನೇ ಪೂಜಿಸುವ ವರವನ್ನು ಬೇಡುತ್ತಾರೆ.

ಇಬ್ಬರೂ ಶಿವಯೋಗಿಗಳು. ತಾವು ಕೆಲಸ ಮಾಡಿದ ರಾಜನ ಭಂಡಾರದ ಹಣವನ್ನು ಶಿವನಿಗಾಗಿ, ಶಿವ ಶರಣರಿಗಾಗಿ, ವ್ಯಯಿಸಿದವರು. ಬಸವಣ್ಣನವರು ಬಿಜ್ಜಳನ ಭಂಡಾರದ ಹಣವನ್ನು ಜಂಗಮರಿಗಾಗಿ, ಅವರಿಗೆ ಊಟ ಮತ್ತು ಇತರ ಸೌಕರ್ಯಗಳನ್ನು ನೀಡುವುದಕ್ಕಾಗಿ ಖರ್ಚು ಮಾಡಿದರು ಎಂಬ ಆಪಾದನೆಯಿದೆ. ಇದನ್ನು ಒಪ್ಪದ ಕೆಲವರು ಬಸವಣ್ಣನವರು ತಮ್ಮ ಸ್ವಂತ ಹಣವನ್ನೇ ಜಂಗಮರಿಗಾಗಿ, ಶಿವಪೂಜೆಗಾಗಿ ಖರ್ಚು ಮಾಡಿದರು ಎನ್ನುವರು. ಹಾಗೆಯೇ ತಮಿಳುನಾಡಿನ ಮಾಣಿಕ್ಯವಾಚಕರೂ ತಮ್ಮ ರಾಜನಾದ ಅರಿಮರ್ದನ ಪಾಂಡಿಯನ ಭಂಡಾರದ ಹಣವನ್ನು ದೇವಸ್ಥಾನದ ನಿರ್ಮಾಣದಲ್ಲಿ ಖರ್ಚು ಮಾಡಿದವರು. ಆದರೆ ಇವರು ಖರ್ಚು ಮಾಡಿದ್ದರ ಬಗ್ಗೆ ಸಂದೇಹವೇನೂ ಇಲ್ಲ. ಮಾಣಿಕ್ಯವಾಚಕರು 'ನಮ್ಮಲ್ಲಿರುವ ಹಣವೆಲ್ಲವೂ ದೇವರದೆ. ಅವನು ಕೊಟ್ಟದ್ದನ್ನೇ ನಾವು ಇಟ್ಟಿದ್ದೇವೆ. ಆದ್ದರಿಂದ ನಮ್ಮ ಹತ್ತಿರ ಇರುವ ಹಣವನ್ನು ದೇವರಿಗಾಗಿ ಖರ್ಚು ಮಾಡಬೇಕು' ಎನ್ನುವರು. ಕೊಡುವವನೂ ದೇವನೆ, ಕೊಳ್ಳುವವನೂ ದೇವನೆ ಎಂಬುದು ಇವರ ಅಭಿಪ್ರಾಯ. ಮುಂದೆ ಇಬ್ಬರ ಹಾಡುಗಳನ್ನೂ ನೋಡೋಣ. ಬಸವಣ್ಣನವರು ಹೀಗೆ ಹೇಳಿರುವರು :

"ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ ?
ಲಜ್ಜೆ ಕೆಡಲೇಕೆ ? ನಾಣುಗೆಡಲೇಕೆ ?
ಕೂಡಲಸಂಗಮದೇವಯ್ಯನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ ?"

ಕೂಡಲಸಂಗಮನು ಬೇಡುವವರಿಗೆ ಬೇಡುವುದನ್ನು ಇಲ್ಲವೆನ್ನದೆ ಕೊಡಲಿರುವಾಗ ನಾನು ಯಾಕೆ ಬಿಜ್ಜಳನ ಭಂಡಾರದ ಹಣವನ್ನು ಖರ್ಚು ಮಾಡಬೇಕೆನ್ನುತ್ತಾರೆ. ಮಾಣಿಕ್ಯವಾಚಕರು ಶಿವನು ನಮಗೆಲ್ಲಾ ಭಂಡಾರದಿಂದ ಹಣವನ್ನು ಕೊಡುತ್ತಾನೆ, ಬನ್ನಿ, ಅದನ್ನು ತೆಗೆದುಕೊಳ್ಳೋಣ ಎನ್ನುತ್ತಾರೆ.

"ಸಮಯ ಇರುವಾಗಲೇ ಶಿವನನ್ನು ಪೂಜಿಸಿ ಮೋಕ್ಷ ಪಡೆಯಿರಿ
ವಿಷ್ಣು ಬ್ರಹ್ಮ ಮುಂತಾದ ದೇವರಿಗೆ ಅರಿಯದ
ವಿಷವನ್ನು ತಿಂದ ನಮ್ಮ ಶಿವನು ಶರಣರಿಗೆ
ಮೂಲ ಭಂಡಾರ ಕೊಡುತ್ತಾನೆ ಮುಂದೆ ಬನ್ನಿ" (528)

ಶಿವನ ಮೇಲೆ ತಾವು ಇಟ್ಟುಕೊಂಡಿರುವ ಭಕ್ತಿ ಕಡಿಮೆ, ಅದು ಇನ್ನೂ ಹೆಚ್ಚಾಗಬೇಕು. ಅದಕ್ಕೆ ಶಿವನೇ ದಯೆ ಮಾಡಬೇಕೆನ್ನುತ್ತಾರೆ. ಅವರು ಶಿವನ ಮೇಲೆ ಎಷ್ಟು ಭಕ್ತಿಯನ್ನು ಹೊಂದಿದ್ದರೂ, ಅವನ ಮೇಲೆ ಮಿತಿಯಿಲ್ಲದ ಪ್ರೇಮವಿದ್ದರೂ, ತಮ್ಮ ಭಕ್ತಿ ಹಾಗೂ ಪ್ರೇಮ ಕಡಿಮೆಯಾಗಿ ಅವರಿಗೆ ತೋರುತ್ತದೆ.

ಅಷ್ಟೇ ಅಲ್ಲ, ಶಿವಶರಣರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಿಂಧು ಬಲ್ಲಾಳ, ಸಿರಿಯಾಳ ಮುಂತಾದವರ ಹಾಗೆ ತಾವೂ ಸಂಪೂರ್ಣವಾಗಿ ಶಿವನಲ್ಲಿ ಭಕ್ತಿಯನ್ನು ತೋರ್ಪಡಿಸಲಾಗದಿದ್ದುದಕ್ಕೆ ದುಃಖಿಸುತ್ತಾರೆ. ಬಸವಣ್ಣನವರು ಹೀಗೆ ನುಡಿಯುತ್ತಾರೆ :

"ಭಕ್ತಿಯಿಲ್ಲದ ಬಡವ ನಾನಯ್ಯಾ ; ಕಕ್ಕಯ್ಯನ ಮನೆಯಲು ಬೇಡಿದೆ ;
ಚೆನ್ನಯ್ಯನ ಮನೆಯಲು ಬೇಡಿದೆ ;
ದಾಸಯ್ಯನ ಮನೆಯಲು ಬೇಡಿದೆ
ಎಲ್ಲ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ" (352)

ಎಂದೂ

"ಭಕ್ತಿ ಎಂತಹುದಯ್ಯಾ ? ದಾಸಯ್ಯ ಮಾಡಿದಂತಹುದಯ್ಯಾ,
ಭಕ್ತಿ ಎಂತಹುದಯ್ಯಾ ? ಸಿರಿಯಾಳ ಮಾಡಿದಂತಹುದಯ್ಯಾ,
ಭಕ್ತಿ ಎಂತಹುದಯ್ಯಾ ? ನಮ್ಮ ಸಿಂಧುಬಲ್ಲಾಳ ಮಾಡಿದಂತಹುದಯ್ಯಾ,
ಭಕ್ತಿ ಎಂತಹುದಯ್ಯಾ ? ಕೂಡಲಸಂಗಮದೇವಾ
ನೀ ಬಾಣನ ಬಾಗಿಲ ಕಾಯ್ದಂತಹುದಯ್ಯಾ" (149)

ಎಂದೂ ಹೇಳುತ್ತಾರೆ. ಮುಂದೆ ಮಾಣಿಕ್ಕವಾಚಕರನ್ನು ನೋಡೋಣ :

"ಕಣ್ಣಪ್ಪನಂತಹ! ಪ್ರೀತಿ ಇಲ್ಲದ್ದನ್ನು ನೋಡಿ
ನನ್ನಪ್ಪ ನನ್ನನ್ನೂ ದಯೆಯಿಂದ ಗೆದ್ದು
ನನ್ನ ಹತ್ತಿರ ಬಾ ಎಂದು ಪ್ರೀತಿಯಿಂದ ಹೇಳಿದ
ವಿಭೂತಿ ಹಣೆಯಲಿರುವ ಶಿವನನ್ನು ಹೊಗಲು ಓ ದುಂಬಿಯೆ" (218)

ನಾನು ಕಣ್ಣಪ್ಪನಂತಹ ಭಕ್ತನಲ್ಲ. ಇದ್ದರೂ ಕರುಣಾಮೂರ್ತಿಯಾದ ಶಿವನು ನನಗೆ ಕರುಣೆ ತೋರಿಸುತ್ತಾನೆ ಎನ್ನುತ್ತಾರೆ.

ಮುಕ್ತಾಯ

ಮಾತೆಂಬುದು ಹೇಗಿರಬೇಕೆಂಬುದಕ್ಕೆ ಬಸವಣ್ಣನವರ ಒಂದು ವಚನ ಹೀಗೆ ಹೇಳುತ್ತದೆ :

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ,
ಕೂಡಲಸಂಗಮದೇವನೆಂತೊಲಿವನಯ್ಯಾ ?" (805)

ಈ ವಚನವನ್ನು ಓದುವಾಗ ಬಹುಶಃ ಬಸವಣ್ಣನವರು ಮಾಣಿಕ್ಯವಾಚಕರನ್ನೂ ಅವರ 'ತಿರುವಾಚಕಂ'ವನ್ನೂ ನೆನಪಲ್ಲಿ ಇಟ್ಟುಕೊಂಡೇ ಹೀಗೆ ನುಡಿದಿದ್ದಿರಬಹುದು ಎಂದು ತೋರುತ್ತದೆ. ಬಸವಣ್ಣನವರ ವಚನಗಳ ಅನೇಕ ಭಾವಗಳು ತಿರುವಾಚಕಂನಲ್ಲಿ ಹೋಲಿಕೆ ಪಡೆದಿರುವುದು ಅಚ್ಚರಿಯೆನಿಸುತ್ತದೆ. ಇದರಿಂದ ಆ ಕಾಲದಲ್ಲಿ ಈ ಎರಡು ದೇಶಗಳ ನಡುವಿದ್ದ ನಿಕಟ ಸಂಬಂಧ ತಿಳಿದುಬರುತ್ತದೆ. ಮಾಣಿಕ್ಯವಾಚಕರ ವಾಕ್ಕು ಅಂದರೆ ನುಡಿ ಮಾಣಿಕ್ಯದಂತೆ ಇದ್ದುದರಿಂದಲೇ ಅವರನ್ನು ಜನರು ಮಾಣಿಕ್ಯವಾಚಕರು ಎಂದು ಪ್ರೀತಿಯಿಂದ ಕರೆದಿರುವರು. ಅಷ್ಟೇ ಅಲ್ಲ, ಮಾಣಿಕ್ಯವಾಚಕರ ತಿರುವಾಚಕಂವನ್ನು ನಿತ್ಯವೂ ತಮಿಳುನಾಡಿನ ಎಲ್ಲ ದೇವಸ್ಥಾನಗಳಲ್ಲಿ ಇಂದೂ ಹಾಡಲಾಗುತ್ತಿದೆ. ಹೀಗೆ ಕರ್ನಾಟಕದಲ್ಲಿ ಬಸವಣ್ಣನವರೂ, ತಮಿಳುನಾಡಿನಲ್ಲಿ ಮಾಣಿಕ್ಯವಾಚಕರೂ ಕ್ರಮವಾಗಿ ವೀರಶೈವ ಹಾಗೂ ಶೈವ ಧರ್ಮದ ಬೆಳವಣಿಗೆಗೆ ಹೆಚ್ಚಿನ ಸೇವೆ ಸಲ್ಲಿಸಿರುವರು.

ಟಿಪ್ಪಣಿಗಳು

ಬಸವಣ್ಣನವರ ವಚನಗಳ ಕೊನೆಯಲ್ಲಿ ಕೊಡಲಾಗಿರುವ ಸಂಖ್ಯೆಗಳು ಮೈಸೂರು ಸರಕಾರ, ಬಸವೇಶ್ವರರ 8 ನೆಯ ಶತಮಾನೋತ್ಸವ ಸಮಿತಿ, ಬೆಂಗಳೂರು ಇವರು '968ರಲ್ಲಿ ಪ್ರಕಟಿಸಿರುವ 'ಬಸವಣ್ಣನವರ ಷಟ್ ಸ್ಥಲದ ವಚನಗಳು' ಎಂಬ ಕೃತಿಯಲ್ಲಿರುವ ಹಾಡುಗಳ ಸಂಖ್ಯೆಯನ್ನೂ, ಮಾಣಿಕ್ಯವಾಚಕರ ಹಾಡುಗಳ ಕೊನೆಯಲ್ಲಿ ಕೊಡಲಾಗಿರುವ ಸಂಖ್ಯೆಗಳು ತಿರುವಾವಡುದುರೈ ಅಧೀನದಲ್ಲಿ ಪ್ರಕಟವಾದ 'ತಿರುವಾಚಕಂ' ಎಂಬ ಕೃತಿಯಲ್ಲಿರುವ ಹಾಡುಗಳ ಸಂಖ್ಯೆಯನ್ನೂ ಸೂಚಿಸುತ್ತವೆ.

ಈ ಲೇಖನವನ್ನು ಆದ್ಯಂತವಾಗಿ ಓದಿ ಅಗತ್ಯವಿದ್ದೆಡೆ ತಿದ್ದಿ, ಮತ್ತು ಹಲವೆಡೆ ತಮ್ಮ ಅಭಿಪ್ರಾಯಗಳನ್ನೂ ತಿಳಿಸಿದ ಡಾ. ಎಸ್. ವಿದ್ಯಾಶಂಕರ ಅವರಿಗೆ ನನ್ನ ಕೃತಜ್ಞತೆಗಳು.

1. ಕಣ್ಣಪ್ಪನೆನ್ನುವನ ಪೂರ್ವ ಹೆಸರು ನಾಗನ್ ಎಂಬುದು. ಇವನು ತಮಿಳುನಾಡಿನ ಅರವತ್ತು ಮೂರು ಮಂದಿ ಶಿವಶರಣರಲ್ಲಿ ಒಬ್ಬನು. ಬೇಡನಾದ ಇವನು ಒಂದು ದಿವಸ ಕಾಡಿಗೆ ಬೇಟೆಗಾಗಿ ಹೋದಾಗ ಕಾಡಿನ ಮಧ್ಯದಲ್ಲಿ ಒಂದು ಬೆಟ್ಟದ ಮೇಲೆ ಶಿವಲಿಂಗವಿರುವುದನ್ನು ನೋಡಿದನು. ಅವನು ಹೀಗೆ ಏಕಾಂತದಲ್ಲಿ ಒಬ್ಬನೆ ಇರುವುದನ್ನು ನೋಡಿದ ಅವನಿಗೆ ಬಹಳ ಸಂಕಟವಾಯಿತು. ಶಿವಲಿಂಗಕ್ಕೆ ತಾನು ಬೇಟೆಯಾಡಿದ ಮೃಗಗಳ ಮಾಂಸದಲ್ಲಿ ತಾನು ತಿಂದು ರುಚಿ ನೋಡಿ ಅದರಲ್ಲಿ ಚೆನ್ನಾಗಿರುವುದನ್ನು ಕೊಟ್ಟನು. ಇದರಿಂದ ಅವನಿಗೆ ಬಹಳ ಸಂತೋಷವಾಯಿತು. ಆದ್ದರಿಂದ ಅವನು ಅಲ್ಲೇ ಇದ್ದುಬಿಟ್ಟನು. ಶಿವನು ಇವನ ಭಕ್ತಿಯನ್ನು ಶೋಧನೆ ಮಾಡಲು ತೀರ್ಮಾನಿಸಿದನು. ಒಂದು ದಿವಸ ಇವನು ಬೇಟೆಗೆ ಹೋಗಿ ತಿರುಗಿ ಬಂದಾಗ ಶಿವನ ಒಂದು ಕಣ್ಣಿಂದ ರಕ್ತ ಸೋರತೊಡಗಿತು. ಇದನ್ನು ನೋಡಿದ ಕಣ್ಣಪ್ಪನಿಗೆ ಬಹಳ ಸಂಕಟವಾಯಿತು. ಶಿವನ ಕಷ್ಟವನ್ನು ನೋಡಿ ಸಹಿಸಲಾರದೆ

ಅವನು ತನ್ನ ಒಂದು ಕಣ್ಣನ್ನು ಬಾಣದಿಂದ ತೆಗೆದು, ಅದನ್ನು ಶಿವನ ಕಣ್ಣಲ್ಲಿ ಸೇರಿಸಿದನು. ಒಡನೆಯೇ ಕಣ್ಣಿಂದ ರಕ್ತ ಸೋರುವುದು ನಿಂತುಹೋಯಿತು. ಶಿವನು ಅವನನ್ನು ಬಿಡದೆ ಇನ್ನೂ ಪರೀಕ್ಷೆ ಮಾಡಿದನು. ಲಿಂಗದ ಇನ್ನೊಂದು ಕಣ್ಣಿಂದಲೂ ರಕ್ತ ಸೋರಲಾರಂಭಿಸಿತು. ಇದನ್ನು ನೋಡಿದ ಬೇಟೆಗಾರನಿಗೆ ಒಮ್ಮೆಗೆ ದುಃಖ ಆನಂದಗಳು ಉಂಟಾದವು. ದುಃಖವೇಕೆಂದರೆ ಶಿವನ ಎರಡನೆಯ ಕಣ್ಣಿಂದ ರಕ್ತ ಬರುತ್ತಿದೆ ಎಂಬುದಕ್ಕೆ; ಆನಂದ ಏಕೆಂದರೆ ಪರವಾಗಿಲ್ಲ, ಅದನ್ನು ಸರಿಮಾಡುವುದಕ್ಕೆ ನನ್ನ ಹತ್ತಿರ ಇನ್ನೊಂದು ಕಣ್ಣಿದೆಯಲ್ಲಾ ಎಂಬುದಕ್ಕೆ. ಒಡನೆಯೇ ಅವನು ಶಿವಲಿಂಗದ ಎರಡನೆ ಕಣ್ಣ ಮೇಲೆ ತನ್ನ ಕಾಲ ಹೆಬ್ಬೆರಳನ್ನು ಇಟ್ಟುಕೊಂಡು (ಏಕೆಂದರೆ, ಅವನ ಎರಡನೆ ಕಣ್ಣೂ ಹೋದ ಮೇಲೆ ಅವನಿಗೆ ಶಿವನು ಎಲ್ಲಿದ್ದಾನೆಂಬುದು ಗೊತ್ತಾಗುವುದಿಲ್ಲ) ತನ್ನ ಎರಡನೇ ಕಣ್ಣನ್ನು ತೆಗೆಯುವುದಕ್ಕೆ ಹೋದನು. ಶಿವನಿಗೆ ಅವನ ಭಕ್ತಿಯ ಆಳ ಗೊತ್ತಾಯಿತು. ಅವನನ್ನು ನೋಡಿ "ನಿಲ್ಲು ಕಣ್ಣಪ್ಪ" ಎಂದು ನುಡಿದು ಅವನಿಗೆ ಮೋಕ್ಷ ಕೊಟ್ಟನು.

ಗ್ರಂಥ ಸೂಚಿ

1. ಮಾಣಿಕ್ಕವಾಚಕರು, ತಿರುವಾಚಕಂ, ತಿರುವಾವಡುದುರೈ ಅಧೀನಂ, ತಿರುವಾವಡುದುರೈ, 1971.
2. ಬಸವಣ್ಣನವರು, ಬಸವಣ್ಣನವರ ಷಟ್‌ಸ್ಥಲದ ವಚನಗಳು, ಮೈಸೂರು ಸರಕಾರ, ಬಸವೇಶ್ವರ 8 ನೆಯ ಶತಮಾನೋತ್ಸವ ಸಮಿತಿ, ಬೆಂಗಳೂರು, 1968.
3. ಎಂ. ಚಿದಾನಂದಮೂರ್ತಿ, ಬಸವಣ್ಣನವರು, ಗೀತಾ ಬುಕ್ ಹೌಸ್, ಮೈಸೂರು, 1967.
4. ಎಸ್. ವಿದ್ಯಾಶಂಕರ, ವೀರಶೈವ ಪುರಾಣಗಳು : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1983.
5. ತಿ. ಪ. ಸಿದ್ಧಲಿಂಗಯ್ಯ, ವಸವಣ್ಣರ್ ವಾಕ್ಕಮುದು (ತಮಿಳಿನಲ್ಲಿ), ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ, 1972.
6. G. U. Pope, The Tiruvacagam (The Tamil Text of the poems with English translation, introduction and notes), Oxford at the Clarendon Press, 1900.

ನವರತ್ನಗಳ ರಾಣಿ ಮುತ್ತು, ಗೆಳತಿ ಹವಳ

ಎಸ್. ಎಸ್. ಲೀಲಾ

ಫ್ರೆಂಚ್ ಲೇಖಕ ಜೂಲ್ಸ್ ವೆರ್ನ್ ಮುತ್ತನ್ನು ಹೀಗೆ ವರ್ಣಿಸುತ್ತಾನೆ: "ಕವಿಗಳಿಗೆ ಮುತ್ತು ಸಮುದ್ರದ ಕಣ್ಣೀರು, ಪಂಡಿತರಿಗೆ ಇದೊಂದು ಘನೀಕರಿಸಿದ ಇಬ್ಬನಿ, ಸ್ತ್ರೀಯರಿಗೆ ಆಭರಣ ವಿಶೇಷ, ರಸವಿಜ್ಞಾನಿಗೆ ರಂಜಕ ಮತ್ತು ಕಾರ್ಬೊನೇಟ್‌ಗಳ ಮಿಶ್ರಣ, ಜೀವವಿಜ್ಞಾನಿಗೆ ಒಂದು ಮೃದ್ವಂಗಿ ಕಿರುಕುಳವಾದಾಗ ಸ್ರವಿಸಿದ ಅಣುಗಳ ವ್ಯವಸ್ಥಿತ ಶೇಖರಣೆ".

ಈ ಮಾತು ಅಕ್ಷರಶಃ ನಿಜವೆನಿಸುವುದು ಈ ಸ್ವಾರಸ್ಯಕರವಾದ ಮಣಿಯನ್ನು ಅದರ ಸಾಹಿತ್ಯಕ, ಚಾರಿತ್ರಿಕ ಮತ್ತು ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ. ಮುತ್ತು ಮಾನವನಿಗೆ, ಅವನ ನಾಗರಿಕತೆಯ ಬೆಳವಣಿಗೆಗೆ ಮುಂಚೆಯೇ ಕೊಡುಗೆಯಾಗಿ ಸಿಕ್ಕಿದೆ. ಬಹುಶಃ ಆದಿಮಾನವ ತನ್ನ ಹೊಟ್ಟೆಪಾಡಿಗಾಗಿ ಈ ಮೃದ್ವಂಗಿಯನ್ನು ಹಿಡಿದು ತಿನ್ನುತ್ತಿದ್ದಾಗ, ಅದರೊಳಗೆ ಮುತ್ತು ಸಿಕ್ಕಿ, ತನ್ನ ಶೃಂಗಾರ ಸಾಧನಕ್ಕಾಗಿ ಬಳಸಲು ಶೇಖರಿಸ ತೊಡಗಿರಬೇಕು. ಹೀಗೆ ತನ್ನ ಆಹಾರಾನ್ವೇಷಣೆಯಲ್ಲಿ ಮಾನವ ನೂರಕ್ಕೂ ಹೆಚ್ಚು ರತ್ನಶಿಲೆಗಳನ್ನು ಅಲಂಕಾರ ಸಾಧನಕ್ಕೆ ಉಪಯೋಗಿಸುತ್ತಾ ಬಂದಾಗ್ಯೂ, ಭಾರತೀಯ ವಿಂಗಡಣೆಯ ಪ್ರಕಾರ ಕೇವಲ ಒಂಭತ್ತಕ್ಕೆ ಮಾತ್ರ ಶ್ರೇಷ್ಠಸ್ಥಾನವಿದ್ದು, ಅವನ್ನು ನವರತ್ನಗಳೆಂದು ಪರಿಗಣಿಸಲಾಗಿದೆ. ಅವುಗಳೆಂದರೆ, ವಜ್ರ, ಮರಕತ, ಕೆಂಪು, ನೀಲಿ, ಪುಷ್ಯರಾಗ, ಗೋಮೇಧಿಕ, ವೈಡೂರ್ಯ, ಮುತ್ತು ಮತ್ತು ಹವಳ. ಇವುಗಳಲ್ಲಿ ಮೊದಲನೆಯ ನಾಲ್ಕು ಅಮೂಲ್ಯ ರತ್ನಗಳಾದರೆ ನಂತರದ ಐದು ಸಾಮಾನ್ಯ ರತ್ನಗಳು. ಈ ಏಳೂ ಅಜೈವಿಕ ರತ್ನಶಿಲೆಗಳಾದರೆ ಕಡೆಯ ಎರಡು ಮಾತ್ರ ಜೈವಿಕ ಕೊಡುಗೆಗಳಾಗಿವೆ. ಇವೆರಡರಲ್ಲಿ ಮುತ್ತು ಆಧುನಿಕ ದೃಷ್ಟಿಯಲ್ಲಿ ಅಮೂಲ್ಯ ರತ್ನವೆಂದೂ, ಹವಳವು ಸಾಮಾನ್ಯ ರತ್ನವೆಂದೂ ಪರಿಗಣಿಸಲ್ಪಟ್ಟಿದೆ.

ಇತರ ಯಾವುದೇ ರತ್ನಶಿಲೆಗಳು ವಿನಿಯೋಗವಾದಂತೆಲ್ಲಾ, ಖನಿಜ ನಿಕ್ಷೇಪ ಕಡಿಮೆಯಾಗುತ್ತಾ ಹೋಗುತ್ತದೆ; ಆದರೆ ವೈಜ್ಞಾನಿಕ ಕುಶಲತೆಯಿಂದ ಮುತ್ತು ಮತ್ತು ಹವಳಗಳನ್ನು, ಅವುಗಳ ಸ್ವಾಭಾವಿಕ ಉತ್ಪತ್ತಿ-ವಿಧಾನವನ್ನು ಉತ್ತೇಜನಗೊಳಿಸಿ, ಬಹುಬೇಗ ಬೆಳೆಸಲು ಸಾಧ್ಯವಿದೆ. ಇವು ಮಾನವನಿಗೆ ಪ್ರಾಣಿಗಳಿಂದ ದೊರಕುವ ಅನೇಕ ಉಪಯುಕ್ತ ವಸ್ತುಗಳಲ್ಲಿ ಪ್ರಕೃತಿಯ ಬಹು ಬೆಲೆ

ಬಾಳುವ ಕೊಡುಗೆಯಾಗಿದೆ. ಅಜೈವಿಕ ರತ್ನಗಳು ಬಹು ಗಡಸು, ಇದರ ಮೇಲೆ ಬಿದ್ದ ಬೆಳಕು ಪ್ರತಿಫಲಿಸಲ್ಪಡುತ್ತದೆ, ಆದರೆ ಮುತ್ತು ಬಹು ಮೆದು ಮತ್ತು ಅದು ಬೆಳಕನ್ನು ಹೀರಿ ಅದನ್ನು ಪ್ರತಿಫಲಿಸುತ್ತದೆ.

'ಮುತ್ತು' 'ಮುಕ್ತಾ' ಎಂಬ ಪದದ ತದ್ಭವ ರೂಪ. ಇದನ್ನು ಸಮುದ್ರದಲ್ಲಿ ಸಿಕ್ಕುವ ರತ್ನ ಎಂದು ಕರೆಯುತ್ತೇವೆ. ಇವು ಹುಟ್ಟು ಸಾವುಗಳಿಂದ ಹೊರತಾಗಿ ಬಿಡಲ್ಪಟ್ಟ ಫಲವಾದ್ದರಿಂದ 'ಮುಕ್ತಾಫಲ' ಎಂಬ ಹೆಸರು ಸಾರ್ಥಕವಾಗಿದೆ.

ಭಾರತೀಯ ಕಲೆ, ಸಾಹಿತ್ಯ ಮತ್ತು ಚರಿತ್ರೆಯಲ್ಲಿ ಮುತ್ತು ಗಮನಾರ್ಹ ಸ್ಥಾನವನ್ನು ಗಳಿಸಿದೆ.

ಸಾಹಿತ್ಯ

ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ಅನೇಕ ಕವಿಗಳು ಭಾಷೆಯ ಅಲಂಕಾರಕ್ಕಾಗಿ ಮುತ್ತು ಮತ್ತು ಹವಳಗಳನ್ನು ಬಳಸಿರುವುದು ಅವುಗಳ ಯೋಗ್ಯತೆಗೆ ತಕ್ಕುದಾಗಿದೆ.


ಭರ್ತೃಹರಿ ತನ್ನ ನೀತಿ ಶತಕದಲ್ಲಿ ಅಧಮ, ಮಧ್ಯಮ ಮತ್ತು ಉತ್ತಮ ಗುಣವುಳ್ಳ ಮನುಷ್ಯರು ಸಹವಾಸದಿಂದ ಉಂಟಾಗುವರೆಂಬ ಹೇಳಿಕೆಗೆ "ಮುಕ್ತಾಕಾರತಯಾ ತದೇವ ನಲಿನೀ ಪತ್ರ ಸ್ಥಿತಂ ರಾಜತೆ, ಸ್ವಾತ್ಯಾಂ ಸಾಗರ ಶುಕ್ತಿ ಮಧ್ಯ ಪತಿತಂ ತನ್ಮೌಕ್ತಿಕಂ ಜಾಯತೆ" ಎಂದು ವಿವರಿಸುತ್ತಾನೆ. (ಒಂದು ತೊಟ್ಟು ನೀರು ಕಮಲದ ಪತ್ರದ ಮೇಲೆ ಬಿದ್ದಾಗ ಮುತ್ತಿನಂತೆ ಕಂಡರೆ, ಸ್ವಾತಿ ನಕ್ಷತ್ರದಲ್ಲಿ ಸಾಗರದಲ್ಲಿರುವ ಕಪ್ಪೆಚಿಪ್ಪಿನೊಳಕ್ಕೆ ಬಿದ್ದಾಗ ಮುತ್ತೇ ಆಗಿಬಿಡುತ್ತದೆ).

ಮುದ್ದಣನ 'ರಾಮಾಶ್ವಮೇಧ' ಮತ್ತು ಕೇಶಿರಾಜನ 'ಶಬ್ದ ಮಣಿ ದರ್ಪಣ' ಗಳಲ್ಲಿ ಸಂಸ್ಕೃತ ಮತ್ತು ಕನ್ನಡವನ್ನು ಬೆರೆಸಿದಾಗ ಆಗುವ ಕಲಬೆರಕೆ, 'ಕರ್ಮಣಿ ಸರದೊಳ್ ಬೆಂಬವಳಂ ಕೋದಂತಿರೆ' ಮತ್ತು 'ಮುತ್ತುಂ ಮೆಣಸುಂ ಗೋದಂತಿರೆ' ಎಂಬುವು ಭಾಷೆಯ ಉತ್ಕೃಷ್ಟತೆಯನ್ನು ಎತ್ತಿ ತೋರಿಸುತ್ತದೆ.


ರಾಷ್ಟ್ರಕವಿ ಕುವೆಂಪು ತಮ್ಮ 'ಶರತ್ಕಾಲದ ಸೂರ್ಯೋದಯದಲಿ' ಎಂಬ ಕವಿತೆಯಲ್ಲಿ ಮುತ್ತನ್ನು ಬಳಸಿ ಎಂಥಾ ಕಲ್ಪನಾ ಸೌಂದರ್ಯದ ಮೋಡಿಯಲ್ಲಿ ಸ್ವರ್ಗೀಯ ದೃಶ್ಯವನ್ನು ಸೃಷ್ಟಿಸಿದ್ದಾರೆ, "ಹಚ್ಚನೆ ಪಚ್ಚನೆ ವೇದಿಕೆಯಲ್ಲಿ, ಸಾಸಿರಗಟ್ಟಲೆ ಮುತ್ತನ್ನು ಚೆಲ್ಲಿ". ಬೇಂದ್ರೆ ತಮ್ಮ ಕವನ 'ಬೆಳಗು' ದಲ್ಲಿ ನೀರಿನ ಹನಿಯನ್ನು ಮುತ್ತಿಗೆ ಹೋಲಿಸುತ್ತಾರೆ. "ಮೂಡಲ ಮನೆಯ, ಮುತ್ತಿನ ನೀರಿನ ಎರಕವ ಹೊಯ್ದು",-ಮಾಸ್ತಿ 'ಕೊಂಬು' ಕವಿತೆಯಲ್ಲಿ, ನಾಡಿನ ಸಂಪತ್ತು ಹೆಚ್ಚಿಸಲು ಜನತೆಗೆ ಕರೆ ಕೊಡುವ. "ಮುತ್ತು ಮಾಣಿಕವ ಜೋಳದ ತೆರದಲಿ ಹರಿಯಿಸಿ ನಾಡಿನಲಿ" ಎಂಬಲ್ಲಿ ಮುತ್ತು ಸಂಪತ್ತಿನ ಬೀಡಾಗಿದೆ.



ಸಂತ್ರಿಗೆ ಅಲಕು ಕೊರೆಯುತ್ತಿರುವ ಓಡ್ಡರ




ಪ್ರಾಣಿಯೊಳಗೆ ಮುತ್ತಾಗುತ್ತಿರುವುದು



ಮುತ್ತು ಪೂರ್ತಿಯಾದಾಗ

ಅ = ಮುತ್ತು ಮಾತೃಪದರ. ಆ = ಕಸಿ ಮಾಡಿದ ಪದರ.

ಇ = ಚಿಪ್ಪಿನ ಒಳಭಾಗ. ಈ = ಹೊಳಪುಜ್ಜದ ಚಿಪ್ಪಿನ ಭಾಗ.



ನೈಜ ಮುತ್ತು ಸಂಸ್ಕರಿಸಿದ ಮುತ್ತು
ಕ್ಷ-ಕಿರಣದ ಛಾಯಾ ಚಿತ್ರ

ದಾಸರ ಪದಗಳಲ್ಲಿ ಮುತ್ತು ಮತ್ತು ಹವಳ ಧಾರಾಳವಾಗಿ ಬಳಕೆಯಾಗಿವೆ. ಪುರಂದರ ದಾಸರು, "ಕರದಲಿ ಪಿಡಿದಿಹೆ ಮುತ್ತಿನ ಚೆಂಡ", ಕೃಷ್ಣನೆಂಬೋ ಆಣಿ ಮುತ್ತು, ಮುತ್ತು ಕೊಳ್ಳಿರೋ ಜನರು" ತುಳಸೀ ಜಪದ ಮಹಿಮೆ ವರ್ಣಿಸುತ್ತಾ, "ಒಂದೇ ಸಾವಿರ ಹವಳ ಜಪ, ಒಂದೇ ಹತ್ತು ಸಾವಿರ ಮುತ್ತಿನ ಮಣಿಯ ಜಪ, ಒಂದೇ ಅನಂತ ತುಳಸಿಯ ಜಪ ಎಂದಿದ್ದಾರೆ. ಸಿದ್ಧಿ ವಿನಾಯಕನ ವರ್ಣನೆ ಮಾಡುತ್ತಾ, "ಬಟ್ಟ ಮುತ್ತಿನ ಪದಕ ಹಾರನೆ, ಬಾಹು ಹಸ್ತ ಚತುಷ್ಟನೆ" "ಮುತ್ತಿನುಂಡೆ, ಅನ್ನ ಘಂಟೆ ಸಿದ್ಧಿ ವಿನಾಯಕನಿಗೆ ಇಪ್ಪತ್ತೊಂದು ನಮಸ್ಕಾರಗಳಂ".

ಕನಕದಾಸರು ಭಾಗ್ಯವನ್ನು ನೆಚ್ಚದಿರೆಂದು ಮನುಜರಿಗೆ ಬೋಧಿಸುವಾಗ, "ಮುತ್ತು ಮಾಣಿಕ್ಯದ ನವರತ್ನ ಮಂಟಪವು, ಎತ್ತ ನೋಡಲು ಸಿರಿಯು ಹೋ ಎಂಬಳು" ಎಂದು ವರ್ಣಿಸುತ್ತಾರೆ.


ಜಾನಪದದಲ್ಲಿ ಗರತಿಯ ಹಾಡುಗಳಲ್ಲಿ, "ಅತ್ತೆಯ ಮಗಳೆ, ಮುತ್ತಿನ ಚೆಂಡೆ", "ಮುತ್ತುರತ್ನದ ಪಡಿಯ ಚೆಲ್ಲುತ ನೀ ಬಾ ಮಗಳೆ", "ಮುತ್ತಿನಾರತಿ ಎತ್ತಿರೆ" ಮುಂತಾದವು ; ಅನುಭವದ ತುಣುಕುಗಳಲ್ಲಿ, "ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು, ಹೊತ್ತಾಗಿ ನೀಡಿದರೆ ಉಣಬೇಕು ಮಗಳೆ" ; ತಾಯಿ ತನ್ನ ಕಂದನನ್ನು ವರ್ಣಿಸುವಾಗ, "ಅಳುವ ಕಂದನ ತುಟಿಯು ಹವಳದ ಕುಡಿಹಾಂಗ" ಎಂಬ ವರ್ಣನೆಗಳು ಇವು ಶ್ರೇಷ್ಠವಸ್ತುವೆಂದು ಎತ್ತಿ ತೋರಿಸುತ್ತವೆ.

ಮುತ್ತಿನ ಬಳಕೆ ನಾಣ್ಣುಡಿಗಳಲ್ಲೂ ಕಂಡುಬರುತ್ತದೆ. "ಮಾತು ಮುತ್ತು ಮೌನ ಬಂಗಾರ" ; ಗುಂಡನೆಯ ಅಕ್ಷರಕ್ಕೂ, ತುಂತುರಾದ ಮಳೆಗೂ, "ಅಕ್ಷರ ಮುತ್ತು ಪೋಣಿಸಿದ ಹಾಗೆ" ; "ಮುತ್ತಿನ ಮಳೆಹನಿ" ; "ಹಲ್ಲು ಮುತ್ತಿನ ಸಾಲಿನಂತೆ" ಇತ್ಯಾದಿ.

ಮುತ್ತಿನ ಸಂಸ್ಕರಣಾ ವಿಧಾನ



ನಾಭಿಯನ್ನು ಕಸಿ ಮಾಡುತ್ತಿರುವುದು



ಪ್ರಾಣಿಯಿಂದ ಮುತ್ತನ್ನು ಹೊರತೆಗೆಯುತ್ತಿರುವುದು

ಪುರಾಣಗಳಲ್ಲಿ ಈ ‘ನವರತ್ನ’ ಸೃಷ್ಟಿಯ ಕಲ್ಪನೆಯ ಪ್ರಕಾರ, ‘ವಲ’ ಎಂಬ ಅಸುರನು ಇಂದ್ರ ಮತ್ತು ಇತರ ದೇವತೆಗಳನ್ನು ಸೋಲಿಸಿ, ತಾನು ಸರ್ವಾಧಿಕಾರಿಯಾಗ ಬಯಸಿದಾಗ, ದೇವತೆಗಳು ತಮ್ಮ ಯುಕ್ತಿಯಿಂದ ಅವನನ್ನು ಒಂದು ಯಜ್ಞಪಶುವಾಗಿ ಮಾಡಿ ಸಾಯಿಸುತ್ತಾರೆ. ಇವನ ವಿವಿಧ ಅಂಗಗಳು ಸಮುದ್ರ, ನದಿ ಮತ್ತು ನೆಲಗಳಲ್ಲಿ ಬಿದ್ದು ವಿವಿಧ ರೀತಿಯ ನವರತ್ನಗಳಾಗಿ ಮಾರ್ಪಟ್ಟಿತೆಂದು ಹೇಳಲಾಗಿದೆ. ಹೀಗೆ ಸಮುದ್ರದಲ್ಲಿ ಜೀವಿಸುವ ಇಚ್ಚಿಪ್ಪು (bivalve) ಗಳಲ್ಲಿ ಇವನ ಹಲ್ಲು ಬಿದ್ದು ಮುತ್ತಾಗಿರಬಹುದೆಂಬ ಊಹೆ ಇದೆ.

ಪ್ರಾಚೀನ ಕೃತಿ, ಶಿಲ್ಪ ಮತ್ತು ಕಲಾಕೃತಿಗಳಲ್ಲಿ ಅನೇಕ ವೇಳೆ ಉಡುಪಿಗಿಂತ ಹೆಚ್ಚಾಗಿ ಆಭರಣಗಳನ್ನು, ಅವುಗಳ ವರ್ಣನೆಗಳನ್ನು ನೋಡುತ್ತೇವೆ. ಆಗಿನ ನಾಗರಿಕತೆಯನ್ನು ಗುರುತಿಸಲು ಈ ಆಭರಣ ವಿನ್ಯಾಸಗಳು ಬಹು ಸಹಕಾರಿಯಾಗಿವೆ. ಭಾರತದಲ್ಲೇ ಅಲ್ಲದೆ ಸುಮೇರಿಯಾ, ಗ್ರೀಸ್, ಇಟಲಿ, ಈಜಿಪ್ಟ್‌ಗಳಲ್ಲಿ ದೊರಕಿರುವ ಆಭರಣಗಳು ಇವಕ್ಕೆ ಸಾಕ್ಷ್ಯಾಧಾರಗಳಾಗಿವೆ.

ವಿಷ್ಣು ಪುರಾಣದಲ್ಲಿ ವಿಷ್ಣುವಿನ ಕಂಠಹಾರ ಮುತ್ತಿನದು. ವಿಷ್ಣು ವೈಜಯಂತಿ ಮಾಲೆಯನ್ನು ಧರಿಸುವವ. ಈ ವೈಜಯಂತಿಮಾಲೆ ಐದು ಅಮೂಲ್ಯ ರತ್ನಗಳಿಂದಾಗಿದೆ. ಅವೆಂದರೆ, ಮುತ್ತು, ಕೆಂಪು, ಮರಕತ, ನೀಲ, ವಜ್ರ.

ಕಲ್ಪ ಸೂತ್ರದಲ್ಲಿ ‘ಶ್ರೀಲಕ್ಷ್ಮಿ’ಯ ವರ್ಣನೆ ಮಾಡುವ ಸಂದರ್ಭದಲ್ಲಿ ಕಲ್ಪವೃಕ್ಷದ ಕೊಂಬೆಗಳಿಂದ ಮುತ್ತುಗಳು ಜೋತು ಬಿದ್ದು, ಚಿಗುರು ಹವಳದ್ದಾಗಿದ್ದು ಅದರಲ್ಲಿ ಬಿಟ್ಟ ಹಣ್ಣು ಕೆಂಪಿನದೆಂದು ವರ್ಣಿಸಲಾಗಿದೆ.

ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ಮುತ್ತಿನ ಆಭರಣಗಳ ಭವ್ಯತೆಯನ್ನು ತೋರಿಸಲಾಗಿದೆ. ಸೀತಾರಾಮಕಲ್ಯಾಣ ಸಮಯದಲ್ಲಿ ರಾಮನು ಮುತ್ತಿನ ಕಿರೀಟ, ಮುತ್ತಿನ ಹಾರ, ಮುತ್ತಿನ ನೆತ್ತಿಯ ಆಭರಣ ಧರಿಸಿದ್ದ ವರ್ಣನೆ ಇದೆ. ಮಹಾಭಾರತದಲ್ಲಿ ಯಜ್ಞಾಶ್ವವನ್ನು ಹಿಡಿದು ಹೊರಟ ಅರ್ಜುನನು ಮಣಿಪುರಕ್ಕೆ ಹೋದಾಗ ಅಲ್ಲಿನ ಹೆಂಗಸರು ಸ್ಫುರದ್ರೂಪಿಗಳಾಗಿಯೂ, ವಿಧವಿಧದ ಮುತ್ತಿನಾಭರಣಗಳಿಂದ ಅಲಂಕೃತರಾಗಿದ್ದಂತೆ ವರ್ಣಿಸಲಾಗಿದೆ. ಭಾಗವತದಲ್ಲಿ ಕೃಷ್ಣನು ಕಂಸನ ರಾಜಧಾನಿ ಮಥುರಾಕ್ಕೆ ಹೋದಾಗ ಅಲ್ಲಿನ ಗೋಡೆ ಮತ್ತು ಜಗುಲಿಗಳು ಮುತ್ತು, ಹವಳಗಳಿಂದಾವೃತವಾಗಿ ವರ್ಣಿಸಲಾಗಿದೆ.

ಮನುಸ್ಮೃತಿಯಲ್ಲಿ ಅಕ್ಕಸಾಲಿಗರು ಮುತ್ತು, ಹವಳಗಳ ಬೆಲೆ ಕಟ್ಟುವ ಕಲೆಯಲ್ಲಿ ನಿಪುಣರಾಗಿದ್ದಾಗಿಯೂ, ಅವರು ಮೋಸ ಮಾಡಿದರೆ ತೆರಬೇಕಾಗಿದ್ದ ದಂಡದ ಪ್ರಸಂಗಗಳ ವಿವರಣೆಯೂ ಇದೆ. ಇದೇ ರೀತಿಯ ದಂಡನೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ

ಸಿಕ್ಕುತ್ತದೆ. ಇಲ್ಲಿ ಯಾವ ನವರತ್ನಕ್ಕೆ ಚಿನ್ನದೊಂದಿಗೆ ಇತರ ಲೋಹಗಳನ್ನು ಮಿಶ್ರ ಮಾಡಬೇಕು ಎಂಬ ವಿವರಣೆಯೂ ದೊರಕುತ್ತದೆ.

ಬಾಣನ 'ಕಾದಂಬರಿ'ಯಲ್ಲಿಯೂ, ಶೂದ್ರಕನ 'ಮೃಚ್ಛಕಟಿಕ' ಮತ್ತು ಕಾಳಿದಾಸನ ಕೃತಿಗಳಲ್ಲಿ ಮುತ್ತು ಹವಳಗಳ ಅನೇಕ ಆಭರಣಗಳ ಹೆಸರುಗಳು ಹೀಗಿವೆ : ಮುಕ್ತಾಂಜಲಿ, ಮುಕ್ತಾವಳಿ, ಸ್ಥೂಲಮುಕ್ತಾಹಾರ, ಹರಯಷ್ಟಿ ಮುಂತಾದವು.

ನವರತ್ನಗಳನ್ನು ಪೂಜಿಸುವುದರಿಂದ ಅನೇಕ ರೀತಿಯ ಸಿದ್ಧಿ ಪಡೆಯಬಹುದು. ಬ್ರಹ್ಮನ ಸೂಚನೆಯ ಪ್ರಕಾರ, ವಿಶ್ವಕರ್ಮನು ಶಿವಲಿಂಗಗಳನ್ನು ದೇವತೆಗಳಿಗೆ ಒಪ್ಪಿಸುವಾಗ ವಿಷ್ಣುವಿಗೆ ನೀಲಮಣಿಯ, ಇಂದ್ರನಿಗೆ ಕೆಂಪಿನ, ಕುಬೇರನಿಗೆ ಚಿನ್ನದ ಮತ್ತು ಚಂದ್ರನಿಗೆ ಮುತ್ತಿನ ಶಿವಲಿಂಗಗಳನ್ನು ಒಪ್ಪಿಸುವ ದಾಖಲೆ ಸಿಗುತ್ತದೆ.

ನಾರಾಯಣನಿಗೆ ವಿಧವಿಧದ ರತ್ನಗಳಿಂದ ಪೂಜಿಸುವುದರಿಂದ ಕಾಂತಿವರ್ಧನೆ ಪಡೆಯಬಹುದೆಂಬುದಕ್ಕೆ 100,000 ಮುತ್ತು, ಸಾವಿರ ಹವಳವನ್ನು ಅರ್ಪಿಸುವುದರಿಂದ ಮುತ್ತಿನಂಥ ಹಲ್ಲು, ಒಳ್ಳೆಯ ಗಂಡನನ್ನು ಅನುಕ್ರಮವಾಗಿ ಪಡೆಯಬಹುದೆಂಬುದಾಗಿ ಹೇಳುತ್ತಾರೆ.

ದೇವಸ್ಥಾನಗಳಲ್ಲಿ ದೇವರ ವಿಗ್ರಹವಿರುವ ಪ್ರತಿ ದಿಕ್ಕಿಗೂ ಒಂದೊಂದು ನವರತ್ನಗಳನ್ನು ಇಡುವ ವಾಡಿಕೆಯಲ್ಲಿ ಆಗ್ನೇಯ ದಿಕ್ಕಿಗೆ ಮುತ್ತನ್ನು ಬಳಸುತ್ತಾರೆ.

ಬರ್ಮಾ ಮತ್ತು ಸಯಾಂ ಆಭರಣಗಳು ಚೈನಾ ಮತ್ತು ಭಾರತದ ಆಭರಣಕ್ಕೆ ತುಂಬಾ ಹೋಲುತ್ತವೆ. ಅವರ ಆಭರಣದ ವಿಶೇಷತೆ ಎಂದರೆ ಚಿನ್ನದ ಸರದಲ್ಲಿ ಮುತ್ತನ್ನು ಪೋಣಿಸುವುದು. ಭಾರತದ ಆಭರಣಗಳಲ್ಲಿ ನಾಗನ ಚಿತ್ರ ಬಿಡಿಸಿದರೆ ಇಲ್ಲಿನ ಆಭರಣಗಳಲ್ಲಿ ಅವರ ಪೌರಾಣಿಕ ಪ್ರಾಣಿಯಾದ ಡ್ರಾಗನ್ ಚಿತ್ರ ಬಿಡಿಸುತ್ತಾರೆ. ಚೀನಿಗಳು ಮುತ್ತಿನ ಆಭರಣವನ್ನು ಮಾಡುವ ಕಲೆಯಲ್ಲಿ ಬಹು ನಾಜೂಕಿನವರೆಂದು ಜಗತ್ಪ್ರಸಿದ್ಧರು. ಚೀನೀಯರು ವಜ್ರ, ಕೆಂಪು, ಮರಕತ, ಮುತ್ತು ಹವಳಗಳನ್ನು ಆಭರಣದಲ್ಲಿ ಧರಿಸಿದಾಗ ಮನುಷ್ಯನ ಆಯುಷ್ಯ ಹೆಚ್ಚುವುದೆಂಬ ನಂಬಿಕೆಯುಳ್ಳವರು. ಪ್ರತಿ ರತ್ನಕ್ಕೂ ಒಬ್ಬೊಬ್ಬ ದೇವತೆ ಇದ್ದು ಇವರನ್ನು ಕಾಪಾಡುವುದಾಗಿ ನಂಬಿದ್ದಾರೆ. ಪ್ರಶಸ್ತವಾದ ಹರಳುಗಳನ್ನೂ, ಮಣಿಗಳನ್ನೂ ಧರಿಸುವುದು ಶುಭದ ಸಂಕೇತ ಎಂಬ ನಂಬಿಕೆ ಹಿಂದೂಗಳಲ್ಲಿ ಹಿಂದಿನಿಂದ ಬಂದಿದೆ. ಜನ್ಮನಕ್ಷತ್ರಕ್ಕನುಗುಣವಾಗಿ ಇಂಥದೇ ಬಣ್ಣದ ಪ್ರಶಸ್ತ ಶಿಲೆ ಬಳಸಬೇಕೆಂಬ ನಂಬಿಕೆ ಇದ್ದು ಜೂನ್ ತಿಂಗಳಲ್ಲಿ ಜನಿಸಿದವರಿಗೆ ಮುತ್ತು ಅದೃಷ್ಟ ತರುವ ಮಣಿಯಾಗಿದೆ. ಹಿಂದೂ ರತ್ನಶಾಸ್ತ್ರದ ಪ್ರಕಾರ ನವರತ್ನಗಳನ್ನು ಅವುಗಳ ವಿಶಿಷ್ಟ ಶೈಲಿಯಲ್ಲಿ ಜೋಡಿಸುವುದರಿಂದ ಗ್ರಹಗತಿಗಳು ಪ್ರಭಾವ ಬೀರುವುದಾಗಿ ಹೇಳುತ್ತಾರೆ. ವಾತ್ಸ್ಯಾಯನನ

ಕಾಮ ಸೂತ್ರದಲ್ಲಿ ಮುತ್ತಿನ ಸರ, ಮುತ್ತಿನ ಅಡ್ಡಿಗೆ ಬಳಸುವುದೂ, 64 ಕಾಮ ಸೂತ್ರದ ಕಲೆಗಳಲ್ಲೊಂದು.

•

ಚಾರಿತ್ರಿಕವಾಗಿ ಮುತ್ತು

ಚಾರಿತ್ರಿಕವಾಗಿ ಮುತ್ತನ್ನು ಅನೇಕ ಶತಮಾನಗಳಿಂದ ಗುರುತಿಸಬಹುದು. ಹರಪ್ಪ–ಮೊಹೆಂಜದಾರೋ, ಸಿಂಧೂ ನದಿಯ ನಾಗರಿಕತೆಯಲ್ಲಿ ಜನರು ಅನೇಕ ಬೆಲೆ ಬಾಳುವ ಹರಳುಗಳನ್ನುಪಯೋಗಿಸುತ್ತಿದ್ದರು. ಒಂದೊಂದು ಹರಳಿಗೂ ಒಂದೊಂದು ಸಂಕೇತವನ್ನು ಕಲ್ಪಿಸಿ, ಮುತ್ತನ್ನು ಶುದ್ಧತೆ ಮತ್ತು ನೈರ್ಮಲ್ಯದ ಸಂಕೇತವಾಗಿ ಬಳಸಿರಬಹುದೆಂದು ಚರಿತ್ರಕಾರರು ಊಹಿಸುತ್ತಾರೆ. ಅಜಂತ ಗುಹೆಗಳಲ್ಲಿನ ಭಿತ್ತಿ ಚಿತ್ರಗಳಲ್ಲಿ ಮುತ್ತಿನ ಆಭರಣಗಳ ಬಳಕೆ ಇದ್ದು, ಆಗಿನ ಆಕೃತಿ, ರಚನೆ, ನಿರ್ಮಾಣ ವಿಧಾನವು ಎದ್ದು ಕಾಣುತ್ತಿದ್ದು, ಇಂದಿಗೂ ಮೆಚ್ಚಿಕೆ ಮತ್ತು ಹೆಮ್ಮೆ ತರಿಸುವಂಥದ್ದಾಗಿದೆ. ದೆಹಲಿಯಲ್ಲಿರುವ Asian Antiquities Museum ನಲ್ಲಿ ಸುಮಾರು ಕ್ರಿ. ಪೂ. 100ರ, ಬುದ್ಧನ ಕಮಲದ ಹೂವಿನ ಮೇಲಿರುವ ಚಿತ್ರವು ಅನೇಕ ಆಭರಣಗಳಿಂದ ಅಲಂಕೃತವಾಗಿದೆ. ಅವುಗಳಲ್ಲಿ ಮುತ್ತು, ಹವಳಗಳು ವಿಶೇಷವಾಗಿವೆ.

1498, ಮೇ 28ರಲ್ಲಿ ವಾಸ್ಕೋಡಗಾಮನು ಕಾಲಿಕಟ್‌ಗೆ ಬಂದಿಳಿದಾಗ ಜಮೋರಿನ್ ದೊರೆಯ ವೈಭವವನ್ನು ಸಂಪತ್ತಿನ ತವರು ಎಂದೂ, ಅವನ ಕಿರೀಟದ ಮುತ್ತು ಮತ್ತು ಅವನ ಅಂಗಿಯ ಗುಂಡಿಯು ದೊಡ್ಡ ದೊಡ್ಡ ಮುತ್ತುಗಳಿಂದ ಅಲಂಕರಿಸಲ್ಪಟ್ಟಿತ್ತೆಂದೂ ವಿವರಣೆ ಕೊಟ್ಟಿದ್ದಾನೆ.

ಅಕ್ಬರನ ಕಾಲದ ಮೊಗಲ್ ರಾಜರ ಕಂಠಾಭರಣ, ಮಸೀದಿಗಳಲ್ಲಿನ ಮುತ್ತಿನ ನಿಧಿ ರಾಜ್ಯದ ಸಂಪತ್ತನ್ನು ಎತ್ತಿ ತೋರಿಸುತ್ತದೆ. ಅಬ್ದುಲ್ ಫಜಲ್‌ನು ಬರೆದ 'ಐ-ನೇ ಅಕ್ಬರಿ'ಯಲ್ಲಿ ಆಭರಣಗಳನ್ನು ಮಾಡುವ ವಿವಿಧ ಕಲೆಗಳನ್ನು ನಮೂದಿಸಿದೆ. ಅದರಲ್ಲೂ ಮುತ್ತಿನಾಭರಣಗಳನ್ನು ಮಾಡುವ ಪೂರ್ಣ ಮಾಹಿತಿಯನ್ನು ಇದು ಒದಗಿಸುತ್ತದೆ. ಉತ್ಸವದ ದಿನಗಳಲ್ಲಿ ಅಕ್ಬರನಿಗೆ ಸಾಮಂತ ರಾಜರು, ಶ್ರೀಮಂತರು ಮುತ್ತಿನ ಉಡುಗೊರೆಗಳನ್ನು ಕೊಡುವ ಪದ್ಧತಿಯೂ ಇತ್ತು.

ಸರ್ ಥಾಮಸ್ ರೋ, ಜಹಂಗೀರನ ಆಭರಣಗಳಲ್ಲಿ ಅವನ ನಡುಪಟ್ಟಿ ಮತ್ತು ಮುತ್ತಿನ ಪಟ್ಟಿ ಮುತ್ತಿನದ್ದೆಂದು ಇತರ ಅನೇಕ ಆಭರಣಗಳ ಜೊತೆಯಲ್ಲಿ ವರ್ಣಿಸುತ್ತಾನೆ. ಇವರ ನಡುಪಟ್ಟಿಗಳ ತುದಿಯಲ್ಲಿ ಮುತ್ತಿನ ಜೊಂಪೆ ಇರುವುದು ಒಂದು ವಿಶಿಷ್ಟತೆ. ಝುರೋಕದಿಂದ ಏಕಾಂತವಾಗಿ ಜಹಂಗೀರನ ಬೇಗಂಗಳನ್ನು ಕ್ಷಣದಲ್ಲಿ ನೋಡುವ ಅವಕಾಶ ಸಿಕ್ಕಾಗ ಅವರು ಸ್ಪುರದ್ರೂಪಿಗಳಾಗಿಯೂ, ಕಪ್ಪು

ಕೂದಲುಳ್ಳವರಾಗಿಯೂ ಇದ್ದು ಇತರ ಯಾವುದೇ ಪ್ರಕಾಶವಿಲ್ಲದಿದ್ದರೂ ಅವರು ಧರಿಸಿದ ವಜ್ರ ಮುತ್ತುಗಳೇ ಸಾಕಾಗಿತ್ತೆಂದು ಉತ್ಪ್ರೇಕ್ಷಿಸಿದ್ದಾನೆ.

'ತುಜಕ್-ಏ-ಜಹಂಗೀರಿ' ಎಂಬ ಜಹಂಗೀರನ ಪುಸ್ತಕದಲ್ಲಿ ಆಭರಣಗಳ ವರ್ಣನೆ ಇಲ್ಲದೇ ಒಂದು ಪುಟವೂ ಇಲ್ಲ. ಇಲ್ಲಿ ಅನೇಕ ಕಡೆ ಮುತ್ತಿನಾಭರಣಗಳ ವರ್ಣನೆಗಳಿವೆ.

ಫ್ರೆಂಚ್ ಪ್ರವಾಸಿ ಟಾವೆರ್‌ನಿಯರ್ ಔರಂಗಜೇಬನ ಕಾಲದಲ್ಲಿ ಭಾರತಕ್ಕೆ ರತ್ನ ವ್ಯಾಪಾರಕ್ಕೆ ಬಂದಿದ್ದಾಗ ಇಲ್ಲಿನ ಮುತ್ತಿನ ವ್ಯವಸಾಯ ಮತ್ತು ಅವುಗಳ ವ್ಯಾಪಾರ ವ್ಯವಸ್ಥೆಯನ್ನು ಹೊಗಳಿ ಬರೆದಿದ್ದಾನೆ.

ಪೋರ್ಚುಗೀಸ್ ಪ್ರವಾಸಿ, ಪಾಯಿಸ್ 16ನೇ ಶತಮಾನದ ವಿಜಯನಗರದ ಸಾಮ್ರಾಜ್ಯದ ಮಹಾವೈಭವವನ್ನು ವರ್ಣಿಸಿ ಇವನಷ್ಟು ಪರಿಪೂರ್ಣ ದೊರೆ ಬೇರೊಬ್ಬನಿಲ್ಲ ಎಂದಿದ್ದಾನೆ. ಶ್ರೀಕೃಷ್ಣದೇವರಾಯನ ಕಾಲದಲ್ಲಿ ದೇಶವಿದೇಶಗಳಿಂದ ರತ್ನ ವ್ಯಾಪಾರಿಗಳು ಬಂದು ಮುತ್ತು ರತ್ನಗಳನ್ನು ಅಳೆದು ಮಾರುತ್ತಿದ್ದ ಸಾಕ್ಷಾಧಾರಕ್ಕೆ ಈಗ ಅಲ್ಲಿರುವ ಕಲ್ಲಿನ ಹಾಳು ಮಂಟಪಗಳೇ ಸಾಕ್ಷಿ. ಅವನ ಕಾಲದ ಅರಮನೆಯ ಒಂದು ಕೋಣೆ ಬರೀ ಚಿನ್ನದಿಂದ ಮಾಡಲ್ಪಟ್ಟು, ಅಲ್ಲಿನ ಮಂಚದ ಅಡ್ಡಗೆರೆಗಳು ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಬರೀ ಮುತ್ತಿನಿಂದಲೇ ಮಾಡಲ್ಪಟ್ಟಿತ್ತೆಂಬ ಉಲ್ಲೇಖ ಚರಿತ್ರೆಯಲ್ಲಿ ಸಿಕ್ಕುತ್ತದೆ.

ಮುತ್ತಿನಿಂದ ಭಾಗ್ಯ

19ನೇ ಶತಮಾನದ ಶ್ರೀಮಂತ ಬ್ಯಾಂಕರ್‌ನಾದ ಹೆನ್ರಿ ಫಿಲಿಪ್ ಹೋಪ್‌ನ ಬಳಿ ವಿಶ್ವದಲ್ಲೇ ಅತ್ಯಂತ ಭಾರಿಯಾದ ಮುತ್ತು ಇತ್ತು. ಇದರ ಉದ್ದ 2 ಅಂಗುಲಗಳು. ಸುತ್ತಳತೆ 4½''. ಇದು ಮೊಟ್ಟೆಯಾಕಾರದಲ್ಲಿದ್ದು ಕಿರಿದಾದ ಭಾಗದ ಸುತ್ತಳತೆ 3¼''. ತೂಕ 3 ಔನ್ಸ್‌ಗಳು ಅಥವಾ 450 ಕ್ಯಾರೆಟ್ (1800 ಮುತ್ತಿನ ಗ್ರೈನ್ಸ್‌ಗಳು). ಇದರ ಮುಕ್ಕಾಲು ಭಾಗ ಬಹಳ ಹೊಳಪಿನಿಂದ ಕೂಡಿದ್ದು ಕಾಲು ಭಾಗ ಹೆಚ್ಚು ಹೊಳಪಿಲ್ಲದ್ದಾಗಿತ್ತು.

ಇತ್ತೀಚಿನ ಪತ್ರಿಕಾ ವರದಿಯ ಪ್ರಕಾರ ಮುತ್ತು ಒಂದೇ ದಿನದಲ್ಲಿ ಅದೃಷ್ಟ ತರುವ ವಸ್ತುವಾಗಿದೆ. ಕುವೈತ್ ಬಳಿ ಇರುವ ಫೈಲಾಕಾ ದ್ವೀಪದಲ್ಲಿ 5 ಮಕ್ಕಳ ತಾಯಿಯಾದ ನಜರತ್ ಮಹಮದ್ ಆಲಿ ಎಂಬುವಳು ಕಳೆದ 30 ವರ್ಷಗಳಿಂದ ಬಡತನದಲ್ಲೇ ಮೀನು ಹಿಡಿದು ಬದುಕುತ್ತಿದ್ದಾಳೆ. ಇತ್ತೀಚೆಗೆ ಇವಳು ಮೀನನ್ನು ತೊಳೆಯುತ್ತಿದ್ದಾಗ ಒಂದು ಮೀನಿನ ಹೊಟ್ಟೆಯಲ್ಲಿ ಝಣ ಝಣ ಶಬ್ದ ಮಾಡುತ್ತಿರುವ ಕಪ್ಪೆಚಿಪ್ಪನ್ನು ಕಂಡು ಅದನ್ನು ತೆರೆದು ನೋಡಿದಾಗ ಅದರಲ್ಲಿ

ಗೋಲಿಯಾಕಾರದ ಹೊಳೆಯುತ್ತಿರುವ ಮುತ್ತು ಸಿಕ್ಕಿತು. ಆ ಮುತ್ತಿನ ಬೆಲೆ ಕುವೈತ್‌ನ ರತ್ನ ವ್ಯಾಪಾರಿಗಳ ಪ್ರಕಾರ 60,000 ಕುವೈತ್ ದಿನಾರ್‌ಗಳು (1,78,20,000/-ರೂ.ಗಳು). ನಜರತ್ ಈ ಮುತ್ತನ್ನು ಪ್ರಪಂಚದ ಅತಿದೊಡ್ಡ ಮುತ್ತಿನ ಮಾರ್ಕೆಟ್ ಎನಿಸಿದ ಬಹರೈನ್‌ಗೆ ಕೊಂಡುಹೋಗಿ ದಿಢೀರ್ ಶ್ರೀಮಂತಳಾಗುವ ಹವಣಿಕೆಯಲ್ಲಿದ್ದಾಳೆ.

ಜಾಹಿರಾತುಗಳಲ್ಲಿ ಮುತ್ತು

ಪಾಂಡ್ಸ್ ವ್ಯಾನಿಶಿಂಗ್ ಕ್ರೀಮ್, ಡ್ಯೂಲಕ್ಸ್ ಪೈಂಟ್‌ಗಳ ಜಾಹಿರಾತುಗಳಲ್ಲಿ ಮುತ್ತನ್ನು ಉಪಮಾನವಾಗಿ ಬಳಸಿದ್ದಾರೆ. ಪಾಂಡ್ಸ್ ವ್ಯಾನಿಶಿಂಗ್ ಕ್ರೀಮ್ ಮುಖವು ಮುತ್ತಿನಂತೆ ಬೆಳಗಲು ಮುತ್ತಿನಂಥ ಸುಂದರಿಯಾಗಿರಿ. ಡ್ಯೂಲಕ್ಸ್ ನಿಮ್ಮ ಗೋಡೆಗೆ ಮುತ್ತಿನಂಥ ಹೊಳಪನ್ನು ಕೊಡುತ್ತದೆ ಇತ್ಯಾದಿ.

ವೈಜ್ಞಾನಿಕ ದೃಷ್ಟಿಯಲ್ಲಿ ಮುತ್ತು

ಮುತ್ತನ್ನುಂಟುಮಾಡುವ ವಸ್ತುವನ್ನು ಮೃದ್ವಂಗಿ (Mollusca)ಯ ಗುಂಪಿಗೆ ಸೇರಿದ ಯಾವ ಪ್ರಾಣಿಯೇ ಆಗಲಿ ಉತ್ಪತ್ತಿ ಮಾಡುವುದೇ ಆದರೂ ಬರೀ ಇಚ್ಚಿಪ್ಪಿನ (bivalvea) ಜಾತಿಗೆ ಸೇರಿದ ಪರ್ಲ್ ಆಯಿಸ್ಟರ್ (Pearl oyster) ಅಥವಾ ಮುತ್ತಿನ ಸಿಂಪಿ ಮಾತ್ರ ಮುತ್ತನ್ನು ಉತ್ಪತ್ತಿ ಮಾಡುವ ಕ್ರಿಯೆಯಲ್ಲಿ ಸಫಲತೆ ಪಡೆದಿದೆ.

ಮೃದ್ವಂಗಿಯನ್ನು ಬಿಟ್ಟರೆ, ಮುತ್ತನ್ನುಂಟುಮಾಡುವ ಬೇರೊಂದು ಪ್ರಾಣಿ ಆನೆ ಎಂದರೆ ಎಲ್ಲರಿಗೂ ಆಶ್ಚರ್ಯವಾಗಬಹುದು. ಸಂಸ್ಕೃತ ಸಾಹಿತಿಗಳು ತಲೆಯಲ್ಲಿ ಮುತ್ತನ್ನುಳ್ಳ ಆನೆ ಸಿಗುವುದೆಂದು ನಂಬಿದ್ದರು. ಈ ಅಪೂರ್ವ ಮುತ್ತಿಗೆ 'ಗಜಮುಕ್ತಾ' ಅಥವಾ 'ಆನೆ ಮುತ್ತು' ಎಂದು ಹೆಸರು. ದೇವಿ ಪುರಾಣದಲ್ಲಿ ಸಿಂಹವು ಆನೆಯ ತಲೆ ಸೀಳಿ 'ಗಜಮುಕ್ತಾ'ವನ್ನು ಹೊರತೆಗೆಯುವ ಹೇಳಿಕೆ ಇದೆ. ಶಿಶುಪಾಲ ವಧದಲ್ಲಿ ರೈವತಕ (ಪರ್ವತ) ವನ್ನು ಕೃಷ್ಣ ಆಕ್ರಮಣ ಮಾಡುವ ಸಂದರ್ಭದಲ್ಲಿ ಅವನ ಬೆಂಬಲಿಗರು ಆನೆಮುತ್ತುಗಳಿಂದ ತುಂಬಿದ್ದ ಸಿಂಹಗಳ ಗುಹೆಗಳಲ್ಲಿದ್ದರೆಂದು ವರ್ಣನೆ ಇದೆ. ಸಿಂಹಗಳು ಆನೆಗಳನ್ನು ತಿಂದು ಅವುಗಳಲ್ಲಿನ ಮುತ್ತುಗಳನ್ನು ಇಲ್ಲಿ ಶೇಖರಿಸಿದ್ದವು. ವಿದ್ಯಾಪತಿ ತನ್ನ ಪದ್ಯಗಳಲ್ಲಿ ಅರ್ಧನಾರೀಶ್ವರನ ವರ್ಣನೆ ಮಾಡುವಾಗ ಒಂದು ಭಾಗದಲ್ಲಿ ಆನೆಮುತ್ತುಗಳನ್ನು, ಮತ್ತೊಂದು ಭಾಗ ಕಪಾಲ ಮಾಲೆಯನ್ನು ಧರಿಸಿರುವುದಾಗಿ ತಿಳಿಸುತ್ತಾನೆ.

ಜೀವಶಾಸ್ತ್ರದ ಪ್ರಕಾರ ಈ ಆನೆಮುತ್ತುಗಳು ಬರೀ ಭ್ರಮೆಯೇ ಹೊರತು ನಿಜವಲ್ಲ. ಆನೆ ಸ್ರವಿಸುವ ಮದರಸ ಹೆಪ್ಪುಗಟ್ಟಿ ಮುತ್ತಿನಂತಾಗುವುದೆಂದು

ಪ್ರಾಣಿಶಾಸ್ತ್ರಜ್ಞರು ಒಪ್ಪುತ್ತಾರೆ. 1928 ರಲ್ಲಿ ಚಿತ್ತಗಾಂಗ್‌ನಲ್ಲಿ ಹಿಡಿದ ಕೊಂಬಿನಾನೆಯನ್ನು ಕೊಂದಾಗ ಅದರ ಕೊಂಬಿನಲ್ಲಿ ಅಂಡಾಕಾರದ ಸಣ್ಣ ಗಂಟಿದ್ದು ಅದನ್ನು ಅಲ್ಲಿನ ಅರಣ್ಯಾಧಿಕಾರಿಗೆ 'ಆನೆಮುತ್ತು' ಎಂಬುದಾಗಿ ತಿಳಿಸಿದರೆಂದು, ಅವರು ಇತರ ಸಹೋದ್ಯೋಗಿಗಳಿಗೆ ಹೇಳಿದರು.

ಬೆಲೆಬಾಳುವ ಮುತ್ತನ್ನು, ಒಂದು ವಿಶೇಷ ಇಚ್ಛೆಪ್ಪ ಮಾತ್ರ ತಯಾರಿಸ ಬಲ್ಲುದು. ಕೆಲವು ವಿಶೇಷ ಕ್ರಮಗಳಿಂದ ಸಂಸ್ಕರಿಸಿದ ಮುತ್ತನ್ನು ಮುತ್ತು ಬಳಸುವವರ ಇಚ್ಛೆಗನುಸಾರವಾಗಿ ಅನೇಕ ರೀತಿಯ ಕೃತಕ ಮುತ್ತುಗಳನ್ನು ತಯಾರಿಸುತ್ತಾರೆ.

ಮುತ್ತಿನ ಸಿಂಪಿ

ಇದು ಮೃದ್ವಂಗಿ ಗುಂಪಿನ ದ್ವಿಭಾಗಿ (bivalvea) ಜಾತಿಗೆ ಸೇರಿದ ಪ್ರಾಣಿ. oysterಗಳಲ್ಲಿ ಅನೇಕ ಉಪಜಾತಿಗಳಿವೆ. ಇವುಗಳಲ್ಲಿ ಕೆಲವು ಮುತ್ತಿನ ಸಿಂಪಿಗಳು (Pearl oyster) ಮತ್ತೆ ಕೆಲವು ಆಹಾರ ಯೋಗ್ಯವಾದ ಸಿಂಪಿಗಳು (Edible oyster). ಇವೆರಡೂ ನೋಡಲು ಒಂದೇ ತರಹ ಇರುವುದರಿಂದ ಅನೇಕರು ಇವೆರಡೂ ಒಂದೇ ಎಂದು ತಿಳಿಯುತ್ತಾರೆ. ಲಕ್ಷ್ಯವಿಟ್ಟು ನೋಡಿದಾಗ ಇವುಗಳಲ್ಲಿನ ವ್ಯತ್ಯಾಸವನ್ನು ಸುಲಭವಾಗಿ ಗುರುತಿಸಬಹುದು. ಆಹಾರಯೋಗ್ಯ ಸಿಂಪಿಗಳ ಎರಡು ಚಿಪ್ಪುಗಳೂ ಅಸಮವಾಗಿವೆ. ಆದರೆ ಮುತ್ತಿನ ಸಿಂಪಿಗಳಲ್ಲಿ ಎರಡೂ ಚಿಪ್ಪುಗಳು ಒಂದೇ ಸಮ ಇರುತ್ತವೆ. ಇವು ಜಡಸ್ವಭಾವದ ಪ್ರಾಣಿಗಳು. ಶೀತವಲಯಗಳ ವಿನಃ ಪ್ರಪಂಚದ ಎಲ್ಲಾ ಕಡೆಗಳಲ್ಲೂ ದೊರಕುತ್ತವೆ. ಇವು ಪೆಸಿಫಿಕ್ ಕರಾವಳಿ, ಉತ್ತರ ಆಸ್ಟ್ರೇಲಿಯಾ, ಈಸ್ಟ್ ಇಂಡೀಸ್, ಪರ್ಶಿಯನ್ ಭೂಶಿರಗಳಲ್ಲಿ ಹೆಚ್ಚಾಗಿ ದೊರಕುತ್ತವೆ. ಇವು ಕಲ್ಲುಬಂಡೆ ಅಥವಾ ಇತರೇ ಸಾಧನಗಳಿಗೆ ಬಲವಾದ ಬೈಸಸ್ ದಾರಗಳಿಂದ ಅಂಟಿಕೊಂಡಿರುತ್ತವೆ. ಬೇರೆ ಬೇರೆ ಜಾತಿಯ ಮುತ್ತಿನ ಸಿಂಪಿಗಳು ಸಮುದ್ರದಲ್ಲೂ ಮತ್ತು ಸಿಹಿನೀರಿನಲ್ಲೂ ದೊರಕುತ್ತವೆ. ಮುತ್ತಿನ ಸಿಂಪಿಗಳು ಸುಮಾರು 3 ರಿಂದ 11 ವರ್ಷಗಳವರೆಗೂ ಬದುಕುತ್ತವೆ. ಸಿಹಿನೀರಿನ ಸಿಂಪಿ ಸಮುದ್ರದ್ದಕ್ಕಿಂತ ಹೆಚ್ಚು ಕಾಲ ಬದುಕುತ್ತವೆ. ಯಾವ ಆತಂಕಕ್ಕೂ ಸಿಕ್ಕದಿದ್ದಲ್ಲಿ 50 ರಿಂದ 100 ವರ್ಷಗಳವರೆಗೆ ಬದುಕಬಹು ದೆಂಬ ಊಹೆಯೂ ಇದೆ. ವರ್ಷದಲ್ಲಿ ಇವು ಎರಡು ಭಾರಿ ಸಂತಾನಾಭಿವೃದ್ಧಿಯ ಕಾರ್ಯವನ್ನು ಮಾಡುತ್ತವೆ. ಬೇರೆ ಬೇರೆಯ ಉಪಜಾತಿ ಸಿಂಪಿಗಳು ದೊರೆಯುವ ಸ್ಥಳ, ಹೆಸರು, ಅದು ಉಂಟುಮಾಡುವ ಮುತ್ತಿನ ಲಕ್ಷಣಗಳು ಹೀಗಿವೆ:


ಕಾರ್ಯಸ್ಥಾನ	ಪ್ರಾಣಿಯ ಉಪಜಾತಿ	ಮುತ್ತಿನ ಬಣ್ಣ	ಸಾಪೇಕ್ಷ ಸಾಂದ್ರತೆ
ಸಮುದ್ರದಲ್ಲಿ ಉಂಟಾಗುವ ಮುತ್ತು			
1 ಪರ್ಷಿಯನ್ ಕೊಲ್ಲಿ	ಮಾರ್ಗರಿಟಿಫೆರಾ ವಲ್ಗ್ಯಾರಿಸ್	ನಸು ಹಳದಿ ಮಿಶ್ರಿತ ಬಿಳಿ ಬಣ್ಣ	2.68 ರಿಂದ 2.74
2 ಮನ್ನಾರ್ ಕೊಲ್ಲಿ	ಮಾರ್ಗರಿಟಿಫೆರಾ ವಲ್ಗ್ಯಾರಿಸ್	ನಸು ಹಳದಿ ಮಿಶ್ರಿತ ಬಿಳಿ ಬಣ್ಣ	2.68 ರಿಂದ 2.74
3 ಉತ್ತರ ಆಸ್ಟ್ರೇಲಿಯಾ ಕರಾವಳಿ	ಮಾರ್ಗರಿಟಿಫೆರಾ	ಬೆಳ್ಳಿಯ ಬಿಳಿ	2.68 ರಿಂದ 2.78
4 ವಾಯುವ್ಯ ಆಸ್ಟ್ರೇಲಿಯಾ ಕರಾವಳಿ	ಮಾರ್ಗರಿಟಿಫೆರಾ	ಬೆಳ್ಳಿಯ ಬಿಳಿ	2.67 ರಿಂದ 2.78
5 ಪಶ್ಚಿಮ ಆಸ್ಟ್ರೇಲಿಯಾದ ಷಾರ್ಕ್ ಬೇ	ಮಾರ್ಗರಿಟಿ ಫೆರಾ ಮಾಕ್ಸಿಮಾ	ಹಳದಿ	—
6 ವೆಸಿನ್ ಜೂಲ	ಮಾ. ಕಾರ್ಚೇರಿಯಂ	ಬಿಳಿ	2.65 ರಿಂದ 2.75
7 ಜಪಾನ್	ಮಾ. ರೇಡಿಯೇಟ	ತಿಳಿ ಹಸಿರು ಛಾಯೆಯ ಬಿಳಿ	2.66 ರಿಂದ 2.76
8 ಫ್ಲಾರಿಡಾ, ಕ್ಯಾಲಿಫೋರ್ನಿಯ ಕೊಲ್ಲಿ	ಮಾ. ಮಾರ್ಟೆನ್ಸಿ ಸ್ಟ್ರಾಂಬಸ್ ಜೈಗಾಸ್	ಗುಲಾಬಿ ಹಸಿರು, ಹಳದಿ, ನೀಲಿ ಮಿಶ್ರಿತ	2.85
9 ಮೆಕ್ಸಿಕೋ ಕೊಲ್ಲಿ	ಹ್ಯಾಲಿಯೋಟಿಸ್	ಬಿಳಿ	
	—	ಕಪ್ಪು ಛಾಯೆಯ ಬಿಳಿ	2.61 ರಿಂದ 2.69
ಸಿಹಿನೀರಿನಲ್ಲಿ ಉಂಟಾಗುವ ಮುತ್ತು			
10 ಉತ್ತರ ಅಮೇರಿಕಾ	ಯುನಿಯೋ	ಬಿಳಿ	2.66 ರಿಂದ 2.78 ಮೇಲೆ
11 ಯೂರೋಪ್	ಯು. ಮಾರ್ಗರಿಟಿ ಫೆರಾ	ಬಿಳಿ	—
ಸಂಸ್ಕರಿಸಿದ ಮುತ್ತು			
12 ಜಪಾನ್	ಮಾ. ಮಾರ್ಟೆನ್ಸಿ	ಬಿಳಿ	2.72 ರಿಂದ 1.78

ಮುತ್ತು ಉಂಟಾಗುವುದು ಒಂದು ಸ್ವಭಾವ ವ್ಯತಿರಿಕ್ತ ಕಾರ್ಯ. ಸಿಂಪಿ ಆರೋಗ್ಯವಾಗಿದ್ದು ಯಾವ ವಿರೋಧಿಯೂ ಆಕ್ರಮಣ ಮಾಡದಿದ್ದಲ್ಲಿ ಮುತ್ತಿನ ಬೆಳವಣಿಗೆ ಸಾಧ್ಯವಿಲ್ಲ. ಮುತ್ತು ಒಳಗೆ ಉಂಟಾಗುತ್ತಿರುವುದನ್ನು ಹೊರಗಿನ ಮಾರ್ಪಾಡುಗಳಿಂದ ಗುರುತಿಸಬಹುದು. ಮುತ್ತು ಬೆಳೆಯುತ್ತಿದ್ದರೆ ಚಿಪ್ಪು ಅಂಕು ಡೊಂಕಾಗುತ್ತಾ ಹೋಗುವುದು. ಸುಮಾರು 40 ರಲ್ಲಿ ಒಂದು ಚಿಪ್ಪಿನ ಹುಳ ಮುತ್ತನ್ನು ಉತ್ಪತ್ತಿಸಬಹುದು. ಒಂದು ಸಿಂಪಿ ಒಂದೇ ಮುತ್ತನ್ನುಂಟು ಮಾಡಬಹುದಾದರೂ, ಕೆಲವು ವೇಳೆ ಮೂರು ಮುತ್ತುಗಳವರೆಗೆ ಒಂದೇ ಸಿಂಪಿಯಲ್ಲಿ ಸಿಗುವ ಸಂಭವ ಉಂಟು. ವಿಶೇಷ ರಚನೆಗಳಲ್ಲಿ 87 ಮತ್ತು 67 ಮುತ್ತುಗಳು ಕ್ರಮವಾಗಿ ಭಾರತ ಮತ್ತು ಸಿಲೋನ್ ಸಿಂಪಿಗಳಲ್ಲಿ ಸಿಕ್ಕ ದಾಖಲೆಗಳಿವೆ. ಸಂಖ್ಯೆಗನುಗುಣವಾಗಿ ಅದರ ಆಕೃತಿ ಮತ್ತು ತೂಕವೂ ಹೆಚ್ಚು ಕಡಿಮೆಯಾಗುತ್ತವೆ.


ಸಿಂಪಿ ತನ್ನ ಮೃದುವಾದ ದೇಹವನ್ನು ಕ್ಯಾಲ್ಕೇರಿಯಸ್ (ಕ್ಯಾಲ್ಸಿಯಂ ಕಾರ್ಬೋನೇಟ್) ಚಿಪ್ಪಿನಿಂದ ಮುಚ್ಚಿಕೊಂಡಿದೆ. ಈ ಪ್ರಾಣಿಗೆ ಪ್ರತ್ಯೇಕವಾದ ಶಿರವಿಲ್ಲ. ಇದಕ್ಕೆ ಮಾಂಸಲದ (muscular) ಒಂದು ಪಾದವಿದೆ. ಇದರ ದೇಹವು ಒಂದು ಮೃದುವಾದ ಪದರದಿಂದ ಆವರಿಸಲ್ಪಟ್ಟಿದೆ. ಈ ಪದರವನ್ನು ಗೌಸು ಅಥವಾ ಮ್ಯಾಂಟಲ್ ಎನ್ನುತ್ತೇವೆ. ಈ ಗೌಸೇ ಚಿಪ್ಪು ಉಂಟುಮಾಡುವ ಪದಾರ್ಥಗಳನ್ನು ಸ್ರವಿಸುತ್ತದೆ. ಈ ಚಿಪ್ಪನ್ನು ಅಡ್ಡ ಸೀಳಿ ಪರೀಕ್ಷಿಸಿದರೆ, ಅದು ಮೂರು ಪ್ರತ್ಯೇಕ ಪದರಗಳಿಂದ ಆವೃತವಾಗಿರುವುದನ್ನು ಕಾಣಬಹುದು. ಈ ಪದರಗಳೆಂದರೆ ಪೆರಿಯೋಸ್ಟ್ರೇಕಂ (Periostracum), ಪ್ರಿಸ್ಮಾಟಿಕ್ (Prismatic), ಮತ್ತು ನೇಕ್ರಿಯಸ್ (Nacreous) ಅಥವಾ ಮುತ್ತು ಮಾತೃ ಪದರ (Mother of Pearl). ಪೆರಿಯೋಸ್ಟ್ರೇಕಂ ಕಂದುಮಿಶ್ರಿತ ಕಾಂಕಿಯೋಲಿನ್ ಎಂಬ ಪದಾರ್ಥದಿಂದಾಗಿದೆ. ಇದೊಂದು ಕೈಟಿನ್ (Chitin) ಜಾತಿಯ ಕೊಂಬು ಪದಾರ್ಥ. ಪ್ರಿಸ್ಮಾಟಿಕ್ ಪದರ ಕ್ಯಾಲ್ಸಿಯಂ ಕಾರ್ಬೋನೇಟ್ ಹರಳು ಅಥವಾ ಪ್ರಿಸಂಗಳಿಂದ ಚಿಪ್ಪಿನ ಮೇಲ್ಮೈಗೆ ಸಮಕೋನದಲ್ಲಿ ಜೋಡಿಸಲ್ಪಟ್ಟ ನಡುವಿನ ಪದರ. ಈ ಪದರಗಳು ಅನುಕ್ರಮವಾಗಿ ತೆಳುವಾದ ಕಾಂಕಿಯೋಲಿನ್‌ಗಳಿಂದ ಬೇರ್ಪಡಿಸಲ್ಪಟ್ಟಿದೆ. ಈ ಪದರವು ಚಪ್ಪನ್ನು ಬಲಪಡಿಸುತ್ತದೆ. ಮುತ್ತು ಮಾತೃ ಪದರವು. ಮ್ಯಾಂಟಲ್‌ನ ಹೊರ ಮೈ ಸ್ರವಿಸುವ ಪದರ. ಇದು ನಯ ಮತ್ತು ಹೊಳಪುಳ್ಳದ್ದು. ಇದರಲ್ಲಿನ ಕ್ಯಾಲ್ಸಿಯಂ ಕಾರ್ಬೋನೆಟ್ ಮತ್ತು ಕಾಂಕಿಯೋಲಿನ್‌ಗಳು ಚಿಪ್ಪಿನ ಮೇಲ್ಮೈಗೆ ಸಮಾನಾಂತರವಾಗಿ ಜೋಡಿಸಲ್ಪಟ್ಟಿವೆ. ಈ ಪದರವು ಯಾವ ಬಿಡಿಯ ಕಣವ ಮೇಲಾದರೂ ಸ್ರವಿಸುವುದರಿಂದ, ಈ ಪದರದಿಂದ ಆವೃತಗೊಂಡ ಕಣವೇ ಮುತ್ತಾಗುತ್ತದೆ.

ಮುತ್ತಿನ ಬೆಳವಣಿಗೆಗೆ ಕಾರಣ ಸ್ಪಷ್ಟವಾಗಿಲ್ಲವಾದರೂ, 2 ತತ್ವಗಳು ಕಾರಣ ವನ್ನು ಕೊಡುವಂಥವಾಗಿವೆ.

1. **ಉಸುಕಿನ ಕಣದ ತತ್ವ** (Sand grain theory) 17ನೇ ಶತಮಾನ ದಲ್ಲಿಯೇ ಈ ತತ್ವವನ್ನು ಪ್ರತಿಪಾದಿಸಲಾಗಿತ್ತು. ಇದರ ಪ್ರಕಾರ ಉಸುಕಿನ ಕಣವು



ಅಡ್ಡ ಸೀಳಿದ ಚಿಪ್ಪು ಮತ್ತು ಗೌಸಿನ ಒಳ ಚಿತ್ರ



ಕೋಶ ಮುತ್ತು ಬೆಳೆಯುವ ಮೂರು ಹಂತಗಳು

1. ಚಿಪ್ಪು ಮತ್ತು ಮ್ಯಾಂಟಲ್ ಮಧ್ಯೆ ಯಾವುದೇ ಕಣ ಸಿಕ್ಕಿಕೊಳ್ಳುವುದು.
2. ಮ್ಯಾಂಟಲ್‌ನ ಎಪಿಥೀಲಿಯಲ್ ಪದರ ಮುತ್ತಿನ ಕೋಶವನ್ನು ಉಂಟುಮಾಡುವುದು.
3. ಕೋಶದೊಳಗೆ ಕೋಶಮುತ್ತು ಪೂರ್ಣಗೊಂಡಾಗ.

ಚಿಪ್ಪು ಮತ್ತು ಮ್ಯಾಂಟಲ್ ಮಧ್ಯೆ ಸಿಕ್ಕಿಕೊಂಡಾಗ, ಒಂದು ರೀತಿಯ ಕಿರುಕುಳ ಉಂಟಾಗಿ ಮ್ಯಾಂಟಲ್ ಮುತ್ತು ಮಾತೃ ಪದರವನ್ನು ಸ್ರವಿಸುವುದರಿಂದ ಮುತ್ತು ಉಂಟಾಗುವುದು.

2. **ಪರತಂತ್ರ ಜೀವಿ ಪ್ರೇರಣೆಯ ತತ್ವ** (Parasitic theory) : ಪರ ತಂತ್ರ ಜೀವಿಯಾದ ಚಪ್ಪಟೆ ಹುಳುವಿನ ಮರಿ (Larva of trematoda) ಚಿಪ್ಪಿನ

ಒಳಹೊಕ್ಕ ಪ್ರಾಣಿಯು ಎಪಿಥೀಲಿಯಲ್ ಪದರದೊಳಗೆ ನುಗ್ಗಿ ಅಲ್ಲೇ ಸಾಯು ತ್ತದೆ. ಅದರ ಸುತ್ತಲೂ ನೇಕ್ರಿಯಸ್ ಪದರವು ಸ್ರವಿಸಲ್ಪಡುವುದರಿಂದ, ಉಸು ಕಿನ ಕಣದ ಬದಲು ಈ ಸತ್ತ ಮರಿಯೇ ಮುತ್ತುಂಟಾಗುವ ಕೇಂದ್ರಬಿಂದುವಾಗು ತ್ತದೆ.

ಕಾರಣ ಯಾವುದೇ ಇರಲಿ, ಈ ರೀತಿಯಲ್ಲಿ ಸಿಂಪಿ ಮುತ್ತುಂಟುಮಾಡುವ ವಿಧಾನಗಳು ಎರಡು ರೀತಿಯಾಗಿವೆ. ಆದ್ದರಿಂದಲೇ ನೈಜ ಮುತ್ತುಗಳಲ್ಲಿ ಎರಡು ವಿಧ.

1. **ಕೋಶ ಮುತ್ತು** (Cyst Pearl); ಇದು ಗುಂಡಾಗಿಯೂ ಅಥವಾ ಪೊಟ್ಟೆಯಾಕಾರವಾಗಿಯೂ ಇರುವ ಪ್ರಾಣಿಯ ದೇಹದೊಳಗಿಂದ ಉಂಟಾದ ಬಹು ಬೆಲೆ ಬಾಳುವ ಮುತ್ತು.

2. **ಹೊಪ್ಪಳೆ ಮತ್ತು ಬೊಬ್ಬೆ ಮುತ್ತು** (Blister Pearls): ಇದು ಚಿಪ್ಪಿನ ಒಳಭಾಗಕ್ಕೆ ಅಂಟಿಕೊಂಡಿರುತ್ತದೆ. ಯಾವುದೇ ಉದ್ರೇಕಕಾರಿ ವಸ್ತು ಚಿಪ್ಪಿನ ಒಳಭಾಗಕ್ಕೆ ಹೊಕ್ಕಾಗ ಅದರ ಸುತ್ತಲೂ ಮುತ್ತು ಮಾತೃ ಪದರವನ್ನು ಸ್ರವಿಸುವುದರಿಂದ ಉಂಟಾಗುತ್ತದೆ.

ನೈಜ ಮುತ್ತನ್ನು ಅವುಗಳ ಆಕಾರಕ್ಕೆ ತಕ್ಕಂತೆ ವಿಧ ವಿಧವಾಗಿ ವಿಂಗಡಿಸ ಬಹುದು. ಅವುಗಳೆಂದರೆ,

ಗುಂಡಿ ಮುತ್ತು (Button or Bouton): ಇದು ಕೋಶ ಮುತ್ತಾಗಿದ್ದು, ಮೇಲ್ಮೈ ಗುಂಡಗೂ ತಳ ಚಪ್ಪಟೆಯಾಗೂ ಇರುತ್ತದೆ.

ಹನಿ ಮುತ್ತು (Drops or pear eyes): ಇದು ಪೇರು ಹಣ್ಣಿನಾಕಾರದಲ್ಲಿ ರುವ ಕೋಶ ಮುತ್ತು.

ವಿಕೃತ ಮುತ್ತು (Baroque or Barrok): ಇವು ಅಸಮ ರೂಪದ ಕೋಶ ಅಥವಾ ಹೊಪ್ಪಳೆ ಮುತ್ತುಗಳು.

ಸೀರು ಮುತ್ತು (Seed Pearls): ಇವು ಬಹು ಸಣ್ಣ ಮುತ್ತುಗಳು.

ಸಿಹಿನೀರ ಮುತ್ತುಗಳು (Fresh water pearls): ಇವು ನದಿ, ಕುಂಟೆ ಗಳಲ್ಲಿ ವಾಸಿಸುವ ಸಿಂಪಿಗಳಿಂದುಂಟಾದ ಮುತ್ತುಗಳು.

ವಿಶೇಷ ಮುತ್ತುಗಳು: ಇಲ್ಲಿಯವರೆಗಿನ ಮುತ್ತಿನ ಸಂಗ್ರಹಣೆಗಳಲ್ಲಿ ಲಾಪಲ್ಲೆಗ್ರೀನಾ (La Pellegrina) ಎಂಬ ಮುತ್ತು ಅತ್ಯಂತ ಸುಂದರ ಮುತ್ತೆಂದು ಪರಿಗಣಿತವಾಗಿದೆ. ಇದು ಶುದ್ಧ ಬಿಳುಪಿದ್ದು, 111½ ಮುತ್ತಿನ ಗ್ರೈನ್ಸ್

ತೂಕವಿದೆ. ಮಾಸ್ಕೋದ ಜೋಸಿಮ ಬ್ರದರ್ಸ್ ಇದನ್ನು ಹಿಂದೆ ಹೊಂದಿದ್ದರು, ಲಾರೆಜೆಂಟೆ (La Regent) ಮೊಟ್ಟೆಯಾಕಾರದ ದೊಡ್ಡ ಮುತ್ತು. ಇದು 337 ಮುತ್ತಿನ ಗ್ರೈನ್ಸ್ ತೂಕವಿದ್ದು ಫ್ರೆಂಚ್ ಕೋರ್ಟ್‌ನ ಆಭರಣವಾಗಿತ್ತು. ಪರ್ಶಿಯಾದ 'ಷಾ'ನ ಬಳಿ ಅತ್ಯುತ್ತಮ ಮುತ್ತುಗಳ ಸಂಗ್ರಹಣೆ ಇತ್ತೆಂದು ತಿಳಿದು ಬರುತ್ತದೆ. ಬರೋಡದ ಗಾಯಕವಾಡನಲ್ಲಿ ಅತ್ಯುತ್ಕೃಷ್ಟವಾದ ಮುತ್ತುಗಳೂ ಮತ್ತು ಒಂದು ಮುತ್ತಿನ ಕಂಬಳಿ (ರತ್ನಗಂಬಳಿ)ಯೂ ಇತ್ತೆಂದು ತಿಳಿದು ಬರುತ್ತದೆ.

ಕೆಲವು ವೇಳೆ ಮುತ್ತುಗಳು ಬಿಡಿಯಾಗಿರದೆ ಒಂದಕ್ಕೊಂದು ಅಂಟಿಕೊಂಡು ಆಗುವ ಸಂಭವವೂ ಉಂಟು. ಹೀಗಾದ ಮುತ್ತುಗಳಲ್ಲಿ 'ದಿ ಗ್ರೇಟ್ ಸದರನ್ ಕ್ರಾಸ್' (The great Southern Cross) ಅತಿ ಮುಖ್ಯವಾದದ್ದು. ಇದರಲ್ಲಿ ಒಟ್ಟು 9 ಮುತ್ತುಗಳಿವೆ. ಇದು ಸಿಕ್ಕಾಗ ಎಂಟೇ ಇತ್ತೆಂದು, ಆಕಾರವನ್ನು ಪೂರ್ಣಗೊಳಿಸಲು ಮತ್ತೊಂದನ್ನು ಸೇರಿಸಲಾಯಿತೆಂದು ಹೇಳುತ್ತಾರೆ. ಇದು 1886 ರಲ್ಲಿ ಪಶ್ಚಿಮ ಆಸ್ಟ್ರೇಲಿಯಾ ಘಟ್ಟದಲ್ಲಿ ದೊರಕಿತು.

ಮುತ್ತಿಗೆ ತನ್ನದೇ ಆದ ಭೌತಿಕ ಮತ್ತು ರಾಸಾಯನಿಕ ಲಕ್ಷಣಗಳಿವೆ. ಇದರ ಆಕೃತಿ, ಪರಳಿನ ನಿರ್ದಿಷ್ಟ ರೂಪ, ಬಣ್ಣ, ಹೊಳಪು, ಗಡಸು, ಸಾಪೇಕ್ಷಸಾಂದ್ರತೆ ಬೆಳಕಿನ ಕಿರಣಗಳ ಪ್ರತಿಕ್ರಿಯೆ ಮತ್ತು ರಾಸಾಯನಿಕ ಸಂಯೋಜನೆ, ಅವುಗಳ ಏಕತೆಯಲ್ಲಿ ಭಿನ್ನತೆಯನ್ನು ತೋರಿಸುವ ಲಕ್ಷಣಗಳಾಗಿವೆ.

ಇದರ ರಾಸಾಯನಿಕ ಸಂಯೋಜನೆ, ಶೇಕಡ 86 ಭಾಗ ಕ್ಯಾಲ್ಸಿಯಂ ಕಾರ್ಬೋನೇಟ್, ($CaCo_3$) ಶೇ. 12 ಭಾಗ ಕಾಂಕಿಯೋಲಿನ್ ($C_{30}H_{48}N_2O_{11}$), ಶೇ. 2 ಭಾಗ ನೀರು, ಮುತ್ತು ಈ ಅಣುಗಳ ವ್ಯವಸ್ಥಿತ ಜೋಡಣೆಯಿಂದ ಬೆಳೆಯುವುದು. ಇದರ ಅಂಗ ರಚನೆ ಈರುಳ್ಳಿಯ ಅಂಗ ರಚನೆಯನ್ನು ಹೋಲುತ್ತದೆ. ಚಿಕ್ಕ ಚಿಕ್ಕ ಕ್ಯಾಲ್ಸಿಯಂ ಕಾರ್ಬೋನೇಟ್ ಹರಳುಗಳು ಸಮಾನ ಕೇಂದ್ರವಾಗಿಯೂ, ಕಿರಣಗಳಂತೆಯೂ ಪದರ ಪದರವಾಗಿ ಹೆಂಚನ್ನು ಜೋಡಿಸಿದಂತೆ ಜೋಡಿಸಲ್ಪಟ್ಟಿದೆ. ಈ ಏಕಪ್ರಕಾರ ಬೆಳವಣಿಗೆ ನೈಜ ಮುತ್ತನ್ನು ಪರೀಕ್ಷಿಸುವ ಒಳ್ಳೆಯ ಸಾಧನವಾಗಿದೆ. ಇಂಥ ರಚನೆಯ ಕಾರಣದಿಂದಾಗಿ ಬೆಳಕಿನ ಕಿರಣಗಳು ಇದರ ಮೇಲೆ ಬಿದ್ದಾಗ ಒಂದಕ್ಕೊಂದು ಸಂಘಟಿಸಿ, ಕಿರಣಗಳ ವಕ್ರವಿಯೋಜನೆ (diffraction) ಯುಂಟಾಗಿ, ಮುತ್ತಿನ ಹೊರ ಪದರದಲ್ಲಿ ವರ್ಣ ವ್ಯತ್ಯಾಸವಾಗುತ್ತದೆ (Interferance) ಈ ಜೋಡಿ ಕ್ರಿಯೆಯಿಂದ ಹೊರಡುವ ಮುತ್ತಿನ ವಿಶೇಷ ಹೊಳಪಿಗೆ 'ಓರಿಯೆಂಟ್' (Orient) ಎಂದು ಹೆಸರು. ಈ ಹೆಸರು ಬರಲು, ಅತ್ಯುತ್ತಮ ಮುತ್ತು ಮೊದಲು ಪೌರಸ್ತ್ಯ ದೇಶಗಳಿಂದ ಬಂದುದರ ಕಾರಣವಿದ್ದರೂ ಇರಬಹುದು.

ಮುತ್ತಿನ ಬೆಲೆ ಅದರ ಅಳತೆ, ರಚನಾ ವಿನ್ಯಾಸ, ಆಕಾರ, ನೀರಿನಂಶ ಮತ್ತು ಅವರ ಕಾಂತಿಯ ಮೇಲೆ ನಿರ್ಧಾರಿತವಾಗುತ್ತದೆ. ಇದರ ಅಳತೆಯ ಮಾನವನ್ನು ಮುತ್ತಿನ ಗ್ರೈನ್ಸ್ (Pear grains) ಎನ್ನುತ್ತೇವೆ. ಒಂದು ಮುತ್ತಿನ ಗ್ರೈನ್ಸ್ ಸುಮಾರು ¼ ಕ್ಯಾರೆಟ್‌ಗಳು (1 ಕ್ಯಾರೆಟ್ = ⅕ಗ್ರಾಂ).

ಔಷಧಿಯಲ್ಲಿ ಮುತ್ತು

ಮುತ್ತಿನ ಹುಡಿ ಹೊಟ್ಟೆ ಬಾಧೆಗಳಿಗೆ ದಿವ್ಯೌಷಧ. ಮಜೂನ್ (Majoon) ಎಂಬ ಔಷಧಿಯಲ್ಲಿ ಮುತ್ತಿನ ಭಾಗವಿದ್ದು, ಇದನ್ನು ಪ್ರಚೋದಕ ಮತ್ತು ಆರೋಗ್ಯ ವರ್ಧಕವಾಗಿ ಉಪಯೋಗಿಸುತ್ತಾರೆ. ಆಯುರ್ವೇದದಲ್ಲಿ ಇದರ ಬಳಕೆ ಹೆಚ್ಚಾಗಿದೆ.

ಮುತ್ತಿನ ಕೃಷಿ

ಇದು ಅತಿ ಪುರಾತನವಾಗಿ ಬೆಳೆದು ಬಂದ ಕೃಷಿಯಾಗಿದೆ. ಭಾರತದಲ್ಲಿ ಇದನ್ನು 'ಮನ್ನಾರ್' ಮತ್ತು ಕಚ್' ಕೊಲ್ಲಿಗಳಲ್ಲಿ ಅನೇಕ ವರ್ಷಗಳಿಂದ ನಡೆಸಿ ಕೊಂಡು ಬಂದಿದ್ದಾರೆ. ಮಾರ್ಕೊ ಪೋಲೋ (1200–1300AD) ಮುತ್ತಿನ ಕೃಷಿಯನ್ನು ಪಾಂಡ್ಯರಾಜರ ಆಳ್ವಿಕೆಯಲ್ಲಿಯೇ ವರ್ಣಿಸಿದ್ದಾನೆ. ಭಾರತದಲ್ಲಿ 1524 ರಿಂದ 1658 ರವರೆಗೆ ಈ ಕೃಷಿ ಪೋರ್ಚುಗೀಸರ ವಶದಲ್ಲಿದ್ದು, 1658 ರಲ್ಲಿ ಅದು ಡಚ್ ಆಡಳಿತಕ್ಕೆ ಒಳಪಟ್ಟಿತ್ತು. 1796 ರಲ್ಲಿ ಇದು ಇಂಗ್ಲಿಷರ ವಶ ವಾಯಿತು. ಭಾರತಕ್ಕೆ ಸ್ವತಂತ್ರ ಬಂದ ಮೇಲೆ, ಎಂದರೆ 1947 ರಿಂದೀಚೆಗೆ ತಮಿಳುನಾಡು ಈ ಸಾರ್ವಭೌಮತ್ವವನ್ನು Department of Fisheries ಕೆಳಗೆ ಪಡೆಯಿತು. ಮನ್ನಾರ್‌ನಲ್ಲಿ ಬಂಡೆಗಳಿರುವ ಸಮುದ್ರ ಕ್ಷೇತ್ರಗಳಲ್ಲಿ 'ಪಾರ್ಸ್' ಎಂಬ ಹೆಸರಿನಿಂದ ಈ ಕೃಷಿ ನಡೆಸುತ್ತಾರೆ.

ಕಚ್‌ನಲ್ಲಿ, ಜಾಂ ಸಾಹೇಬ್ ನವನಗರ್‌ನ ಆಶ್ರಯದಲ್ಲಿ ಹಿಂದೆ ಮುತ್ತಿನ ಕೃಷಿ ನಡೆಯುತ್ತಿತ್ತು. 1926 ರಲ್ಲಿ 'ಮೋತಿ ಕಡ್ಡಾ' ಎಂಬ ಪ್ರತ್ಯೇಕ ವಿಭಾಗ ಈ ಕಾರ್ಯವನ್ನು ನಿರ್ವಹಿಸುತ್ತಿತ್ತು. 1948 ರಲ್ಲಿ, ನವನಗರ್, ಭಾರತದ ಒಕ್ಕೂಟಕ್ಕೆ ಸೇರಲ್ಪಟ್ಟು ಇದು ಗುಜರಾತ್ ಸರ್ಕಾರದ ಆಡಳಿತಕ್ಕೊಳಪಟ್ಟಿತು.

1972 ರಲ್ಲಿ, ಟುಟಿಕೋರಿನ್ ಬಳಿ ಇರುವ ವೆಪ್ಪಲೋಡೈ ಪ್ರದೇಶವನ್ನು ಮುತ್ತಿನ ಕೃಷಿ ಮತ್ತು ಅವುಗಳ ಮೇಲೆ ಪ್ರಯೋಗ ನಡೆಸುವ ಕಾರ್ಯಕ್ರಮಕ್ಕಾಗಿ ಆರಿಸಲಾಯಿತು. ಇವರಲ್ಲಿ ಅತಿ ನವೀನ ದಿಮ್ಮಿ ಕೃಷಿ (raft culture)ಯನ್ನು ಅಳವಡಿಸಿಕೊಂಡು ಮಳೆಗಾಲದಲ್ಲಿ ಕೂಡ ಫಲಪ್ರದವಾದ ಬೆಳೆಯನ್ನು ಪಡೆಯುವ ವಿಧಾನವನ್ನು ರೂಪಿಸಲಾಯಿತು. ಆರಂಭದ ವರ್ಷದಲ್ಲೇ ಶೇ. 78 ಭಾಗ ಫಲಿ

ತ್ರಾಂಶ ಸಿಕ್ಕಿದ್ದು ಇದರ ಉಳುಮೆಯು ಆಶಾದಾಯಕವಾಗಿ ತೋರಿ ಈ ಕೃಷಿಯು ಮುಂದುವರಿಕೆ ಈಗಲೂ ನಡೆಯುತ್ತಿದೆ.

ಮಹದೇವನ್ ಮತ್ತು ನಾಯರ್ (1968, 1973) ಎಂಬ ವಿಜ್ಞಾನಿಗಳು Central Marine Fisheries Research Institute ವತಿಯಿಂದ ಮನ್ನಾರ್ ಕೊಲ್ಲಿಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ಉಪಯುಕ್ತ ಪರಿಸ್ಥಿತಿಯ ಸಲಹೆಗಳನ್ನು ನೀಡಿದ್ದಾರೆ. ಡಾ. ಪಿಳ್ಳೈ (1962) ಇಲ್ಲಿನ ಭೌತಿಕ ಮತ್ತು ರಾಸಾಯನಿಕ ಸ್ಥಿತಿಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ಮೊದಲ 3 ರಿಂದ 4 ವರ್ಷಗಳು ಈ ಇಚ್ಚಿಪ್ಪಿನ ಬೆಳವಣಿಗೆ ಶೀಘ್ರಗತಿಯಲ್ಲಿ ನಡೆದರೂ, ನಂತರದ ಬೆಳವಣಿಗೆ ಕುಂಠಿತವಾಗುತ್ತದೆ. ಇದಕ್ಕೆ ಅನೇಕ ಕಾರಣಗಳಿರಬಹುದು. ಇದರ ಚಿಪ್ಪಿನ ಮೇಲೆ ಅನೇಕ ರೀತಿಯ ಶೈವಲಗಳು, ಸ್ಪಾಂಜ್‌ಗಳು, ಪಾಲಿಕೀಟ್, ಬಲಾನಸ್ (ಸಂಧಿಪದಿ) ಮುಂತಾದವು ಬೆಳೆದು, ಮಲಿನಗೊಳಿಸಿ, ಇಚ್ಚಿಪ್ಪಿನ ಬೆಳವಣಿಗೆಗೆ ಬಾಧಕ ತರುತ್ತವೆ. ವರ್ಷವಿಡೀ ಒಂದಲ್ಲ ಒಂದು ಅಡಚಣೆಗೆ ಇವು ಒಳಗಾಗುವುದರಿಂದ ಬಹು ನಾಜೂಕಾಗಿ ಈ ಕೃಷಿ ನಡೆಸಬೇಕು.

ಮುತ್ತು ದೋಷ ಅಥವಾ ಕೊರತೆಗಳಿಂದ ಕೂಡಿಲ್ಲದೇ ಇರುವುದಿಲ್ಲ. ಇದರಲ್ಲಿ ಬಿರುಕು, ರಂಧ್ರಗಳು ಉಂಟಾಗಿ ನ್ಯೂನತೆಯನ್ನು ತರಬಹುದು. ಒಂದೇ ಒಂದು ನ್ಯೂನತೆ ಇದ್ದರೆ, ಅದನ್ನು ಬಹು ಬೆಲೆಬಾಳುವ ಮುತ್ತೆಂದೇ ಪರಿಗಣಿಸಬಹುದು. ಮುತ್ತಿನ ಬಣ್ಣ ಪ್ರಾಣಿಯು ಜೀವಿಸುವ ನೀರಿನ ಲಕ್ಷಣಗಳ ಮೇಲೆ ಅವಲಂಬಿಸಿರುತ್ತದೆ. ನೀಲಿ ಛಾಯೆಯು ಮುತ್ತು ಹೆಚ್ಚು ಕ್ಯಾಂಕಿಯೋಲಿನ್ ಪದರಗಳಿಂದ ಉಂಟಾಗುತ್ತದೆ. ಹಳದಿ ಮಿಶ್ರಿತ ಮುತ್ತು ಪಶ್ಚಿಮ ಆಸ್ಟ್ರೇಲಿಯಾದ ಷಾರ್ಕ್ ಬೇ ಯಲ್ಲಿ ಉತ್ಪತ್ತಿಯಾಗುತ್ತದೆ. ಗುಲಾಬಿ ಮಿಶ್ರಿತ ಮುತ್ತು ಫ್ಲೋರಿಡಾ ಮತ್ತು ವೆಸ್ಟ್ ಇಂಡೀಸ್‌ಗಳಲ್ಲಿ ಸಿಗುವ ಸಿಹಿ ನೀರಿನ ಸಿಂಪಿಗಳು ಉತ್ಪತ್ತಿ ಮಾಡುತ್ತವೆ.

ಮುತ್ತಿನ ಸಂಸ್ಕರಣೆ (Pearl culturing) : ಮುತ್ತು ಯಾವುದೇ ಹೊರಗಿನ ವಸ್ತು ಚಿಪ್ಪಿನ ಒಳ ಹೊಕ್ಕಾಗ ಮ್ಯಾಂಟಲ್ ಪದರವು ಮುತ್ತು ಮಾತ್ರ ಪದರವನ್ನು ಸ್ರವಿಸುವುದರಿಂದ ಆಗುವುದರಿಂದ. ಪ್ರಾಯೋಗಿಕವಾಗಿ ಹೊರಗಿನಿಂದ ಯಾವುದೇ ವಸ್ತುವನ್ನು ಚಿಪ್ಪಿನೊಳಕ್ಕೆ ನೂಕಿದ್ದೇ ಆದರೆ ಮುತ್ತನ್ನುಂಟು ಮಾಡುವ ಪದಾರ್ಥವನ್ನು ಪ್ರಚೋದಿಸಬಹುದು. ಇಂಥ ಪ್ರಚೋದಿಸಿದ ಮುತ್ತಿಗೆ ಸಂಸ್ಕರಿಸಿದ ಮುತ್ತು (Cultured pearls) ಎನ್ನುತ್ತೇವೆ.

ಶಾಸ್ತ್ರೀಯ ಸಂಸ್ಕರಣ ವಿಧಾನವನ್ನು ಪರಿಚಯಿಸಿದ ಕೀರ್ತಿ ಮೊದಲು ಜಪಾನಿಯರಿಗೆ ಸಲ್ಲುತ್ತದೆ. ಇದಕ್ಕೆ ಮೊದಲೇ ಚೀನಿಗಳು ಇಂಥ ವಿಧಾನವನ್ನು

ರೂಢಿಸಿಕೊಂಡಿದ್ದರೂ, ವೈಜ್ಞಾನಿಕವಾಗಿ ಮುತ್ತು ಅಭಿವೃದ್ಧಿಗೊಳಿಸಲು ಇಂಥ ಸಂಸ್ಕರಣೆಯ ವಿಧಾನವನ್ನು ಜಗತ್ತಿಗೆ ತೋರಿಸಿದವರು ಜಪಾನಿಯರೇ.

18ನೇ ಶತಮಾನದಲ್ಲೇ ಸ್ವೀಡನ್ನಿನ ಜೀವಶಾಸ್ತ್ರಜ್ಞ ಲಿನಿಯಸ್, ಒಂದು ಸಣ್ಣ ಸುಣ್ಣಕಲ್ಲನ್ನು ಸಿಹಿನೀರಿನ ಸಿಂಪಿಯೊಳಗೆ ತುರುಕಿಸಿ, ಮುತ್ತು ತಯಾರಿಸಬಹುದೆಂಬ ಊಹೆಗೆ ಬಂದಿದ್ದನು. ಇದಕ್ಕೆ ಮೊದಲೇ ಚೀನಿಯರು ಮಣ್ಣಿನಿಂದ ಅಥವಾ ಯಾವುದೇ ಲೋಹದಿಂದ ತಯಾರಿಸಿದ ಬುದ್ಧನ ಚಿಕ್ಕ ಚಿಕ್ಕ ವಿಗ್ರಹಗಳನ್ನು ಸಿಂಪಿಯ ಚಿಪ್ಪಿನೊಳಕ್ಕೆ ಇಟ್ಟು, ಅದಕ್ಕೆ ಮುತ್ತು ಮಾತೃಪದರದ ಲೇಪವನ್ನುಂಟುಮಾಡುವ ಕಲೆಯನ್ನು ಅಳವಡಿಸಿಕೊಂಡಿದ್ದರು. ಈ ಶತಮಾನದ ಆರಂಭದಲ್ಲಿ, ಜಪಾನಿನ, ಕೊಕಿಚಿ-ಮಿಕಿಮೋಟೋ ಎಂಬ ವಿಜ್ಞಾನಿ ಸಂಸ್ಕರಣ ವಿಧಾನವನ್ನು ವೈಜ್ಞಾನಿಕವಾಗಿ ಮಾಡಿ ತೋರಿಸಿದ. ಇಂಥ ಸಂಸ್ಕರಿಸಿದ ಮುತ್ತು 1921 ರಲ್ಲಿ ಪೇಟೆಗೆ ಮಾರಾಟಕ್ಕಾಗಿ ಬಂದಾಗ ರತ್ನವ್ಯಾಪಾರಿಗಳು ನಿಬ್ಬೆರಗಾಗಿದ್ದರು.

ಸಂಸ್ಕರಿಸುವ ವಿಧಾನ

ಸುಮಾರು 35ಗ್ರಾಂ ತೂಕದ ಒಂದೂವರೆ ವರ್ಷವಾಗಿರುವ ಮುತ್ತಿನ ಸಿಂಪಿಗಳನ್ನು ಸಂಸ್ಕರಣೆಗಾಗಿ ಬಳಸುತ್ತಾರೆ. ಇವನ್ನು ಕೆಲವು ದಿನ ಉಪವಾಸಕ್ಕೀಡು ಮಾಡಿ ಅವುಗಳಲ್ಲಿರುವ ಜೀವಾಣು (gametes)ಗಳನ್ನು ವಿಸರ್ಜಿಸುವಂತೆ ಮಾಡುತ್ತಾರೆ. ಹೀಗೆ ಬಲಹೀನಗೊಳಿಸಿದ ಸಿಂಪಿಗಳನ್ನು ಬೊಂಬಿನ ಬುಟ್ಟಿಗಳಲ್ಲಿ ಶೇಖರಿಸಿ ಮುತ್ತಿನ ಕೃಷಿಗಾಗಿ ಏರ್ಪಡಿಸಿಕೊಂಡಿರುವ ಸಾಗರ ತಳ ಅಥವಾ ತೊಟ್ಟಿಗಳಲ್ಲಿ ಬಿಡುತ್ತಾರೆ. ಈ ಬುಟ್ಟಿಗಳನ್ನು ಕೆಲವು ದಿನಗಳಿಗೊಮ್ಮೆಯಂತೆ ಮೇಲಕ್ಕೂ, ಕೆಳಕ್ಕೂ ಎತ್ತಿ ಬಿಡುವುದರಿಂದ, ಇವು ನೀರಿನ ಉಷ್ಣತೆ ಮತ್ತು ಸಾಪೇಕ್ಷ ಸಾಂದ್ರತೆಯ ವ್ಯತ್ಯಾಸಕ್ಕೊಳಪಟ್ಟು ಜನನ ಗ್ರಂಥಿಗಳನ್ನು (gonads) ಖಾಲಿ ಮಾಡಿಕೊಳ್ಳುತ್ತವೆ. ನಂತರ ಹೊರಗಿನ ಪದಾರ್ಥವನ್ನು ನಾಭಿ ಅಥವಾ ಕೇಂದ್ರವಾಗಿ (nucleus) ನೆಡುತ್ತಾರೆ. ಇಂಥ ಕೇಂದ್ರವನ್ನು ನೆಡುವ ಕಾರ್ಯ ಮೇ ಯಿಂದ ಅಕ್ಟೋಬರ್‌ವರೆಗೂ ನಡೆಸಬಹುದು.

ಪ್ರಾಣಿಯ ಎರಡೂ ಪಕ್ಕದಲ್ಲಿರುವ ಮ್ಯಾಂಟಲ್‌ಗಳನ್ನು ತೆಗೆದು, ಅದರಲ್ಲಿರುವ ಅಂಟಿನ ದ್ರವ (mucous)ವನ್ನು ಸಮುದ್ರದ ನೀರಿನಲ್ಲಿಯೇ ಶುಚಿಗೊಳಿಸಿ ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ, ಈ ಕತ್ತರಿಸಿದ ಚೂರುಗಳನ್ನು ನಾಭಿಯಾಗಿ ಆರಿಸಲ್ಪಟ್ಟ ವಸ್ತುವಿನ ಸುತ್ತಲೂ ಕಟ್ಟುತ್ತಾರೆ. ಈ ಸುತ್ತುವರಿಸಿದ ಮ್ಯಾಂಟಲ್ ಇನ್ನೊಂದು ಪ್ರಾಣಿಯಲ್ಲಿ ಕಸಿಯಾಗಿ ಮುತ್ತು ಬೆಳೆಯಲು ಸಹಾಯ ಮಾಡುತ್ತದೆ. ಈ ಕಾರ್ಯಕ್ಕೆ ಕೇವಲ ಎರಡು ನಿಮಿಷಗಳು ಸಾಕು. ಎಷ್ಟೋ ವೇಳೆ ಒಂದು

ನಾಭಿಗಿಂತ ಹೆಚ್ಚಾಗಿ ಇನ್ನೊಂದು ಪ್ರಾಣಿಯೊಳಗೆ ಕಸಿಮಾಡುವುದು ಮುತ್ತಾಗುವ ಸಂಭವವನ್ನು ಹೆಚ್ಚಿಸಲೆಂದು ಕೆಲವು ವೇಳೆ ಇಂಥ 20 ನಾಭಿಗಳನ್ನು ಕಸಿಮಾಡ ಬಹುದು. ಹೀಗೆ ಕಸಿಮಾಡಿದ ಪ್ರಾಣಿಯಲ್ಲಿ ಸುಮಾರು ಶೇಕಡ 60 ಭಾಗ ಯಶಸ್ವಿಯಾಗಬಹುದು. ಅವುಗಳಲ್ಲಿ ಶೇಕಡ 5 ಸುಂದರ ಮುತ್ತುಗಳಾಗಿ ಬೆಲೆ ಬಾಳುವಂಥದ್ದಾಗಬಹುದು. ಹೀಗೆ ಪ್ರಾಯೋಗಿಸಿದ ಸಿಂಪಿಗಳನ್ನು ಬೆಳಕು ಕಡಿಮೆ ಬೀಳುವ ಶಾಂತವಾಗಿರುವ ಸಮುದ್ರಭಾಗಗಳಲ್ಲಿ ಅಥವಾ ಇದಕ್ಕೆಂದೇ ಕಟ್ಟಿಸಲಾದ ದೊಡ್ಡ ದೊಡ್ಡ ತೊಟ್ಟಿಗಳಲ್ಲಿ ಇಟ್ಟು ಸಾಕಬೇಕು. ಮುತ್ತಿನ ಕೋಶವು ಉತ್ಪತ್ತಿ ಯಾಗುವುದೇ ಆದರೆ ಮೂರರಿಂದ ಏಳುದಿನಗಳ ಒಳಗೆ ಕಸಿಯಾಗುವ ಗುಣಗಳನ್ನು ತೋರುತ್ತದೆ. ಮೂರು ತಿಂಗಳ ನಂತರ 'ಕ್ಷ' ಕಿರಣಗಳ ಸಹಾಯದಿಂದ ಮುತ್ತು ಬೆಳೆಯುತ್ತಿದೆಯೋ, ಇಲ್ಲವೋ ಎಂದು ಪರೀಕ್ಷಿಸಬಹುದು. ವರ್ಷದಲ್ಲಿ ಆಗಾಗ (ಮೂರು ಅಥವಾ ನಾಲ್ಕು ಸರ್ತಿ) ಈ ಪ್ರಾಯೋಗಿಸಿದ ಸಿಂಪಿಗಳನ್ನು ಶುಚಿ ಗೊಳಿಸುತ್ತಿರಬೇಕು. ಆರು ತಿಂಗಳಿನಿಂದ ಮೂರು ವರ್ಷಗಳ ಅವಧಿಯಲ್ಲಿ ನಾಭಿಯ ಅಳತೆಗೆ ತಕ್ಕಂತೆ ಮುತ್ತು ಸಂಸ್ಕಾರವಾಗುತ್ತದೆ. ನವಂಬರ್‌ನಿಂದ ಫೆಬ್ರುವರಿವರೆಗೆ ಇಂಥ ಸಂಸ್ಕರಿಸಿದ ಮುತ್ತನ್ನು ಹೊರತೆಗೆಯಲು ಒಳ್ಳೆಯ ಕಾಲ. ಚಳಿಗಾಲದಲ್ಲಿ ಮುತ್ತು ಮಾತೃಪದರ ತೆಳುವಾಗಿಯೂ, ಹೆಚ್ಚು ಪದರವುಳ್ಳದ್ದಾಗಿಯೂ ಸ್ರವಿಸ ಲ್ಪಡುವುದರಿಂದ ಹೆಚ್ಚು ಹೊಳಪಿನಿಂದ ಕೂಡಿರುತ್ತದೆ. ಮುತ್ತು ತೆಗೆದಾದ ಮೇಲೆ ಪ್ರಾಣಿಯನ್ನು ಆಹಾರಕ್ಕೂ, ಅದರ ಚಿಪ್ಪನ್ನು ಗೊಬ್ಬರಕ್ಕೂ ಉಪ ಯೋಗಿಸಬಹುದು.

ನೈಜ ಮುತ್ತಿಗೂ, ಸಂಸ್ಕರಿಸಿದ ಮುತ್ತಿಗೂ ಹೊರ ಮೈಯಲ್ಲಿ ಹೆಚ್ಚು ವ್ಯತ್ಯಾಸವಿಲ್ಲದಿದ್ದರೂ ಅದರ ಒಳ ಮೈನಿಂದ ಪರೀಕ್ಷೆ ಮಾಡಬಹುದಾಗಿದೆ. ಮುತ್ತನ್ನು ಕತ್ತರಿಸಿದಾಗ ಅದರ ಮಧ್ಯಬಿಂದುವಿನಿಂದ ಅನೇಕ ಸಮಾನ ಕೇಂದ್ರ ಗಳಿಂದ ಪಸರಿಸಿದ ಪದರಗಳನ್ನು ನೈಜ ಮುತ್ತಿನಲ್ಲಿಯೂ, ಅವು ಸಮಾನಾಂತರವಾಗಿ ಜೋಡಿಸಿರುವುದನ್ನು ಸಂಸ್ಕರಿಸಿದ ಮುತ್ತಿನಲ್ಲಿಯೂ ಕಾಣಬಹುದು. ಈ ರೀತಿಯ ಪರೀಕ್ಷಣದಲ್ಲಿ ಮುತ್ತನ್ನು ಕತ್ತರಿಸಬೇಕಾಗಿರುವುದರಿಂದ ಕತ್ತರಿಸದೆಯೇ ಕ್ಷ–ಕಿರಣಗಳಿಂದ ಪರೀಕ್ಷಿಸಬಹುದು. ಇಲ್ಲವೇ ಫ್ರೆಂಚರು ಕಂಡುಹಿಡಿದಿರುವ ಅಂತರ್ದರ್ಶಕ (Endoscope) ದ ಬಳಕೆಯಿಂದ, ಮುತ್ತಿನ ತೂತಿನ ಮೂಲಕ ಒಂದು ತೀಕ್ಷ್ಣ ಬೆಳಕಿನ ಕಿರಣವನ್ನು ಹಾಯಿಸುವುದರಿಂದ ಪರೀಕ್ಷಿಸಬಹುದು. ಚಿತ್ರದಲ್ಲಿ ತೋರಿಸಿರುವಂತೆ ಹಾಯಿಸಿದ ಬೆಳಕು ಇನ್ನೊಂದು ತೂತಿನಿಂದ ವಾಪಸ್ಸಾದರೆ ನೈಜ ಮುತ್ತೆಂದು ಅದು ಒಳಗೇ ಹೀರಿಕೊಂಡರೆ ಸಂಸ್ಕರಿಸಿದ ಮುತ್ತೆಂದು ಗುರುತಿಸಬಹುದು.

ಮುತ್ತನ್ನು ಆಭರಣಗಳಲ್ಲಿ ಬಳಸುವಾಗ ಅದಕ್ಕೆ ತೂತು ಕೊರೆಯಬೇಕು. ಇದು ಬಹು ನಾಜೂಕಿನ ಕೆಲಸ. ಈ ಕಲೆಯಲ್ಲಿ ಇತರೇ ದೇಶಗಳಿಗಿಂತ ಭಾರತೀಯರು ನಿಪುಣರು. ಇದನ್ನು ಬಹು ನಿಧಾನವಾಗಿ ಮಾಡಬೇಕು. ಇಲ್ಲದಿದ್ದರೆ ಮುರಿದುಹೋಗುವ ಸಂಭವ ಹೆಚ್ಚು. ತೂತು ಕೊರೆಯುವಾಗ ಬರುವ ಪುಡಿಯನ್ನು ಮತ್ತೊಂದು ಮುತ್ತಿಗೆ ಪಾಲಿಷ್ ಮಾಡಲು ಬಳಸುತ್ತಾರೆ.

ಸಂಸ್ಕರಿಸಿದ ಮುತ್ತಿನ ಶೇ. 70 ಭಾಗ ಅಮೇರಿಕಾದಲ್ಲೇ ಮಾರಾಟವಾಗುವುದಾಗಿ ಅಂಕಿ ಅಂಶಗಳಿಂದ ತಿಳಿದು ಬಂದಿದೆ.

ಕೃತಕ ಮುತ್ತು (Artificial Pearls) :– ಇವನ್ನು ಗಾಜಿನ ಅಥವಾ ಪ್ಲಾಸ್ಟಿಕ್ ಮಣಿಯ ಮೇಲೆ ಮುತ್ತಿನ ಹೊಳಪನ್ನು ಸವರಿ ತಯಾರಿಸುತ್ತಾರೆ. ಇಂಥ ಕೃತಕ ಮುತ್ತುಗಳು ಕೆಲವೇ ಪೈಸಾಗಳಿಂದ ಹಿಡಿದು ನೂರಾರು ರೂಪಾಯಿಗಳ ವರೆಗೂ ಬೆಲೆಬಾಳಬಹುದು. ಬೆಲೆಬಾಳುವ ಕೃತಕ ಮುತ್ತುಗಳ ಮೇಲೆ

ಅಂತರ್ದರ್ಶಕದ ಸಹಾಯದಿಂದ ಮುತ್ತನ್ನು ಪರೀಕ್ಷಿಸಿದಾಗ



ನೈಜಮುತ್ತು ಸಂಸ್ಕರಿಸಿದ ಮುತ್ತು

ಸವರುವ ದ್ರವ್ಯವನ್ನು ಫ್ರೆಂಚ್ ಭಾಷೆಯಲ್ಲಿ essence d' orient ಎನ್ನುತ್ತೇವೆ. ಇದನ್ನು ಹೆರಿಂಗ್ ಮೀನಿನ ಶಲ್ಕ (scales) ಗಳಿಂದ ತಯಾರಿಸುತ್ತಾರೆ. ಈ ಮೀನು (Alburnus lucidus) ಬಹಳ ಚಿಕ್ಕದಾಗಿದ್ದು ಯೂರೋಪಿನ ನದಿಗಳಲ್ಲಿ ಸಿಕ್ಕುತ್ತದೆ. ಈ ಕೃತಕ ಮುತ್ತುಗಳ ಮೇಲೆ ಸವರಿದ ಸಿಪ್ಪೆ ಸಡಿಲವಾಗಿದ್ದರೆ ಅದು ಬೇಗ ಸುಲಿದು ಬರೀ ಗಾಜಿನ ಮಣಿಯಾಗುವ ಸಂಭವವೂ ಉಂಟು.

ನೈಜ ಮತ್ತು ಸಂಸ್ಕರಿಸಿದ ಮುತ್ತುಗಳು ಬಹಳ ಬೆಲೆಯಾಗುವುದರಿಂದ, ಇಂಥ ಕೃತಕ ಮುತ್ತುಗಳನ್ನು ಕಡಿಮೆ ಬೆಲೆಗಾಗಿ ತಯಾರಿಸಿದ ಕೀರ್ತಿ ಫ್ರಾನ್ಸಿನ ಮಣಿಗಳ ತಯಾರಿಕನಾದ ಜಾಕ್ವೀನ್‌ಗೆ ಸಲ್ಲುತ್ತದೆ. ಇದರಿಂದ ಜನರಲ್ಲಿ ಮುತ್ತು ಬಳಸುವ ಚಪಲ ಕಡಿಮೆ ಬೆಲೆಯಲ್ಲಿ ತೀರಿಸಿದಂತಾಗುವುದು. ಕೃತಕ ಮುತ್ತನ್ನು ಬಹಳ ಸುಲಭವಾಗಿ ಪರೀಕ್ಷಿಸಬಹುದು. ಒಂದು ತೊಟ್ಟು ಮಸಿ ಅಥವಾ ಶಾಯಿಯನ್ನು ಮುತ್ತಿನ ಮೇಲೆ ಹಾಕಿದಾಗ ಅದು ಒಳಗೆ ಗಾಜಿನ ಮಣಿಯಿರುವುದರಿಂದ ಎರಡಾಗಿ ಕಾಣುತ್ತದೆ.

ನೈಜ ಮುತ್ತು ಬೇಗ ಆಮ್ಲಗಳ ಜೊತೆ ವರ್ತಿಸುವುದರಿಂದ ಇದೊಂದು ಪರೀಕ್ಷಣಕ್ಕೆ ಸಹಾಯಕವಾಗಿದೆ. ಬೆವರಿನಲ್ಲಿರುವ ಆಮ್ಲದೊಡನೆ ಇದರ ವರ್ತನೆ ಸಾಧ್ಯವಾದ್ದರಿಂದ ಮುತ್ತಿನ ಆಭರಣಗಳನ್ನು ಧರಿಸುವವರು ಬಿಚ್ಚಿಡುವಾಗ ತಣ್ಣೀರಿನಲ್ಲಿ ತೊಳೆದು ಅದನ್ನು ಒರೆಸಿ ಮುಚ್ಚಿಡಬೇಕು.

ಮುತ್ತು ಸೌಂದರ್ಯ, ಪರಿಶುದ್ಧತೆ, ಹಾಗೂ ಶ್ರೇಷ್ಠತೆಯ ಕುರುಹಾಗಿದೆ. ಈ ಸಾಗರಾಳದ ಸೌಂದರ್ಯವ ಮಣಿ ಯಾರ ಮನೆಯಲ್ಲಿರುತ್ತದೆಯೋ ಅಲ್ಲಿ ಲಕ್ಷ್ಮಿ ಸದಾ ತಾಂಡವವಾಡುತ್ತಾಳೆಂಬುದು ನಿಜಕ್ಕೂ ಸುಳ್ಳಲ್ಲ.

ಕೆಲವು ಮುತ್ತಿನಾಭರಣಗಳು

ಬಲ ಪಶ್ವ :– ತಲೆಗೆ ಸುತ್ತಿಕೊಳ್ಳುವಂಥ ಮುತ್ತಿನ ಸರ.

ಮುಕ್ತಕಂಟಕ :– ಚಿನ್ನದ ದಾರದಲ್ಲಿ ಸುತ್ತಿಸಿದ ಮುತ್ತಿನ ಸರ.

ದ್ವಿರಾಜಕ :– ಚಿನ್ನದ ಉಂಗುರದಲ್ಲಿ ಮಧ್ಯೆ ಇತರೇ ರತ್ನವಿದ್ದು, ಎರಡು ಪಾರ್ಶ್ವಗಳಲ್ಲಿ ಮುತ್ತಿರುವುದು.

ತ್ರಿರಾಜಕ :– ಚಿನ್ನದ ಉಂಗುರದಲ್ಲಿ ಮಧ್ಯೆ ಮುತ್ತಿದ್ದು ಪಾರ್ಶ್ವಗಳಲ್ಲಿ ಇತರೇ ನವರತ್ನಗಳಿರುವುದು.

ವಜ್ರಗರ್ಭ :—ಕಿವಿಯ ಆಭರಣ, ಮಧ್ಯೆ ವಜ್ರವಿದ್ದು, ಸುತ್ತಲೂ ಮುತ್ತಿರುವುದು. ಮುತ್ತಿನ ಮಧ್ಯ ಭಾಗದಿಂದ ಬೇರೆ ರತ್ನಗಳನ್ನು ತೂಗಿಬಿಡುವುದು.

ಊರುಸುತ್ತಿಕಾ :—ಹೊಕ್ಕಳವರೆಗೂ ಇಳಿಬಿಡುವ ಮುತ್ತಿನ ಕಂಠಹಾರ.

ದೇವಚ್ಛಂದ :—ನೂರು ಎಳೆಯ ಮುತ್ತಿನಹಾರ

32, 24, 20, 12 ಮತ್ತು ಒಂದೇ ಎಳೆಯ ಮುತ್ತಿನಹಾರಗಳಿಗೆ ಗುಚ್ಛ, ಗುರ್ಜ್ಛರ್ಧ, ಗೊಸ್ತಾನ. ಅರ್ಧಹಾರ, ಮಾನವತ್ ಮತ್ತು ಏಕಾವಳಿ ಎಂಬ ಹೆಸರುಗಳಿವೆ.

ನತ್ : ಎರಡು ಮುತ್ತಿರುವ ಮೂಗುಬಟ್ಟು

ಹವಳ

ಕಡಲ ತಾವರೆಗಳಂತೆ (Sea anemone) ಹವಳವು ಸೀಲಂಟರೇಟ ಎಂಬ ಗುಂಪಿನ ಆಂಥೋಜೋವ ಜಾತಿಗೆ ಸೇರಿದ ಪ್ರಾಣಿ. ರೋಮಿನ ಪ್ರಕೃತಿ ಶಾಸ್ತ್ರಜ್ಞನೂ, ಲೇಖಕನೂ ಆದ ಪ್ಲೈನಿ (Pliny) (23-79 AD) ತನ್ನ ಬರಹದಲ್ಲಿ ಮುತ್ತು ರೋಂನಲ್ಲಿ ಶ್ರೇಷ್ಠವೆನಿಸಿದರೆ ಭಾರತದಲ್ಲಿ ಹವಳವನ್ನು ಶ್ರೇಷ್ಠವೆಂದು

ಪರಿಗಣಿಸಲಾಗಿತ್ತೆಂದು ಬರೆದಿದ್ದಾನೆ. ಮಹಿಳೆಯರು ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಹವಳಕ್ಕೆ ಹಾತೊರೆಯುತ್ತಿದ್ದರು. ಈಚೆಗೆ ಹವಳಕ್ಕೆ ಮಿಕ್ಕ ರತ್ನಗಳಷ್ಟು ಸ್ಥಾನವಿಲ್ಲದಿದ್ದರೂ ಅದು ತನ್ನದೇ ಆದ ಶ್ರೇಷ್ಠತೆಯನ್ನು ಸ್ಥಾಪಿಸಿ ಕೊಂಡಿದೆ.

ಅನೇಕ ಆಂಥೋಜೂವಗಳು ಸಾಮೂಹಿಕವಾಗಿ ಜೀವಿಸುತ್ತವೆ. ಇವುಗಳು ರಕ್ಷಣೆ ಮತ್ತು ಭದ್ರತೆಗಾಗಿ ಕ್ಯಾಲ್ಸಿಯಂ ಲವಣದ ಅಸ್ಥಿಪಂಜರಗಳನ್ನು ತಮ್ಮ ಸುತ್ತಲೂ ಸ್ರವಿಸಿಕೊಳ್ಳುತ್ತವೆ. ಇಂಥ ಜೀವಿಗಳಿಗೆ ಪಾಲಿಪ್ ಎನ್ನುತ್ತೇವೆ. ಅವುಗಳ ಸುತ್ತಲಿನ ಅಸ್ಥಿಪಂಜರಕ್ಕೆ ಕೋರಲೈಟ್ ಎಂದು ಹೆಸರು, ಈ ಕೋರಲೈಟ್‌ಗಳು ಸೇರಿ ಹವಳ (Coral) ವಾಗುತ್ತದೆ. ಇವುಗಳಲ್ಲಿ ಅನೇಕ ಜಾತಿಗಳಿವೆ. ಒಂದೊಂದು ತನ್ನದೇ ಆದ ವೈಶಿಷ್ಟ್ಯಪೂರ್ಣ ಹವಳಗಳನ್ನು ಬೆಳೆಸುತ್ತವೆ. ಅವುಗಳಲ್ಲಿನ ಜೀವಿಗಳು ಸತ್ತಾಗ ಹವಳದ ದಿಬ್ಬ (Coral reef) ಗಳಾಗುತ್ತವೆ.

ರಕ್ತರಂಜಿತವಾದ ಬಣ್ಣದಿಂದ ಕೂಡಿದ ಹವಳವೇ ಪ್ರಶಸ್ತ ಹವಳ (Precious Coral). ಇದರ ವೈಜ್ಞಾನಿಕ ಹೆಸರು Corallium rubrum ಅಥವಾ Corallium nobile. ಇದು ಮಾಡ್ರಿಪೋರೇರಿಯ (Madreporaria) ಎಂಬ ವರ್ಗಕ್ಕೆ ಸೇರಿದೆ.

ರಾಸಾಯನಿಕ ಸಂಯೋಜನೆ

ಇದರಲ್ಲಿ ಕ್ಯಾಲ್ಸಿಯಂ ಕಾರ್ಬೋನೇಟ್ ಶೇ. 86 ರಿಂದ 87 ಭಾಗ ಮೆಗ್ನೀಷಿಯಂ ಕಾರ್ಬೋನೇಟ್ ಶೇ. 6½-7 ಭಾಗ, ಜೈವಿಕ ವಸ್ತು ಕೇವಲ ಶೇ. 1 ರಿಂದ 3 ಭಾಗ, ಫೆರಿಕ್ ಆಕ್ಸೈಡ್ ಶೇ. 2 ಭಾಗ, ಕ್ಯಾಲ್ಸಿಯಂ ಸಲ್ಫೇಟ್ ಶೇ. 1½ ಭಾಗ ದಷ್ಟಿದ್ದು, ತೀರ ಸ್ವಲ್ಪ ಪ್ರಮಾಣದಲ್ಲಿ ಫಾಸ್ಫೇಟ್, ಸಿಲಿಕ ಮತ್ತು ನೀರಿನಂಶವಿದೆ. ಇದರ ಗಡಸುತನ ಸುಮಾರು 3½ ಯಷ್ಟಿದ್ದು, ಸಾಪೇಕ್ಷ ಸಾಂದ್ರತೆ 2.6 ರಿಂದ 2.7 ವರೆಗೂ ಇದೆ. ರಾಸಾಯನಿಕ ಸಂಯೋಜನೆಗನುಗುಣವಾಗಿ ಅದರ ಬಣ್ಣದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಆಮ್ಲಗಳ ಜೊತೆ ಇದರಲ್ಲಿರುವ ಕ್ಯಾಲ್ಸಿಯಂ ಕಾರ್ಬೋನೇಟ್ ವರ್ತಿಸುವುದರಿಂದ ಇದೊಂದು ಹವಳದ ನೈಜ ಗುಣವನ್ನು ಪರೀಕ್ಷಿಸುವ ಸಾಧನವಾಗಿದೆ.

ಕೆಲವು ವೇಳೆ ಒಳ್ಳೆಯ ಬೆಲೆಬರುವ ಸಲುವಾಗಿ ಸಾಧಾರಣ ಹವಳಗಳಿಗೆ ಬಣ್ಣವನ್ನು ಹಾಕುತ್ತಾರೆ. ಹೀಗೆ ಹಾಕಿದ ಬಣ್ಣ ಬಹಳಕಾಲ ಉಳಿಯಲಾರದು.

ಈ ಹವಳದ ಸಾಮೂಹಿಕ ಬೆಳವಣಿಗೆ ಸಮುದ್ರ ತಳದಲ್ಲಿ ಸಣ್ಣ ಸಣ್ಣ ಕೊಂಬೆಗಳಿರುವ ಮರಗಳಂತೆ ಕಾಣುತ್ತದೆ. 1864ರಲ್ಲಿ ಫ್ರಾನ್ಸಿನ ಪ್ರಾಣಿಶಾಸ್ತ್ರಜ್ಞ, ಲಕಾಜೆ ಡುತಿಯರ್ಸ್, ಆಫ್ರಿಕಾದ ಬಳಿಯ ಮೆಡಿಟರೇನಿಯನ್ ಪ್ರದೇಶದಲ್ಲಿ ಪ್ರಶಸ್ತ

ಹವಳದ ಬೆಳವಣಿಗೆಯನ್ನು ವಿಶೇಷವಾಗಿ ಪರೀಕ್ಷಿಸಿದ. ಉಷ್ಣಾಂಶ ಹೆಚ್ಚು ಕಡಿಮೆಯಾಗದೆ, ಸಮುದ್ರದ ಉಪ್ಪಿನಾಂಶ ಸರಿಯಾಗಿದ್ದು, ನೀರು ನಿಧಾನವಾಗಿ ಹರಿದು, ಸೂರ್ಯನ ಬೆಳಕು ನೇರವಾಗಿ ಬೀಳದಿದ್ದ ಜಾಗಗಳಲ್ಲಿ ಇವು ಬಹು ಅನುಕೂಲಕರವಾಗಿ ಬೆಳೆಯುವುವು.

ಹವಳದ ಕೃಷಿಯನ್ನು ಟುನಿಸ್, ಅಲ್ಜೀರಿಯಾ, ಸಿಸಿಲಿ, ಕೊರಿಸ್ಕಾ, ಪರ್ಷಿಯನ್ ಕೊಲ್ಲಿ ಮತ್ತು ಕೆಂಪು ಸಮುದ್ರಗಳಲ್ಲಿ ನಡೆಸುತ್ತಾರೆ. ಕೆಂಪು ಸಮುದ್ರಕ್ಕೆ ಈ ಹೆಸರು ಬರಲು ಕಾರಣ ಇದರ ತಳದಲ್ಲಿ ಕೆಂಪು ಹವಳ ಹೇರಳವಾಗಿರುವುದೇ ಆಗಿದೆ. ಸಮುದ್ರ ತೀರದಲ್ಲಿರುವ ಹವಳದ ದಿಣ್ಣೆಗಳೂ ಸಹ ಇಲ್ಲಿ ಕೆಂಪಾಗಿ ಕಾಣುವುದು.

ಹವಳವನ್ನು ಆಭರಣಕ್ಕೇ ಅಲ್ಲದೆ ಅನೇಕ ವಿಧದಲ್ಲಿ ಉಪಯೋಗಿಸುತ್ತಾರೆ. ಹಿಂದೆ ಮಹಿಳೆಯರು ಇದನ್ನು ಯಾವುದೇ ಆಭರಣ ರೂಪದಲ್ಲಿ ಧರಿಸಿ ಸ್ನಾನ ಮಾಡುವುದರಿಂದ ಚರ್ಮವು ಕಾಂತಿಯುತವಾಗುವುದೆಂದು ನಂಬಿದ್ದರು. ಇದನ್ನು ವಿಷಕ್ಕೆ ಪ್ರತಿರೋಧಕ (antidote) ವಾಗಿ ಉಪಯೋಗಿಸುತ್ತಾರೆ. ಮಾಟ, ಮದ್ದು, ವಿಷ, ಅಪಸ್ಮಾರಗಳನ್ನು ಗುಣಪಡಿಸುವಲ್ಲಿ ಮಾಂತ್ರಿಕರು ಹವಳವನ್ನು ಒಂದು ಅದ್ಭುತ ಸಾಧಕದಂತೆ ಉಪಯೋಗಿಸುವುದೂ ಉಂಟು.

ಆಡಳಿತ ವಿಜ್ಞಾನ : ಒಂದು ಸ್ಥೂಲ ಪರಿಚಯ

ಎಸ್. ಆರ್. ಸತ್ಯಪ್ರಸಾದ್

'ಆಡಳಿತ ವಿಜ್ಞಾನ' ಎಂಬ ಶೀರ್ಷಿಕೆಯಲ್ಲಿ 'ವಿಜ್ಞಾನ' ಎಂಬ ಪದವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಮೇಲುನೋಟಕ್ಕೆ ಭೌತಶಾಸ್ತ್ರವೋ ? ರಸಾಯನ ಶಾಸ್ತ್ರವೋ ? ಗಣಿತಶಾಸ್ತ್ರವೋ ? ಸಸ್ಯಶಾಸ್ತ್ರವೋ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದು ಇಲ್ಲಿಗೇ ಮುಗಿಯುವುದಿಲ್ಲ. ಈ ಪಟ್ಟಿಯನ್ನು ಹೀಗೆಯೇ ಬೆಳಸುತ್ತಾ ಹೋಗಬಹುದು. ಆದರೆ ನನ್ನ ಉದ್ದೇಶ ಅದಲ್ಲ. ಮೂಲಭೂತವಾಗಿ ಯಾವುದೇ ವಿಷಯದ ವಿಜ್ಞಾನವೇ ಆಗಲೀ ಅದು ಮುಖ್ಯವಾಗಿ ಸಂಶೋಧನೆಯ ಮೇಲೆ ತೀವ್ರ ಪರಿಣಾಮಕಾರಿಯಾಗಿರುತ್ತದೆ. ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದೇ ಸಂಶೋಧನೆ ಎಂಬ ಅಭಿಪ್ರಾಯವಿದೆ.

ಮೇಲೆ ತಿಳಿಸಿರುವ ಕೆಲವು ವಿಜ್ಞಾನ ಶಾಖೆಗಳಲ್ಲಿ, ಆಯಾ ವಿಷಯಕ್ಕೆ ಸಂಬಂಧಪಟ್ಟ ಜ್ಞಾನವನ್ನು ಪ್ರಯೋಗಗಳಿಂದ ದೃಢೀಕರಿಸುವ ಪದ್ಧತಿ ಸಾಮಾನ್ಯವಾದುದು. ಜೊತೆಗೆ ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಹಾಗೂ ಅದರ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಆಯಾ ಪ್ರಕಾರದ ವಿಜ್ಞಾನದ ಜ್ಞಾನವನ್ನು ಬಳಸಿಕೊಳ್ಳಲಾಗುವುದು. ಈ ದಿಸೆಯಲ್ಲಿ ವಿಜ್ಞಾನದ ಹಲವು ಶಾಖೆಗಳಲ್ಲಿ ಒಂದೆನ್ನಬಹುದಾದ, ಅಷ್ಟು ಪ್ರಚಲಿತವಲ್ಲದ 'ಆಡಳಿತ ವಿಜ್ಞಾನ'ದ ಸ್ಥೂಲ ಪರಿಚಯಕ್ಕೆ ಇಲ್ಲಿ ಪ್ರಯತ್ನಿಸಲಾಗಿದೆ.

ಇಂಗ್ಲೀಷಿನಲ್ಲಿ "Management science" ಎಂಬ ಪದಗಳಿಗೆ ಪರ್ಯಾಯವಾಗಿ ಕನ್ನಡದಲ್ಲಿ 'ಆಡಳಿತ ವಿಜ್ಞಾನ' ಎಂದು ಕರೆಯಬಹುದು. ಹಲವು ತಜ್ಞರು "Management" ಎಂಬ ವಿಷಯವನ್ನು ಕುರಿತು, ಇದು ವಿಜ್ಞಾನವೋ ? ಅಥವಾ ಕಲೆಯೋ ? ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಎಸ್. ಡಬ್ಲ್ಯು. ಟೇಲರ್ ಎಂಬ ಪ್ರತಿಭಾವಂತ ತಜ್ಞ ಈ ವಿಷಯ ಕಲೆಯೂ ಹೌದು ; ಮೇಲಾಗಿ ವಿಜ್ಞಾನವೂ ಹೌದು – ಎಂದು ದೃಷ್ಟಾಂತದ ಸಹಿತ ದೃಢೀಕರಿಸಿದ್ದಾನೆ. ಬೇರೆ ಬೇರೆ ಶಾಖೆಯ ವಿಜ್ಞಾನಗಳು ಹೇಗೆ ಮಾನವ ಜೀವಿಯ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವಲ್ಲಿ ಪ್ರಯೋಜನಕಾರಿಯಾಗಿವೆಯೋ ಹಾಗೆಯೇ 'ಆಡಳಿತ ವಿಜ್ಞಾನ' ಕೂಡ ತನ್ನ ಆಯಂಕಟ್ಟಿನಲ್ಲಿ ಬರುವ ವಿಷಯಗಳಲ್ಲಿ ಉತ್ತರವನ್ನು ದೊರಕಿಸುತ್ತದೆ ; ಜೊತೆಗೆ


ಕ್ಲಿಷ್ಟ ಸಮಸ್ಯೆಗಳಿಗೆ ವ್ಯವಸ್ಥಿತ ಪರಿಹಾರವನ್ನು ಒದಗಿಸುತ್ತದೆ. ಸ್ಥೂಲವಾಗಿ 'ಆಡಳಿತ ವಿಜ್ಞಾನ' ವನ್ನು ಸಿಬ್ಬಂದಿ, ಮಾರುಕಟ್ಟೆ, ಉತ್ಪಾದನೆ, ಹಣಕಾಸು ಹಾಗೂ ಸಂಶೋಧನಾ ವಿಧಾನಗಳಾಗಿ ವಿಭಜಿಸಬಹುದು.

ಇದನ್ನು, ಈ ರೀತಿಯಲ್ಲಿ ವಿಭಾಗೀಕರಿಸಿದರೂ ಸಹ ಒಂದೊಂದು ವಿಭಾಗವೂ ಜೀವಿಯ ಮೇಲೆ ಸ್ವಂತಿಕೆಯ ಗುಣಮಟ್ಟವನ್ನು ಪಡೆದಿರುತ್ತದೆ. ಯಾವುದೇ ಸಂಸ್ಥೆಯನ್ನು ಉದಾಹರಿಸಿ ನೋಡಿದರೆ ಅದರ ಗುಣಮಟ್ಟವನ್ನು ಕಾಪಾಡುವುದು ಈ ಮೇಲೆ ತಿಳಿಸಿದ ವಿಜ್ಞಾನವೆಂದು ಸ್ಪಷ್ಟವಾಗುತ್ತದೆ. ಇವು ಆಯಾ ವಿಷಯಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸಬೇಕಾದ ಮಾರ್ಗವನ್ನು ಸೂಚಿಸುತ್ತವೆ.

ಒಂದು ಸಂಸ್ಥೆ ಯಾವ ಉದ್ದೇಶಕ್ಕಾಗಿ ಸ್ಥಾಪಿತವಾಗಿರುತ್ತದೆಯೋ, ಆ ಉದ್ದೇಶಕ್ಕೆ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕಾದರೆ, ಎಂತಹ ಮತ್ತು ಎಷ್ಟು ಜನರನ್ನು, ಯಾವ ಸಮಯದಲ್ಲಿ, ಹೇಗೆ, ಎಲ್ಲಿ, ಯಾವ ರೀತಿಯಲ್ಲಿ ಒಳಗೊಂಡಿರಬೇಕು ಎಂಬ ಬಗ್ಗೆಯೂ ಹಾಗೂ ಯಾವ ಬಗೆಯ ಕ್ರಮದಿಂದ ಒಳ್ಳೆಯ ಪ್ರತಿಫಲವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂಬುದಕ್ಕೂ ಸಹಾಯಕವಾಗಿರುತ್ತದೆ. ಈ ತರಹದ ವೈಜ್ಞಾನಿಕ ಚಿಂತನೆ ಮತ್ತು ಅದರ ಅಳವಡಿಕೆ ಇದಕ್ಕೆ ಅತ್ಯಾವಶ್ಯಕ.

ಒಂದು ಸಂಸ್ಥೆಯ ಉತ್ಪನ್ನ ಅದರ ಲಾಭ-ನಷ್ಟದ ಮೇಲೆ ಅವಲಂಬಿಸಿರುತ್ತದೆ. ಸಮರ್ಥ ಆಡಳಿತ ಇಲ್ಲದೆ, ಯೋಗ್ಯ ಕೆಲಸಗಾರರಿಲ್ಲದೆ, ಸಮಯಕ್ಕೆ ತಕ್ಕ ನೈಪುಣ್ಯತೆ ಇಲ್ಲದ ಸನ್ನಿವೇಶಗಳಲ್ಲಿ ಯಾವರೀತಿಯ ಗೊಂದಲಮಯ ವಾತಾವರಣ ಸೃಷ್ಟಿಯಾಗುತ್ತದೆ ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಆಗುವ ನಷ್ಟಕಷ್ಟಕ್ಕೆ ಕಾರಣ, ಅವೈಜ್ಞಾನಿಕ ಏರ್ಪಾಟುಗಳು. ಅದಕ್ಕೆ ಬದಲಾಗಿ, ಅರ್ಹ ಅನುಭವಿಯ ನಿರ್ವಹಣೆಯಿಂದ 'ಆಡಳಿತ ಯಂತ್ರ'ವು ಫಲಕಾರಿಯಾಗಿರಲು ಪ್ರಯೋಜನಕಾರಿಯಾಗಿರಲು ಸಹಾಯಕವಾಗಿರುತ್ತದೆ ; ಸಂಸ್ಥೆಯ ದಕ್ಷತೆ ಹೆಚ್ಚುತ್ತದೆ ; ಆಸೆ-ಅಭಿಲಾಷೆಗಳು ಈಡೇರುತ್ತವೆ, ಸಮಾಧಾನ ಹಾಗೂ ಉತ್ತಮ ಸನ್ನಿವೇಶ ಮೂಡುತ್ತದೆ.

ಒಂದು ಸಂಸ್ಥೆಯ ರೇಖಾಪಟ್ಟಿ, ಮತ್ತು ಒಳಗೊಂಡ ಉದ್ಯಮಿಗಳ ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿ, ಸನ್ನಿವೇಶಕ್ಕೆ ತಕ್ಕಂತೆ ತೆಗೆದುಕೊಳ್ಳಬಹುದಾದ ನಿರ್ಧಾರ, ವಿಭಾಗ ವಿಂಗಡಣೆ, ಆಡಳಿತ ವಿಜ್ಞಾನದ ವ್ಯವಸ್ಥೆ–ಇವು ಪ್ರಾಥಮಿಕವಾಗಿ ಉದಹರಿಸಬಹುದಾದ ಅಂಶಗಳಲ್ಲಿ ಕೆಲವು. 'ಆಡಳಿತ ವಿಜ್ಞಾನ'ಕ್ಕೆ ಸಂಬಂಧಪಟ್ಟಂತೆ ಒಂದು* ಚಿತ್ರವನ್ನು ಇಲ್ಲಿ ನಿರೂಪಿಸಲಾಗಿದೆ. ಇದನ್ನು "Organisation chart" ಎಂದು ಹೆಸರಿಸುತ್ತಾರೆ. ಇದು ಒಂದು ಸಂಸ್ಥೆಯ ಹಲವು ಆಯಾಮಗಳ ಕೇಂದ್ರೀಕೃತ (centralised) ಮತ್ತು ವಿಭಜಿತ (decentralised) ಚಟುವಟಿಕೆಗಳನ್ನು ತಿಳಿಯಲು ಸಹಾಯಕವಾಗಿರುತ್ತದೆ.



* ನೆರವು : S. P. Jain ▱ T. N. Chhabra – Office Management – 1979 pp. 38.

ಅಭ್ಯರ್ಥಿಯ ಆಯ್ಕೆ, ಬಡ್ತಿ, ಅಸಮರ್ಪಕ ವ್ಯಕ್ತಿಯ ಕಾರ್ಯಗೌರವಕ್ಕೆ ತಕ್ಕ ಶಿಕ್ಷೆ ಈ ಮೊದಲಾದ ವಿಧಾನಗಳು ಆಡಳಿತ ಉದ್ಯಮದಲ್ಲಿ ಹಲವು ಬಗೆಗಳಾಗಿವೆ. ಇದು ಅಕ್ಷರಶಃ ವೈಜ್ಞಾನಿಕ ಆಡಳಿತದ ವ್ಯಾಪ್ತಿಯಲ್ಲಿ ಸೇರಿರುತ್ತದೆ. ಇನ್ನು ದೃಢೀಕರಿಸಲು ಹಲವು ಮೇಧಾವಿ ಪಂಡಿತರಲ್ಲಿ, ವೈಜ್ಞಾನಿಕ ವಿಶ್ಲೇಷಣೆ ಮಾಡಿದ ಈ ಕೆಳಕಂಡ ಕೆಲವರನ್ನು ಇಲ್ಲಿ ಹೆಸರಿಸಲಾಗಿದೆ. ಇವರು 'ಸಿಬ್ಬಂದಿ ಆಡಳಿತ'. [Personnel Management]ಕ್ಕೆ ಸಂಬಂಧಿಸಿದ ಮುಂದೆ ಕಾಣಿಸಿದ ವಿಚಾರಗಳ ಕುರಿತಾಗಿ ಮಾಡಿರತಕ್ಕಂತಹ ಸಂಶೋಧನೆಗಳು ಮತ್ತು ಪ್ರಯೋಗಗಳ ಸಹಾಯದಿಂದ ಹೊರಬಂದ ಸಿದ್ಧಾಂತಗಳು ಬಹು ಪ್ರಯೋಜನಕಾರಿಯಾಗಿರುವುದರಲ್ಲಿ ಸಂಶಯವಿಲ್ಲ.

1	Douglas Mc. Gregor	:	Theory X & Y –Pertaining to Superior-Suboridinate relationship.
2	Elton Mayo	:	Hawthrone Experiment –Regarding Human Relationship.
3	A. H. Maslow	:	Theory of Motivation –Regarding Hierarchy of needs,
4	Frederick Herzberg	:	Motivation & Maintenance factors in the work situation.

ಇದರಂತೆಯೇ ಇತರ ಆಡಳಿತ ಪ್ರಕಾರಗಳು ಉತ್ಪಾದನೆ, ಹಣಕಾಸು, ಮಾರುಕಟ್ಟೆ, ಕೈಗಾರಿಕೆ ಹಾಗೂ ಇನ್ನಿತರ ಆಡಳಿತಕ್ಕೆ ಸಂಬಂಧಿಸಿದ ವ್ಯವಸ್ಥಿತ ರೀತಿಯ ಹಲವು ಪ್ರಶ್ನೆಗಳಿಗೆ ಉತ್ತರ ದೊರೆಯುವುದು ಸಮರ್ಪಕ ವೈಜ್ಞಾನಿಕ ದೃಷ್ಟಿಯಿಂದಲೇ ಹೊರತು, ಹುಚ್ಚು ಆಡಳಿತ (Mad Administration)ದಿಂದಲ್ಲ.

ಇದುವರೆಗೂ ಮೇಲೆ ತಿಳಿಸಿದ ವಿಷಯಗಳು ವಾಣಿಜ್ಯಶಾಸ್ತ್ರದ ಗುಂಪಿಗೆ ಸೇರುತ್ತವೆಯಾದರೂ ಇತ್ತೀಚಿನ ಮಾರ್ಪಾಡುಗಳಂತೆ ಬಿಡಿಬಿಡಿಯಾಗಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪ್ರತಿಯೊಂದು ಆಯಾಮಗಳೂ ಪಡೆದಿರುತ್ತವೆ. ಇವುಗಳನ್ನು ವೈಜ್ಞಾನಿಕ ವಿಭಾಗಗಳಂತೆ ವಿಭಜಿಸಲಾಗಿದೆ. ಐ.ಐ.ಎಂ., ಐ.ಐ.ಟಿ., ಐ.ಐ.ಎಸ್ಸಿ., ಕೆಲವು ಆಡಳಿತ ಸಂಸ್ಥೆ ಹಾಗೂ ವಿಶ್ವವಿದ್ಯಾಲಯಗಳು ಇದರ ಪ್ರಾಮುಖ್ಯತೆಯನ್ನು ಅರಿತು ಸಮರ್ಪಕವಾದ ಪಠ್ಯಕ್ರಮದೊಂದಿಗೆ ಪದವೀಧರರನ್ನು ಸೃಷ್ಟಿಸುತ್ತಿವೆ. ನಿರ್ದಿಷ್ಟ ಪ್ರೌಢಿಮೆ ಹಾಗೂ ಜವಾಬ್ದಾರಿಯನ್ನು ಈ ವಿಷಯದಲ್ಲಿ ಗಳಿಸಲಾಗುತ್ತಿದೆ. ಈ ಕ್ಷೇತ್ರದ ವಿವಿಧ ಸನ್ನಿವೇಶಗಳಲ್ಲಿ ಶಿಸ್ತು,


ನಿರ್ವಹಣೆಯನ್ನು ಪಡೆಯಲಾಗುತ್ತಿದೆ. ಇದು ಸಿಬ್ಬಂದಿ, ಮಾರುಕಟ್ಟೆ, ಆರ್ಥಿಕ, ಉತ್ಪಾದನೆ ಮುಂತಾದ ಆಡಳಿತ ಕ್ಷೇತ್ರಗಳನ್ನೆಲ್ಲಾ ಒಳಗೊಳ್ಳುತ್ತದೆ.

ಆದ್ದರಿಂದ ಇವು ಒಂದು ರೀತಿಯ ವೈಜ್ಞಾನಿಕ ದೃಷ್ಟಿ ಕೋನದಿಂದಲೇ ಸಾಧಿಸಬಹುದಾದ ಅಂಶಗಳು. ಆದರೆ ಇತರೆ ಬೇರೆ ಯಾವ ವಿಧಾನವೂ ಅಷ್ಟು ಫಲ ಕಾರಿಯಾಗಲು ಕಷ್ಟವಾಗಿರುತ್ತದೆ. ಒಟ್ಟಾರೆ, 'ಆಡಳಿತ ವಿಜ್ಞಾನ'ವೂ ಹಲವು ವೈಜ್ಞಾನಿಕ ವಿಭಾಗಗಳಂತೆಯೇ, ಸಂಶೋಧನೆ ಮತ್ತು ಅಭಿವೃದ್ಧಿ–ಇವುಗಳ ಸಂಗಮದಿಂದ ಹುಟ್ಟಿದ್ದಾಗಿದೆ. ಈ ಲೇಖನದಲ್ಲಿ ಉಲ್ಲೇಖಿಸಿರುವ ಹಲವು 'ಆಡಳಿತ ವಿಜ್ಞಾನ'ದ ವಿಭಾಗಗಳ ಬಗೆಗೆ ಸೂಕ್ತ ಉತ್ತರ ಪಡೆಯಲು ಅನುವಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು. ಇವು ಮಾನವ ಜೀವಿಗೆ ತನ್ನ ಆಡಳಿತ ಕ್ಷೇತ್ರದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕೂಡ ತುಂಬ ಪರಿಣಾಮಕಾರಿಯಾಗಿ ನೆರವಾಗುವುದೆಂದು ಹೇಳಬಹುದು.

ಅಲ್ಲಪ್ಪಶೇಖ ಚೌಟನ ಮೂಡುಬಿದ್ರೆಯ ತಾಮ್ರಶಾಸನ

ವೈ. ಉಮಾನಾಥ್ ಶೆಣೈ

ಈ ಅಪ್ರಕಾಶಿತ ತಾಮ್ರಶಾಸನವು ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯಲ್ಲಿರುವ ಶ್ರೀ ದಿಗಂಬರ ಜೈನಮಠದ ಪಟ್ಟಾಚಾರ್ಯ ಶ್ರೀಮಚ್ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ವಶದಲ್ಲಿತ್ತು. ಈ ಶಾಸನವು 32 ಸೆಂ. ಮೀ ಅಗಲ



ಮತ್ತು 18½ ಸೆಂ.ಮಿ. ಉದ್ದವಿದ್ದು, ಆಯತಾಕಾರದಲ್ಲಿರುವ ತಾಮ್ರಪಟದ ಒಂದು ಬದಿಯಲ್ಲಿ ಪೂರ್ಣವಾಗಿಯೂ, ಇನ್ನೊಂದು ಬದಿಯ ಅರ್ಧ ಭಾಗದಲ್ಲಿಯೂ ಬರೆಯಲಾಗಿದೆ. ಈ ತಾಮ್ರಪಟದ ಕೆಳಬದಿಯಲ್ಲಿ ತೂಗಿಹಾಕಲು ಅನುಕೂಲವಾಗುವಂತಹ ರಂಧ್ರವುಳ್ಳ ಅರ್ಧಚಂದ್ರಾಕಾರದ ರಚನೆಯೊಂದಿದೆ. ಈ ಶಾಸನವನ್ನು ಮಧ್ಯಯುಗದ ಕನ್ನಡ ಭಾಷೆ ಹಾಗೂ ಲಿಪಿಯಲ್ಲಿ ಬರೆಯಲಾಗಿದೆ.

ಈ ಶಾಸನವನ್ನು ಕೆಲವು ಕರಾರು–ಒಪ್ಪಂದಗಳೊಂದಿಗೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತಿಗೆಯಿಂದ ಆಳುತ್ತಿದ್ದ ಚೌಟ (Chauta) ಅರಸನಾಗಿದ್ದ ಅಲ್ಲಪ್ಪ ಶೇಖನು ತನ್ನ ತಮ್ಮನಾಗಿದ್ದ ದೇವರುಶೇಖನ ಅಭಿಪ್ರಾಯದಂತೆ ಕುಮಿರಾಯರಸ (ಕಾಮಿರಾಯನೆಂಬ ಬಂಗ ಅರಸ)ನಿಗೆ ಬರೆದು ನೀಡಿದ್ದನು. ಒಂದು ಸಂದರ್ಭದಲ್ಲಿ ಇವರಿಬ್ಬರೊಳಗೆ ಉದ್ಭವಿಸಿದ್ದ ಸಮಸ್ಯೆಗಳನ್ನು ಪರಸ್ಪರ ವಿಮರ್ಶಿಸಿ ಪರಿಹರಿಸಿಕೊಂಡಿದ್ದರು. ಆದರಂತೆ ತಮ್ಮೊಳಗಿನ ಸಂಬಂಧವು ಉತ್ತಮ ರೀತಿಯಲ್ಲಿ ನಡೆದುಕೊಂಡು ಹೋಗಲು ಅನುಕೂಲವಾದಂತಹ ಕೆಲವು ಶರ್ತಗಳನ್ನು ಈ ತಾಮ್ರಪಟದ ಮೇಲೆ ಶಾಸನರೂಪದಲ್ಲಿ ಬರೆದು ಅವುಗಳನ್ನು ತಾವು ತಪ್ಪದೆ ಅನುಸರಿಸಿಕೊಂಡು ಬರಬೇಕೆಂದು ಒಪ್ಪಿಕೊಂಡಿದ್ದರು.

ಈ ತಾಮ್ರಶಾಸನದ ಕಾಲ ಶಾಲಿವಾಹನ ಶಕ "1389ನೆಯ ಸರ್ವಜಿತು ಸಂವತ್ಸರ ಕಂನ್ಯಾಮಾಸಂ ೨೧ ಆದಿವಾರ"–ಅಂದರೆ ಕ್ರಿ. ಶ. 1467ನೇ ಇಸವಿ ಸೆಪ್ಟಂಬರ್ ತಿಂಗಳ 30ನೇ ತಾರೀಕು, ಆದಿತ್ಯವಾರ.

ಅಲ್ಲಪ್ಪಶೇಖ ಚೌಟ ಮತ್ತು ಕಾಮಿರಾಯರಸ ಬಂಗನ ಕರಾರು ಒಪ್ಪಂದದ
ಈ ಪೂರ್ಣ ಪಾಠವು ಈ ರೀತಿ ಇದೆ :–

1. ಶ್ರೀಮತು ಶಕವರ್ಷ1389ನೆಯ ಸರ್ವಜಿತು ಸಂವತ್ಸರದ ಕಂನ್ಯಾ
ಮಾಸಂ 21 ಆದಿವಾರದಲು ಅಲ್ಲಪ್ಪ
2. ಶೇಖರಾದ ಚಉಟರು ತಂಮ ತಂಮದೇವರು ಶೇಖರರ ವಾಕ್ಯದಲು
ಕುಮಿರಾಯರಸರಿಗೆ ಕೊಟ್ಟಕಟ್ಟಿನೋಲೆಯ ಕ್ರಮವೆ
3. [೦] ತೆಂದಡೆ ತದಾತಿವಿಸಿರುದ್ಧಕ್ಕೆ ನಮಗೂ ನಿಮಗೂ ಯೆಡೆಕೊಟ್ಟಂಥಾ
ಕೆಲ್ಸಗಳೆಲ್ಲವನು ಮಾತನಾಡಿ ಮುಗಿದು ಸಂ
4. ತೈಸಿ ಕೊಂಡೆಲು. ಮುಂದಕ್ಕೆ ನಿಂಮ ಶಾಲು ತವಣೆ ಬೇಂಟೆಗುಂಡಿ ಬಡ್ಡಿ
ವಾಸಿ ಕರೆಮರ ಆದಿ ಆರುವಾರದಲ್ಲಿ
5. ನಾಲು ವೊತ್ತಸಲ್ಲದು ದತ್ತಮಂಗಲ ಅಂಜೆಂಬಳ ಹರಿಯುಕಳ ಉಳ್ಳಾಲ
ಮಂಜೇಶ್ವರ ಉದ್ದಾವರ ಆಕ್ಕುಳ ಆದಿ

6. ಯಾರು ಮುಳೂರು ಮುಂತಾದ ಯೆಲ್ಲಾ ಕೊಲುಗುಳದಲು ಕಾದಸಲ್ಲದು
ಮನುಷ್ಯ ದೋಷದಿಂದ ಯೆದೆಕೊಟ್ಟು ಕಾ-

7. ದಿದಡೆ ಮನೆಯು ಕೀಳಸಲ್ಲದು ಹೊಲೆಯರ ಗುಡಿಮುಂತಾಗಿ ಅಪ್ಪ
ದೊಂದನೂ ಸುಡಸಲ್ಲದು ಮನೆಯು ಹೊ-

8. ಕು (ಕ್ಕು) ಸೂಜಿ³ ಸುಲಿಗೆಕೊಳಸಲ್ಲದು ಗದ್ದೆಯು ಕೊಯ್ಯಸಲ್ಲದು
ಕತ್ರ್ಯಾವುಗಳು ಬುದ್ಧಿವಂತರು ಕೂಡಿ ತಿದ್ದಿಕೊಳು

9. ವ ಅನ್ಯಾಯದಲಿ ಕದರ್ಚ್ಜವ ಮಾಡಿದಂಥಾ ಮನುಷ್ಯರಿಗೆ ತಕ್ಕ
ಆಜ್ಞೆಯ ಮಾಡುವ ಮುಂಜಿನೋಟದವರಿಗು

10. ಮಿತ್ರಟದವರಿಗು ನಿಮಗು ಐದೆತೊಟ್ಟರೆ ಮಧ್ಯಸ್ಥದಲ್ಲಿ ತಿದ್ದಿಕೊಡು
ಹವಲ್ಲದೆ ಅವರಿಗೆ ಸಹಾಯ

11. ವನು ಕೊಟ್ಟು ನಿಂವು ತಾವಿಗೆ ನಾವು ನಡೆಯುಸಲ್ಲದು ಅವರು ತಂವಂ
ಸಹಾಯಕ್ಕೆ ಕಟ್ಟಳೆಯುವರನು ಕೂಡಿಕೊ

12. ಂಡು ಬಂದರಾದದೆ ನೀವು ನಾವು ಯಿತ(ತ್ರ)ಂಡವು ವೊಂದಾಗಿ
ನಿಲುಹವಲ್ಲದೆ ನಾವು ಒಬ್ಬರಿಗೊಬ್ಬರು ಬಿ-

13. ಟ್ಟು ನಿಲುಹ ಸಲ್ಲದು ಮಂಗಲೂರ ರಾಜ್ಯಕ್ಕೆ ಬಂದಂಥಾ ಅರಸುಗಳನು
ಯಿತ್ರಂಡವು ಕೂಡ ನಾವು ನಿಹತಕ

14. ಂಡಲು ಅರಸುಗಳ ಸೇವೆಯನು ಮಾಡುವುದಕ್ಕೆ ತಪ್ಪುವು ಅವರೊಳಗೆ
ಅರಸುಗಳು ನಂಮಿತ್ರಂಡ

15. ವನು ಬಿಂನಪ ಮಾಡಬೇಕೆಂದು ಯೋಚಿಸಿದರೆ ನಾವು ವೋಲಗಿಸುವುದೇ
ವೊಂದಾಗಿ ವೋಲಗಿಸುವೆವು [ಅ]ಲ್ಲ

16. ದಿದ್ದರೆ ಮಿತ್ರಂಡವ ತೆಗೆದು ಕುಳ್ಳಿರುಹವಲ್ಲದೆ ನಂಮೊಳಗೆ ನಾವು
ಭಿಂನ್ನವ ಹುಟ್ಟಿಸ ಸಲ್ಲದು ವೊಳಗೆ ಬಂದು

17. ಮೊಜಿಗೆ ಅಂನ್ಯರಲ್ಲಿ ನಂಮಿತ್ರಂಡದ ಹಿರಿಯರುಗಳು
ಕೊಟ್ಟುಕೊಂಡಂಥಾ ಸಾಲ ಸಂಮಂಧ-

18. ಗಳನು ಅಲ್ಲಿ ಯೆದೆ ಕೊಟ್ಟಂಥಾ ಕೆಲ್ಸವನು ನಂಮ ಮಧ್ಯಸ್ತದಲ್ಲಿ
ಅವರು ಕೇಳಿದರೆ ತಿದ್ದಿ ಕೊಡುಹೆವು

19. ಅವರುಕೇಳದೆಯಿದ್ದರೆ ಅಲ್ಲಿಯೆದೆಕೊಟ (ಟ್ಟ)ಂಥಾ ಲೇಸು
ಹೊಲ್ಲೆಹವನು ಕೂಡಿ ಅನುಭವಿ

20. ಸಿಕೊಂಬದೆ ತಪ್ಪೆವು ಮೊದಲು ನಾವು ಕೊಟ್ಟುಕೊಂಡಂಥಾ ಆದಿ
ಅರುವಾರದಲುನೀ

ಹಿಂಭಾಗ

21. ವು ಹೊಂನ್ನ ಕೊಡಸಲ್ಲದು ಅದರೊಳಗೆ ಕೊಟ್ಟಂಥಾ ಹೊಂನು
ಉಳ(ಳ್ಳ)ಡೆ ಬಳಿಕ ಕೊಟ್ಟವರು ಆ
22. ಹೊಂನ ತೆಗೆದುಕೊಳುವ ಮುಂದಕ್ಕೆ ಆ ಸ್ಥಳದಲೂ ಹೊನ್ನ ಕೊಟ್ಟು
ಕೊಳಸಲ್ಲದು ಯಿಾ ಅರ್ಥಕ್ಕೆ
23. ತಪ್ಪಿದವರು ವುಳ್ಳಡೆ ತಂಮ ತಾಯಿತಂದೆಯನೂ ವಾರಣಾಸಿಯಲೂ
ವಧಿಸಿದ ದೋಷ-
24. ಕ್ಕೆ ಹೋಹೆವು ತಂಮ ಯಿಪ(ಪ್ಪ)ತ್ತವೊಂದು ತಲೆಹಂನಲ್ಲಿವುಳ್ಳ
ಪಿತೃಗಳನೂ ನರಕಕ್ಕೆ ಹಾಕಿದ ದೋ-
25. ಷಕ್ಕೆ ಹೋಹೆವು ಹಂನೆರಡು ಘಟ್ಟದಲ್ಲೂ ಯಿಳಿವ ಸಹಸ್ರ
ಕಪಿಲೆಯನ್ನೂ ಕೊಂದ ದೋಷಕ್ಕೆ ಹೋ-
26. ಹೆವು ವಾರಣಾಸಿಯಲೂ ಸಹಸ್ರ ಕಪಿಲೆಯನೂ ಕೊಂದ ದೋಷಕ್ಕೆ
ಹೋಹೆವು ವಾರಣಾ-
27. ಸಿ ರಾಮೇಶ್ವರ ಪರಿಯಂತರದ ದೇವಸ್ಥಾನಗಳ ಪ್ರತುಮೆಗಳ
ಕಿತ್ತ ದೋಷಕ್ಕೆ ಹೋಹೆವು ಇದಕ್ಕೆ ಸಾ-
28. ಕ್ಷಿ ಪುತ್ತಿಗೆಯ ಸೋಮನಾಥ ಕುತ್ಯಾರ ಸೋಮನಾಥ ಕಳ(ಡೆ)ಯುಶಿ
ವಾಲ್ಯದ ನಾರಸಿಂಹ
29. ಕಾಂತೀಶ್ವರ ಜಿನೇಶ್ವರ ಅಕರ್ತುಗಳ ಸ್ವಹಸ್ತದ ವೊಪ್ಪ
ಶ್ರೀ ಸೋಮನಾಥ

ಸಾರಾಂಶ : ದಕ್ಷಿಣ ಕನ್ನಡ ಜಿಲ್ಲೆಯ ಪುತ್ತಿಗೆಯಿಂದ ಆಳುತ್ತಿದ್ದ ಚೌಟ ವಂಶದ ಅರಸ ಅಲ್ಲಪ್ಪಶೇಖ ಚೌಟನು ಬಂಗಾಡಿಯ ಅರಸ ಕಾಮಿರಾಯ ಬಂಗ (ಕ್ರಿ. ಶ. 1440–1473) ನಿಗೆ, ಅವರೊಳಗೆ ಹಿಂದೊಮ್ಮೆ ನಡೆದಿದ್ದ ಅಹಿತಕರ ಘಟನೆಗಳು ಮುಂದೆ ನಡೆಯಲಾರವೆಂಬ ಆಶ್ವಾಸನೆಯನ್ನು ಕೊಟ್ಟು, ಪರಸ್ಪರ ಒಪ್ಪಂದದ ಶಾಸನವನ್ನು ಬರೆಸಿಕೊಟ್ಟಿರುವನು. ನೇತ್ರಾವತೀ ನದಿಯ ಇಕ್ಕೆಲಗಳಲ್ಲಿದ್ದ ಬಂಗರರಾಜ್ಯದ ಮೇಲೆ ತಾನು ಯಾವುದೇ ರೀತಿಯ ಆಕ್ರಮಣವನ್ನು ಮಾಡಲಾರೆನೆಂದು ಅಲ್ಲಪ್ಪಶೇಖನು ಈ ಶಾಸನದಲ್ಲಿ ಹೇಳಿದ್ದಾನೆ. ಬಂಗರಾಜ್ಯದ ಮೇಲೆ ಯುದ್ಧ ಸಾರುವುದು, ಅಲ್ಲಿಯ ಹೊಲೆಯರ ಗುಡಿಗಳನ್ನು ಸುಡುವುದು, ಸೂರೆ–ಸುಲಿಗೆಗಳನ್ನು ಮಾಡುವುದು, ಪೈರನ್ನು ಕೊಯಿಸುವುದು – ಇತ್ಯಾದಿ ಯಾವುದೇ ಅತಿಕ್ರಮಣಕಾರಿ ಕಾರ್ಯಗಳನ್ನು ತಾನು ಕೈಗೊಳ್ಳೆನೆಂದು ಚೌಟರಸು ಇಲ್ಲಿ ಆಶ್ವಾಸನೆ ಕೊಟ್ಟಿದ್ದಾನೆ. ತಮ್ಮಿಬ್ಬರಲ್ಲಿ ಭಿನ್ನತೆಯು ಬರಕೂಡದೆಂದು

ವಿನಂತಿಸಿಕೊಂಡಿದ್ದಾನೆ. ಮಂಗಳೂರಿನ ಅರಸ (ವಿಜಯನಗರದ ರಾಜ್ಯಪಾಲ)ರಿಗೆ ಇಬ್ಬರೂ ಏಕಪ್ರಕಾರವಾಗಿ ಸಹಕರಿಸಬೇಕೆಂದೂ ಹಾರೈಸಿದ್ದಾನೆ. ತಮ್ಮ ಎರಡು ರಾಜವಂಶಗಳೊಳಗೆ ಇದ್ದ ಸಾಲ, ಆರುವಾರು–ಇತ್ಯಾದಿ ವಿಷಯಗಳನ್ನು ಪರಸ್ಪರ ವಿಚಾರ ವಿನಿಮಯಗಳಿಂದ ಮುಗಿಸಿಕೊಳ್ಳಬಹುದೆಂದೂ, ಇದಕ್ಕೆ ತಪ್ಪಬಾರದೆಂದೂ ಅಲ್ಲಪ್ಪಶೇಖ ಚೌಟನು ಕೇಳಿಕೊಂಡಿದ್ದಾನೆ. ಈ ಒಪ್ಪಂದವನ್ನು ಉಪೇಕ್ಷಿಸಿದಲ್ಲಿ ಹಲವು ರೀತಿಯ ಪಾಪಗಳು ಬರುವುವೆಂದು, ಸಾಮಾನ್ಯವಾಗಿ ಎಲ್ಲಾ ಶಾಸನಗಳಲ್ಲಿ ಇರುವಂತೆ, ಈ ಶಾಸನದಲ್ಲಿಯೂ ಹೇಳಲಾಗಿದೆ.

ಈ ಒಪ್ಪಂದಕ್ಕೆ ಸಾಕ್ಷಿಗಳು ಪುತ್ತಿಗೆಯ ಸೋಮನಾಥ, ಕಿತ್ತ್ಯಾರಿನ ಸೋಮನಾಥ, ಕಡೆಶಿವಾಲ್ಯದ ನಾರಸಿಂಹ ಎಂದಿರುವುದರಿಂದ ಈ ಮೂರೂ ದೇವಾಲಯಗಳು ಈ ಶಾಸನದ ಕಾಲ (ಕ್ರಿ.ಶ. 1467)ಕ್ಕಿಂತ ಮೊದಲೇ ನಿರ್ಮಾಣ ಗೊಂಡಿದ್ದವು ಎಂದು ಹೇಳಬೇಕು. ಬಂಗರ ರಾಜ್ಯದಲ್ಲಿದ್ದ ವಿಭಿನ್ನ ಪ್ರದೇಶಗಳು ಇಲ್ಲಿ ಉಲ್ಲೇಖಿಸಲ್ಪಟ್ಟಿರುವುದರಿಂದ ಅವರ ರಾಜ್ಯದ ವ್ಯಾಪ್ತಿಯನ್ನು ಈ ತಾಮ್ರ ಶಾಸನದಿಂದ ತಿಳಿದುಕೊಳ್ಳಬಹುದು. ಮಂಜೇಶ್ವರದಲ್ಲಿ ವಿಟ್ಲದ ಹೆಗ್ಗಡೆಯರ ಮತ್ತು ಉಳ್ಳಾಲದಲ್ಲಿ ಚೌಟರ ಆಳ್ವಿಕೆಯ ಹಿಡಿತವು ಈ ಕಾಲದಲ್ಲಿ ಸಡಿಲಗೊಂಡಿತ್ತೆಂದು ಈ ಶಾಸನದಿಂದ ತಿಳಿಯಬಹುದು. ಹೊಲೆಯರ ಗುಡಿಗಳ ದಹನ, ಸೂರೆ, ಸುಲಿಗೆ ಇತ್ಯಾದಿಗಳು ಆ ಕಾಲದಲ್ಲಿಯೂ ನಡೆಯುತ್ತಿದ್ದುವು–ಎಂಬುದನ್ನು ಈ ಶಾಸನದಿಂದ ತಿಳಿಯಬಹುದು. ಅಂದಿನ ರಾಜಕೀಯ ಮತ್ತು ವಿನಿಯೋಗ ನೀತಿಗಳ ಮೇಲೆ ಈ ತಾಮ್ರ ಶಾಸನವು ಆದರಣೀಯವಾದ ಬೆಳಕನ್ನು ಚೆಲ್ಲುತ್ತದೆ.

'ಲೀಲಾವತಿ'ಯ ಒಂದು ಪದ್ಯದ ಪಾಠ ವಿಚಾರ*

ನೇಮಿಚಂದ್ರನ 'ಲೀಲಾವತಿ'ಯ ತ್ರಿಪದಿಯೊಂದರ ಪಾಠ ಹೀಗಿದೆ :

ಸೋವಾಗಕೆಜ಼ಿಯಳಿಂದೀವರಲೋಚನೆ
ದೇವಸ್ತ್ರೀ ಚತುರ ಪರಿವೃತಪಾದೆ ಪ
ದ್ಮಾವತಿ ವರದೆಯೆಮಗಕ್ಕೆ ॥ (೧೦-೩)

ಇದನ್ನು ಡಿ. ಎಲ್. ನರಸಿಂಹಾಚಾರ್ಯರು ಹೀಗೆ ಪರಿಷ್ಕರಿಸಿದ್ದಾರೆ[1] :

ಸೌವಾಗ್ಯ ಕೆಜ಼ಿಯಳಿಂದೀವರಲಾಂಛನೆ
ದೇವಸ್ತ್ರೀ ಚಿಕುರ ಪರಿವೃತಪಾದೆ ಪ
ದ್ಮಾವತಿ ವರದೆಯೆಮಗಕ್ಕೆ ॥

ಇಲ್ಲಿ 'ಲೋಚನೆ', 'ಲಾಂಛನೆ' ಎಂಬ ಎರಡು ಪಾಠಗಳಲ್ಲಿ ಯಾವುದು ಕವಿಪಾಠವೆಂದು ಹೇಳುವುದು ಕಷ್ಟ. ''ಚತುರ'' ಎಂಬುದರ ಬದಲು ''ಚಿಕುರ''ದ ಸ್ವೀಕಾರ ಸರಿ. ಆದರೆ ''ಸೋವಾಗ''ವನ್ನು ''ಸೌವಾಗ್ಯ'' ಎಂದು ತಿದ್ದಿರುವುದು ಸಮರ್ಪಕವೆ ?

''ಸೋವಾಗ'' ಎಂಬಲ್ಲಿ ಪಾಠ ಕೆಟ್ಟಿದೆಯೆಂದು ಹೇಳಿ, ''ಸೌವಾಗ್ಯ'' ಎಂಬುದು ''ಸೌಭಾಗ್ಯ''ದ ತದ್ಭವವೆಂದು ತಿಳಿಸಿ, ಪಂಪನಲ್ಲಿ ''ಸೌವಾಗ್ಯ'' ಪ್ರಯುಕ್ತವಾಗಿರುವುದನ್ನು ಉದ್ಧರಿಸಿ, ನೇಮಿಚಂದ್ರನ ಪದ್ಯದಲ್ಲಿ ''ಸೌವಾಗ್ಯ'' ಶಬ್ದವಿರಬೇಕೆಂದೂ ಅದು ಲಿಪಿಕಾರ ಸ್ಖಾಲಿತ್ಯದಿಂದ ''ಸೋವಾಗ''ವಾಗಿದೆಯೆಂದೂ ನಿರ್ಧರಿಸುತ್ತಾರೆ ಡಿ.ಎಲ್.ಎನ್.[2]

ಕನ್ನಡದಲ್ಲಿ ''ಸೌಭಾಗ್ಯ''ದ ತದ್ಭವ ''ಸೌವಾಗ್ಯ''ವಾಗುತ್ತದೆ, ದಿಟ. ಆದರೆ ''ಸೋವಾಗ'' ಎಂಬುದು ''ಸೌಭಾಗ್ಯ''ದ ಅರ್ಧಮಾಗಧಿ-ಪ್ರಾಕೃತ ರೂಪವೆಂಬುದನ್ನು ಇಲ್ಲಿ ಗಮನಿಸಬೇಕು.[3] ಅದನ್ನು ನೇಮಿಚಂದ್ರ ತನ್ನ ಪದ್ಯದಲ್ಲಿ ಪ್ರಯೋಗಿಸಿದ್ದಾನೆ. ಅವನು ಪ್ರಾಕೃತದಲ್ಲಿ ಬಲ್ಲಿದನೆಂಬುದು ಪ್ರಸಿದ್ಧವಾದ ಸಂಗತಿ.

---

* ಹಿಂದಿನ ಸಂಚಿಕೆಯಲ್ಲಿ ಹಲವು ತಪ್ಪುಗಳೊಡನೆ ಅಚ್ಚಾದ್ದರಿಂದ, ಲೇಖಕರ ಕ್ಷಮೆ ಕೋರಿ, ಅದನ್ನು ತಿದ್ದಿ ಪ್ರಕಟಿಸಲಾಗಿದೆ. (ಸಂ.)

1. 'ಕನ್ನಡ ಗ್ರಂಥಸಂಪಾದನೆ', ಪು. ೧೯೩.
2. ಅದೇ, ಪು. ೧೯೪-೫.
3. 'ಯೌವನ', ಅರ್ಧಮಾಗಧಿಯಲ್ಲಿ 'ಜೋವ್ವನ'ವಾಗುತ್ತದೆ. ನೋಡಿ : ಬಿ. ಪಿ. ಬಡಿಗೇರ: 'ಪ್ರಾಕೃತ ಭಾಷೆಗಳು', ಪು. ೬೬.

ಪ್ರಕೃತ ಪದ್ಯದಲ್ಲಿ ''ಸೋಂವಾಗ''ಕ್ಕೆ ಪಾಠಾಂತರಗಳೇ ಇಲ್ಲವೆಂಬುದನ್ನೂ ಅದೊಂದು ಕಠಿಣ ಪಾಠವೆಂಬುದನ್ನೂ ಲಕ್ಷಿಸಬೇಕು. ಆದ್ದರಿಂದ, ಇಲ್ಲಿ ಪಾಠ ಕೆಟ್ಟಿರಲಾರದು ; ಬಹುಶಃ 'ಸೋಂವಾಗ' ವೇ ಕವಿಪಾಠ.

ಸಿ. ಪಿ. ಕೆ.

ಕುಮಾರವ್ಯಾಸ ಭಾರತದ ಒಂದು ಪದ್ಯದ ಪಾಠ ವಿಚಾರ

ಡಿ. ಎಲ್. ನರಸಿಂಹಾಚಾರ್ಯರು ತಮ್ಮ 'ಕನ್ನಡ ಗ್ರಂಥ ಸಂಪಾದನೆ'ಯಲ್ಲಿ[1] ಪಾಠ ಗ್ರಂಥಿಗೆ ಒಂದು ಉದಾಹರಣೆಯಾಗಿ ಕುಮಾರವ್ಯಾಸನ ಈ ಪದ್ಯವನ್ನು–ಕೀಚಕನ ವಧೆಗೆ ಸಂಬಂಧಿಸಿದ್ದು–ಕೊಟ್ಟಿದ್ದಾರೆ:

ಮುಱುಕಿಸುವ ಪವನಜನ ನೆತ್ತಿಯ
ನೆಱಗಿದನು ಬಳಿಕವನ ಹೊಯ್ಲಿನ
ಬಿಱುಸಿನಯ್ಯನೊ ಸಿಡಿಲ ಶಿಷ್ಯನೊ ವಜ್ರಕರಹತಿಯೋ
ಕಱಗಿದನು ಮಯಣಾದಿಮಗಳಿಂ
ದೆಱೆದ ಕಾಹಿನ ಕಱುವೆನಲು ಕು
ಕ್ಕುರಿಸಲಸುರನನಿಕ್ಕಿದನು ಚಾಪಳ ಚಪೇಟದಲಿ ॥ (೬.೧.೩೪)

ಇಲ್ಲಿ ಸಮಸ್ಯಾತ್ಮಕವಾಗಿರತಕ್ಕದ್ದು 'ಕಱಗಿದನು ಮಯಣಾದಿಮಗಳಿಂದೆಱೆದ ಕಾಹಿನ ಕಱುವೆನಲು' ಎಂಬ ಭಾಗ. ಇದಕ್ಕಿರುವ ವಿವಿಧ ಪಾಠಾಂತರಗಳನ್ನು ಡಿ. ಎಲ್. ಎನ್. ಉಲ್ಲೇಖಿಸಿದ್ದಾರೆ.[2] ಅವುಗಳನ್ನೆಲ್ಲ ಇಲ್ಲಿ ಪುನರುದ್ಧರಿಸದೆ, ಅವು ಎರಡು ಗುಂಪುಗಳಾಗುತ್ತವೆ ಎಂದಷ್ಟೆ ಸೂಚಿಸಬಹುದು: 'ಮಯಣ' ಶಬ್ದದ ಪ್ರಸಕ್ತಿಯುಳ್ಳ ಪಾಠಾಂತರಗಳು, ಮತ್ತು 'ಮಯಣಾ(ಣ)ಮು' ಶಬ್ದದ ಪ್ರಸಕ್ತಿಯುಳ್ಳ ಪಾಠಾಂತರಗಳು. ಹೆಚ್ಚು ಪ್ರತಿಗಳಲ್ಲಿ 'ಮಯಣಾ(ಣ)ಮು' ಶಬ್ದವೇ ಇದೆ.[3]

ಈ ಬಗ್ಗೆ ಡಿ. ಎಲ್. ಎನ್. ಅವರ ಹೇಳಿಕೆಯಿದು: "ಇಷ್ಟು ಪಾಠ ಭೇದಗಳಿದ್ದರೂ ಕವಿಯ ಪಾಠವೇನಿದ್ದಿರಬಹುದೆಂಬುದನ್ನು ಊಹಿಸುವುದು ಕಷ್ಟವಾಗಿದೆ. ಕರಗಿದ ಲೋಹವನ್ನು ಅಚ್ಚಿನಲ್ಲಿ ಎರಕ ಹೊಯ್ಯುವ ಒಂದು ಚಿತ್ರವಿರುವಂತಿದೆ ಇಲ್ಲಿ. ಮೇಣದಿಂದ ಮಾಡಿದ ಅಚ್ಚಿಗೆ ಕಾಸಿದ ಲೋಹರಸವನ್ನು

1 ಪು. 202.

2 ಅದೇ, ಪು. 203.

3 ಡಿ. ಎಲ್. ಎನ್. ಅವರು ಅಲ್ಲೆ ಉಲ್ಲೇಖಿಸಿರುವ ಕುಮಾರವ್ಯಾಸನ ಇನ್ನೊಂದು ಪದ್ಯದ (5.8.13) ಭಾಗದ ಪಾಠಾಂತರಗಳ ವಿಷಯವೂ ಹೀಗೆಯೆ.

ಹೊಯಿದರೆ ಮೇಣ ಕರಗಿಬಿಡುತ್ತದೆ, ಪುತ್ತಳಿಯು ನಿರ್ಮಾಣವಾಗುವುದಿಲ್ಲ. ಭೀಮ ಕಿಮ್ಮೀರನನ್ನು ಕೊಲ್ಲುವ ಹಿಂದಿನ ಪದ್ಯದಲ್ಲಿರುವ 'ಕರಗಿದ' ಎಂಬ ಪಾಠ ಸರಿಯಿರಲಾರದು; ಅಲ್ಲಿ ಱಕಾರ ಪ್ರಾಸವಿರಬೇಕು; ಆದ್ದರಿಂದ 'ಎಱಗಿದನು' ಎಂದು ಇರಬಹುದು. ಇಷ್ಟು ಹೊರತಾಗಿ ಬೇರೆ ಯಾವುದನ್ನೂ ಹೇಳುವಂತಿಲ್ಲ, ಈ ಪದ್ಯದ ಪ್ರಸಕ್ತ ಪಾಠದ ವಿಷಯವಾಗಿ. ಆದ್ದರಿಂದ ಇದು ಒಂದು ಒಗಟಾಗಿ ಪರಿಣಮಿಸಿದೆ.[4]

ಕುಮಾರವ್ಯಾಸ ಭಾರತದ ಅರಣ್ಯಪರ್ವದ ನನ್ನ ಸಂಪಾದನದಲ್ಲಿ ಪ್ರಕೃತ ಪದ್ಯದ ಉತ್ತರಾರ್ಧದ ಪಾಠವನ್ನು ಹೀಗೆ ಪರಿಷ್ಕರಿಸಿದ್ದೇನೆ:[5]

ಎಱಗಿದನು ಮಯಣಾಮದಿವಿಗುಳಿ
ನೆಱಕ ಕಾಹಿನ ಕರುವೆನಲು ಕು
ಕ್ಕುರಿಸಲಸುರನನಿಕ್ಕಿದನು ಚಾಪಳ ಚಪೇಟದಲಿ ॥

ಇಲ್ಲಿನ ಪಾಠ ಕವಿಪಾಠಕ್ಕೆ ಹತ್ತಿರವಿರುವಂತೆ ತೋರುತ್ತದೆ. ಇಲ್ಲಿ 'ಮಯಣ'ದ ಪ್ರಸಕ್ತಿಯಿಲ್ಲ; 'ಮಯಣಾಮ', 'ತಿವಿಗುಳು' ಎಂಬೆರಡು ಶಬ್ದಗಳು ಸ್ಪಷ್ಟವಾಗಿವೆ.[6]

'ಮಯಣಾಮ' ಎಂದರೇನು ? ಕಿಟ್ಟೆಲ್ ಅವರು 'A certain pace of a horse' ಎಂದು ಅರ್ಥ ಕೊಟ್ಟು, ಕುಮಾರವ್ಯಾಸ ಭಾರತದ ಒಂದು ಪದ್ಯವನ್ನೇ (೧.೭.೨) ಪ್ರಯೋಗವನ್ನಾಗಿ ಸೂಚಿಸಿದ್ದಾರೆ.[7] ಆ ಪದ್ಯದಲ್ಲಿ 'ಮಯಣಾಮ'ಕ್ಕೆ 'ಬಿನ್ನಾಣ'ದ ಹೊರತು ಬೇರೆ ಪಾಠ ಭೇದವಿಲ್ಲ.[8]

ಆದ್ದರಿಂದ, ಕಿಮ್ಮೀರವಧೆಗೆ ಸಂಬಂಧಿಸಿದ ಮೇಲಿನ ಪದ್ಯದಲ್ಲಿರಬೇಕಾದದ್ದು 'ಮಯಣಾಮ' ಶಬ್ದವೇ ಎಂದು ನಿರ್ಧರಿಸಬಹುದು. ಆದರೂ ಪದ್ಯದ ಅರ್ಥ ಸ್ವಲ್ಪ ಸಂದಿಗ್ಧವಾಗಿಯೆ ಉಳಿಯುತ್ತದೆ. ಅಚ್ಚಿನಲ್ಲಿ ಎರಕಹೊಯ್ದ ಮೂರ್ತಿ ಗಟ್ಟಿಯಾಗಿ ರೂಪುಗೊಳ್ಳುವುದಕ್ಕೆ ಮುನ್ನವೆ ಕುದುರೆಯು ಕಾಲ್ತುಳಿತಕ್ಕೆ ಸಿಕ್ಕಿ ಅಸ್ತವ್ಯಸ್ತ

---

4 ಅದೇ, ಪು. 204.

5 'ಕುಮಾರವ್ಯಾಸ ವಿರಚಿತ ಅರಣ್ಯಪರ್ವ' (ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆ), ಪು. 10.

6 'ಎಱಗಿದನು ಮಯಣಾಮ ದಿವಿಗುಳಿನೆಱಕ' ಎಂಬುದು 'ಗ' ಪ್ರತಿಯ ಪಾಠ; ಇದನ್ನು ಡಿ. ಎಲ್. ಎನ್. ಗುರುತಿಸಿಲ್ಲ. (ಉಳಿದೆಲ್ಲ ಪ್ರತಿಗಳಲ್ಲೂ '...ದಿವಿಗುಳಿ'ನ ಪಾಠ ಕೆಟ್ಟಿದೆ.)

7 'Kannada-English Dictionary', P. 1212.

8 ನೋಡಿ: ಕುಮಾರವ್ಯಾಸ ವಿರಚಿತ ಆದಿಪರ್ವ' (ಕ. ಅ. ಸಂಸ್ಥೆಯ ಪ್ರಕಟಣೆ). ಸಂ: ಕೆ. ಆರ್. ಶೇಷಗಿರಿ, ಪು. 64,

ವಾಗುವಂತೆ, ಕಿಮ್ಮೀರನ ದೇಹ ಭೀಮನ ಕೈಯಲ್ಲಿ ನಜ್ಜುಗಂಜ್ಜಾಯಿತೆಂದು ಕವಿಯ ಅಭಿಪ್ರಾಯವೇ ?[9]

'ಮಯಣಾಮ ದಿವಿಗುಳಿನೆಜಕ' ಎಂಬ ಪಾಠದ ಸ್ವೀಕಾರದಿಂದ, ಪಾಠಗ್ರಂಥಿಯನ್ನು ಬಿಡಿಸಲಾಗದಿದ್ದರೂ ಸಡಿಲಿಸಿದಂತಾಗುತ್ತದೆ ಎನ್ನಬಹುದಷ್ಟೆ.

— ಸಿ. ಪಿ. ಕೆ.

ಕರಸ್ಥಲದ ನಾಗಲಿಂಗನ 'ಶಿವಜ್ಞಾನಾಂಜನ ರತ್ನಮಾಲೆ*'– ಒಂದು ಕಿರು ಪರಿಚಯ

ಕರಸ್ಥಲದ ನಾಗಲಿಂಗ 'ಕಲ್ಯಾಣ ಮಂಡಲದ ಶಿವಭಕ್ತರ ಸಂತಾನ' ವೆನಿಸಿದ ನೂರೊಂದು ವಿರಕ್ತರಲ್ಲಿ ಅಗ್ರಗಣ್ಯ. ಈತನ ಗುರು ಕರಸ್ಥಲದ ವೀರಣ್ಣೊಡೆಯ ವಿಜಯನಗರದ 'ಗಜಬೇಂಟೆಕಾರ' ಇಮ್ಮಡಿ ಪ್ರೌಢದೇವರಾಯ (1419-1447) ನ ಸಮಕಾಲೀನ. ನಾಗಲಿಂಗನ ಕಾಲ ಕ್ರಿ.ಶ. 1430. ಈತ ಉನ್ನತಸ್ಥರದ ಶಿವಾನುಭಾವಿ. ನಾಗಲಿಂಗಯ್ಯ ಕನ್ನಡದಲ್ಲಿ ಕಂದ, ತ್ರಿವಿಧಿ, ಷಟ್ಪದಿ, ಚೌಪದಿ, ವೃತ್ತ, ಸ್ವರವಚನ ಹಾಗು ತಾರಾವಳಿ ಮೊದಲಾದ ಛಂದೋಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾನೆ. ಇತ್ತೀಚೆಗೆ ನಾಗಲಿಂಗನ 'ಶಿವಜ್ಞಾನಾಂಜನ ರತ್ನಮಾಲೆ' ಎಂಬ ಕೃತಿ ಉಪಲಬ್ಧವಾಗಿದೆ. ಕೃತಿ 177 ತ್ರಿವಿಧಿಗಳಲ್ಲಿದ್ದು ವಿರಕ್ತರ ನಡೆ-ನುಡಿ ಆಚಾರ-ವಿಚಾರಗಳಿಗೆ ಸಂಬಂಧಿಸಿದೆ. ಹಸ್ತ ಪ್ರತಿಯ ಆದಿ-ಅಂತ್ಯಗಳಲ್ಲಿ 'ಕರಸ್ಥಲದ ನಾಗಿದೇವರು ನಿರೂಪಿಸಿದ' ಎಂಬ ಉಲ್ಲೇಖವಿದೆ.

ಕೃತಿಯ ಆದಿಯ ತ್ರಿವಿಧಿಗಳಿವು—

ಮರ್ತ್ಯದೊಳಗಿರುತಿರ್ಪ ಕರ್ತ ಶರಣರ ಮುಂದೆ
ಸತ್ಯ ಭಾಷೆಗಳ ನುಡಿದು ತ್ರಿಮಲಗಳ
ಕಟ್ಟಿದ ಜಡರ ನಿರ್ದೇಶ (೧)

ಸರ್ವ ಭೋಗವ ಬಿಟ್ಟು ತಲೆಯ ಬೋಳಿಸಿಕೊಂಡು
ಒರ್ವನೆಯಾಗಿ ಚರಿಸುವ ವಿರಕ್ತನು
ಅವರಿವರ ಹಳಿದು ಹೊಗಳಲೇಕೆ (೨)

---

9 ಕೀಚಕವಧೆಯ ಸಂದರ್ಭದಲ್ಲಿ ಕುಮಾರವ್ಯಾಸ ಕೊಡುವ 'ಕಾಲನ ಕೋಣ ತುಳಿದವೊಲು' (4.3.92) ಎಂಬ ಹೋಲಿಕೆಯನ್ನಿಲ್ಲಿ ನೆನೆಯಬಹುದು.

* ತೋಂಟದಾರ್ಯ ಮಠ, ಗದಗಿನಲ್ಲಿದೆ.

ಆಶೆ ರೋಷವ ಬಿಟ್ಟು ವಿಾಸೆಯಂ ಬೋಳಿಸಿಕೊಂಡು
ಸಾಸ್ವತನಾಗಿ ಚರಿಸದೆ ಮನುಜರ
ಬೋಸರಿಸದವನೆ ನಿಜಸುಖಿ (೩)

ಅಂತ್ಯದ ಪದ್ಯಗಳಿವು—

[ಬೆಳಗಂ] ಬೆಳಗನೆ ಕೂಡಿ ತಿಳಿವರೆರಡಿಲ್ಲದ
ಪರಿಯಂತೆ ಶರಣ ಘನಲಿಂಗದೊಳು ಬೆರೆಸಿ
ಉಲುಹಡಗಿಹನು ಶಿವ ಶಿವ (೧೭೫)

ನುಡಿದ ಭಾಷೆಗೆ ಕಿಂಚಿತ್ತೆಡಹು ಬಂದಡೆ ತನ್ನ
ಒಡಲ ಕಡಿಖಂಡವನುಮಾಡಿ ಬೀಸಾಡುವ
ಕಡು ಚಲ ವಿರಕ್ತ ನಿಜಮುಕ್ತ (೧೭೬)

ಇಂತು ನಿಜಗುರು ಶಾಂತಮಲ್ಲಯ್ಯ ಕರದೊಳು
ಸಂತತ ಬೆಳಗುತಿರಲಲ್ಲಿ ಬೆರಸಿ ನಿ–
ಶ್ಚಿ[ಂ]ತದಿ ಚರಿಸಲವ ಮುಕ್ತ (೧೭೭)

ಕೃತಿಯ ನಡುವಣ ಕೆಲವು ತ್ರಿವಿಧಿಗಳು—

ಗಿರಿ ಗುಹೆ ತರುಗಳಲಿ ಚರಿಸಲೊಲ್ಲದೆ ಮರಳಿ
ನರರುಗಳ ಮನೆಯ ಹೊಕ್ಕುಂಬ ಮೂಳಂಗೆ
ವಿರತಿಯ ಮಾತೇಕೆ ಶಿ[ವ ಶಿವ] (೧೪)

ಶೂನ್ಯಲಿಂಗವ ಪಿಡಿದು ಮೋನದಲಿ ಚರಿಸದೆ
ಹೀನ ಜಡರುಗಳ ನಿಜಭಕ್ತರೆಂಬ ಅ-
ಜ್ಞಾನಿಗೇಕಯ್ಯ ಅನುಭಾವ (೧೯)

ಪರಮಲಿಂಗವ ಕರದಿ ಧರಿಸಿ ಮನುಜರುಗಳ
ಮನೆ ಮನೆಯ ಹೊಕ್ಕು ತಿರಿದುಂಬ ಮೂಳರಿಗೆ
ಅನುಭಾವವೇಕೆ ಶಿವ ಶಿವ (೨೦)

ಅಜೀವೃಳ್ಳವರುಸುಂದು ಕರದಿ ಲಿಂಗವ ಧರಿಸಿ
ಬರಿಯ ಮೈಯೊಳಗೆ ತಿರುಗಾಡುತಿಪ್ಪವಗೆ
ತರುಣಿಯರ ಸಂಗವದು ಭಂಗ (೪೦)

ಕತ್ತೆ ಕುದುರೆಗಳಂತೆ ಬತ್ತಲೆ ತಲೆಬೋಳು ವಿ-
ರಕ್ತರೆಂದೆನಿಸಿ ಮರಳಿ ಸತಿಯರ ಸಂಗದಿ
ಸಿಕ್ಕಿ ಬಿದ್ದವನೆ ಭವಕರ್ಮಿ (೪೨)

ಹಸ್ತದ ಲಿಂಗದಲಿ ಚಿತ್ತವಾನೊಂದಿಸಿ
ಮತ್ತೆ ಎರಡಳಿದು ಚರಿಸಾಡುತಿಪ್ಪ ವಿ-
ರಕ್ತನೆ ಮುಕ್ತ ಶಿವ ಶಿವ (೧೬೨)

ನಿತ್ಯ ನಿಜ ಬೆಳಗಿನಲಿ ಬೆರಸಿದ ವಿರಕ್ತಂಗೆ
ಪರಿಭವವಿಲ್ಲ ಊರಡವಿಯೆಂದೆಂಬ ವಿ-
ವರ ಮುನ್ನಿಲ್ಲ ಶಿವ ಶಿವ (೧೬೪)

[ಇ]ರುಳು ಹಗಲೆಂದೆಂಬ ಕಳವಳಂಗಳ ಕೆಡಿಸಿ
ಪರಮ ಲಿಂಗದಲಿ ಬೆರಸಿದ ನಿರ್ವಾಣಿ ತಾ
ನಿರುಪಮನಕ್ಕು ಶಿವ ಶಿವ (೧೬೦)

ಎಸ್. ಶಿವಣ್ಣ

ಅವಧೂತ ಶಿವಯೋಗಿ–ಕಾಲ ವಿಚಾರ

ಅವಧೂತ ಶಿವಯೋಗಿ ಹಲವಾರು ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ 'ಕೈವಲ್ಯಾನ್ವಯಸಾರ' ಒಂದಾಗಿದೆ. ಈತನ ಕಾಲವನ್ನು ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು 'ಕರ್ಣಾಟಕ ಕವಿಚರಿತೆ', ತೃತೀಯ ಸಂಪುಟ (ಬೆಂಗಳೂರು, 1974) ಪುಟ 91 ರಲ್ಲಿ 'ಇವನ ಕಾಲವು ಸುಮಾರು 1750 ಆಗಿರಬಹುದೆಂದು ತೋರುತ್ತದೆ' ಎಂದಿದ್ದಾರೆ.

'ಕೈವಲ್ಯಾನ್ವಯ ಸಾರ'ಕ್ಕೆ 'ಆನಂದ ಕಲ್ಲೋಲ' ವೆಂಬ ಮತ್ತೊಂದು ಹೆಸರಿದೆ. ಈ ಕೃತಿಯ ಪ್ರತಿಯೊಂದರ ಕಡೆಯಲ್ಲಿ 'ಶಕ 1613ನೇ ಪ್ರವರ್ತಮಾನ ಪ್ರಜಾಪತಿ [ಪ್ರಜೋತ್ಪತ್ತಿ ?] ನಾಮಸಂವತ್ಸರ ವೈಶಾಖದಲ್ಲಿ ಕಾಶೀಪತಿ ಗುರು ಸಾಥನು ಕಾಪೀ ಮಾಡಿದ ಪ್ರತಿ ಸಮಾಪ್ತ' ಎಂದಿದೆ. (Descriptive Catalogue of Manuscripts in the Kannada Research Institute, Dharwar, Vol.VIII, 1968, P. 49). ಇದರಿಂದ 'ಆನಂದ ಕಲ್ಲೋಲ'ದ ಪ್ರತಿಯೊಂದರ ಕಾಲ ಕ್ರಿ.ಶ. 1691–92 ಆಗುತ್ತದೆ. ಆದ್ದರಿಂದ ಅವಧೂತ ಶಿವಯೋಗಿಯ ಕಾಲವು ಕ್ರಿ.ಶ. 1691–92 ಕ್ಕಿಂತ ಹಿಂದೆ ಎಂಬುದರಲ್ಲಿ ಸಂದೇಹವಿಲ್ಲ. ತಾತ್ಕಾಲಿಕವಾಗಿ ಅವಧೂತ ಶಿವಯೋಗಿಯ ಕಾಲವನ್ನು ಕ್ರಿ.ಶ. ಸು. 1660 ಎಂದು ಪರಿಗಣಿಸಬಹುದಾಗಿದೆ.

ಎಸ್. ಶಿವಣ್ಣ

ಈ ಸಂಚಿಕೆಯ ಲೇಖಕರು

ತಿಮ್ಮನಹಳ್ಳಿ ವೇಣುಗೋಪಾಲ್,
ಎಂ. ಎ. ವಿದ್ಯಾರ್ಥಿ, ಇತಿಹಾಸ ವಿಭಾಗ,
ಜ್ಞಾನಭಾರತಿ, ಬೆಂಗಳೂರು – 560 056.

ಜಯಂಶ್ರೀ ಚಾಟಿ, ಎಂ. ಎ.,
c/o ಭೀಮರಾವ ಚಾಟಿ,
ಬೀಳಗಿ – 58716, ವಿಜಾಪುರ ಜಿಲ್ಲೆ.

ಡಾ॥ ಎಂ. ಚಿದಾನಂದಮೂರ್ತಿ,
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ,
ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – 560 056.

ಎಸ್. ಎಸ್. ರೇಣುಕಾರಾಧ್ಯ,
ಕನ್ನಡ ಅಧ್ಯಯನ ಕೇಂದ್ರ,
ಜ್ಞಾನಭಾರತಿ, ಬೆಂಗಳೂರು – 560 056.

ಸಿ. ಕೆ. ನಾವಲಗಿ,
ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580 003.

ಎಚ್. ಎಚ್. ಗಂಗಾಧರಾಚಾರ್
ಇಂಟರ್ನಲ್ ಟ್ರಾಫಿಕ್ ಇಲಾಖೆ,
ವಿ. ಐ. ಎಸ್. ಎಲ್., ಭದ್ರಾವತಿ – 577 301.

ಗೋಪಾಲಕೃಷ್ಣ ಹೆಗಡೆ,
c/o ಕನ್ನಡ ಅಧ್ಯಯನ ಕೇಂದ್ರ,
ಜ್ಞಾನಭಾರತಿ, ಬೆಂಗಳೂರು – 560 056.

ಡಾ॥ ಬಿ. ಜಿ. ಸುಧಾ,
ಅಧ್ಯಾಪಕಿ, ಶಿಕ್ಷಣ ವಿಭಾಗ,
ಜ್ಞಾನಭಾರತಿ, ಬೆಂಗಳೂರು – 560 056.

ಸ್ಮಿತಾ ತಿವಾರಿ,
ವಿದ್ಯಾರ್ಥಿನಿ, ಸಂವಹನ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ, ಯು.ವಿ.ಸಿ.ಇ.
ಬೆಂಗಳೂರು 560001

ಕೆ. ಆರ್. ಮೋಹನ್,
ಸಂಶೋಧಕ, ಪ್ರಾಚೀನ ಇತಿಹಾಸ ಮತ್ತು ವಾಸ್ತುಶಿಲ್ಪ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು – 570 006.

ಡಾ॥ ಸಿ. ಶಿವಷಣ್ಮುಗಂ
ರಿಸರ್ಚ್ ಅಸಿಸ್ಟೆಂಟ್, ಸೆಂಟರ್ ಫಾರ್ ಅಂಡರ್ ಗ್ರೌಂಡ್
ವಾಟರ್ ಆರ್ಕಿಯಾಲಜಿ ಮಂಡಪಂ
ತಮಿಳುನಾಡು 623518

ಎಸ್. ಎನ್. ಲೀಲಾ,
'ಸಿಂಹಾಲಯ',
33, 7ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003.

ಎಸ್. ಆರ್. ಸತ್ಯಪ್ರಸಾದ್, ಎಂ. ಬಿ. ಎ.,
63, 9ನೇ ಮುಖ್ಯ ರಸ್ತೆ,
ವಿಜಯನಗರ, ಬೆಂಗಳೂರು – 560 040.

ವೈ. ಉಮಾನಾಥ ಶೆಣೈ, ಎಂ. ಎ ,
ಇತಿಹಾಸ ಉಪನ್ಯಾಸಕ,
ವಿವೇಕಾನಂದ ಕಾಲೇಜು, ಪುತ್ತೂರು. (ದ. ಕ.)

ಡಾ॥ ಸಿ. ಪಿ. ಕೆ.,
ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು – 570 006.

ಎಸ್. ಶಿವಣ್ಣ,
ಸಂಪಾದಕರು, ಹಸ್ತಪ್ರತಿ ವಿಭಾಗ,
ಕನ್ನಡ ಅಧ್ಯಯನ ಕೇಂದ್ರ,
ಜ್ಞಾನಭಾರತಿ, ಬೆಂಗಳೂರು – 560056